एकरस ಏಕರಸ (पु०) 1. ಕೇವಲ ಸಂತೋಷ, ಕೇವಲ ಆನಂದ. एकः केवलो रसः। 2. ಒಂದೇ ವಿಧವಾದ ಪ್ರೀತಿ, ಬದಲಾವಣೆ ಹೊಂದದ ಪ್ರೀತಿ. (वि०) 3. ಒಂದೇ ಅಭಿಪ್ರಾಯವುಳ್ಳ, ಸಮಾನಾಭಿಪ್ರಾಯವುಳ್ಳ. 4. ಒಂದೇ ವಿಧವಾದ ಪ್ರೀತಿಯುಳ್ಳ, ಸಮಾನಾನುರಾಗ ವುಳ್ಳ. 5. ಒಂದೇ ಕಡೆ ಪ್ರೀತಿಯುಳ್ಳ, ಅನನ್ಯವಿಷಯ ವಾದ ಪ್ರೀತಿಯುಳ್ಳ. 6. ಒಂದೇ ವಿಧವಾದ ಸ್ವಭಾವ ವುಳ್ಳ, ಸಮಾನ ಸ್ವಭಾವವುಳ್ಳ. एकः समानो रसः अभिप्रायः रागो वा यस्य। एकः अनन्यविषयो रसो रागः यस्य। एकः अभिन्नः रसः स्वभावो यस्य वा।

एकराज् ಏಕರಾಜ್ (पु०) 1. ಸಾರ್ವಭೌಮ, ಚಕ್ರವರ್ತಿ. एको राजते—राजृ (दीप्तौ) "क्विप्" (३-२-७६)। "हिरण्यकशिपू राजन् अजेयमजरामरम्। आत्मानमप्रतिद्वन्द्वमेकराजं व्यधित्सत" भाग० ७-३-१। 2. ಪರಮಾತ್ಮ. एक एव राजते—राजृ "क्विप्" (३-२-७६)। "यदादित्यगतं तेजो जगद्भासयतेऽखिलम्। यच्चन्द्रमसि यच्चाग्नौ तत्तेजो विद्धि मामकम्" गीता १५-१२। "तमेव भान्तमनुभाति सर्वं तस्य भासा सर्वमिदं विभाति" श्रुतिः। (वि०) 3. ಸ್ವಯಂಪ್ರಕಾಶಿಸುವ, ತಾನಾಗಿಯೇ ಪ್ರಕಾಶಮಾನವಾದ. "स वा एष तदा द्रष्टा नापश्यद्-दृश्यमेकराट्" भाग० ३-५-२४।

एकराज ಏಕರಾಜ (पु०) 1. ಒಬ್ಬ ರಾಜ, ಒಬ್ಬನೇ ಆದ ದೊರೆ, ಚಕ್ರವರ್ತಿ. 2. ಶ್ರೇಷ್ಠನಾದ ದೊರೆ, ಉತ್ತಮ ನಾದ ರಾಜ. एको राजा "टच्" (५-४-९१)।

एकरात्र ಏಕರಾತ್ರ (न०) ಒಂದು ರಾತ್ರಿ, ಒಂದು ರಾತ್ರಿಯ ಕಾಲ. एका रात्रिः "अच्" (५-४-८७)। "संख्यापूर्वं रात्रं क्लीबम्" (लिङ्गा० १३१) इति नपुंसकत्वम्। "एकरात्रं तु निवसन्नतिथिर्ब्राह्मणः स्मृतः" मनु० ३-१०२।

एकरात्रिक ಏಕರಾತ್ರಿಕ (वि०) ಒಂದು ರಾತ್ರಿಯಲ್ಲಿ ಮುಗಿಯಬಹುದಾದ, ಒಂದು ದಿನಕ್ಕೆ ಮಾತ್ರ ಬೇಕಾಗುವ. "नाद्याच्छूद्रस्य पक्वान्नं विद्वानश्राद्धिनो द्विजः। आददीताममेवास्मादवृत्तावेकरात्रिकम्" मनु० ४-२२३।

एकरात्रीण ಏಕರಾತ್ರೀಣ (वि०) 1. ಒಂದು ರಾತ್ರಿಯಲ್ಲಿ ನಡೆದ. 2. ಒಂದು ರಾತ್ರಿಯಲ್ಲಿ ಸತ್ಕರಿಸಿ ಕೆಲಸ ಮಾಡಿಸಲ್ಪಟ್ಟ. 3. ಒಂದು ರಾತ್ರಿ ಕೂಲಿ ಕೊಟ್ಟು ಕೊಳ್ಳಲ್ಪಟ್ಟ. 4. ಒಂದು ರಾತ್ರಿಯಲ್ಲಿ ಉಂಟಾಗುವ. एकां रात्रिमधीष्टो भूतो भूतो भावी वा "खः" (५-१-८७)।

एकराशि ಏಕರಾಶಿ (पु०) 1. ಒಂದು ರಾಶಿ, ಒಂದು ಗುಪ್ಪೆ. एको राशिः। 2. ಒಂದೇ ರಾಶಿ, ಮೇಷ ವೃಷಭ ಮೊದಲಾದ ಸಮಾನ ರಾಶಿ. एकः समानो राशिः। "एकराशिगतौ स्यातामेकर्क्षविषये यदा"।

एकराशिभूत ಏಕರಾಶಿಭೂತ (वि०) ಒಂದೇ ರಾಶಿ ಯಾಗಿರುವ, ಒಂದೇ ಗುಪ್ಪೆಯಾಗಿರುವ, ಒಟ್ಟಿಗೆ ಸೇರಿರುವ.

एकरिक्थिन् ಏಕರಿಕ್ಥಿನ್ (वि०) ಪಿತ್ರಾರ್ಜಿತವಾದ ಆಸ್ತಿ ಯಲ್ಲಿ ಸಮಭಾಗವುಳ್ಳ, ಒಂದು ಆಸ್ತಿಯಲ್ಲಿ ಸಮವಾದ ಹಕ್ಕುಳ್ಳ, ತಂದೆಯ ಧನದಲ್ಲಿ ಭಾಗಹೊಂದಲು ಅರ್ಹನಾದ. एकस्य पितुः रिक्थमस्यास्ति "इनिः" (५-२-११५)। "यद्येकरिक्थिनौ स्यातामौरसक्षेत्रजौ सुतौ। यस्य यत्पैतृकं रिक्थं स तद् गृह्णीत नेतरः" मनु० ९-१६२।

एकरूप ಏಕರೂಪ (न०) 1. ಒಂದು ಆಕಾರ. एकं रूपम्। (वि०) 2. ಒಂದೇ ರೂಪವುಳ್ಳ, ಸಮಾನ ರೂಪವುಳ್ಳ, ಒಂದೇ ವಿಧವಾದ. एकं समानं रूपं यस्य।

एकरूपतस् ಏಕರೂಪತಸ್ (अव्य०) 1. ಒಂದೇ ರೂಪ ದಿಂದ, ಸಮಾನ ರೂಪದಿಂದ. 2. ಒಂದೇ ರೂಪದಲ್ಲಿ, ಸಮಾನ ಆಕೃತಿಯಲ್ಲಿ. एकरूप "तसिः" (वा० ५-४-४४)। 3. ಒಂದೇ ರೀತಿಯಲ್ಲಿ, ಬದಲಾವಣೆಯಿಲ್ಲದೆ.

एकरूपता ಏಕರೂಪತಾ (स्त्री०) ಒಂದೇ ರೂಪದಲ್ಲಿರು ವಿಕೆ, ಏಕರೀತಿಯಲ್ಲಿರುವಿಕೆ, ಸಮಾನ ಆಕಾರದಿಂದಿರುವಿಕೆ. एकरूपस्य भावः "तल्" (५-१-११९)। "सम्पत्तौ च विपत्तौ च महतामेकरूपता"।

एकरूप्य ಏಕರೂಪ್ಯ (ನ॰) 1. ಕೇವಲ ಬೆಳ್ಳಿ, ಬರಿ ಬೆಳ್ಳಿ. एकं केवलं रूप्यम्। (वि॰) 2. ಒಬ್ಬನಿಂದ ಬಂದ, ಒಂದೇ ಸಂತತಿಯಲ್ಲಿ ಹುಟ್ಟಿದ, ಒಬ್ಬ ತಾಯಿ ಅಥವಾ ತಂದೆಯಿಂದ ಅನುಗತವಾಗಿ ಬೆಳೆದುಬಂದ. एकत: एकस्मात् एकस्या वा आगत:—एक "रूप्य:" (४-३-८१)।

एकल ಏಕಲ (वि॰) ಅಸಹಾಯ, ಏಕಾಕಿ, ಒಬ್ಬಂಟಿಗ. एक: सन् लाति—ला (आदाने) "क:" (३-२-३)। "तस्मिन् वाव किल स एकल:" भाग॰ ५-७-१२।

एकलव्य ಏಕಲವ್ಯ (पु॰) ಹಿರಣ್ಯಧನುಸ್ಸಿಂಬ ಒಬ್ಬ ಬೇಡನ ಮಗ. [ಏಕಲವ್ಯನು ಧನುರ್ವಿದ್ಯೆಯನ್ನು ಕಲಿಯಲು ಬಹಳ ಉತ್ಸಾಹದಿಂದ ದ್ರೋಣಾಚಾರ್ಯರನ್ನು ಬೇಡಲಾಗಿ ಅವರು ಇವನಿಗೆ ಕಲಿಸಲು ಇಷ್ಟವಿಲ್ಲದೆ ತಿರಸ್ಕರಿಸಿದರು. ಆಗ ಮಣ್ಣಿನಿಂದ ಅವರ ಪ್ರತಿಮೆಯನ್ನು ತಯಾರಿಸಿ ಅದನ್ನೇ ಆಚಾರ್ಯರೆಂದು ಭಾವಿಸಿ ಅಸ್ತ್ರಪ್ರಯೋಗ ಮತ್ತು ಉಪಸಂಹಾರ ಮಾಡುತ್ತಾ ಲೋಕೋತ್ತರ ನೈಪುಣ್ಯ ಪಡೆದನು. ಅರಣ್ಯಕ್ಕೆ ಬೇಟೆಗಾಗಿ ಹೋಗಿದ್ದ ಪಾಂಡವರ ಮೂಲಕ ಈ ವಿಷಯವನ್ನು ತಿಳಿದ ದ್ರೋಣಾಚಾರ್ಯರು ಬಂದು ಕೇಳಲಾಗಿ ಏಕಲವ್ಯನು ಎಲ್ಲವನ್ನೂ ತಿಳಿಸಿದನು. ಆಗ ದ್ರೋಣಾಚಾರ್ಯರು ಗುರುದಕ್ಷಿಣೆಗಾಗಿ ಇವನ ಬಲಗೈ ಹೆಬ್ಬೆರಳನ್ನು ತೆಗೆದುಕೊಂಡರು.] "ततो निषादराजस्य हिरण्यधनुष: सुत:। एकलव्यो महाराज द्रोणमभ्याजगाम ह॥ न स तं प्रतिजग्राह नैषादिरिति चिन्तयन्। शिष्यं धनुषि धर्मज्ञस्तेषामेवान्ववेक्षया॥ स तु द्रोणस्य शिरसा पादौ गृह्य परन्तप:। अरण्यमनुसंप्राप्य कृत्वा द्रोणं महीमयीम्" इत्यादि. भा॰ आदि॰ १४२।

एकलिङ्ग ಏಕಲಿಂಗ (पु॰) 1. ಕುಬೇರ. एकं लिङ्गमिन्द्रियं चक्षुरस्य। 2. ನಿಯತ ಲಿಂಗವುಳ್ಳ ಶಬ್ದ. एकं नियतं लिङ्गं पुंस्त्वादि यस्य। (न॰) 3. ಸಿದ್ಧಿಗೆ ಸಾಧನವಾದ ಒಂದು ಕ್ಷೇತ್ರ, ಐದು ಕ್ರೋಶಗಳವರೆಗೂ ಬೇರೊಂದು ಶಿವಲಿಂಗವಿಲ್ಲದಿರುವ ಒಂದು ಪ್ರದೇಶ. "पञ्चक्रोशान्तरे यत्र न लिङ्गान्तरमीक्ष्यते। तदेकलिङ्गमाख्यातं तत्र सिद्धिरनुत्तमा" आगम:। (वि॰) 4. ಒಂದು ಶಿವಲಿಂಗವುಳ್ಳ. 5. ಒಂದು ಗುರುತುಳ್ಳ, ಒಂದು ಚಿಹ್ನೆಯುಳ್ಳ.

एकवचन ಏಕವಚನ (न॰) 1. ಒಂದು ಸಂಖ್ಯೆ ಅಥವಾ ಒಂದು ವಸ್ತುವಿನ ಏಕತ್ವವನ್ನು ಹೇಳುವ ಸ್ವಾದಿ ಮತ್ತು ತಿಙಾದಿ ಪ್ರತ್ಯಯ. एकमेकत्वमुच्यतेऽनेन—वच (परिभाषणे) कर॰ "ल्युट्" (३-३-११७)।

ಏಕತ್ವವನ್ನು ಹೇಳುವ ಪ್ರತ್ಯಯಗಳು:

सु अम् टा ङे ङसि ङस् ङि ಮತ್ತು तिप् सिप् मिप्, त (ते) थास् (से) इट्। "त्वमावेकवचने" पा॰ सू॰ ७-२-९७। "द्व्येकयोर्द्विवचनैकवचने" पा॰सू॰ १-४-२२। 2. ಒಂದು ವಸ್ತುವನ್ನು ಹೇಳುವ ಶಬ್ದ. एकं वस्तु उच्यतेऽनेन।

एकवत् ಏಕವತ್ (अव्य॰) 1. ಒಂದರಂತೆ. एकस्येव "वति:" (५-१-११६)। "नपुंसकमनपुंसकेनैकवच्चास्यातरस्याम्" पा॰ सू॰ १-२-६९। शुक्ल: पट: शुक्ला शाटी शुक्लं वस्त्रम् तदिदं शुक्लम् तानीमानि शुक्लानि ಎಂದು ವಿಕಲ್ಪವಾಗಿ ಏಕವದ್ಭಾವ ಬಂದಿರುವುದು. 2. (ಕ್ರಿಯೆಯು ತೋರುವಲ್ಲಿ) ಒಂದರೊಡನೆ ಸಮಾನವಾಗಿ, ಒಂದಕ್ಕೆ ಸದೃಶವಾಗಿ, एकेन तुल्यम् "वति:" (५-१-११५)।

एकवद्भाव ಏಕವದ್ಭಾವ (पु॰) ಒಂದಾಗಿರುವಿಕೆ, ಒಂದರಂತಿರುವಿಕೆ. एकेन तुल्यो भाव: भवनम्।

एकवर्ण ಏಕವರ್ಣ (पु॰) 1. ಒಂದು ವರ್ಣ, ಒಂದು ಬಣ್ಣ. एको वर्ण:। 2. ಒಂದು ವರ್ಣ, ಒಂದು ಅಕ್ಷರ. (वि॰) 3. ಒಂದು ಬಣ್ಣದ. 4. ಒಂದೇ ಬಣ್ಣದ, ಅದೇ ಬಣ್ಣದ, ಸಮಾನ ವರ್ಣದ. एक: एक एव वा वर्णो यस्य। 5. ಒಂದು ಜಾತಿಯ. 6. ಒಂದೇ ಜಾತಿಯ, ಸಮಾನ ಜಾತಿಯ. 7. ಒಂದು ವರ್ಣದ, ಒಂದು ಅಕ್ಷರವುಳ್ಳ.

एकवर्णा ಏಕವರ್ಣಾ (स्त्री॰) ಯಾವುದೊಂದರ ಸಹಾಯವೂ ಇಲ್ಲದೆ ಕೇವಲ ಕೈಯಿಂದ ಬಾರಿಸಲ್ಪಡುವ ವಾದ್ಯ, ತಾಳ. एक एव वर्णयति—वर्ण (वर्णक्रियाविस्तारगुणवचनेषु) "अच्" (३-१-१३४)। गौरा॰ "ङीष्" (४-१-४१)।

एकवर्त्मन् ಏಕವರ್ತ್ಮನ್ (न॰) ಏಕಮುಖವಾದ ಮಾರ್ಗ, ಒಂದೇ ಕಡೆಗೆ (ದಿಕ್ಕಿಗೆ) ಹೋಗುವ ಮಾರ್ಗ, ಹೋಗುವುದಕ್ಕೆ ಮಾತ್ರ ಏರ್ಪಟ್ಟ ದಾರಿ.

एकवार्षिका ಏಕವರ್ಷಿಕಾ (स्त्री॰) ಒಂದು ವರ್ಷ ವಯಸ್ಸಿನ ಕರು. एको वर्षो वय:कालो यस्या: "कप्" (५-४-१५४)। टाप्। अत इत्वम् (७-३-४४)।

एकवाक्य ಏಕವಾಕ್ಯ (न॰) 1. ಒಂದು ಮಾತು. एकं वाक्यम्। 2. ಸಮಾನವಾದ ವಾಕ್ಯ, ಒಂದೇ ರೀತಿಯ ವಾಕ್ಯ. 3. ಒಂದೇ ಅಭಿಪ್ರಾಯ, (ಎಲ್ಲರ) ಒಂದೇ ರೀತಿಯಾದ ಮಾತು, ಒಮ್ಮತದ ವಾಕ್ಯ, ಸರ್ವಾನುಮತದ

ವಾಕ್ಯ. एकम् अभिन्नम् अविसंवादि वाक्यम्। "इति समगुणयोगप्रीतयस्तत्र पौराः श्रवणकटु नृपाणामेकवाक्यं विवव्रुः" रघु० ६-८५।

एकवाक्यता ಏಕವಾಕ್ಯತಾ (स्त्री०) 1. ಒಂದು ವಾಕ್ಯ ವಾಗಿರುವಿಕೆ. एकवाक्यस्य भावः "तल्" (५-१-११९)। 2. ಒಮ್ಮತವಾಗಿರುವಿಕೆ, ಏಕಾಭಿಪ್ರಾಯವಾಗಿರುವಿಕೆ. 3. ವಿಶಿಷ್ಟವಾದ ಒಂದು ಅರ್ಥವನ್ನು ಕೊಡುವಿಕೆ. ಇದು (1) ಪದೈಕವಾಕ್ಯತಾ ಮತ್ತು (2) ವಾಕ್ಯೈಕವಾಕ್ಯತಾ ಎಂದು ಎರಡು ವಿಧ. (1) ಒಂದು ವಾಕ್ಯದಲ್ಲಿರುವ ಪದವನ್ನು ಸಾಕಾಂಕ್ಷವಾದ ಮತ್ತೊಂದು ವಾಕ್ಯದಲ್ಲಿ ಅನ್ವಯಿಸಿ ಅರ್ಥ ಹೇಳುವುದು **ಪದೈಕವಾಕ್ಯತಾ.** "इको गुणवृद्धी" ಸೂತ್ರದಲ್ಲಿನ इकः ಪದವನ್ನು "सार्वधातुकार्धधातुकयोः" ಸೂತ್ರದೊಡನೆ ಸೇರಿಸಿ ಅರ್ಥ ಹೇಳುವುದು ಪದೈಕ ವಾಕ್ಯತಾ. (2) ಪರಸ್ಪರ ನಿರಪೇಕ್ಷವಾದ ಎರಡು (ಅವಾಂತರ) ವಾಕ್ಯಗಳು ತಮ್ಮ ಅರ್ಥಗಳನ್ನು ಪ್ರತ್ಯೇಕ ವಾಗಿ ಬೋಧಿಸಿದ ಮೇಲೆ ಅಂಗಾಂಗಿಭಾವ ಹೊಂದಿ ಎರಡೂ ಸೇರಿ ಒಂದು ವಿಶಿಷ್ಟಾರ್ಥವನ್ನು ಕೊಡುವುದು **ವಾಕ್ಯೈಕವಾಕ್ಯತಾ.** "समिधो यजति" "दर्शपौर्णमासाभ्यां यजेत" ಈ ಎರಡು ವಾಕ್ಯಗಳು ಪ್ರಯಾಜ ಮತ್ತು ದರ್ಶಪೌರ್ಣಮಾಸೇಷ್ಟಿಗಳನ್ನು ಬೋಧಿಸಿ ಅನಂತರ ಪ್ರಯಾಜಾದಿ ಅಂಗಕಲಾಪಗಳಿಂದ ಕೂಡಿದ ದರ್ಶಪೌರ್ಣಮಾಸರೂಪವಾದ ಒಂದು ವಿಶಿಷ್ಟಾರ್ಥವನ್ನು ಬೋಧಿಸುವುದರಿಂದ ಇಲ್ಲಿ ವಾಕ್ಯೈಕವಾಕ್ಯತಾ.

एकवाचक ಏಕವಾಚಕ (वि०) ಒಂದೇ ವಿಷಯವನ್ನು ತಿಳಿಸುವ, ಒಂದೇ ವಸ್ತುವನ್ನು ಬೋಧಿಸುವ. वच (परिभाषणे) "ण्वुल्" (३-१-१३३)। एकस्य वाचकः।

एकवाद ಏಕವಾದ (पु०) 1. (ಒಂದು ಕೈಯಿಂದ ಬಾರಿಸ ಲ್ಪಡುವ) ಡಿಂಡಿಮವಾದ್ಯ, ಝಾಯಿಯೆಂಬ ಒಂದು ವಾದ್ಯ. एकेन हस्तेन वाद्यते — वद (व्यक्तायां वाचि) + णिच् कर्मं० "घञ्" (३-३-१९)। 2. ದೇವರು ಒಬ್ಬನೇ ಎಂದು ವಾದಿಸುವವರ ಮಾತು. 3. ಬ್ರಹ್ಮವೊಂದೇ (ಬೇರೊಂದಿಲ್ಲ) ಎಂದು ಹೇಳುವ ಅದ್ವೈತ ವಾದ. एकस्य ब्रह्माभिन्नत्वस्य वादः कथनम्।

एकवारम् ಏಕವಾರಮ್ (अव्य०) ಒಂದು ಸಲ, ಒಂದಾವೃತ್ತಿ.

एकविंश ಏಕವಿಂಶ (वि०) ಇಪ್ಪತ್ತೊಂದನೆಯ. एकविंशतेः पूरणः "डट्" (५-२-४८)। स्वार्थे "कः"। **–विंशकः –ವಿಂಶಕಃ.** "दश पूर्वान् परान् वंश्यान् आत्मानं चैकविंशकम्। ब्राह्मीपुत्रः सुकृतकृन्मोचयत्येनसः पितॄन्" मनु० ३-३७।

एकविंशति ಏಕವಿಂಶತಿ (स्त्री०) 1. ಇಪ್ಪತ್ತೊಂದು. एकाधिका विंशतिः। 2. ಇಪ್ಪತ್ತೊಂದರ ಒಂದು ಗುಂಪು.

एकविंशतितम ಏಕವಿಂಶತಿತಮ (वि०) ಇಪ್ಪತ್ತೊಂದನೆಯ. एकविंशतेः पूरणः "डट्" (५-२-४८)। डटः वा "तमट्" (५-२-५६)। पक्षे **–विंशः –ವಿಂಶಃ.**

एकविंशतिधा ಏಕವಿಂಶತಿಧಾ (अव्य०) ಇಪ್ಪತ್ತೊಂದು ಭಾಗವಾಗಿ, ಇಪ್ಪತ್ತೊಂದು ರೀತಿಯಾಗಿ, ಇಪ್ಪತ್ತೊಂದು ವಿಧವಾಗಿ. एकविंशति "धा" (५-३-४२)।

एकविध ಏಕವಿಧ (वि०) 1. ಒಂದೇ ಪ್ರಕಾರವಾದ, ಒಂದೇ ರೀತಿಯಾದ. एका विधा प्रकारो यस्य। 2. ಒಂದು ರೀತಿಯ, ಒಂದು ಪ್ರಕಾರದ.

एकविभक्ति ಏಕವಿಭಕ್ತಿ (वि०) ಒಂದೇ ವಿಭಕ್ತಿಯುಳ್ಳ (ಶಬ್ದ), ವಿಗ್ರಹ ವಾಕ್ಯದಲ್ಲಿ ಬದಲಾವಣೆ ಹೊಂದದೆ ನಿಯತ ವಾದ ವಿಭಕ್ತಿಯುಳ್ಳ (ಪದ). निष्कौशाम्बिः ಎಂಬಲ್ಲಿ कौशाम्ब्याः निष्क्रान्तः, –निष्क्रान्तम्, –निष्क्रान्तेन, –निष्क्रान्ताय, –निष्क्रान्तात्, –निष्क्रान्तस्य ಮತ್ತು –निष्क्रान्ते ಎಂದು ಎಲ್ಲಾ ವಾಕ್ಯಗಳಲ್ಲಿಯೂ ಬದಲಾವಣೆ ಹೊಂದದೆ कौशाम्ब्याः ಎಂದೇ ನಿಲ್ಲುವುದರಿಂದ ನಿಯತ ವಿಭಕ್ತಿಯಾಯಿತು.

एकविलोचन ಏಕವಿಲೋಚನ (पु०) 1. ಕುಬೇರ. एकं विलोचनं नेत्रं यस्य। [ವಿವರಕ್ಕೆ "एकपिङ्ग" ಪದವಲ್ಲಿ ನೋಡಿ.] 2. ಕಾಗೆ, ವಾಯಸ. ಕಾಗೆಗೆ ಎರಡು ಕಣ್ಣು ಗಳಿದ್ದರೂ ಒಂದೇ ನೇತ್ರೇಂದ್ರಿಯವು ಎರಡು ಗುಡ್ಡೆ ಗಳಲ್ಲಿಯೂ ಚಲಿಸುವುದರಿಂದ ಈ ಹೆಸರು. (न०) 3. ಒಂದು ಕಣ್ಣು. एकं विलोचनम्। (वि०) 4. ಒಂದು ಕಣ್ಣುಳ್ಳ. एकं विलोचनं यस्य।

एकविषयिन् ಏಕವಿಷಯಿನ್ (वि०) 1. ಒಂದೇ ವಿಷಯ ವುಳ್ಳ, ಸಮಾನವಾದ ಉದ್ದೇಶವುಳ್ಳ. एकः समानो विषयोऽस्यास्ति "इनिः" (५-२-११५)। 2. ಒಂದೇ ದೇಶ ದಲ್ಲಿ ವಾಸಮಾಡುವ.

एकवीर ಏಕವೀರ (पु०) ಸಮರ್ಥನಾದ ಯೋಧ. ಲೋಕೋತ್ತರ ಪರಾಕ್ರಮಿ, ಅಸಹಾಯಶೂರ. एकः श्रेष्ठः असहायो वा वीरः।

एकवीर्य ಏಕವೀರ್ಯ (न०) 1. ಸಮಾನವಾದ ಪರಾಕ್ರಮ, ಒಂದೇ ರೀತಿಯ ಪರಾಕ್ರಮ. एकं समानं वीर्यम्। (वि०) 2. ಸಮಾನ ಬಲವುಳ್ಳ, ಒಂದೇ ವಿಧ ಪರಾಕ್ರಮ ವುಳ್ಳ. एकं समानं वीर्यं यस्य।

एकवृन्द ಏಕವೃಂದ (पु॰) 1. ಒಂದು ವಿಧ ಗಂಟಲು ರೋಗ, 65 ವಿಧ ಮುಖರೋಗಗಳಲ್ಲೊಂದು. "वृत्तोन्नतो यः श्वयथुः सदाहः कण्ड्वान्वितोऽपाक्यमृदुर्गुरुश्च। नाम्नैकवृन्दः परिकीर्तितोऽसौ" सुश्रुत॰ निदान॰ ५५। 2. ಒಂದು ರಾಶಿ, ಒಂದು ಗುಂಪು.

एकवृष ಏಕವೃಷ (पु॰) 1. ಒಂದು ಎತ್ತು. एको वृषः। ಒಂದು ಎತ್ತನ್ನು ಸಾಕುವುದು ಯಜಮಾನನಿಗೆ ಹಾನಿಕರ. "एको वृषस्त्रयो गावः सप्ताश्वाः नव दन्तिनः। सिंहप्रसूतिका गावः कथिताः स्वामिघातकाः"। 2. ಶ್ರೇಷ್ಠವಾದ ಎತ್ತು. (वि॰) 3. ಒಂದು ಎತ್ತುಳ್ಳವನು. एको वृषो यस्य।

एकव्यवसायिन् ಏಕವ್ಯವಸಾಯಿನ್ (वि॰) 1. ಒಂದು ಕಾರ್ಯವನ್ನಿಟ್ಟುಕೊಂಡಿರುವ. 2. ಒಂದೇ ಉದ್ಯೋಗವುಳ್ಳ, ಸಮಾನವಾದ ಕೆಲಸವುಳ್ಳ. एकः समानो व्यवसायोऽस्यास्ति "इनिः" (५-२-११५)।

एकव्रत ಏಕವ್ರತ (वि॰) 1. ಒಬ್ಬನಿಗೇ ವಿಧೇಯನಾಗಿರುವ, ಒಬ್ಬನನ್ನೇ ಆಶ್ರಯಿಸಿರುವ. एकस्मिन् व्रतं यस्य। 2. ಒಂದು ಹೇಳಿ ಮಾತ್ರ ಭೋಜನ ಮಾಡುತ್ತ (ಉಪವಾಸ) ವ್ರತವನ್ನಾಚರಿಸುತ್ತಿರುವ.

एकशत ಏಕಶತ (न॰) 1. ಒಂದು ನೂರ ಒಂದು. एकाधिकं शतम्। 2. ಒಂದು ನೂರು. एकं शतम्। (वि॰) 3. ಒಂದು ನೂರುಳ್ಳ, ಒಂದು ನೂರು ಎಣಿಕೆಯುಳ್ಳ. "विश्वामित्रस्य चैवासन् पुत्रा एकशतं नृप"।

एकशततम ಏಕಶತತಮ (वि॰) ಒಂದು ನೂರ ಒಂದನೆಯ. एकशतस्य पूरणः "डट्" (५-२-४८)। तमडागमः (५-२-५७)। स्त्रियां "ङीप्" (४-१-१५)। **-तमी -ತಮೀ.**

एकशतधा ಏಕಶತಧಾ (अव्य॰) ನೂರೊಂದು ಪ್ರಕಾರವಾಗಿ, ನೂರೊಂದು ವಿಧವಾಗಿ. एकशत "धा" (५-३-४२)।

एकशफ ಏಕಶಫ (पु॰) ಒಂದೇ ಗೊರಸುಳ್ಳ (ಕುದುರೆ, ಕತ್ತೆ ಮೊದಲಾದ) ಪ್ರಾಣಿ. एकं शफं यस्य। ಕುದುರೆ, ಕತ್ತೆ, ಹೇಸರಗತ್ತೆ, ಶರಭಮೃಗ, ಚಮರೀಮೃಗ ಇವು ಒಂದುಗೊರಸುಳ್ಳ ಪ್ರಾಣಿಗಳು. "खरोऽश्वोऽश्वतरो गौरः शरभश्चमरी तथा। एते चैकशफाः क्षत्तः शृणु पञ्चनखान् पशून्" भा॰ वन॰ १०-२२। "अजाविकं चैकशफं न जातु विषमं भजेत्" मनु॰ ९-११९।

एकशरीर ಏಕಶರೀರ (वि॰) ಒಂದೇ ದೇಹದಿಂದ ಹುಟ್ಟಿದ, ಒಂದೇ ವಂಶದಲ್ಲಿ ಹುಟ್ಟಿದ, ಒಂದೇ ಗೋತ್ರದವನಾದ. एकं समानं शरीरं यस्य।

एकशस् ಏಕಶಸ್ (अव्य॰) ಒಂದೊಂದಾಗಿ, ಒಬ್ಬೊಬ್ಬನಾಗಿ. एकमेकम् "शस्" (५-४-४३)।

एकशाख ಏಕಶಾಖ (वि॰) ಒಂದೇ (ವೇದ) ಶಾಖೆಗೆ ಸೇರಿದ, ಸಮಾನ (ವೇದ) ಶಾಖೆಗೆ ಸೇರಿದ. एका समाना शाखा यस्य।

एकशालिक ಏಕಶಾಲಿಕ (वि॰) ಒಂದು ಶಾಲೆಯಂತಿರುವ, ಒಂದು ಮನೆಯಂತಿರುವ. एकशालेव वा "ठच्" (५-३-१०९)। ಪಕ್ಷೆ "ठक्"। **ऐकशालिकः ಐಕಶಾಲಿಕಃ.**

एकशुल्क ಏಕಶುಲ್ಕ (न॰) ಒಂದೇ ಕ್ರಯದ ಮೌಲ್ಯ, ವಸ್ತುವನ್ನು ಕೊಂಡುಕೊಳ್ಳಲು ಗೊತ್ತಾದ ಒಂದೇ ಮೊತ್ತದ ಹಣ. एकं समानं शुल्कम्। "अन्यां चेद्दर्शयित्वान्या वोढुः कन्या प्रदीयते। उभे त एकशुल्केन वहेदित्यब्रवीन्मनुः" मनु॰ ८-२०४।

एकशूर ಏಕಶೂರ (पु॰) "एकवीर" ಪದದ ಅರ್ಥ. एकः श्रेष्ठः असहायो वा शूरः।

एकशृङ्ग ಏಕಶೃಂಗ (पु॰) 1. ವಿಷ್ಣು, ಮತ್ಸ್ಯಾವತಾರವೆತ್ತಿದ ಪರಮಾತ್ಮ. एकं शृङ्गं यस्य। [स्वायंभुव मन्वंतरदಲ್ಲಿ ಅಕಾಲಪ್ರಳಯವುಂಟಾಗಲು ಮತ್ಸ್ಯರೂಪವೆತ್ತಿದ ವಿಷ್ಣುವಿನ ಕೊಂಬಿನಲ್ಲಿ ಮನುವಿನ ಹಡಗು ಕಟ್ಟಲ್ಪಟ್ಟಿತ್ತು.] "स्वायंभुवस्तदा मत्स्यं हरिं सस्मार वै तदा। तदा जलानामुपरि सशृङ्ग इव पर्वतः। उद्दीप्तश्चैकशृङ्गेण विष्णुर्मत्स्यस्वरूपधृक्। आगतस्तत्र न चिराद्यत्रास्ते स मुनिर्हरिः" कालिकापु॰ ३२। 2. ಒಂದು ಕೊಂಬುಳ್ಳ ಪಶು. 3. ಒಂದು ಶಿಖರವುಳ್ಳ ಪರ್ವತ. (पु॰ ब॰ व॰) 4. ಪಿತೃಗಳ ಒಂದು ಗಣ. (स्त्री॰) **-शृङ्गा -ಶೃಂಗಾ.** ಶುಕಮಹರ್ಷಿಯ ಹೆಂಡತಿ.

एकशेष ಏಕಶೇಷ (पु॰) 1. ವ್ಯಾಕರಣದಲ್ಲಿ ಹೇಳಿರುವ ಐದು ವೃತ್ತಿಗಳಲ್ಲೊಂದು, ಒಂದು ಪದ ಮಾತ್ರ ಉಳಿಯುವ ಒಂದು ವೃತ್ತಿ. एकः शिष्यते (अन्यो लुप्यते) यत्र। ಒಂದೇ ವಿಭಕ್ತಿಯಲ್ಲಿ ಸಮಾನ ರೂಪವುಳ್ಳ ಎರಡು ಅಥವಾ ಇನ್ನೂ ಹೆಚ್ಚು ಪದಗಳ ದ್ವಂದ್ವವಿಷಯದಲ್ಲಿ ಒಂದು ಪದ ಮಾತ್ರ ಉಳಿದು ಮಿಕ್ಕೆಲ್ಲ ಪದಗಳಿಗೂ ಲೋಪ ಬರುವುದು. ಇದಕ್ಕೆ **ಏಕಶೇಷ** ವೆಂದು ಹೆಸರು. 2. ಎರಡರಲ್ಲಿ ಯಾವುದಾದರೂ ಒಂದು ಮಾತ್ರ ಉಳಿಯುವಿಕೆ. एकश्चासौ शेषश्च एकस्य शेषो वा। "ममाद्य तत्प्राप्तिरसुव्ययो वा हस्ते तवास्ते द्वयमेकशेषः" नैष॰ ३-८२।

एकश्रुतधर **ಏಕಶ್ರುತಧರ** (वि०) ಒಂದು ಸಲ ಶ್ರವಣ ಮಾಡಿದುದನ್ನು ನೆನಪಿನಲ್ಲಿಡುವವನು, ಒಂದು ಸಲ ಕೇಳಿದುದನ್ನು ಮನಸ್ಸಿನಲ್ಲಿಟ್ಟುಕೊಳ್ಳುವವನು.

एकश्रुति **ಏಕಶ್ರುತಿ** (स्त्री०) 1. ಉದಾತ್ತಾನುದಾತ್ತಾದಿ ಸ್ವರಗಳು ಒಂದೇ ಸ್ವರದಂತೆ ಕೇಳಿಸುವಿಕೆ. ಇದು ಮೂರು ಸ್ವರಗಳಿಗೂ ಅಪವಾದಭೂತವಾದುದು. ದೂರದಿಂದ ಸಂಬೋಧಿಸುವ ಸಂದರ್ಭದಲ್ಲಿ ವಾಕ್ಯವು ಏಕಶ್ರುತಿಯಾಗುವುದು. "एकश्रुति दूरात् सम्बुद्धौ" पा० सू० १-२-३३। (वि०) 2. ಉದಾತ್ತಾನುದಾತ್ತಸ್ವರಿತಗಳ ಭೇದವಿಲ್ಲದೆ ಉಚ್ಚರಿಸಲ್ಪಡುವ ಶಬ್ದ. एका श्रुतिर्यस्य।

एकषष्ट **ಏಕಷಷ್ಟ** (वि०) ಅರವತ್ತೊಂದನೆಯ. एकषष्टेः पूरणः "डट्" (५-२-४८)। तस्य वा तमडागमः (५-२-५६)। **–षष्टितमः –ಷಷ್ಟಿತಮಃ.** स्त्रियां "ङीप्" (४-१-१५)। **–तमी –ತಮೀ.**

एकषष्टि **ಏಕಷಷ್ಟಿ** (स्त्री०) ಅರವತ್ತೊಂದು. एकाधिका षष्टिः।

एकसप्तत **ಏಕಸಪ್ತತ** (वि०) ಎಪ್ಪತ್ತೊಂದನೆಯ. एकसप्ततेः पूरणः "डट्" (५-२-४८)। तस्य वा तमडागमः (५-२-५६)। **–सप्ततितमः –ಸಪ್ತತಿತಮಃ.** स्त्रियां "ङीप्" (४-१-१५)। **–तमी –ತಮೀ.**

एकसप्तति **ಏಕಸಪ್ತತಿ** (स्त्री०) ಎಪ್ಪತ್ತೊಂದು. एकाधिका सप्ततिः।

एकसर्ग **ಏಕಸರ್ಗ** (वि०) ಏಕಾಗ್ರತೆಯುಳ್ಳ, ಒಂದೇ ವಿಷಯದಲ್ಲಿ ನೆಟ್ಟಮನಸ್ಸುಳ್ಳ. एकस्मिन्नेव सर्गो निश्चयो यस्य।

एकसहस्र **ಏಕಸಹಸ್ರ** (नं०)1. ಒಂದು ಸಾವಿರದ ಒಂದು. एकाधिकं सहस्रम्। 2. ಒಂದು ಸಾವಿರ. एकं सहस्रम्।

एकसहस्रतम **ಏಕಸಹಸ್ರತಮ** (वि०) ಒಂದು ಸಾವಿರದ ಒಂದನೆಯ. एकसहस्रस्य पूरणः "तमट्" (५-२-५७)।

एकसाक्षिक **ಏಕಸಾಕ್ಷಿಕ** (वि०) ಒಬ್ಬ ಸಾಕ್ಷಿಯುಳ್ಳ, ಒಬ್ಬನಿಂದ ನೋಡಲ್ಪಟ್ಟ. एकः साक्षी यत्र। "कप्" (५-४-१५४)।

एकसूत्र **ಏಕಸೂತ್ರ** (नं०) ಡಮರು, ಬುಡಬುಡಿಕೆ. एकं सूत्रं वादनसाधनं यस्य।

एकस्थ **ಏಕಸ್ಥ** (वि०) ಒಂದು ಕಡೆಯಿರುವ, ಒಂದೇ ವಿಷಯದಲ್ಲಿರುವ. एकस्मिन् तिष्ठति—ष्ठा (गति-निवृत्तौ) "कः" (३-२-४)। "सा निर्मिता विश्वसृजा प्रयत्नात् एकस्थसौन्दर्यदिदृक्षयेव" कुमा० १-४९। "एकस्थहृदया नूनं राममेवानुपश्यति" रामा०।

एकस्थान **ಏಕಸ್ಥಾನ** (नं०) 1. ಒಂದು ಜಾಗ. 2. ಸಮಾನವಾದ ಜಾಗ, ಅದೇ ಜಾಗ. एकं समानं स्थानम्। (वि०) 3. ಒಂದೇ ಸ್ಥಾನವುಳ್ಳ, ಸಮಾನ ಸ್ಥಾನದಲ್ಲಿ ಹುಟ್ಟುವ. एकं समानं स्थानं यस्य।

एकहस्त **ಏಕಹಸ್ತ** (पुं०) 1. ಒಂದು ಮೊಳ. एको हस्तः। "प्रकोष्ठे विस्तृतकरे हस्तः" अम०। (वि०) 2. ಒಂದು ಮೊಳದ ಅಳತೆಯುಳ್ಳ. 3. ಒಂದು ಹಸ್ತ (ಕೈ)ವುಳ್ಳ. एको हस्तो यस्य।

एकहायन **ಏಕಹಾಯನ** (नं०) 1. ಒಂದು ವರ್ಷ, ಒಂದು ಸಂವತ್ಸರ. एकं हायनम्। (वि०) 2. ಒಂದು ವರ್ಷದ, ಒಂದು ವರ್ಷ ವಯಸ್ಸುಳ್ಳ. एकं हायनं वयोमानं यस्य। "त्रस्तैकहायनकुरङ्गविलोलदृष्टिराश्लिष्टवत्यमृतसंवलितैरिवाङ्गैः" मालती० ४-८। (स्त्री०) **–हायनी –ಹಾಯನೀ.** 3. ಒಂದು ವರ್ಷದ ಕರು. एकं हायनं यस्याः। "ङीप्" (४-१-२७)।

एकाकिन् **ಏಕಾಕಿನ್** (वि०) ಅಸಹಾಯ, ಒಬ್ಬಂಟಿಗ, ಜೊತೆಗಾರನಿಲ್ಲದ, ಸಜಾತೀಯರಹಿತವಾದ. एक "आकिनच्" (५-३-५२)। "एकाकिनोऽपि परितः पौरुषेयवृता इव" माघ० २-४।

एकाक्ष **ಏಕಾಕ್ಷ** (पुं०) 1. ವಾಯಸ, ಕಾಗೆ. (वि०) 2. ಒಂದು ಕಣ್ಣುಳ್ಳವನು. एकम् अक्षि यस्य "षच्" (५-४-११३)। 3. ಒಂದು ದೂರಿಯುಳ್ಳ, ಒಂದು ಅಚ್ಚುಳ್ಳ (ಗಾಡಿ). एकोऽक्षो रथावयवो यस्य।

एकाक्षर **ಏಕಾಕ್ಷರ** (नं०) 1. ಒಂದು ಅಕ್ಷರ, ಒಂದು ವರ್ಣ. एकमक्षरम्। 2. ಒಂದು ಸ್ವರವರ್ಣ, ಓಂಕಾರ, ಪರಬ್ರಹ್ಮ. ಓಂಕಾರದ ಜಪವು ಪರಬ್ರಹ್ಮಪ್ರಾಪ್ತಿಗೆ ಕಾರಣವಾದುದರಿಂದ ಓಂಕಾರವು ಪರಬ್ರಹ್ಮ. "एकाक्षरं परं ब्रह्म प्राणायामाः परं तपः" मनु० २-८३। "ओङ्कारपूर्विकास्तिस्रो महाव्याहृतयोऽव्ययाः। त्रिपदा चैव सावित्री विज्ञेयं ब्रह्मणो मुखम्" मनु० २-८१। 3. ಒಂದು ಅಕ್ಷರದ ಪದ. (वि०) 4. ಒಂದು ಅಕ್ಷರದಿಂದ ಕೂಡಿದ.

एकाक्षरकोश **ಏಕಾಕ್ಷರಕೋಶ** (पुं०) ಒಂದು ಅಕ್ಷರದ ಪದಗಳ ಕೋಶ (ನಿಘಂಟು).

एकागार **ಏಕಾಗಾರ** (नं०) 1. ಕೇವಲ ಮನೆ, ಯಾರೂ ಇಲ್ಲದ ಮನೆ. 2. ಒಂದೇ ಮನೆ, ಅಕ್ಕಪಕ್ಕಗಳಲ್ಲಿ ಯಾವ

ಮನೆಯೂ ಇಲ್ಲದ ಏಕಮಾತ್ರ ಗೃಹ. एकमसहायमगारम्। 3. ಮುಖ್ಯವಾದ ಮನೆ. "एके मुख्यान्यकेवलाः" ಅಮ०।

एकाग्नि ಏಕಾಗ್ನಿ (ಪು०) 1. ಒಂದು ಅಗ್ನಿ, ಮೂರು ಅಗ್ನಿಗಳಲ್ಲೊಂದು. एकोऽग्निः। (ವಿ०) 2. ಮೂರು ಅಗ್ನಿಗಳಲ್ಲಿ ಒಂದು ಅಗ್ನಿಯನ್ನು ಹೊಂದಿರುವ (ಅಗ್ನಿ ಹೋತ್ರಿ). एकोऽग्निरधर्यित्वेन यस्य।

एकाग्निकाण्ड ಏಕಾಗ್ನಿಕಾಂಡ (ಪು०) ಷೋಡಶಕರ್ಮ ಸಂಬಂಧವಾದ ವೇದಮಂತ್ರಗಳ ಒಂದುಭಾಗ, ಮಂತ್ರಪ್ರಶ್ನ.

एकाग्र ಏಕಾಗ್ರ (ವಿ०)1. ಒಂದು ಅಗ್ರವುಳ್ಳ, ಒಂದು ತುದಿಯುಳ್ಳ. एकमग्रम् अग्रभागो यस्य। 2. ಒಂದೇ ವಿಷಯದಲ್ಲಿ ಆಸಕ್ತವಾದ. एकमग्रं विषयप्रवणता यस्य। "तद्गीतश्रवणैकाग्रा संसदश्रुमुखी बभौ" रघु० १५-६६। 3. ಸ್ಥಿರಮನಸ್ಸುಳ್ಳ, ಬೇರೆ ಯಾವ ವಿಷಯದಲ್ಲಿಯೂ ಆಸಕ್ತವಲ್ಲದ ಮನಸ್ಸುಳ್ಳ. "मनुमेकाग्रमासीनमभिगम्य महर्षयः" मनु० १-१।

एकाग्रचित्त ಏಕಾಗ್ರಚಿತ್ತ (ವಿ०) ಒಂದೇ ವಿಷಯದಲ್ಲಿ ನೆಟ್ಟಮನಸ್ಸುಳ್ಳ, ಸ್ಥಿರಮನಸ್ಸುಳ್ಳ. एकाग्रं चित्तं यस्य।

एकाग्रतस् ಏಕಾಗ್ರತಸ್ (ಅವ್ಯ०) ಚಿತ್ತಸ್ಥೈರ್ಯದಿಂದ, ನೆಟ್ಟಮನಸ್ಸಿನಿಂದ. एकाग्र "तसिः" (वा० ५-४-४४)।

एकाग्रता ಏಕಾಗ್ರತಾ (ಸ್ತ್ರೀ०) ಒಂದೇ ವಿಷಯದಲ್ಲಿ ಆಸಕ್ತವಾಗಿರುವಿಕೆ, ಒಂದೇ ವಿಷಯದಲ್ಲಿ ಮನಸ್ಸನ್ನಿಟ್ಟಿರುವಿಕೆ. एकाग्रस्य भावः "तल्" (५-१-११९)। "त्वः" (५-१-११९)। **–त्वम् –ತ್ವಮ್.**

एकाग्रदृष्टि ಏಕಾಗ್ರದೃಷ್ಟಿ (ವಿ०) ನೆಟ್ಟಮನಸ್ಸಿನಿಂದ ಒಂದೇ ವಿಷಯವನ್ನು ನೋಡುವ. एकाग्रा दृष्टिर्यस्य।

एकाग्रधी ಏಕಾಗ್ರಧೀ –मनस् –ಮನಸ್ (ವಿ०) ಒಂದೇ ವಿಷಯದಲ್ಲಿ ನೆಟ್ಟಮನಸ್ಸುಳ್ಳ, ಒಂದೇ ವಿಷಯದಲ್ಲಿ ಆಸಕ್ತವಾದ ಮನಸ್ಸುಳ್ಳ. एकाग्रा धीः एकाग्रं मनो वा यस्य। "स भूभृदष्टावपि लोकपालास्तेमें तदेकाग्रधियः प्रसेदे" नैष० ३-८९।

एकाङ्ग ಏಕಾಂಗ (ಪು०) 1. ಬುಧಗ್ರಹ. एकं (सुन्दरत्वेन) प्रधानम् अङ्गं यस्य। "बुधो हेमा राजपुत्र एकदेहः प्रहर्षणः। स्यात्पञ्चार्चिश्चविष्ठाजश्यामाङ्गैकाङ्गरोधनाः" त्रिकाण्ड०। (न०) 2. ಒಂದು ಅವಯವ, ಒಂದು ಭಾಗ. 3. ಶ್ರೇಷ್ಠವಾದ ಅಂಗ, ಶಿರಸ್ಸು, ತಲೆ. एकं श्रेष्ठमङ्गम्। 4. ಚಂದನವೃಕ್ಷ, ಗಂಧದ ಮರ. (ದ್ವಿವ०) 5. ದಂಪತಿಗಳು, ಏಕದೇಹಭಾವವನ್ನು ಹೊಂದಿರುವ ಪತ್ನಿಪತ್ನಿಯರು.

एकाण्ड ಏಕಾಂಡ (ಪು०) ಒಂದು ವೃಷಣವನ್ನು ಹೊಂದಿರುವ ಒಂದು ಜಾತಿಯ ಕುದುರೆ. एकमण्डं वृषणमस्य।

एकातपत्र ಏಕಾತಪತ್ರ (ವಿ०) 1. ಒಂದೇ ಛತ್ರಿಯುಳ್ಳ, ಸಾರ್ವಭೌಮತ್ವಸೂಚಕವಾದ ಒಂದು ಛತ್ರಿಯನ್ನು ಹೊಂದಿರುವ. एकम् अद्वितीयम् सार्वभौमत्वसूचकम् आतपत्रं यस्य। "एकातपत्रं जगतः प्रभुत्वं नवं वयः कान्तमिदं वपुश्च" रघु० २-४८। 2. ಕೇವಲ ಛತ್ರಿಮಯವಾದ, ಛತ್ರಿಪ್ರಚುರವಾದ. एकानि केवलानि आतपत्राणि यस्य। स्त्रियाम् **–आतपत्रा –ಆತಪತ್ರಾ.** "एकातपत्रा पृथिवीभृतां गणैरभूद्बहुच्छत्रतया पताकिनी" माघ० १२-३३।

एकात्मन् ಏಕಾತ್ಮನ್ (ಪು०) 1. ಒಂದು ಆತ್ಮ, ಒಂದು ಜೀವ. (ವಿ०) 2. ಒಂದೇ ಸ್ವರೂಪವುಳ್ಳ, ಸಮಾನ ಸ್ವರೂಪವುಳ್ಳ. 3. ಸಮಾನಸ್ವಭಾವವುಳ್ಳ, ಒಂದೇ ಸ್ವಭಾವವುಳ್ಳ. एक आत्मा स्वरूपं स्वभावो वा यस्य। 4. ಏಕಾಕಿ, ಅಸಹಾಯ, ಒಬ್ಬಂಟಿಗ.

एकादश ಏಕಾದಶ (ವಿ०) ಹನ್ನೊಂದನೆಯ. एकादशानां पूरणः "डट्" (५-२-४८)। स्त्रियां "ङीप्" (४-१-१५)। **–दशी –ದಶೀ.**

एकादशगुरु ಏಕಾದಶಗುರು (ಪು०) 1. ಹನ್ನೊಂದು ಮಂದಿ ಗುರುಗಳು : (1) ಆಚಾರ್ಯ, (2) ತಂದೆ, (3) ಜ್ಯೇಷ್ಠ ಸಹೋದರ, (4) ರಾಜ, (5) ಸೋದರಮಾವ, (6) ಶ್ವಶುರ (ಹೆಂಡತಿಯ ಅಥವಾ ಗಂಡನ ತಂದೆ), (7) ರಕ್ಷಣೆ ಕೊಡುವವನು, (8) ಮಾತಾಮಹ (ತಾಯಿಯ ತಂದೆ), (9) ಪಿತಾಮಹ (ತಂದೆಯ ತಂದೆ), (10) ವರ್ಣ ಜ್ಯೇಷ್ಠ ಮತ್ತು (11) ಪಿತೃವ್ಯ (ತಂದೆಯ ಸಹೋದರ) ಈ ಹನ್ನೊಂದು ಜನರೂ ಗುರುಗಳು. ಗುರುವಿನಂತೆ ಪೂಜ್ಯರು. "आचार्यश्च पिता ज्येष्ठभ्राता महीपतिः। मातुलः श्वशुरस्त्राता मातामहपितामहौ। वर्णज्येष्ठः पितृव्यश्च पुंस्येते गुरवो मताः" देवलः। 2. ಜನ್ಮರಾಶಿಯಿಂದ ಹನ್ನೊಂದನೆಯ ಸ್ಥಾನದಲ್ಲಿರುವ ಗುರು.

एकादशन् ಏಕಾದಶನ್ (ತ್ರಿ०) 1. ಹನ್ನೊಂದು ಸಂಖ್ಯೆ. 2. ಹನ್ನೊಂದು ಸಂಖ್ಯೆಯಿಂದ ಕೂಡಿದ, ಹನ್ನೊಂದು ಸಂಖ್ಯೆಯುಳ್ಳ. एकाधिका दश एकाधिका दश यत्र वा।

एकादशरुद्र ಏಕಾದಶರುದ್ರ (ಪು०) ಹನ್ನೊಂದು ಮಂದಿ ರುದ್ರರು. ಇವರ ಹೆಸರು ಒಂದೊಂದು ಕಲ್ಪದಲ್ಲಿಯೂ ಬೇರೆ ಬೇರೆಯಾಗಿವೆ.

भा० आदि० ६७
1. मृगव्याधः
2. सर्पः
3. निर्ऋतिः
4. अजैकपादः
5. अहिर्बुध्न्यः
6. पिनाकी
7. दहनः
8. ईश्वरः
9. कपाली
10. स्थाणुः
11. भगः

भाग० ६-६
1. अजैकपादः
2. अहिर्बुध्न्यः
3. पिनाकी
4. ऋतः
5. पितृरूपः
6. त्र्यम्बकः
7. महेश्वरः
8. वृषाकपिः
9. शम्भुः
10. हवनः
11. ईश्वरः

एकादशी ಏಕಾದಶೀ (स्त्री०) ಶುಕ್ಲ ಮತ್ತು ಕೃಷ್ಣ (ಉಭಯ) ಪಕ್ಷಗಳ ಹನ್ನೊಂದನೆಯ ತಿಥಿ, ಹರಿದಿನ. एकादशानां पूरणः "डट्" (५-२-४८)। "ङीप" (४-१-१५)। ಏಕಾದಶಿಯ ದಿನ ಭೋಜನವು ನಿಷಿದ್ಧ. ಉಪವಾಸವ್ರತವನ್ನಾಚರಿಸಬೇಕು. "एकादशी सदोपोष्या पक्षयोः शुक्लकृष्णयोः" सनत्कु० सं०। ಏಕಾದಶಿಯ ದಿನ ಮಾಡಿದ ಭೋಜನವು ಬ್ರಹ್ಮಹತ್ಯೆಯನ್ನು ಭುಜಿಸಿದಂತೆ. "पापानि कानिचित् यानि ब्रह्महत्यासमानि च। अन्नमाश्रित्य तिष्ठन्ति संप्राप्ते हरिवासरे। तानि पापान्युपाश्नाति भुञ्जानो हरिवासरे" नारदीयसं०। ವಿಷ್ಣು ಸಾಯುಜ್ಯ, ಸಂತಾನ ಮತ್ತು ಸಂಪತ್ತುಗಳನ್ನು ಅಪೇಕ್ಷಿಸುವವನು ಏಕಾದಶೀವ್ರತವನ್ನಾಚರಿಸಬೇಕು. "यदीच्छेद्विष्णुसायुज्यं सुतान् संपदमात्मनः। एकादश्यां न भुञ्जीत पक्षयोरुभयोरपि" विष्णुर०।

एकादि ಏಕಾದಿ (वि०) ಒಂದು ಮೊದಲುಗೊಂಡು (ಪರದವರೆಗಿನ) ಸಂಖ್ಯೆ. ಅಂಕಿಗಳು ಒಂಬತ್ತೇ ಆದರೂ ಅವುಗಳ ಜೋಡಣೆಯ ಕ್ರಮದಲ್ಲಿ ಅನೇಕ ಸಂಖ್ಯೆಗಳಾಗುವುವು. 1, 2, 3, 4, 5, 6, 7, 8, 9 ಮತ್ತು 0 ಈ ಅಂಕಿಗಳಲ್ಲೇ ಒಂದರೊಡನೆ ಉಳಿದ ಅಂಕಿಗಳ ಜೋಡಣೆಯಿಂದ 10, 11, 12, 13, 14, 15, 16, 17, 18 ಮತ್ತು 19 ಎಂದೂ ಎರಡರೊಡನೆ ಉಳಿದ ಅಂಕಿಗಳ ಜೋಡಣೆಯಿಂದ 20, 21, 22, 23, 24, 25, 26, 27, 28 ಮತ್ತು 29 ಎಂದೂ ಹೀಗೆಯೇ 30, 40, 50 ಅಂಕಿಗಳು ಮೊದಲುಗೊಂಡು ಪರದವರೆಗೂ 30, 40, 50, 60, 70, 80, 90, 100, 1000, 10,000, 1,00,000, 10,00,000, 1,00,00,000, ಈ ರೀತಿ ಪರದವರೆಗೂ ಸಂಖ್ಯೆಯು ಏರುತ್ತ ಹೋಗುವುದು. [ವಿವರಕ್ಕೆ "पर" "परार्ध" ಪದಗಳಲ್ಲಿ ನೋಡಿ.]

0 ಮೊದಲುಗೊಂಡು 1, 2, 3, 4 ಇತ್ಯಾದಿ **ಸಂಖ್ಯೆಗಳ ವಾಚಕಶಬ್ದಗಳು** ಅಥವಾ **ಸಂಕೇತಶಬ್ದಗಳು :**

0 ಸೊನ್ನೆ—ಶೂನ್ಯ, ಖ, ಗಗನ, ಆಕಾಶ.
1. ಬ್ರಹ್ಮ, ಇಂದ್ರ, ಸೂರ್ಯ, ಚಂದ್ರ, ಇತ್ಯಾದಿ.
2. ನೇತ್ರ, ಪಕ್ಷ, ನದಿಯತೀರ, ಅಯನ, ಇತ್ಯಾದಿ.
3. ಕಾಲ, ಅಗ್ನಿ, ಭುವನ, ಸತ್ತ್ವಾದಿ ಗುಣಗಳು, ರಾಜರ ಶಕ್ತಿಗಳು, ಇತ್ಯಾದಿ.
4. ವೇದಗಳು, ವರ್ಣಗಳು, ಆಶ್ರಮಗಳು, ಸಾಗರಗಳು, ಉಪಾಯಗಳು ಇತ್ಯಾದಿ.
5. (ಪಂಚ)ಮಹಾಭೂತಗಳು, (ಪಂಚ) ಪಾಂಡವರು, (ಪಂಚ) ಇಂದ್ರಿಯಗಳು, (ಪಂಚ) ಪ್ರಾಣಗಳು, (ಪಂಚ) ಮಹಾಯಜ್ಞಗಳು, (ಪಂಚ) ಲೋಹಗಳು ಇತ್ಯಾದಿ.
6. ವೇದಾಂಗಗಳು, ಭೋಜ್ಯರಸಗಳು, ರಾಜನ ಗುಣಗಳು, ಋತುಗಳು ಇತ್ಯಾದಿ.
7. ಲೋಕಗಳು, ಪಾತಾಳಗಳು, ಋಷಿಗಳು, ಸ್ವರಗಳು, ಪರ್ವತಗಳು, ದ್ವೀಪಗಳು, ರಾಜ್ಯಾಂಗಗಳು ಇತ್ಯಾದಿ.
8. ವಸುಗಳು, ಯೋಗಾಂಗಗಳು, ಈಶ್ವರನ ಮೂರ್ತಿಗಳು, ದಿಗ್ಗಜಗಳು, ಸಿದ್ಧಿಗಳು.
9. ದೇಹದ ದ್ವಾರಗಳು, ಭೂಖಂಡಗಳು, ನಿಧಿಗಳು, ರಸಗಳು, ಗ್ರಹಗಳು, ಧಾನ್ಯಗಳು, (ನವ)ರತ್ನಗಳು.
10. (ಮಹಾವಿಷ್ಣುವಿನ) ಅವತಾರಗಳು, ರಾವಣನ ತಲೆಗಳು, (ದಶ) ದಿಕ್ಕುಗಳು, (ದಶ) ರೂಪಕಗಳು.
11. ರುದ್ರರು.
12. ಆದಿತ್ಯರು, ರಾಶಿಗಳು, ರಾಜರು.
13. ತಾಂಬೂಲಗುಣಗಳು.
14. ವಿದ್ಯೆಗಳು, ಭುವನಗಳು, ಮನುಗಳು, ಇಂದ್ರರು.
15. (ಉಭಯ ಪಕ್ಷಗಳ) ತಿಥಿಗಳು.
16. ಚಂದ್ರನ ಕಲೆಗಳು.
17. ಲಿಂಗದೇಹಾವಯವಗಳು.
18. ಅಷ್ಟಾದಶವಿದ್ಯೆಗಳು, —ಪುರಾಣಗಳು, —ಸ್ಮೃತಿಗಳು, —ಧಾನ್ಯಗಳು,—ವಿವಾದಸ್ಥಾನಗಳು.
19. ಮೂಲಾನಕ್ಷತ್ರ.
20. ರಾವಣನ ಭುಜಗಳು, ಹಸ್ತ ಮತ್ತು ಪಾದಗಳ ಬೆರಳುಗಳು.
21. ಪರಶುರಾಮನ ಜಯ.
22. ಶ್ರವಣನಕ್ಷತ್ರ.

23. ಧನಿಷ್ಠಾನಕ್ಷತ್ರ.
24. ಪ್ರಕೃತಿಗಳು.
25. ಸಾಂಖ್ಯತತ್ತ್ವಗಳು.
26. ಜೀವೇಶ್ವರಸಹಿತವಾದ ತತ್ತ್ವಗಳು.
27. ಅಶ್ವಿನೀ ಮೊದಲಾದ ನಕ್ಷತ್ರಗಳು.
28. ಅಭಿಜಿತ್ ಸಹಿತ ನಕ್ಷತ್ರಗಳು.
32. ದಂತ(ಹಲ್ಲು) ಗಳು, ಮಹಾಪುರುಷಲಕ್ಷಣಗಳು, ಭಗವದಪರಾಧಗಳು.
33. ನಾಟ್ಯಾಲಂಕಾರಗಳು.
35. ತಾಳಗಳು.
40. ತಾನಗಳು.
49. ನಲವತ್ತೊಂಬತ್ತು ಮರುತ್ತುಗಳು.
50. (ತಂತ್ರ ಮತದಲ್ಲಿ) ಮಾತೃಕಾಲಿಪಿಗಳು.
56. ದೇಶಗಳು.
64. ಕಲೆ(ವಿದ್ಯೆ) ಗಳು, ನಾಟಕೀಯಾಂಗಗಳು.
100. ಪುರುಷಾಯುಸ್ಸು, ತಾವರೆಯ ದಳಗಳು. "शतायुर्वै पुरुषः"।
1000. ಆದಿಶೇಷನ ತಲೆಗಳು, ವಿರಾಟ್‌ಪುರುಷನ ತಲೆಗಳು, —ಕಣ್ಣುಗಳು, —ಕಾಲುಗಳು, ಕಾರ್ತವೀರ್ಯನ ಬಾಹುಗಳು.

एकादेश ಏಕಾದೇಶ (ಪು೦) (ವ್ಯಾಕರಣದಲ್ಲಿ) ಸಂಧಿ ವಿಧಿಸುವಾಗ ಎರಡು ವರ್ಣಗಳ ಸ್ಥಾನದಲ್ಲಿ ಬರುವ (ವಿಧಿಸಲ್ಪಡುವ) ಒಂದು ವರ್ಣ; ಒಂದು (ಪೂರ್ವ) ಪದದ ಅಂತ್ಯವರ್ಣ, ಮತ್ತೊಂದು (ಉತ್ತರ) ಪದದ ಆದಿ (ಮೊದಲನೆಯ) ವರ್ಣ ಇವುಗಳಿಗೆ ಸಂಧಿ ಹೇಳುವಾಗ ಇವೆರಡರ ಸ್ಥಾನದಲ್ಲಿ (ಆಯಾ ವರ್ಣಗಳ ಸ್ಥಾನ ಪ್ರಯತ್ನಗಳಿಗನುಗುಣವಾದ) ಮತ್ತೊಂದು ವರ್ಣವು ಆದೇಶವಾಗಿ ಬರುವುದು. दैत्य + अरिः ಎಂಬಲ್ಲಿ ಪೂರ್ವ ಪದದ ಕೊನೆಯ ವರ್ಣ "अ"ಕಾರ ಮತ್ತು ಉತ್ತರ ಪದದ ಮೊದಲನೆಯ ವರ್ಣ "अ"ಕಾರ ಇವೆರಡರ ಸ್ಥಾನದಲ್ಲಿ ಒಂದು ದೀರ್ಘ "आ"ಕಾರವು ಏಕಾದೇಶವಾಗಿ ಬಂದು दैत्यारिः ಎಂದಾಗುವುದು. उप + इन्द्रः ಎಂಬಲ್ಲಿ ಪೂರ್ವಪದದ ಕೊನೆಯ "अ"ಕಾರ ಉತ್ತರ ಪದದ ಆದಿಯ "इ"ಕಾರ ಇವೆರಡರ ಸ್ಥಾನದಲ್ಲಿ "ए"ಕಾರವು ಏಕಾದೇಶವಾಗಿ ಬಂದು उपेन्द्रः ಎಂದಾಗುವುದು.

एकाद्नविंशति ಏಕಾದ್ನವಿಂಶತಿ (ಸ್ತ್ರೀ೦) ಹತ್ತೊಂಬತ್ತು, ಒಂದು ಕಡಿಮೆ ಇಪ್ಪತ್ತು. एकेन न विंशतिः—एक + न + विंशतिः एकस्य "आदुक्" आगमः (६-३-७६)। "द"ಕಾರಕ್ಕೆ ಅನುನಾಸಿಕಪಕ್ಷದಲ್ಲಿ **एकान्नविंशतिः ಏಕಾನ್ನವಿಂಶತಿಃ.**

एकाधिपति ಏಕಾಧಿಪತಿ (ಪು೦) 1. ಚಕ್ರವರ್ತಿ, ಸಾರ್ವಭೌಮ, ದೇಶಕ್ಕೆ ಒಬ್ಬನೇ ದೊರೆಯಾಗಿರುವವನು. एकः केवलः अद्वितीयः अधिपतिः। 2. ಎರಡು ರಾಶಿಗಳಿಗೂ ಅಧಿಪತಿಯಾಗಿರುವ ಒಂದು ಗ್ರಹ.

एकानंशा ಏಕಾನಂಶಾ (ಸ್ತ್ರೀ೦) ದುರ್ಗಾದೇವಿ. एको न अंशो यस्याः। "विद्धि चैनामथोत्पन्नामंशाद्देवीं प्रजापतेः। एकानंशां योगकलां रक्षार्थं केशवस्य तु" हरिवं० ५९-१४-४७।

एकान्त ಏಕಾಂತ (ಪು೦) 1. ನಿರ್ಜನಪ್ರದೇಶ, ರಹಸ್ಯ ಪ್ರದೇಶ, ಯಾರೂ ಇಲ್ಲದ ಪ್ರದೇಶ. एक एव अन्तो यत्र। "व्योमैकान्तविहारिणोऽपि विहगाः संप्राप्नुवन्त्यापदं बध्यन्ते निपुणैरगाधसलिलान्मत्स्याः समुद्रादपि" हितो० २-५२। (न०) 2. ಅತಿಶಯ, ಹೆಚ್ಚಿಗೆ, ಆಧಿಕ್ಯ. एकस्मिन्नेवान्तो यस्य। 3. ನಿಯಮ, ಕಟ್ಟಲೆ. "तेजः क्षमा वा नैकान्तं कालज्ञस्य महीपतेः" माघ० २-८३। (वि०)4. ಅತಿಶಯವಾದ. "स्वायत्तमेकान्तहितं विधात्रा विनिर्मितं छादनमज्ञतायाः" भर्तृ० १-७। 5. ನಿಯತವಾದ, ಶಾಶ್ವತವಾದ, ನಿತ್ಯವಾದ. "नागेन्द्रहस्तास्त्वचि कर्कशत्वादेकान्तशैत्यात्कदलीविशेषाः" कुमा० १-३६।

एकान्ततस् ಏಕಾಂತತಸ್ (ಅವ್ಯ೦) 1. ರಹಸ್ಯದಲ್ಲಿ. एकान्त "तसिः" (वा० ५-४-४४)। (क्रि०वि०) 2. ಏಕಾಂತವಾಗಿ, ರಹಸ್ಯವಾಗಿ. 3. ನಿಯತವಾಗಿ, ಕ್ಲಪ್ತವಾಗಿ, ಶಾಶ್ವತವಾಗಿ. "कस्यात्यन्तं सुखमुपनतं दुःखमेकान्ततो वा" मेघ० २-४६। 4. ಅತ್ಯಂತವಾಗಿ, ಅತಿಶಯವಾಗಿ. "यद्यस्मासु पराङ्मुखोऽसि वयमप्येकान्ततो निःस्पृहाः" भर्तृ० ३-५१।

एकान्तदुःषमा ಏಕಾಂತದುಃಷಮಾ (ಸ್ತ್ರೀ೦) ಜೈನಮತ ಕಲ್ಪಿತವಾದ ಬಹಳ ಕಷ್ಟವಾದ ಒಂದು ಕಾಲ. द्विष्टा समा वर्षो दुःषमा। एकान्तं दुःषमा। [ವಿವರಕ್ಕೆ "दुःषमा" ಪದದಲ್ಲಿ ನೋಡಿ.]

एकान्तर ಏಕಾಂತರ (ಪು೦) 1. ದಿನಬಿಟ್ಟು ದಿನ ಬರುವ ಜ್ವರ, ಮೂರನೆಯ (ವಾಯಿದೆ) ಜ್ವರ. (न०) 2. ದಿನ ಬಿಟ್ಟು ದಿನ ಊಟ ಮಾಡುವ ಒಂದು ವ್ರತ, ಮಧ್ಯೆ ಮಧ್ಯೆ ಒಂದು ದಿನ ಬಿಟ್ಟು ಊಟ ಮಾಡುವ ಒಂದು ವ್ರತ. (वि०) 3. ಒಂದು ಮಧ್ಯದಲ್ಲಿರುವ, ಮಧ್ಯೆ ಒಂದು ವಸ್ತುವಿನಿಂದ ವ್ಯವಹಿತವಾಗಿರುವ. एकमन्तरं व्यवधानं यस्य। "आम एकान्तरमामन्त्रितमनन्तिके" पा० सू० ८-१-५५।

एकान्तसुषमा ಏಕಾಂತಸುಷಮಾ (स्त्री०) ಜೈನಮತ ಸಿದ್ಧವಾದ ಬಹಳ ಸುಖವಾದ ಒಂದು ಕಾಲ. एकान्तं सुषमा। [ವಿವರಕ್ಕೆ "सुषमा" ಪದದಲ್ಲಿ ನೋಡಿ.]

एकान्तिन् ಏಕಾಂತಿನ್ (त्रि०) 1. ಏಕಾಂತವಾಸವುಳ್ಳ, ಯಾರ ಸಂಪರ್ಕವೂ ಇಲ್ಲದ ನಿರ್ಜನ ಪ್ರದೇಶದಲ್ಲಿ ವಾಸಿಸುವ. एकान्तमस्त्यस्य "इनिः" (५-२-११५)। 2. ಭಗವದ್ಭಕ್ತ, ಪರಮಾತ್ಮನೊಬ್ಬನಲ್ಲೇ ಭಕ್ತಿಯಿಟ್ಟಿರುವ. एकान्तः उपास्यत्वेनास्त्यस्य "इनिः" (५-२-११५)।

एकान्न ಏಕಾನ್ನ (न०) 1. ಒಂದು ಊಟ, ಒಂದು ಬೇಳೆ ಮಾಡುವ ಊಟ. 2. ಅದೇ ಊಟ, ಸಮಾನವಾದ ಊಟ. एकं समानम् अन्नम्। 3. ಒಂದು ಮನೆಯ ಊಟ, ಒಂದೇ ಮನೆಯ ಅನ್ನ. एकस्यान्नम्। "भैक्षेण वर्तयेन्नित्यं नैकान्नादी भवेद्व्रती" मनु० २-१८८। (वि०) 4. ದಿನವೂ ಒಂದು ಬೇಳೆ ಮಾತ್ರ ಊಟ ಮಾಡುವ, ಏಕಕಾಲಮಾತ್ರ ಭೋಜನಮಾಡುವ. एककालमेवान्नं भोजनं यस्य। 5. ಅದೇ ಆಹಾರ ಊಟ ಮಾಡುವ, ಸಮಾನವಾದ ಆಹಾರವನ್ನು ಊಟಮಾಡುವ. 6. ಒಂದು ಮನೆಯ ಅನ್ನವನ್ನೇ ಊಟಮಾಡುವ. एकं समानम् अन्नं एकस्यैवान्नं वा यस्य।

एकान्नविंशति ಏಕಾನ್ನವಿಂಶತಿ (स्त्री०) ಹತ್ತೊಂಬತ್ತು, ಒಂದು ಕಡಿಮೆ ಇಪ್ಪತ್ತು. एकेन न विंशतिः—एक + न विंशतिः, एकस्य "आदुक्" आगमः (६-३-७६)। अनुनासिकपक्षे रूपमिदम्। अनुनासिकाभावपक्षे **एकादन-विंशतिः ಏಕಾದ್ಯವಿಂಶತಿಃ.**

एकान्नादिन् ಏಕಾನ್ನಾದಿನ್ (वि०) ಒಂದು ಮನೆಯಲ್ಲಿ ಊಟಮಾಡುವ, ಒಂದು ಮನೆಯ ಅನ್ನವನ್ನು ತಿನ್ನುವ. एकान्नमत्ति—अद (भक्षणे) "णिनिः" (३-१-१३४)। "भैक्षेण वर्तयेन्नित्यं नैकान्नादी भवेद्व्रती" मनु० २-१८८।

एकान्वय ಏಕಾನ್ವಯ (पु०) 1. ಒಂದೇ ವಂಶ, ಸಮಾನವಾದ ವಂಶ. (वि०) 2. ಒಂದೇ ವಂಶದ, ಒಂದೇ ವಂಶದಲ್ಲಿ ಹುಟ್ಟಿದ. एकोऽन्वयो यस्य।

एकापचय ಏಕಾಪಚಯ (पु०) ಆಹಾರವನ್ನು ಒಂದೊಂದು ಗ್ರಾಸವಾಗಿ ಕಡಿಮೆ ಮಾಡುವಿಕೆ, ಪೂರ್ಣಿಮೆಯ ದಿನ ಊಟಮಾಡಿ ಕೃಷ್ಣಪ್ರತಿಪತ್ ಮೊದಲುಗೊಂಡು ಪ್ರತಿದಿನವೂ ಒಂದೊಂದು ಗ್ರಾಸ ಕಡಿಮೆ ಮಾಡಿಕೊಂಡು (ಕೃಷ್ಣ ಪಕ್ಷದಲ್ಲಿ) ಊಟಮಾಡುವಿಕೆ. ಇದು ಚಾಂದ್ರಾಯಣ ವ್ರತಕ್ಕೆ ಸಂಬಂಧಿಸಿದುದು. "पौर्णमास्यां पञ्चदश ग्रासान् भुक्त्वा एकापचयेनापरपक्षमश्नीयात्" गौतमध० २७-१३।

एकाब्दा ಏಕಾಬ್ದಾ (स्त्री०) ಒಂದು ವರ್ಷ ವಯಸ್ಸಿನ ಕರು, ಒಂದು ವರ್ಷ ತುಂಬಿದ ಕರು. एकोऽब्दोऽस्याः।

एकाम्रनाथ ಏಕಾಮ್ರನಾಥ (पु०) ಕಾಂಚೀಪುರದಲ್ಲಿ ನೆಲಸಿರುವ ಏಕಾಮ್ರೇಶ್ವರ.

एकाम्रवन ಏಕಾಮ್ರವನ (न०) ಏಕಾಮ್ರೇಶ್ವರನು ನೆಲಸಿರುವ ಒಂದು ವನ.

एकायन ಏಕಾಯನ (न०) 1. ಒಬ್ಬನು ಮಾತ್ರ ಹೋಗಲು ಸಾಧ್ಯವಾಗುವ ದಾರಿ, ಕಿರುದಾರಿ, ಕಾಲುದಾರಿ. (वि०) 2. ಒಬ್ಬನು ಮಾತ್ರ ನಡೆಯಲು ಸಾಧ್ಯವಾದ. "आस्त एकायने मार्गे कदलीखण्डमण्डिते। भ्रातुर्भीमस्य रक्षार्थं तं मार्गमवरुध्य वै" भा० वन० १४८-७२। 3. ಏಕಾಗ್ರತೆಯುಳ್ಳ, ಒಂದೇ ವಿಷಯದಲ್ಲಿ ನೆಟ್ಟಮನಸ್ಸುಳ್ಳ. एकमयनं ज्ञानं यस्य।

एकायनगत ಏಕಾಯನಗತ (वि०) ಒಂದೇ ವಿಷಯದಲ್ಲಿ ನೆಟ್ಟಮನಸ್ಸುಳ್ಳ. एकस्मिन्नयने गतं ज्ञानं यस्य।

एकार्थ ಏಕಾರ್ಥ (पु०) 1. ಒಂದು ಅರ್ಥ. 2. ಒಂದೇ ಅರ್ಥ, ಸಮಾನವಾದ ಅರ್ಥ, ಅದೇ ಅರ್ಥ. 3. ಒಂದು ಕಾರ್ಯ. 4. ಒಂದೇ ಕಾರ್ಯ, ಸಮಾನವಾದ ಕಾರ್ಯ. 5. ಒಂದು ಪ್ರಯೋಜನ. 6. ಒಂದೇ ಪ್ರಯೋಜನ, ಸಮಾನವಾದ ಪ್ರಯೋಜನ. 7. ಒಂದು ವಸ್ತು, ಒಂದು ಪದಾರ್ಥ. एकोऽर्थः अभिधेयं उद्देशः प्रयोजनं पदार्थो वा। "वर्णाः पदं प्रयोगार्हान्वितैकार्थबोधकाः" सा० द० २-२। (वि०) 8. ಒಂದು ಅರ್ಥವುಳ್ಳ (ಶಬ್ದ). 9. ಸಮಾನವಾದ ಅರ್ಥವುಳ್ಳ. 10. ಒಂದು ಪ್ರಯೋಜನವುಳ್ಳ. 11. ಸಮಾನವಾದ ಪ್ರಯೋಜನವುಳ್ಳ. 12. ಒಂದೇ ಕಾರ್ಯವುಳ್ಳ, ಸಮಾನವಾದ ಕಾರ್ಯವುಳ್ಳ.

एकार्थता ಏಕಾರ್ಥತಾ (स्त्री०) 1. ಒಂದೇ ಪ್ರಯೋಜನ ಹೊಂದಿರುವಿಕೆ. 2. ಒಂದೇ ಕಾರ್ಯವಿರುವಿಕೆ. एकार्थस्य भावः "तल्" (५-१-११९)। "त्वः"। **एकार्थत्वम् ಏಕಾರ್ಥತ್ವಮ್.**

एकार्थीभाव ಏಕಾರ್ಥೀಭಾವ (पु०) ಪ್ರತ್ಯೇಕವಾದ ಅರ್ಥವುಳ್ಳ ಶಬ್ದಗಳಿಗೆ ಸಮಾಸ ಬಂದಾಗ ಸಮುದಾಯಶಕ್ತಿಯಿಂದ ವಿಶಿಷ್ಟವಾದ ಒಂದು ಅರ್ಥವುಂಟಾಗುವಿಕೆ, ಪ್ರಕ್ರಿಯಾದಶೆಯಲ್ಲಿ ಪ್ರತ್ಯೇಕವಾದ ಅರ್ಥವುಳ್ಳ ಶಬಗಳು ಸಮಾಸದಲ್ಲಿ ವಿಶಿಷ್ಟವಾದ ಒಂದು ಅರ್ಥವನ್ನು ಹೊಂದುವಿಕೆ. राज्ञः पुरुषः ಎಂಬಲ್ಲಿ राजन् ಮತ್ತು पुरुष ಶಬ್ದಗಳಿಗೆ ಪ್ರಕ್ರಿಯಾದಶೆಯಲ್ಲಿ ಪ್ರತ್ಯೇಕವಾದ ಅರ್ಥವಿದ್ದರೂ ಸಮಾಸ ಬಂದಾಗ ಏಕಾರ್ಥೀಭಾವಲಕ್ಷಣಸಾಮರ್ಥ್ಯದಿಂದ ರಾಜ

ಪುರುಷನೆಂಬ ವಿಶಿಷ್ಟವಾದ ಒಂದು ಅರ್ಥವು ಉಂಟಾಗುವುದು.

एकार्थीभावसामर्थ्य ಏಕಾರ್ಥೀಭಾವಸಾಮರ್ಥ್ಯ (ನ॰) ಪದಗಳಿಗೆ ಸಮಾಸ ಬರಲು ಅವಶ್ಯವಾಗಿರುವ ಒಂದು ಸಾಮರ್ಥ್ಯ, ಪ್ರಕ್ರಿಯಾದಶೆಯಲ್ಲಿ ಪ್ರತ್ಯೇಕವಾದ ಅರ್ಥವುಳ್ಳ ಪದಗಳಿಗೆ ಸಮುದಾಯಶಕ್ತಿಯಿಂದ ವಿಶಿಷ್ಟವಾದ ಒಂದು ಅರ್ಥವನ್ನುಂಟುಮಾಡುವ ಒಂದು ಶಕ್ತಿ. ಇದೇ ಏಕಾರ್ಥೀಭಾವಲಕ್ಷಣಸಾಮರ್ಥ್ಯ. राज्ञः पुरुषः ಎಂಬಲ್ಲಿ राजन् ಪದಕ್ಕೂ पुरुष ಪದಕ್ಕೂ ಪ್ರತ್ಯೇಕವಾದ ಅರ್ಥವಿದ್ದರೂ ಸಮಾಸ ಬಂದಾಗ ಏಕಾರ್ಥೀಭಾವಲಕ್ಷಣಸಾಮರ್ಥ್ಯದಿಂದ ವಿಶಿಷ್ಟಾರ್ಥವೊಂದುಂಟಾಗಿ "ರಾಜಪುರುಷ" ಎಂಬ ಅರ್ಥವು ತೋರುವುದು.

एकार्थीभूत ಏಕಾರ್ಥೀಭೂತ (ವಿ॰) ಪ್ರಕ್ರಿಯಾದಶೆಯಲ್ಲಿ ಪ್ರತ್ಯೇಕವಾಗಿದ್ದು ಸಮಾಸದಲ್ಲಿ ಸಮುದಾಯ ಶಕ್ತಿಯಿಂದ ವಿಶಿಷ್ಟವಾದ ಒಂದೇ ಅರ್ಥವಾಗಿರುವ. एकार्थ+भू (सत्तायाम्) ಕರ್ತೆ॰ "क्तः" (३-४-७२)। ಅಭೂತತ॰ "क्विः" (वा॰ ५-४-५०)।

एकावलि, –ली ಏಕಾವಳಿ, –ಳೀ (ಸ್ತ್ರೀ॰) 1. ಒಂದು ಶ್ರೇಣಿ, ಒಂದು ಪಙ್ಕ್ತಿ, ಒಂದು ಸಾಲು. एका आवलिः। 2. ಒಂದೆಳೆಯ ಹೂವಿನ ಅಥವಾ ಮುತ್ತಿನ ಸರ. 3. ಅರ್ಥಾಲಂಕಾರದ ಒಂದು ಭೇದ; ಹಿಂದು ಹಿಂದಿನ ಪದಗಳಿಗೆ ಮುಂದು ಮುಂದಿನ ಪದಗಳು ವಿಶೇಷಣವಾಗಿರುವಿಕೆ ಅಥವಾ ಮುಂದು ಮುಂದಿನ ಪದಗಳಿಗೆ ಹಿಂದು ಹಿಂದಿನ ಪದಗಳು ವಿಶೇಷಣವಾಗಿರುವಿಕೆ ಈ ರೀತಿ ಸಾಲುಸಾಲಾಗಿ ಅರ್ಥವರ್ಣನೆಯು **"ಏಕಾವಳಿ"** ಅಲಂಕಾರವಾಗುವುದು. "गृहीतमुक्तरीत्यार्थश्रेणिरेकावली मता" चन्द्रा॰। उदा॰ "नेत्रे कर्णान्तविश्रान्ते कर्णौ दोःस्तम्भदोलिनौ। दोःस्तम्भौ जानुपर्यन्तप्रलम्बनमनोहरौ। जानुनी रत्नमुकुराकारे तस्य महीभुजः" ಇಲ್ಲಿ ಕರ್ಣಗಳು ನೇತ್ರಗಳಿಗೆ ವಿಶೇಷಣ. ಕರ್ಣಗಳಿಗೆ ದೋಃಸ್ತಂಭಗಳು ವಿಶೇಷಣ. ದೋಃಸ್ತಂಭಗಳಿಗೆ ಜಾನುಗಳು ವಿಶೇಷಣ. ಜಾನುಗಳಿಗೆ ರತ್ನಮುಕುರಗಳು ವಿಶೇಷಣ. ಈ ರೀತಿ ಪೂರ್ವ ಪೂರ್ವ ಪದಗಳಿಗೆ ಉತ್ತರೋತ್ತರ ಪದಗಳು ವಿಶೇಷಣವಾಗಿರುವಂತೆ ಶ್ರೇಣಿಯಾಗಿ ಅರ್ಥ ವರ್ಣಿತವಾಗಿರುವುದರಿಂದ **"ಏಕಾವಳಿ"** ಅಲಂಕಾರವಾಗಿರುವುದು. "न तज्जलं यन्न सुचारुपङ्कजं न पङ्कजं तद्यदलीनषट्पदम्। न षट्पदोऽसौ न जुगुञ्ज यः कलं न गुञ्जितं तन्न जहार यन्मनः" भट्टि॰ २-१९।

एकाशिन् ಏಕಾಶಿನ್ (ವಿ॰) ಒಂಟಿಯಾಗಿ ಊಟಮಾಡುವ, ಒಬ್ಬನೇ ಕುಳಿತು ಊಟಮಾಡುವ. एक एवाश्नाति—अश (भोजने) "णिनिः" (३-१-१३४)।

एकाशीत ಏಕಾಶೀತ (ವಿ॰) ಎಂಬತ್ತೊಂದನೆಯ. एकाशीतेः पूरणः "डट्" (५-२-४८)।

एकाशीति ಏಕಾಶೀತಿ (ಸ್ತ್ರೀ॰) ಎಂಬತ್ತೊಂದು. एकाधिका अशीतिः।

एकाशीतितम ಏಕಾಶೀತಿತಮ (ವಿ॰) ಎಂಬತ್ತೊಂದನೆಯ. एकाशीतेः पूरणः डटौ वा "तमट्" (५-२-५६)। तमडभावे **एकाशीतः ಏಕಾಶೀತಃ**. स्त्रियां "ङीप्" (४-१-१५)। **–तमी –ತಮೀ**.

एकाशीतिपद ಏಕಾಶೀತಿಪದ (ನ॰) ಗೃಹನಿರ್ಮಾಣಕಾಲದಲ್ಲಿ ಮೊದಲು ವಾಸ್ತುಪೂಜೆಗಾಗಿ ಮಾಡುವ ಎಂಬತ್ತೊಂದು ಸ್ಥಾನಗಳುಳ್ಳ ಒಂದು ಮಂಡಲ. "प्रासादे च चतुःषष्टिरेकाशीतिपदं गृहे" देवीपु॰।

एकाश्रय ಏಕಾಶ್ರಯ (ಪು॰) 1. ಒಂದು ಆಧಾರ, ಒಂದು ಅವಲಂಬನ, ಒಂದು ಊರುಗಂಬ. 2. ಒಂದು ಒತ್ತಾಸೆ, ಒಂದು ಸಹಾಯತೆ, ಅವಲಂಬನ. एकः आश्रयः आधारः अवलम्बनं वा। (ವಿ॰) 3. ಒಂದು ಆಧಾರವುಳ್ಳ. 4. ಒಬ್ಬನ ಒತ್ತಾಸೆಯುಳ್ಳ, ಒಬ್ಬನ ಸಾಹಾಯ್ಯವುಳ್ಳ. एकः आधार अवलम्बनं वा यस्य।

एकाष्टका ಏಕಾಷ್ಟಕಾ (ಸ್ತ್ರೀ॰) 1. ಮಾಘ ಬಹುಳ ಅಷ್ಟಮಿ. 2. ಮಾಘ ಬಹುಳ ಅಷ್ಟಮಿಯ ದಿನ ಮಾಡಬೇಕಾದ ಶ್ರಾದ್ಧ. एका अष्टका।

एकाष्ठील ಏಕಾಷ್ಠೀಲ (ಪು॰) ಬಕಪುಷ್ಪದ ಗಿಡ, ಕೊಕ್ಕರೆ ಹೂವಿನ ಗಿಡ. एकोऽष्ठीलो मज्जा यस्य।

एकाष्ठीला ಏಕಾಷ್ಠೀಲಾ (ಸ್ತ್ರೀ॰) ಅಗುರು ಶುಂಠಿ. एकः अष्ठीलो मज्जा यस्याः।

एकाह ಏಕಾಹ (ಪು॰) 1. ಒಂದು ದಿವಸ. एकमहः। 2. ಒಂದು ದಿವಸದಲ್ಲಿ ಮಾಡಬಹುದಾದ ಯಾಗ.

एकाहगम ಏಕಾಹಗಮ (ಪು॰) ಒಂದು ದಿನದಲ್ಲಿ ಹೋಗಿ ಸೇರಬಹುದಾದ ದೇಶ. एकाहेन गम्यते—गम्लृ (गतौ) ಕರ್ಮ॰ "अप्" ನಿಪಾ॰ (५-२-११)।

एकाहार ಏಕಾಹಾರ (ಪು॰) 1. ಒಂದು ದಿನದಲ್ಲಿ ಮಾಡುವ ಒಂದು ಊಟ. एकस्मिन् दिने एक आहारो भोजनम्। (ವಿ॰) 2. ಒಂದು ದಿನದಲ್ಲಿ ಒಂದು ವೇಳೆ ಊಟಮಾಡುವ. एक आहारो यस्य।

एकीकरण ಏಕೀಕರಣ (ನ೦) ಒಂದಾಗಿ ಮಾಡುವಿಕೆ, ಚೆದರಿರುವುದನ್ನು ಒಟ್ಟಾಗಿ ಕೂಡಿಸುವಿಕೆ, ರಾಶಿ ಹಾಕುವಿಕೆ, ಗುಪ್ಪೆಮಾಡುವಿಕೆ.

एकीय ಏಕೀಯ (ವಿ೦) ಒಂದು ಪಕ್ಷದಲ್ಲಿರುವ, ಒಂದು ಪಕ್ಷಕ್ಕೆ ಸೇರಿದ. एक "छः" (४-२-११४)।

एकेक्षण ಏಕೇಕ್ಷಣ (ಪು೦)1. ವಾಯಸ, ಕಾಗೆ. एकमीक्षणं यस्य। 2. ಶುಕ್ರಾಚಾರ್ಯರು. [ಬಲಿಚಕ್ರವರ್ತಿಯು ವಾಮನಮೂರ್ತಿಗೆ ಮೂರು ಅಡಿ ಭೂಮಿಯನ್ನು ಧಾರೆಯೆರೆಯಲು ಯತ್ನಿಸಿದಾಗ ಶುಕ್ರಾಚಾರ್ಯರು ಸೂಕ್ಷ್ಮ ರೂಪದಿಂದ ಗಿಂಡಿಯ ಕಂಡಿಯಲ್ಲಿ ಪ್ರವೇಶಿಸಿ ತಡೆಯಲು ಅದನ್ನು ಸರಿಪಡಿಸುವ ವ್ಯಾಜದಿಂದ ವಾಮನಮೂರ್ತಿಯು ದರ್ಭೆಯ ತುದಿಯಿಂದ ಶುಕ್ರಾಚಾರ್ಯರ ಕಣ್ಣನ್ನು ಚುಚ್ಚಿದುದರಿಂದ ಇವರು ಏಕೇಕ್ಷಣರಾದರು.] (ವಿ೦)3. ಒಂದು ಕಣ್ಣುಳ್ಳವನು.

एकैक ಏಕೈಕ (ವಿ೦) ಪ್ರತ್ಯೇಕವಾದ ಒಂದೊಂದು. एक वीप्सायां द्विर्भावः (८-१-९)। "यौवनं धनसम्पत्तिः प्रभुत्वमविवेकिता। एकैकमप्यनर्थाय किमु यत्र चतुष्टयम्" सुभा०। "एकैकमत्र दिवसे दिवसे मदीयं नामाक्षरं गणय गच्छति यावदन्तम्" शाकु० ६-१२।

एकैकशस् ಏಕೈಕಶಸ್ (ಅವ್ಯ೦) ಒಂದೊಂದಾಗಿ. एकमेकमावेदयति "शस्" (५-४-४३)। "एकैकशश्च प्रतिनामग्राहमावेद्यमाना बलाहकेन" काद०।

एकोक्ति ಏಕೋಕ್ತಿ (ಸ್ತ್ರೀ೦) ಒಂದೇ ಪದದಿಂದ ಹೇಳುವುದು, ಒಂದೇ ಪದದಲ್ಲಿ ಎರಡು ಅರ್ಥಗಳನ್ನು ಕೊಡತಕ್ಕ ಅಭಿಧಾಶಕ್ತಿ. एका उक्तिः अभिधाशक्तिः। "पुष्पवन्तौ" ಎಂಬ ಒಂದೇ ಪದವು ಸೂರ್ಯ ಮತ್ತು ಚಂದ್ರರೆಂಬ ಎರಡು ಅರ್ಥಗಳನ್ನು ಕೊಡುವ ಶಕ್ತಿಯುಳ್ಳದ್ದಾಗಿರುವುದು. "एकयोक्त्या पुष्पवन्तौ दिवाकरनिशाकरौ" अम०।

एकोच्चय ಏಕೋಚ್ಚಯ (ಪು೦) ಒಂದೊಂದು ಹೆಚ್ಚಿಸುವುದು, ಒಂದೊಂದು ಗ್ರಾಸವಾಗಿ (ಆಹಾರವನ್ನು) ಹೆಚ್ಚಿಸುವಿಕೆ, ಅಮಾವಾಸ್ಯೆಯ ದಿನ ಉಪವಾಸವಿದ್ದು ಪ್ರತಿಪತ್ ಮೊದಲುಗೊಂಡು ಒಂದೊಂದು ಕಬಳವನ್ನು ಹೆಚ್ಚಿಸಿ (ಶುಕ್ಲಪಕ್ಷದಲ್ಲಿ) ಊಟಮಾಡುವಿಕೆ. ಇದು ಚಾಂದ್ರಾಯಣ ವ್ರತವನ್ನು ಆಚರಿಸುವ ಕ್ರಮ. "अमावास्यायामुपोष्य एकोच्चयेन पूर्वपक्षम्" गौतमध० २७-१४।

एकोत्तर ಏಕೋತ್ತರ (ವಿ೦) ಒಂದೊಂದು ಹೆಚ್ಚುವ, ಒಂದೊಂದು ಅಧಿಕವಾಗುವ. एकैकमुत्तरं यत्र।

एकोदक ಏಕೋದಕ (ವಿ೦) ದಾಯಾದ, ಏಳನೆಯ ತಲೆಯಿಂದ ಮುಂದೆ ಹದಿನಾಲ್ಕನೆಯ ತಲೆಯವರೆಗಿನ ಜ್ಞಾತಿ. एकं समानमुदकं यस्य।

एकोदर ಏಕೋದರ (ಪು೦)1. ಒಂದೇ ಗರ್ಭದಲ್ಲಿ ಹುಟ್ಟಿದ ಸಹೋದರ. ಒಬ್ಬ ತಾಯಿಯ ಹೊಟ್ಟೆಯಲ್ಲಿ ಹುಟ್ಟಿದ ಅಣ್ಣತಮ್ಮಂದಿರು. एकं समानमुदरं गर्भस्थानं यस्य। (ನ೦) 2. ಸಮಾನವಾದ ಉದರ. एकं समानमुदरम्।

एकोन ಏಕೋನ (ವಿ೦) ಒಂದು ಕಡಿಮೆಯಾದ. एकेन ऊनः।

एकोनचत्वारिंश ಏಕೋನಚತ್ವಾರಿಂಶ (ವಿ೦) ಮೂವತ್ತೊಂಬತ್ತನೆಯ, ಒಂದು ಕಮ್ಮಿ ನಲವತ್ತನೆಯ. एकोनचत्वारिंशतः पूरणः "डट्" (५-२-८०)। स्त्रियां "ङीप्" (४-१-१५)। **-चत्वारिंशी** -चत्वारिंशी. ಹೀಗೆಯೇ **एकोनत्रिंशः** ಏಕೋನತ್ರಿಂಶಃ, **एकोनपञ्चाशः** ಏಕೋನಪಂಚಾಶಃ, **एकोनविंशः** ಏಕೋನವಿಂಶಃ ಇತ್ಯಾದಿ.

एकोनचत्वारिंशत् ಏಕೋನಚತ್ವಾರಿಂಶತ್ (ಸ್ತ್ರೀ೦) ಮೂವತ್ತೊಂಬತ್ತು, ಒಂದು ಕಮ್ಮಿ ನಲವತ್ತು. एकेन ऊना चत्वारिंशत्। ಹೀಗೆಯೇ **एकोनत्रिंशत्** ಏಕೋನತ್ರಿಂಶತ್, **एकोनपञ्चाशत्** ಏಕೋನಪಂಚಾಶತ್, **एकोनविंशतिः** ಏಕೋನವಿಂಶತಿಃ ಇತ್ಯಾದಿ.

एकौघ ಏಕೌಘ (ಪು೦) 1. ಅವಿಚ್ಛಿನ್ನವಾಗಿ ಹರಿಯುವ ಪ್ರವಾಹ, ಒಂದೇ ಸಮನೆ ಹರಿಯುವ ಹೊನಲು. एकः अविच्छिन्नः ओघः प्रवाहः। "एकौघेन स्वर्णपुङ्खैर्द्विषन्तः" माघ० १८-५५। 2. ಒಂದು ರಾಶಿ, ಒಂದು ಗುಂಪು. "एकौघभूतं तदशर्म कृष्णाम्" किरा० ३-३५।

एजक ಏಜಕ (ವಿ೦) 1. ಕದಲುವ, ಅಲುಗಾಡುವ. एज् (कम्पने) "ण्वुल्" (३-१-१३३)। 2. ನಡುಗುವ. 3. ಕದಲಿಸುವ, ಅಲುಗಾಡಿಸುವ. 4. ನಡುಗಿಸುವ. एज् + णिच् "ण्वुल्" (३-१-१३३)। 5. ಪ್ರಕಾಶಿಸುವ, ಹೊಳೆಯುವ. एज् (दीप्तौ) "ण्वुल्" (३-१-१३३)। 6. ಪ್ರಕಾಶಪಡಿಸುವ. एज् + णिच् "ण्वुल्"।

एजत् ಏಜತ್ (ವಿ೦) 1. ಕದಲುತ್ತಿರುವ, ಅಲುಗಾಡುತ್ತಿರುವ. 2. ನಡುಗುತ್ತಿರುವ. एज् (कम्पने) "शतृ" (३-१-१२४)। स्त्रियां "ङीप्" (४-१-६)। **एजन्ती** ಏಜನ್ತೀ.

एजन ಏಜನ (ನ೦) 1. ಕದಲುವಿಕೆ, ಅಲುಗಾಡುವಿಕೆ. 2. ನಡುಗುವಿಕೆ. 3. ಪ್ರಕಾಶಿಸುವಿಕೆ, ಹೊಳೆಯುವಿಕೆ. एज् (कम्पने दीप्तौ च) "ल्युट्" (३-३-११५)।

4. ಕದಲಿಸುವಿಕೆ, ಅಲುಗಾಡಿಸುವಿಕೆ. 5. ನಡುಗಿಸುವಿಕೆ. 6. ಪ್ರಕಾಶಪಡಿಸುವಿಕೆ. एज्+णिच् "ल्युट्" (३-३-११५)।

एजनीय ಏಜನೀಯ (वि०) 1. ಅಲುಗಾಡಿಸಲ್ಪಡುವ, ಕದಲಿಸಲ್ಪಡಬೇಕಾದ. 2. ಪ್ರಕಾಶಪಡಿಸಲ್ಪಡಬೇಕಾದ. एज् (कम्पने दीप्तौ च)+णिच् "अनीयर्" (३-१-९६)।

एजमान ಏಜಮಾನ (वि०) 1. ಪ್ರಕಾಶಿಸುತ್ತಿರುವ, ಹೊಳೆಯುತ್ತಿರುವ. एज् (दीप्तौ) "शानच्" (३-१-१२४)। 2. ನಡುಗುತ್ತಿರುವ. एज् (कम्पने) "शानच्"।

एजयत् ಏಜಯತ್ (वि०) 1. ಅಲುಗಾಡಿಸುತ್ತಿರುವ, ಕದಲಿಸುತ್ತಿರುವ. 2. ನಡುಗಿಸುತ್ತಿರುವ. 3. ಪ್ರಕಾಶಗೊಳಿಸುತ್ತಿರುವ. एज् (कम्पने दीप्तौ च)+णिच् "शतृ" (३-१-१२४)। स्त्रियां "ङीप्" (४-१-६)। **एजयन्ती ಏಜಯನ್ತ್ಯೀ.** "शानच्" (३-१-१२४)। **एजयमानः ಏಜಯಮಾನಃ.**

एजयितव्य ಏಜಯಿತವ್ಯ (वि०) 1. ಕದಲಿಸಲ್ಪಡಬೇಕಾದ. 2. ನಡುಗಿಸಲ್ಪಡಬೇಕಾದ. 3. ಪ್ರಕಾಶಪಡಿಸಲ್ಪಡಬೇಕಾದ. 4. ಕದಲಿಸಲ್ಪಡಬಹುದಾದ. 5. ನಡುಗಿಸಲ್ಪಡಲು ಶಕ್ಯವಾದ. 6. ಪ್ರಕಾಶಪಡಿಸಲ್ಪಡಬಹುದಾದ. एज् (कम्पने)+णिच् अर्हादौ "तव्यः" (३-१-९६)।

एजयितृ ಏಜಯಿತೃ (वि०) 1. ನಡುಗಿಸುವ. 2. ಕದಲಿಸುವ. 3. ಪ್ರಕಾಶಗೊಳಿಸುವ. एज् (कम्पने दीप्तौ च)+णिच् "तृच्" (३-१-१२४)।

एजित ಏಜಿತ (न०) 1. ಅಲುಗಾಡುವಿಕೆ. 2. ನಡುಗುವಿಕೆ. एज् (कम्पने) भावे "क्तः" (३-३-११४)। (वि०) 3. ನಡುಗಿಸಲ್ಪಟ್ಟ. 4. ಅಲುಗಾಡಿಸಲ್ಪಟ್ಟ, ಕದಲಿಸಲ್ಪಟ್ಟ. 5. ಪ್ರಕಾಶಗೊಳಿಸಲ್ಪಟ್ಟ. एज् (कम्पने दीप्तौ च)+णिच् "क्तः" (३-२-१०२)।

एजितवत् ಏಜಿತವತ್ (वि०) 1. ನಡುಗಿದವನು, ಕಂಪನ ಪುಳ್ಳವನು. 2. ಪ್ರಕಾಶಿಸಿದವನು, ಹೊಳೆದವನು. एज् (कम्पने दीप्तौ च) "क्तवतुः" (३-२-१०२)। 3. ನಡುಗಿಸಿದವನು. 4. ಪ್ರಕಾಶಪಡಿಸಿದವನು. एज्+णिच् "क्तवतुः" (३-२-१०२)।

एजितव्य ಏಜಿತವ್ಯ (वि०) 1. ಅಲುಗಾಡಬೇಕಾದ, ಕದಲಬೇಕಾದ. 2. ಪ್ರಕಾಶಿಸಬೇಕಾದ. एज् (कम्पने दीप्तौ च) "तव्यः" (३-१-९६)।

एजितृ ಏಜಿತೃ (वि०) 1. ಅಲುಗಾಡುವ. 2. ನಡುಗುವ. 3. ಪ್ರಕಾಶಿಸುವ. एज् (कम्पने दीप्तौ च) "तृच्" (३-१-१३३)। स्त्रियां "ङीप्" (४-१-५)। **एजित्री ಏಜಿತ್ರೀ.**

एज्–कम्पने (भ्वा० पर० अक० से०) एजति। एजां चकार, –बभूव, –आस। ऐजीत्। 1. ಅಲುಗು, ಕದಲು. 2. ನಡುಗು, ಕಂಪಿಸು.

णिचि: एजयति, –ते। एजयाञ्चकार, –बभूव, –आस, –चक्रे। 1. ಅಲುಗಿಸು. 2. ನಡುಗಿಸು, ಕಂಪಿಸುವಂತೆ ಮಾಡು.

सनि: एजिजिषति। एजिजिषाञ्चकार। इत्यादि.

एज्–दीप्तौ (भ्वा० आत्म० अक० से०) एजाञ्चक्रे। एजिता। एजिष्यते। इत्यादि.

एड ಏಡ (पु०) 1. ಮೇಷ, ಟಗರು. आ+इलति+इल (स्वप्ने) "घः" (३-३-११८)। डलयोरभेदः। (वि०) 2. ಕಿವುಡ, ಕಿವಿ ಕೇಳಿಸದವನು, ಶ್ರವಣೇಂದ್ರಿಯಶಕ್ತಿಯಿಲ್ಲದವನು. आ+ईड्–ईड (स्तुतौ) "अच्" (३-१-१३४)।

एडक ಏಡಕ (पु०) ಮೇಷ, ಟಗರು. इलति–इल (स्वप्नक्षेपणयोः) "ण्वुल्" (३-१-१३३)। स्त्रियां "टाप्" (४-१-४)। **एडका ಏಡಕಾ.** ಕುರಿ.

एडगज ಏಡಗಜ (पु०) ತಗಸಿಗೆಡ.

एडमूक ಏಡಮೂಕ (वि०) 1. ಕಿವುಡ ಮತ್ತು ಮೂಗ, ಕಿವಿಯಿಂದ ಕೇಳಲೂ ಮಾತನಾಡಲೂ ಶಕ್ತಿಯಿಲ್ಲದವನು. एडश्चासौ मूकश्च। 2. ಕೆಟ್ಟವನು, ದುಷ್ಟ, ದುರುಳ. मेदि०।

एडूक ಏಡೂಕ (पुंन०) 1. ಎಲುಬುಗಳನ್ನಿಟ್ಟು, ನಿರ್ಮಿಸಲ್ಪಟ್ಟ ಗೋಡೆ. 2. ಎಲುಬುಗಳಂತೆ ಕಠಿನವಾದ ವಸ್ತುಗಳಿಂದ ನಿರ್ಮಿತವಾದ ಕಟ್ಟಡ. ईड (स्तुतौ) "ऊकः" (उ० ४-४१)। "कुड्यं भित्तिस्तदेडूकमन्तर्निहितकीकसम्" अभि० चि०। वैज०।

एण ಏಣ (पुंस्त्री०) ಕೃಷ್ಣಮೃಗ, ಹುಲ್ಲೆ, ಜಿಂಕೆ, ಬಿಗರಿ. एति–इण् (गतौ) "णः" बाहु०। "एणः स्मरेणाङ्कमयः सपत्राकृतो भवद्भ्रूयुगधन्वना यः" नैष० २२-२४। "अष्टावेणस्य मांसेन रौरवेण नवैव तु" मनु० ३-२६९। स्त्रियां जाति० "ङीष्" (४-१-६३)। **एणी ಏಣೀ.**

एणतिलक ಏಣತಿಲಕ (पु०) ತಿಲಕದಂತಿರುವ ಜಿಂಕೆಯುಳ್ಳ ಚಂದ್ರ. एणस्तिलकमिव यस्य। "मा ग्लौरिन्दुरेणतिलको हरिरोहिणीशौ" हारा०।

एणजङ्घ ಏಣಜಂಘ (पु०) ಜಿಂಕೆ ಮೊಣಕಾಲುಳ್ಳವನು, ಓಡುವ ದೂತ, ಓಡಾಳು, ಒಲಕಾರ. ಸುದ್ದಿ ಒಯ್ಯುವವನು. एणस्य जङ्घे इव जङ्घे यस्य।

एणभृत् ಏಣಭೃತ್ (पु०) मृगाङ्क, चंद्र. एणं बिभर्ति—डु भृञ् (धारणपोषणयोः) "क्विप्" (३-२-६१)।

एणाक्षी ಏಣಾಕ್ಷಿ (स्त्री०) जिंकेयंतह कण्णुळ्ळ हेंगसु. एणस्येवाक्षिणी यस्याः "षच्" (५-४-११३)। "ङीष्" (४-१-४१)।

एणाङ्क ಏಣಾಂಕ (पु०) जिंकेय गुरुतुळ्ळ, चंद्र. एणोऽङ्को यस्य।

एणाङ्कमणि ಏಣಾಂಕಮಣಿ (पु०) चंद्रकांतमणि. ष० त०।

एणाजिन ಏಣಾಜಿನ (न०) कृष्णाजिन, जिंकेय चर्म. एणस्य अजिनम्। "पिशङ्गमौञ्जीयुजमर्जुनच्छविं वसानमेणाजिनमञ्जनद्युति" माघ० १-६।

एणी ಏಣೀ (स्त्री०) हेण्णु जिंके. एणस्य स्त्री "ङीष्" (४-१-६३)।

एणीदृश् ಏಣೀದೃಶ್ (स्त्री०) जिंकेयंतह कण्णुळ्ळ हेंगसु. एण्याः दृगिव दृग्यस्याः। हीगेयेयें **एणीनयना, एणीनेत्रा, एणीलोचना** इत्यादि.

एणीपचन ಏಣೀಪಚನ (पुं० ब० व०) 1. जिंकेयन्नु बेयिसुव ओंदुदेशद जनरु. एणी पच्यते एभिः—डु पचष् (पाके) "ल्युट्" (३-३-११३)। (न०) 2. जिंकेयन्नु बेयिसुव देश. एणी पच्यतेऽत्र—डु पचष् अधि० "ल्युट्" (३-३-११७)।

एणीपचनीय ಏಣೀಪಚನೀಯ (वि०) जिंकेयन्नु बेयिसुववर देश. एणीपचनानां देशः "छः" (१-१-७५)।

एणीपद ಏಣೀಪದ (वि०) जिंकेय कालिनंतह कालुळ्ळ. एण्या इव पादौ यस्य। निपा० (५-४-१२०)।

एत ಏತ (पु०) 1. चित्रवर्ण, नाना बण्ण. एति वर्णान्—इण् (गतौ) "तन्" (उ० ३-८६)। (वि०) 2. चित्रवर्णवुळ्ळ, नानाबण्णगळिंद कूडिद. स्त्रियां वा "ङीप्" तस्य नश्च (४-१-३९)। **एनी** ಏನೀ. पक्षे **एता** ಏತಾ. 3. बंदिरुव, आगमिसिरुव. "एतः कर्बुर आगते" मेदि०। आ + इण् (गतौ) "क्तः" (३-४-७२)।

एतद् ಏತದ್ (त्रि०) (बहळ समीपदल्लिरुव) इवनु, इवळु, इदु. इण् (गतौ) "अदिः" तुडागमश्च (उ० १-१३०)। इदोंदु सर्वनामपद. "इदमस्तु सन्निकृष्टं समीपतरवर्तिचैतदो रूपम्। अदसस्तु विप्रकृष्टं तदिति परोक्षे विजानीयात्"। (पु०) एषः एतौ एते। "एष दाशरथिभूयमेत्य च ध्वंसितोद्धतदशाननामपि। राक्षसीमकृत रक्षितप्रजस्तेजसाधिकविभीषणां पुरीम्" माघ० १४-८१। "एते वयममी दाराः कन्येयं कुलजीवितम्" कुमा० ६-६३। (स्त्री०) एषा एते एताः। "हला, एषा द्वयोर्युवयोर्ननु हस्ते निक्षेपः" शाकु० ४। "एताः सुतनु मुखं ते सख्यः पश्यन्ति हेमकूटगताः" विक्र० १-१२। (न०) एतत् एते एतानि। "एतदुच्छ्वसितपीतमैन्दवं वोढुमक्षममिव प्रभारसम्" कुमा० ८-७०।

एतदन्त ಏತದಂತ (वि०) इल्लियवरेगिन, इदे कॊनेयागि उळ्ळ. एतत् अन्तो यस्य। "एतदन्तास्तु गतयो ब्रह्माद्याः समुदाहृताः" मनु० १-५०।

एतदर्थम् ಏತದರ್ಥಮ್ (अव्य०) इदक्कागि, इदक्कोस्कर, इवनिगागि, इवळिगागि. एतस्मै एतस्यै वा।

एतदवधि ಏತದವಧಿ (अव्य०) इल्लियवरेगे, इल्लियवरेगिनक.

एतदवस्थ ಏತದವಸ್ಥ (वि०) ई स्थितियल्लिरुव, ई नेलेयल्लिरुव, ई रीतियल्लिरुव. एषाऽवस्था परिस्थितिर्यस्य। "सा त्वमिहैतदवस्थं कथं सहेयाश्चिरवियोगम्" विक्र० ४-७१।

एतदादि ಏತದಾದಿ (वि०) इदे मॊदलाद, इदरिंद प्रारंभवाद. एतत् आदिर्यस्य।

एतदीय ಏತದೀಯ (वि०) इवन—, इवळ—, इदर संबंधवाद. एतस्य एतस्या वा इदम् "छः" (४-२-११४)। "वैलक्ष्यहेतोर्गतिमेतदीयामग्रेऽनुकृत्योपहसन्निवोच्चैः" नैष० ३-१०।

एतद्योनि ಏತದ್ಯೋನಿ (वि०) इदे मूलवागि उळ्ळ, इदे कारणवागिरुव. एषा योनिर्यस्य। "एतद्योनीनि भूतानि सर्वाणीत्युपधारय" गीता ७-६।

एतर्हि ಏತರ್ಹಿ (अव्य०) ईग, ई कालदल्लि, ई समयदल्लि. अस्मिन् काले—इदम् "हिल्" (५-३-१६)। एतादेशः (५-३-४)। "भवन्तमेतर्हि मनस्विगर्हिते विवर्तमानं नरदेव वर्त्मनि" किरा० १-३२।

एतश ಏತಶ (पु०) ब्राह्मण. इण् (गतौ) "तशन्" (उ० ३-१४९)।

एतशस् ಏತಶಸ್ (पु०) ब्राह्मण. इण् (गतौ) "तशसुन्" (उ० ३-१४९)।

एतादृक्ष ಏತಾದೃಕ್ಷ (वि०) ಇಷನಂತಿರುವ, ಇವಳಂತಿರುವ, ಇದರಂತಿರುವ. एष इव एषेव एतदिव वा पश्यति—एतद् + दृशिर् (प्रेक्षणे) "क्सः" (वा० ३-२-५७)। आत्वम् (६-३-९१)। "क्विन्" (३-२-६०)। **एतादृश्** ಏತಾದೃಶ್. स्त्रियां "ङीप्" (४-१-५)। **एतादृशी** ಏತಾದೃಶೀ. "कञ्" (३-२-६०)। **एतादृशः** ಏತಾದೃಶಃ.

एतावत् ಏತಾವತ್ (वि०) ಇಷ್ಟು, ಇಷ್ಟು ಪರಿಮಾಣದ, ಇಷ್ಟು ದೊಡ್ಡದಾದ, ಇಷ್ಟು ಗಾತ್ರದ. एतत् परिमाणमस्य "वतुप्" (५-२-३९)। "एतावता नन्वनुमेयशोभि काञ्चीगुणस्थानमनिन्दितायाः" कुमा० १-३७। "एतावज्जन्मसाफल्यं यदनायत्तवृत्तिता" हितो० २-२२। स्त्रियाम् "ङीप्" (४-१-६)। **-वती** -ವತೀ.

एदिधिषण ಏದಿಧಿಷಣ (न०) ಅಭಿವೃದ್ಧಿಹೊಂದುವ ಆಪೇಕ್ಷೆ, ಅಭಿವೃದ್ಧಿಹೊಂದಲು ಆಸೆ. एध (वृद्धौ) + सन् भावे "ल्युट्" (३-३-११५)।

एदिधिषमाण ಏದಿಧಿಷಮಾಣ (वि०) ಅಭಿವೃದ್ಧಿ ಹೊಂದಲು ಆಪೇಕ್ಷಿಸುತ್ತಿರುವ. एध (वृद्धौ) + सन् "शानच्" (३-२-१२४)।

एदिधिषा ಏದಿಧಿಷಾ (स्त्री०) ಅಭಿವೃದ್ಧಿಹೊಂದಲು ಆಪೇಕ್ಷೆ. एधितुमिच्छा — एध (वृद्धौ) + सन् "अः" (३-३-१०३)।

एदिधिषित ಏದಿಧಿಷಿತ (न०) 1. ಅಭಿವೃದ್ಧಿಹೊಂದುವ ಆಪೇಕ್ಷೆ. एध (वृद्धौ) + सन् भावे "क्तः" (३-३-११४)। (वि०) 2. ಅಭಿವೃದ್ಧಿಹೊಂದಲು ಆಪೇಕ್ಷಿಸುವ. कर्तं० "क्तः" (३-४-७२)।

एदिधिषितवत् ಏದಿಧಿಷಿತವತ್ (वि०) ಅಭಿವೃದ್ಧಿ ಹೊಂದಲು ಆಪೇಕ್ಷಿಸಿದ. एध (वृद्धौ) + सन् "क्तवतुः" (३-२-१०२)। स्त्रियां "ङीप्" (४-१-६)। **-वती** -ವತೀ.

एदिधिषित् ಏದಿಧಿಷಿತೃ (वि०) ಅಭಿವೃದ್ಧಿಹೊಂದಲು ಆಪೇಕ್ಷಿಸುವ. एध (वृद्धौ) + सन् "तृच्" (३-१-१३३)। स्त्रियां "ङीप्" (४-१-५)। **एदिधिषित्री** ಏದಿಧಿಷಿತ್ರೀ.

एदिधिषु ಏದಿಧಿಷು (वि०) ಅಭಿವೃದ್ಧಿಹೊಂದಲು ಆಪೇಕ್ಷಿಸುವ. एध (वृद्धौ) + सन् "उः" (३-२-१६८)।

एध-वृद्धौ (भ्वा० आत्म० अक० से०) एधते एधेते एधन्ते। एधाञ्चक्रे, -बभूव, -आस। एधिता। एधिष्यते। एधताम्। ऐधत। एधेत। ऐधिषीष्ट। ऐधिष्ट। ऐधिष्यत। ಅಭಿವೃದ್ಧಿಹೊಂದು.

भावे: एध्यते। एध्यताम्। ऐध्यत। ऐध्येत। ऐधि।

णिचि: एधयति, -ते। एधयाञ्चकार, -चक्रे, -बभूव, -आस। एधयिता। एधयतु, -ताम्। एध्यात्, एधयिषीष्ट। ಇತ್ಯಾದಿ.

कर्मणि: एध्यते। एधयाञ्चक्रे, -बभूवे, -आसे। एध्यताम्। ऐध्यत ಇತ್ಯಾದಿ.

सनि: एदिधिषते। एदिधिषिता। एदिधिषताम्। ऐदिधिषिष्ट। ಇತ್ಯಾದಿ.

कृत्सु: एधितव्यम्। एधनीयम्। एध्यम्। एधितः। एधितवान्। एधमानः। एधितुम्। एधितम्। एधनम्। एधित्वा। प्रैध्य। एधमेधम्। ಇತ್ಯಾದಿ.

एध ಏಧ (पु०) ಸೌದೆ, ಕಟ್ಟಿಗೆ. इध्यतेऽनेन — मि इन्धी (दीप्तौ) कर० "घञ्" (३-३-१२१)। "स्फुलिङ्गावस्थया वह्निरेधापेक्ष इव स्थितः" शाकु० ७-१५।

एधतु ಏಧತು (पु०) 1. ಪುರುಷ, ಮನುಷ್ಯ. 2. ಅಗ್ನಿ, ಬೆಂಕಿ. एध (वृद्धौ) "चतुः" (उ० १-७८)। "एधतुः पुरुषेऽग्नौ ना" मेदि०। (वि०) 3. ಅಭಿವೃದ್ಧಿ ಹೊಂದಿದ.

एधन ಏಧನ (न०) 1. ವೃದ್ಧಿಯಾಗುವಿಕೆ, ಬೆಳೆಯುವಿಕೆ, ಹೆಚ್ಚಾಗುವಿಕೆ, एध् (वृद्धौ) भावे "ल्युट्" (३-३-११५)। 2. ವೃದ್ಧಿಪಡಿಸುವಿಕೆ, ಹೆಚ್ಚಿಸುವಿಕೆ. एध + णिच् भावे "ल्युट्" (३-३-११५)।

एधनीय ಏಧನೀಯ (वि०) 1. ಅಭಿವೃದ್ಧಿಹೊಂದಬೇಕಾದ. ಹೆಚ್ಚಬೇಕಾದ, ಬೆಳೆಯಬೇಕಾದ. एध (वृद्धौ) "अनीयर्" (३-१-९६)। 2. ವೃದ್ಧಿಪಡಿಸಲ್ಪಡಬೇಕಾದ, ಹೆಚ್ಚಿಸಲ್ಪಡ ಬೇಕಾದ. एध + णिच् "अनीयर्"।

एधमान ಏಧಮಾನ (वि०) ಅಭಿವೃದ್ಧಿಹೊಂದುತ್ತಿರುವ, ಬೆಳೆಯುತ್ತಿರುವ, ಹೆಚ್ಚುತ್ತಿರುವ. एध (वृद्धौ) "शानच्" (३-२-१२४)।

एधयत् ಏಧಯತ್ (वि०) ಅಭಿವೃದ್ಧಿಹೊಂದಿಸುತ್ತಿರುವ, ಬೆಳಸುತ್ತಿರುವ, ಹೆಚ್ಚಿಸುತ್ತಿರುವ. एध (वृद्धौ) + णिच् "शतृ" (३-२-१२४)। स्त्रियां "ङीप्" (४-१-६)। **एधयन्ती** ಏಧಯಂತೀ. "शानच्" (३-२-१२४)। **एधयमानः** ಏಧಯಮಾನಃ. स्त्रियां "टाप्" (४-१-४)। **-माना** -ಮಾನಾ.

एधयितव्य ಏಧಯಿತವ್ಯ (वि०) ಅಭಿವೃದ್ಧಿಪಡಿಸಲ್ಪಡ ಬೇಕಾದ, ಹೆಚ್ಚಿಸಲ್ಪಡಬೇಕಾದ. एध (वृद्धौ) + णिच् "तव्यः" (३-१-९६)।

एधयितृ ಏಧಯಿತೃ (वि०) ಅಭಿವೃದ್ಧಿಪಡಿಸುವ, ಹೆಚ್ಚಿಸುವ. एध (वृद्धौ)+णिच् "तृच्" (३-१-१३३)। स्त्रियां "ङीप्" (४-१-५)। **एधयित्री ಏಧಯಿತ್ರೀ.**

एधस् ಏಧಸ್ (न०) ಸೌದೆ, ಕಟ್ಟಿಗೆ. इध्यतेऽग्निरनेन—इन्धी (दीप्तौ) "असुन्" (उ० ४-१८८)। "यथैधांसि समिद्धोऽग्निर्भस्मसात् कुरुतेऽर्जुन" गीता ४-३७।

एधित ಏಧಿತ(न०) 1. ಅಭಿವೃದ್ಧಿಹೊಂದುವಿಕೆ, ಹೆಚ್ಚುವಿಕೆ. एध (वृद्धौ) भावे "क्तः" (३-३-११४)। (वि०)2. ಅಭಿವೃದ್ಧಿಹೊಂದಿದ. ಹೆಚ್ಚಾದ. एध कर्तं० "क्तः" (३-४-७२)। 3. ಅಭಿವೃದ್ಧಿಹೊಂದಿಸಲ್ಪಟ್ಟ, ಹೆಚ್ಚಿಸಲ್ಪಟ್ಟ. एध+णिच् कर्म० "क्तः" (३-२-१०२)।

एधितवत् ಏಧಿತವತ್ (वि०) 1. ಅಭಿವೃದ್ಧಿಹೊಂದಿದ, ಬೆಳೆದ, ಹೆಚ್ಚಾದ. एध (वृद्धौ) कर्तं० "क्तवतुः" (३-२-१०२)। 2. ಹೆಚ್ಚಿಸಿದ, ಅಭಿವೃದ್ಧಿಹೊಂದಿಸಿದ. एध+णिच् "क्तवतुः" (३-२-१०२)। स्त्रियां "ङीप्" (४-१-६)। **-वती -ವತೀ.**

एधितव्य ಏಧಿತವ್ಯ (वि०) ಅಭಿವೃದ್ಧಿಹೊಂದಬೇಕಾದ, ಬೆಳೆಯಬೇಕಾದ. एध (वृद्धौ) "तव्यः" (३-१-९६)।

एधितृ ಏಧಿತೃ (वि०) ಅಭಿವೃದ್ಧಿಹೊಂದುವ, ಬೆಳೆಯುವ. एध (वृद्धौ) "तृच्" (३-१-१३३)। स्त्रियां "ङीप्" (४-१-५)। **एधित्री ಏಧಿತ್ರೀ.**

एनस् ಏನಸ್ (न०) 1. पाप. एति गच्छति प्रायश्चित्तेन—इण् (गतौ) "असुन्" (उ० ४-१८८)। "प्रतिपत्तिरधःकृतैनसो जनताभिस्तव साधु वर्ण्यते" माघ० १६-८। 2. ಅಪರಾಧ, ತಪ್ಪು.

एनस्वत् ಏನಸ್ವತ್ (वि०) 1. ಪಾಪಾತ್ಮ, ಪಾಪದಿಂದ ಕೂಡಿದ. 2. ಅಪರಾಧಿ, ತಪ್ಪುಮಾಡಿದವನು. एनोऽस्यास्ति "मतुप्" (५-२-९४)। मंस्य वः (८-२-९)। "विनिः" (५-२-१२१)। **एनस्विन् ಏನಸ್ವಿನ್.** स्त्रियां "ङीप्" (४-१-५)। **एनस्विनी ಏನಸ್ವಿನೀ.**

एरङ्ग ಏರಂಗ (पु०) ಒಂದು ಜಾತಿಯ ಮೀನು. आ+ईर (गतौ) "अङ्गच्" (उ० १-११७)।

एरण्ड ಏರಂಡ (पु०) ಹರಳುಗಿಡ. ईरयति वायुं मलं वाऽधः—ईर (गतौ)+णिच् "अण्डच्" बाहु०। "निरस्तपादपे देशे एरण्डोऽपि द्रुमायते"।

एर्वारु ಏರ್ವಾರು (पु०) ಸೌತೆಗಿಡ. आ+ईर (गतौ) "क्विप्" (वा० ३-३-१०८)। ईरं वारयति—वृञ् (वरणे) "उण्" बाहु०। "एर्वारुबीजं तोयेन पिबेद्वा लवणीकृतम्" सुश्रुत०।

एल (ला) वालु ಏಲ (ಲಾ) ವಾಲು (न०) ಸುರಸುರಕೆ ಗಿಡ. एलेव वलते—वल (सञ्चलने) "उण्" बाहु०। स्वार्थे "कन्"·(५-३-७५)। **-वालुकम् -ವಾಲುಕಮ್.**

एला ಏಲಾ(स्त्री०) ಯಾಲಕ್ಕಿಗಿಡ. एलयति—इल (प्रेरणे)+णिच् "अच्" (३-१-१३४)। "ससञ्जुरश्व-क्षुण्णानामेलानामुत्पतिष्णवः" रघु० ४-४७।

एलापर्णी ಏಲಾಪರ್ಣೀ (स्त्री०) ಸಣ್ಣ ರಾಸ್ನಾ. एलायाः पर्णमिव पर्णमस्याः। "एलापर्णी तु सुवहा रास्ना युक्त-रसा च सा" अम०।

एव ಏವ (अव्य०) ಇದು ಕೆಳಗಿನ ಈ ಅರ್ಥಗಳನ್ನು ಸೂಚಿಸುವುದು. 1. अवधारण, निश्चय. ಈ ಅವಧಾರಣವು (1) अन्ययोगव्यवच्छेदः, (2) अयोगव्यवच्छेदः, (3) अत्यन्तायोगव्यवच्छेदः ಎಂದು ಮೂರು ವಿಧ.

ಉದಾ: (1) "पार्थ एव धनुर्धरः" ಎಂಬಲ್ಲಿ एव ವು ಪಾರ್ಥೇತರನಲ್ಲಿ ಪ್ರಶಸ್ತಧನುರ್ಧರತ್ವವನ್ನು ವ್ಯವಚ್ಛೇದ ಮಾಡುವುದು. (2) "शङ्खः पाण्डुर एव" ಎಂಬಲ್ಲಿ एव ವು ಶಂಖಿಸಾಮಾನ್ಯದಲ್ಲೂ ಪಾಂಡುರತ್ವಾಯೋಗವ್ಯವಚ್ಛೇದವನ್ನು ಮಾಡುವುದು. (3) "नीलं सरोजं भवत्येव" ಎಂಬಲ್ಲಿ ಕ್ರಿಯೆಯೊಡನೆ ಸೇರಿರುವ एव ವು ಸರೋಜದಲ್ಲಿ ನೀಲತ್ವಾತ್ಯಂತಾಯೋಗವ್ಯವಚ್ಛೇದವನ್ನು ತಿಳಿಸುವುದು. 2. ಸಾದೃಶ್ಯ, ಹೋಲಿಕೆ, ಸಾಮ್ಯ. 3. ಅದು ಮಾತ್ರ, ಅವನು ಮಾತ್ರ, ಅವಳು ಮಾತ್ರ (ಕೇವಲ). "एक एव वसु यद्ददौ नृपस्तत्समापकमतर्क्यत क्रतोः" माघ० १४-४०। 4. ಆ ಕೂಡಲೆ, ಆ ಸಮಯದಲ್ಲೇ. "उपस्थितेयं कल्याणी नाम्नि कीर्तित एव यत्" रघु० १-८७। 5. ಅದೇ, ನಿಜವಾಗಿಯೂ ಹಾಗೆಯೇ. 6. ಅಸಂಭವ, ಸಾಧ್ಯವಾಗದಿರುವಿಕೆ. "क्वेव भोक्ष्यसे"। ಭೋಜನವು ಅಸಂಭವ ಎಂದರ್ಥ.

एवंगुण ಏವಂಗುಣ (पु०) 1. ಈ ರೀತಿಯಾದ ಗುಣ. "पुत्रमेवंगुणोपेतं चक्रवर्तिनमाप्नुहि" शाकु० १-१२। (वि०)2. ಈ ರೀತಿಯಾದ ಗುಣವುಳ್ಳ. एवं गुणाः यस्य।

एवंप्रकार ಏವಂಪ್ರಕಾರ, -प्राय -ಪ್ರಾಯ (वि०) ಈ ತೆರನಾದ, ಈ ರೀತಿಯಾದ, ಈ ವಿಧವಾದ. "प्रबलतमसामेवंप्रायाः शुभेषु प्रवृत्तयः स्रजमपि शिरस्यन्धः क्षिप्तं धुनोत्यहिशङ्कया" शाकु० ७-२४।

एवंरूप ಏವಂರೂಪ (वि०) ಈ ರೂಪವುಳ್ಳ, ಈ ಆಕೃತಿಯುಳ್ಳ. एवं रूपं यस्य। "न वेदयज्ञाध्ययनैर्न दानैर्न च क्रियाभिर्न तपोभिरुग्रैः। एवंरूपः शक्य अहं नृलोके द्रष्टुं त्वदन्येन कुरुप्रवीर" गीता ११-४८।

एवंविध ಏವಂವಿಧ (वि०) ಈ ವಿಧವಾದ, ಈ ತೆರನಾದ, ಹೀಗಿರುವ. एवं विधा प्रकारो यस्य। "भक्त्यात्वनन्यया शक्य अहमेवंविधोऽर्जुन। ज्ञातुं द्रष्टुं च तत्त्वेन प्रवेष्टुं च परन्तप" गीता ११-५४।

एवम् ಏವಮ್ (अव्य०) 1. ಈ ರೀತಿಯಾಗಿ, ಈ ಪ್ರಕಾರವಾಗಿ. "एवं मया नियमितश्च्यवनादिवाक्यैः कोपानलश्च परशुश्च पुनर्यथैतौ" म० वी० ३-१५। 2. ಅಹುದು, ಹಾಗೆಯೇ, ಅದೇ ಸರಿ. "एवं यदात्थ भगवन्नामृष्टं नः परैः पदम्" कुमा० २-३१। 3. ನಿಶ್ಚಯ. "एवमेतत्, कः सन्देहः"। 4. ಅಂಗೀಕಾರ, ಒಪ್ಪಿಗೆ, ಸಮ್ಮತಿ. "एवं कुर्मः"। 5. ಸಾದೃಶ್ಯ, ಹೋಲಿಕೆ. "अग्निरेवं विप्रः"। 6. ವಾಕ್ಯಪೂರಣ. 7. ನಿಜವಾಗಿಯೂ, ವಾಸ್ತವವಾಗಿಯೂ.

एष ಏಷ (पु०) 1. ಪರಿಯುವಿಕೆ, ಚಲಿಸುವಿಕೆ, 2. ಗಮನ, ಹೋಗುವಿಕೆ. 3. ಅಪೇಕ್ಷೆ, ಇಚ್ಛೆ. इष (गतौ) इषु (इच्छायाम्) वा "घञ्" (३-३-१८)।

एषक ಏಷಕ (वि०) 1. ಸರಿಯುವ, ಚಲಿಸುವ. 2. ಹೋಗುವವನು. इष (गतौ) "ण्वुल्" (३-१-१३३)। 3. ಅಪೇಕ್ಷಿಸುವ, ಇಚ್ಛಿಸುವ. इषु (इच्छायाम्) "ण्वुल्"।

एषण ಏಷಣ (पु०) 1. ಲೋಹದ ಬಾಣ. एषते शत्रुहृदयम्। "एषणश्चायसे शरे" वैज०। (न०) 2. ಅಪೇಕ್ಷಿಸುವಿಕೆ, ಬಯಸುವಿಕೆ. इषु (इच्छायाम्) "ल्युट्" (३-३-११५)। 3. ಹೋಗುವಿಕೆ, ನಡೆಯುವಿಕೆ. इष (गतौ) "ल्युट्" (३-३-११५)। (स्त्री०)–णा–ಣಾ. 4. ಅನ್ವೇಷಣೆ, ಹುಡುಕುವಿಕೆ. भावे "युच्" (वा० ३-३-१०७)। 5. ಕೊತ್ತುಂಬರಿ. "कुमारी मुसली वंश्या गड्डची कट्टकैषणा" वैज०। –णी–ಣೀ. 6. ಅಕ್ಕಸಾಲಿಗನ ತಕ್ಕಡಿ.

एषणिका ಏಷಣಿಕಾ (स्त्री०) ಅಕ್ಕಸಾಲಿಗನ ತಕ್ಕಡಿ.

एषणीय ಏಷಣೀಯ (वि०) 1. ಅಪೇಕ್ಷಿಸಲ್ಪಡಬಹುದಾದ, ಆಸೆಪಡಬಹುದಾದ. इषु (इच्छायाम्) कर्म० "अनीयर्" (३-१-९६)। "जायापती लौकिकमेषणीयमार्द्राक्षतारोपणमन्वभूताम्" कुमा० ७-८८। 2. ಹೋಗಬೇಕಾದ, ಸೇರಬೇಕಾದ, ತಲುಪಬೇಕಾದ. इष (गतौ) "अनीयर्"। "तव्यः" (३-१-९६)। **एषितव्यम्** ಏಷಿತವ್ಯಮ್.

एषितृ ಏಷಿತೃ (वि०) "एषक" ಪದದ ಅರ್ಥ. इष (गतौ) इषु (इच्छायाम्) वा "तृच्" (३-१-१३३)।

एषिन् ಏಷಿನ್ (वि०) 1. "एषक" ಪದದ ಅರ್ಥ. इषु (इच्छायाम् गतौ वा) "णिनिः" (३-१-१३४)। "शैशवेऽभ्यस्तविद्यानां यौवने विषयैषिणाम्" रघु० १-६। 2. ತಲುಪುವ, ಹೊಂದುವ, ಸೇರುವ. इष (गतौ) "णिनिः" (३-१-१३४)।

एषिषा ಏಷಿಷಿಷಾ (स्त्री०) 1. ಹೋಗಲು ಅಪೇಕ್ಷೆ. 2. ಹೊಂದಲು ಅಪೇಕ್ಷೆ, ತಲುಪಲು ಅಪೇಕ್ಷೆ. इष (गतौ) +सन् "अः" (३-३-१०२)।

एषिषु ಏಷಿಷಿಷು (वि०) 1. ಹೋಗಲು ಅಪೇಕ್ಷಿಸುವ. 2. ಹೊಂದಲು ಅಪೇಕ್ಷೆಯುಳ್ಳ, ತಲುಪಲು ಇಚ್ಛೆಯುಳ್ಳ. इष (गतौ) + सन्, "उः" (३-२-१६८)।

एष्टव्य ಏಷ್ಟವ್ಯ (वि०) ಅಪೇಕ್ಷಿಸಲ್ಪಡುವ, ಅಪೇಕ್ಷಿಸಬೇಕಾದ. इषु (इच्छायाम्) कर्म० "तव्यः" (३-१-९६)। "एष्टव्या बहवः पुत्राः यद्येकोऽपि गयां व्रजेत्" मत्स्यपु०।

एष्टि ಏಷ್ಟಿ (स्त्री०) ಇಚ್ಛೆ, ಅಪೇಕ್ಷೆ. आ+इषु (इच्छायाम्) "क्तिन्" (३-३-९४)।

एष्य ಏಷ್ಯ (न०) 1. ಒಂದು ವಿಧ ಶಸ್ತ್ರಚಿಕಿತ್ಸೆ. (वि०) 2. ಅಪೇಕ್ಷಿಸಲ್ಪಡುವ. इषु (इच्छायाम्) "ण्यत्" (३-१-१२४)। 3. ತಲುಪಲ್ಪಡುವ, ಸೇರಲ್ಪಡುವ. 4. ವೈದ್ಯಪರೀಕ್ಷೆ ಮಾಡಲ್ಪಡುವ. 5. ಮುಂದೆ ಬರಬಹುದಾದ, ಮುಂದೆ ಒದಗಬಹುದಾದ, ಭವಿಷ್ಯತ್‌ಕಾಲದ.

एष्यत् ಏಷ್ಯತ್ (वि०) ಮುಂದಿನ ಕಾಲದ, ಭವಿಷ್ಯತ್ತಿನ, ಮುಂದೆ ಒದಗಬಹುದಾದ. इष (गतौ) "शतृ" (३-२-१२४)। "हरत्यघं सम्प्रति हेतुरेष्यतः" माघ० १-२६। स्त्रियां "ङीप्" (४-१-६)। **एष्यन्ती** ಏಷ್ಯನ್ತೀ.

इति "ए" कारादिपदार्थनिरूपणम्।

ऐ

ऐ ಐ ಇದು ಕಂಠ ಮತ್ತು ತಾಲುಸ್ಥಾನಗಳಲ್ಲಿ ವಿವೃತ ಪ್ರಯತ್ನದಿಂದ ಹುಟ್ಟುವ ಒಂದು ಸ್ವರವರ್ಣ. ಉದಾತ್ತ, ಅನುದಾತ್ತ ಮತ್ತು ಸ್ವರಿತಗಳೆಂಬ ಮೂರು ಭೇದಗಳುಳ್ಳ. ಈ ವರ್ಣವು ಅನುನಾಸಿಕ ಮತ್ತು ಅನನುನಾಸಿಕಗಳೆಂಬ ಭೇದದಿಂದ ಒಟ್ಟು ಆರು ವಿಧವಾಗುವುದು.

ऐ ಐ (पु०) 1. ದಿಕ್ಕು. 2. ಹಸ್ತ, ಕೈ. 3. ಶಿವ, ಈಶ್ವರ. 4. ಪರ್ವತದ ಶಿಖರ, ಬೆಟ್ಟದ ತುದಿ. 5. ಚರ್ಮ, ತೊಗಲು. "ऐकारो दिङ्मुखे हस्ते हरेऽद्रिशिखरे त्वचि" नानार्थर०। (अव्य०) 6. ಆಹ್ವಾನ, ಕರೆ. 7. ಸ್ಮೃತಿ, ನೆನಪು. 8. ಸಂಬೋಧನೆ. "ऐ शब्दो दृश्यते हूतौ स्मृत्यामन्त्रणयोरपि" मेदि०।

ऐकऋष्ठ्य ಐಕಕಂಠ್ಯ (न०) ಸಮಾನಾಭಿಪ್ರಾಯ, ವಿರೋಧವಿಲ್ಲದ (ಒಂದೇ ವಿಧ) ಅಭಿಪ್ರಾಯ.

ऐकध्यम् ಐಕಧ್ಯಮ್ (अव्य०) ಒಂದು ವಿಧವಾಗಿ, ಒಂದು ಪ್ರಕಾರವಾಗಿ. एक+धा "ध्यमुञ्" (५-३-४४)।

ऐकपत्य ಐಕಪತ್ಯ (न०) 1. ಸಾರ್ವಭೌಮತ್ವ, ದೇಶಕ್ಕೆಲ್ಲಾ ಒಬ್ಬನೇ ರಾಜನಾಗಿರುವಿಕೆ. एकपतेर्भावः "ष्यञ्" (५-१-१२४)। "अप्रतिद्वन्द्वतां युद्धे ऐकपत्यं च देहिनाम्" भाग० ७-३-३७। (वि०) 2. ಒಬ್ಬ ಯಜಮಾನನಲ್ಲಿರುವ. एकपतौ भवम् — एकपति "ण्यः" (४-१-८५)।

ऐकपदिक ಐಕಪದಿಕ (वि०) 1. ಒಂದು ಪದಕ್ಕೆ ಸಂಬಂಧಿಸಿದ, ಒಂದು ಪದದಲ್ಲಿರುವ. एकस्मिन् पदे भवः। 2. ಒಂದು ಸ್ಥಾನದಲ್ಲಿರುವ. एकस्मिन् पदे स्थाने भवः। 3. ಒಂದು ಪದಕ್ಕೆ ಅಥವಾ ಸ್ಥಾನಕ್ಕೆ ಸಮರ್ಥವಾ(ನಾ)ದ. एकपद "ठञ्" (५-१-१०१)।

ऐकपद्य ಐಕಪದ್ಯ (न०) ಒಂದೇ ಪದವಾಗಿರುವಿಕೆ, ಅನೇಕ ಪದಗಳು ಸಮಾಸವೊಂದಿರುವಿಕೆ. ऐकपदस्य भावः "ष्यञ्" (५-१-१२४)।

ऐकमत्य ಐಕಮತ್ಯ (न०) ಸಮಾನವಾದ ಒಪ್ಪಿಗೆ, ಏಕ ವಿಧವಾದ ಸಮ್ಮತಿ, ಭಿನ್ನಾಭಿಪ್ರಾಯವಿಲ್ಲದಿರುವಿಕೆ. एकं समानं मतमभिप्रायः, तस्य भावः "ष्यञ्" (५-१-१२४)। "ऐकमत्यं हि नो राजन् सर्वेषामेव लक्षये" भा० वन० ७-१२।

ऐकराज्य ಐಕರಾಜ್ಯ (न०) ಸಾರ್ವಭೌಮತ್ವ, ಏಕಚಕ್ರಾಧಿಪತ್ಯ, ರಾಷ್ಟ್ರಕ್ಕೆಲ್ಲಾ ಒಬ್ಬನೇ ರಾಜನಾಗಿರುವಿಕೆ. एको राट्, एकराजो भावः "ष्यञ्" (५-१-१२४)।

ऐकरूप्य ಐಕರೂಪ್ಯ (न०) ಒಂದೇ ವಿಧವಾಗಿರುವಿಕೆ, ಒಂದೇ ಪ್ರಕಾರವಾಗಿರುವಿಕೆ.

ऐकशतिक ಐಕಶತಿಕ (वि०) ಒಂದು ಶತಮಾನವಿರುವ, ಒಂದು ನೂರನ್ನು ಹೊಂದಿರುವ. एकशतमस्यास्ति— "ठञ्" (५-२-११८)।

ऐकशफ ಐಕಶಫ (वि०) ಒಂದು ಗೊರಸುಳ್ಳ (ಕುದುರೆ ಮೊದಲಾದ) ಪ್ರಾಣಿಯ ಸಂಬಂಧವಾದ (ಕ್ಷೀರ ಮೊದಲಾದುದು). एकशफस्येदम् "अण्" (४-३-१२०)। "अनिर्दशाया गोःक्षीरमौष्ट्रमैकशफं तथा" मनु० ५-८।

ऐकश्रुत्य ಐಕಶ್ರುತ್ಯ (न०) 1. ಒಂದೇ ಸ್ವರ, ಉದಾತ್ತಾನುದಾತ್ತಸ್ವರಿತಗಳ ಸಮೀಪಸಂಬಂಧ, ಎಲ್ಲಾ ಸ್ವರಗಳೂ ಒಂದೇ ಶ್ರುತಿಯಂತೆ ಕೂಡಿಕೊಂಡಿರುವಿಕೆ. "उदात्तानुदात्तस्वरितानां परः सन्निकर्षः ऐकश्रुत्यम्" आश्व० श्रौ० सू० १-२-१। 2. ವೈವಿಧ್ಯವಿಲ್ಲದ ಒಂದೇ ರಾಗ, ಒಂದೇ ಧ್ವನಿ. एका श्रुतिर्यत्र, तस्य भावः "ष्यञ्" (वा० ५-१-१२४)।

ऐकसहस्रिक ಐಕಸಹಸ್ರಿಕ (वि०) ಒಂದು ಸಾವಿರವುಳ್ಳ. एकसहस्रमस्यास्ति "ठञ्" (५-२-११८)।

ऐकागारिक ಐಕಾಗಾರಿಕ (वि०) ಚೋರ, ಕಳ್ಳ. एकमसहायमगारं प्रयोजनमस्य "इकट्" (५-१-११३)। निपा०। ಕಳ್ಳನು ತನ್ನ ಕಳ್ಳತನವು ಮತ್ತಾರಿಗೂ ತಿಳಿಯದಿರಲು (ಸಮೀಪದಲ್ಲಿ ಮನೆಗಳಿಲ್ಲದ) ಪ್ರತ್ಯೇಕವಾದ ಮತ್ತು ಅಸಹಾಯವಾದ ಮನೆಯನ್ನು ಮಾತ್ರ ಅಪೇಕ್ಷಿಸುವುದರಿಂದ ಈ ಹೆಸರು. "ऐकागारिकवद्भूमौ दूराज्जग्मुरदर्शनम्" माघ० ११-१११।

ऐकाग्र्य ಐಕಾಗ್ರ್ಯ (न०) ಏಕಾಗ್ರತೆ, ಚಿತ್ತವನ್ನು ಒಂದೇ ವಿಷಯದಲ್ಲಿಟ್ಟಿರುವಿಕೆ. एकाग्रस्य भावः "ष्यञ्" (५-१-१२४)।

ऐकात्म्य ಐಕಾತ್ಮ್ಯ (न०) 1. ಐಕ್ಯ, ಒಂದಾಗಿರುವಿಕೆ. एक एवात्मा यस्य, तस्य भावः "ष्यञ्" (५-१-१२४)। 2. ಜೀವಾತ್ಮನು ಪರಮಾತ್ಮನೊಡನೆ ಒಂದಾಗಿರುವಿಕೆ, ಜೀವಬ್ರಹ್ಮರು ಒಂದೇ ಆಗಿರುವಿಕೆ. "तथैकात्म्यानुभावानां विकल्परहितः स्वयम्" भाग० ६-८-३२। 3. ಅಭೇದ. "ऐकात्म्यं वासुदेवस्य प्रोक्तवानर्जुनस्य च" भा० आदि० २-२३१।

ऐकाधिकरण्य ಐಕಾಧಿಕರಣ್ಯ (न०) 1. ಒಂದೇ ಅಧಿಕರಣದಲ್ಲಿರುವಿಕೆ, ಸಮಾನವಾದ (ಒಂದೇ) ಆಧಾರದಲ್ಲಿರುವುದು.

2. ಒಂದೇ ವಿಷಯದಲ್ಲಿ ಸೇರಿಕೊಂಡಿರುವಿಕೆ. एकं समानमधिकरणं यस्य। एकाधिकरणस्य भावः "ष्यञ्" (५-१-१२४)। "साध्येन हेतोरैकाधिकरण्यं व्याप्तिरुच्यते" भाषाप०।

ऐकान्तिक ಐಕಾಂತಿಕ (वि०) 1. ಅವಶ್ಯವಾಗಿ ಆಗಬೇಕಾದ. अवश्यं भावी "ठञ्" (५-१-८०)। 2. ನಿಶ್ಚಿತವಾದ, ನಿರ್ದಿಷ್ಟವಾದ, ಭರವಸೆಯಾದ. स्त्रियां "ङीप्" (४-१-१५)। —की—कं०. "बहुषु अभियोगकारणेषु सत्सु सचिवव्यसनमभियुञ्जानस्य शत्रुमभियोक्तुः नैकान्तिकी सिद्धिर्भवति" मुद्रा० ४।

ऐकान्त्य ಐಕಾಂತ್ಯ (न०) 1. ಪರಿಪೂರ್ಣವಾಗಿರುವಿಕೆ. 2. ಏಕಾಂತವಾಗಿರುವಿಕೆ. 3. ನಿಶ್ಚಯವಾಗಿರುವಿಕೆ. एकान्तस्य भावः "ष्यञ्" (५-१-१२४)।

कर्मन् ಕರ್ಮನ್ (ನ೦) 1. ಕಾರ್ಯ. ಕೆಲಸ. 2. ಉದ್ಯೋಗ, ಕಸಬು. क्रियते—डु कृञ् (करणे) कर्म० "मनिन्" (उ० ४-१४४)। "अप्यप्रसिद्धं यशसे हि पुंसामनन्यसाधारणमेव कर्म" कुमा० ३-१९। "तीक्ष्णा नारुन्तुदा बुद्धिः कर्म शान्तं प्रतापवत्। नोपतापि मनः सोष्म वागेका वाग्मिनः सतः" माघ० २-१०९। 3. ಮಾಡುವಿಕೆ, ಆಚರಿಸುವಿಕೆ. ड्डु कृञ् भावे "मनिन्" (उ० ४-१४४)। 4. ಕರ್ತವ್ಯ, ಅವಶ್ಯವಾಗಿ ಮಾಡಬೇಕಾದ ಕಾರ್ಯ. 5. ಮನುಷ್ಯನು ಮಾಡುವ ಪುಣ್ಯಪಾಪಹೇತುವಾದ ಕಾರ್ಯ, ಸಂಸಾರಬಂಧನಕ್ಕೆ ಕಾರಣವಾದ ಕರ್ಮ. "पर्यभूत् खलु करैर्द्विजराजः कर्म कः स्वकृतमत्र न भुङ्क्ते" नैष०५-६। "ये मे मतमिदं नित्यमनुतिष्ठन्ति मानवाः। श्रद्धावन्तोऽनसूयन्तो मुच्यन्ते तेऽपि कर्मभिः" गीता ३-३१। ಈ ಕರ್ಮವು ಮಾನಸ, ವಾಚಿಕ ಮತ್ತು ಶಾರೀರಗಳೆಂದು ಮೂರು ವಿಧ. [ವಿವರಕ್ಕೆ "कर्मज" ಪದದ 6ನೆಯ ಅರ್ಥ ನೋಡಿ.] ಇದು ಸಂಚಿತ, ಪ್ರಾರಬ್ಧ ಮತ್ತು ಆಗಾಮಿಗಳೆಂದು ಮತ್ತೆ ಮೂರು ವಿಧ. (1) ಅನೇಕ ಜನ್ಮಗಳಲ್ಲಿ ಮಾಡಿದ ಪುಣ್ಯಪಾಪ ಕರ್ಮಗಳ ರಾಶಿಯು ಸಂಚಿತವು. (2) ಹಾಗೆ ಸಂಚಿತವಾಗಿರುವ ಕರ್ಮಗಳಲ್ಲಿ ಈಗ ಅನುಭವಿಸಲು ಪ್ರಾರಂಭಿಸಿರುವ ಕರ್ಮವು ಪ್ರಾರಬ್ಧ ಕರ್ಮ. (3) ಮುಂದೆ ಮಾಡಬಹುದಾದ ಕರ್ಮಗಳು ಆಗಾಮಿ. "नमस्यामो देवान्ननु हतविधेस्तेऽपि वशगा विधिर्वन्द्यः सोऽपि प्रतिनियतकर्मैकफलदः। फलं कर्मायत्तं यदि किमपरैः किं च विधिना नमस्तत्कर्मभ्यो विधिरपि न येभ्यः प्रभवति" भर्तृ० १-११। 6. ಶಾಸ್ತ್ರ ವಿಹಿತವಾದ ಅಗ್ನಿಹೋತ್ರಾದಿ ಕರ್ಮ. ಈ ಕರ್ಮವು ನಿತ್ಯ, ನೈಮಿತ್ತಿಕ ಮತ್ತು ಕಾಮ್ಯಗಳೆಂದು ಮೂರು ವಿಧ. (1) ಪ್ರತಿದಿನವೂ ಆಚರಿಸದಿದ್ದರೆ ದೋಷವೆನಿಸಲ್ಪಡುವ "ಸಂಧ್ಯಾವಂದನ" ಮೊದಲಾದುದು **ನಿತ್ಯಕರ್ಮ.** (2) "ಜಾತೇಷ್ಟಿ" ಮುಂತಾದ ಯಾಗಗಳು **ನೈಮಿತ್ತಿಕ ಕರ್ಮ.** (3) ಫಲಾಪೇಕ್ಷೆಯಿಂದ ಆಚರಿಸಲ್ಪಡುವ "ಪುತ್ರ ಕಾಮೇಷ್ಟಿ" ಮುಂತಾದುದು **ಕಾಮ್ಯಕರ್ಮ.** ಈ ಕರ್ಮವು ಸಾತ್ತ್ವಿಕ, ರಾಜಸ ಮತ್ತು ತಾಮಸಗಳೆಂದು ಮತ್ತೆ ಮೂರು ವಿಧ. (1) ಅಭಿಮಾನ, ರಾಗ, ದ್ವೇಷಗಳನ್ನು ಬಿಟ್ಟು ಫಲಾಪೇಕ್ಷೆಯಿಲ್ಲದೆ ಮಾಡುವ ಕರ್ಮವು **ಸಾತ್ತ್ವಿಕ.** "नियतं संगरहितमरागद्वेषतः कृतम्। अफलप्रेप्सुना कर्म यत्तत्सात्त्विकमुच्यते" गीता १८-२३। (2) ಬಹಳ ಆಯಾಸಕರವಾದ, ಫಲಾಪೇಕ್ಷೆ ಮತ್ತು ಅಭಿಮಾನದಿಂದ ಕೂಡಿ ಮಾಡುವ ಕರ್ಮವು **"ರಾಜಸ"** ವೆನಿಸುವುದು. "यत्तु कामेप्सुना कर्म साहङ्कारेण वा पुनः। क्रियते बहुलायासं तद्राजसमुदाहृतम्" गीता १८-२४। (3) ಮುಂದೆ ಸಂಭವಿಸಬಹುದಾದ ಕಷ್ಟಗಳು. ನಾಶ, ಹಿಂಸೆ, ತನ್ನ ಶಕ್ತಿ ಸಾಮರ್ಥ್ಯ ಯಾವುದನ್ನೂ ಲೆಕ್ಕಿಸದೆ ತಾನೇ ಕರ್ತೃ ವೆಂಬ ಅಜ್ಞಾನದಿಂದ ಆರಂಭಿಸಲ್ಪಡುವ ಕರ್ಮವು **"ತಾಮಸ"** ವೆನಿಸುವುದು. "अनुबन्धं क्षयं हिंसामनवेक्ष्य च पौरुषम्। मोहादारभ्यते कर्म यत्तत्तामसमुच्यते" गीता १८-२५। 7. ವೈಶೇಷಿಕ ಮತದಲ್ಲಿ ಉಕ್ತವಾದ ಕ್ರಿಯಾರೂಪವಾದ ಪದಾರ್ಥ. ಇದು (1) उत्क्षेपणम्, (2) अवक्षेपणम्, (3) आकुञ्चनम्, (4) प्रसारणम् ಮತ್ತು (5) गमनम् ಎಂದು ಐದು ವಿಧ. "उत्क्षेपणं तथावक्षेपणमाकुञ्चनं तथा। प्रसारणं च गमनं

कर्माण्येतानि पञ्च च" माषाप०। 8. ವ್ಯಾಕರಣದಲ್ಲಿ ಉಕ್ತವಾದ ಆರು ವಿಧ ಕಾರಕಗಳಲ್ಲೊಂದು, ಕರ್ತೃವಿನ (ಮಾಡುವವನ) ವ್ಯಾಪಾರದಿಂದ ಹೊಂದುವ ಫಲಕ್ಕೆ ಆಶ್ರಯಭೂತವಾದ ಒಂದು ಕಾರಕ. ಇದು निर्वर्त्यम् विकार्यम् प्राप्यम् ಮತ್ತು अनीप्सितम् ಎಂದು ನಾಲ್ಕು ವಿಧ. (1) "घटं करोति" ಎಂಬಲ್ಲಿ ಘಟವು **ನಿರ್ವರ್ತ್ಯ ಕರ್ಮ.** (2) **ವಿಕಾರ್ಯವು** प्रकृत्युच्छेदकम् ಮತ್ತು प्रकृतेर्गुणान्तराधायकम् ಎಂದು ಎರಡು ವಿಧ. (1) "काष्ठं भस्म करोति" ಎಂಬಲ್ಲಿ ಪ್ರಕೃತ್ಯುಚ್ಛೇದಕಕರ್ಮ. (2) "सुवर्णं कुण्डलं करोति" ಎಂಬಲ್ಲಿ ಗುಣಾಂತರಾಧಾಯಕ ಕರ್ಮ. (3) "देवदत्तः शालां गच्छति" ಎಂಬಲ್ಲಿ ಶಾಲೆಯು **ಪ್ರಾಪ್ಯಕರ್ಮವು.** (4) **ಅನೀಪ್ಸಿತವು** द्वेष्यम् ಮತ್ತು ಉದಾಸೀನಮ್ ಎಂದು ಎರಡು ವಿಧ. (1) "विषं भुङ्क्ते". (2) "ग्रामं गच्छन् तृणं स्पृशति"। 9. ವರ್ಣಾಶ್ರಮಾನುಗುಣವಾಗಿ ಆಯಾ ವರ್ಣದವರ ಸ್ವಭಾವಜನ್ಯಗುಣಗಳಿಂದ ಭಿನ್ನವಾದ ಆಯಾವರ ಕರ್ಮಗಳು. "ब्राह्मणक्षत्रियविशां शूद्राणां च परन्तप। कर्माणि प्रविभक्तानि स्वभावप्रभवैर्गुणैः" ಗೀತಾ ೧೮-೪೧। (1) ಬಾಹ್ಯ ಮತ್ತು ಆಂತರೇಂದ್ರಿಯನಿಗ್ರಹ, ತಪಸ್ಸು (ಕಾಯಕ್ಲೇಶ), ಶಾಸ್ತ್ರೀಯಕರ್ಮಯೋಗ್ಯವಾದ ಶೌಚ, ಇತರರಿಂದ ತೊಂದರೆಯೇರ್ಪಟ್ಟರೂ ಸಹಿಷ್ಣುತೆ, ಆರ್ಜವ (ಕಪಟವಿಲ್ಲದಿರುವಿಕೆ), ಜ್ಞಾನ, ವಿಜ್ಞಾನ (ಪರಶಾಸ್ತ್ರವಿಷಯಕ ವಿಶೇಷಜ್ಞಾನ), ವೇದೋಕ್ತವಾದ ವಿಷಯಗಳಲ್ಲಿ ಸತ್ಯವೆಂಬ ನಿಶ್ಚಯ, ಇವೆಲ್ಲವೂ ಸ್ವಭಾವಜನ್ಯವಾದ ಬ್ರಾಹ್ಮಣನ ಕರ್ಮಗಳು. "शमो दमस्तपश्शौचं क्षान्ति-रार्जवमेव च। ज्ञानं विज्ञानमास्तिक्यं ब्रह्मकर्म स्वभावजम्" ಗೀತಾ ೧೮-೪೨। (2) ಪರಾಕ್ರಮ (ಯುದ್ಧದಲ್ಲಿ ಹೆದರದೆ ಪ್ರವೇಶಿಸುವ ಸಾಮರ್ಥ್ಯ), ಇತರರಿಂದ ಅವಮಾನಗೊಳಿಸಲ್ಪಡದಿರುವಿಕೆ, ಧೈರ್ಯ, ಸಕಲ ಕಾರ್ಯಗಳನ್ನೂ ಸಾಧಿಸುವ ಸಾಮರ್ಥ್ಯ, ಯುದ್ಧದಲ್ಲಿ ಹಿಂದಕ್ಕೆ ಸರಿಯದಿರುವುದು, ದಾನ, ಸಕಲರನ್ನೂ ಆಡಗಿಸುವ ಶಕ್ತಿ ಇವೆಲ್ಲವೂ ಕ್ಷತ್ರಿಯನಿಗೆ ಸ್ವಭಾವಜನ್ಯವಾದ ಕರ್ಮಗಳು. "शौर्यं तेजो धृतिर्दाक्ष्यं युद्धे चाप्यपलायनम्। दानमीश्वर-भावश्च क्षात्रं कर्म स्वभावजम्" ಗೀತಾ ೧೮-೪೩। (3) ಬೇಸಾಯ, ಗೋಸಂರಕ್ಷಣೆ, ಕ್ರಯವಿಕ್ರಯರೂಪವಾದ ವ್ಯಾಪಾರ ಇವೆಲ್ಲವೂ ವೈಶ್ಯನಿಗೆ ಸ್ವಭಾವಸಿದ್ಧವಾದ ಕರ್ಮಗಳು. "कृषिगोरक्ष्यवाणिज्यं वैश्यं कर्म स्वभावजम्" ಗೀತಾ ೧೮-೪೪। (4) ಈ ಮೂರು ವರ್ಣದವರ ಪರಿಚರ್ಯೆಯು ಶೂದ್ರನ ಸ್ವಭಾವಜನ್ಯ ಕರ್ಮವು. "परिचर्यात्मकं कर्म शूद्रस्यापि स्वभावजम्" ಗೀತಾ ೧೮-೪೪। "स्वे स्वे कर्मण्यभिरतः संसिद्धिं लभते नरः" ಗೀತಾ ೧೮-೪೫। 10. (ಜ್ಯೋತಿಷದಲ್ಲಿ) ಜನ್ಮಲಗ್ನದಿಂದ ಹತ್ತನೆಯ ಸ್ಥಾನ. "दशमो मान आज्ञापि करस्थानमिति स्मृतः। वृद्धिः कर्माभिधानं च वक्त्री संक्षय उच्यते" ಮೃ೦ ದೀ೦। 11. ಮನುಷ್ಯನಿಗೆ ನಡೆಯಬೇಕಾದ ಷೋಡಶ (ಹದಿನಾರು) ಕರ್ಮಗಳು. (1) ಗರ್ಭಾಧಾನ, (2) ಪುಂಸವನ, (3) ಸೀಮಂತ, (4) ಜಾತಕರ್ಮ, (5) ನಾಮಕರಣ, (6) ನಿಷ್ಕ್ರಮಣ, (7) ಅನ್ನಪ್ರಾಶನ, (8) ಚೌಲ, (9) ಉಪನಯನ, (10-13) ವ್ರತಚತುಷ್ಟಯ (ಪ್ರಾಜಾಪತ್ಯ, ಸೌಮ್ಯ, ಆಗ್ನೇಯ ಮತ್ತು ವೈಶ್ವದೇವ), (14) ಸ್ನಾನ, (15) ಉದ್ವಾಹ ಮತ್ತು (16) ಅಂತ್ಯೇಷ್ಟಿ.

कर्मनिर्हरण ಕರ್ಮನಿರ್ಹರಣ (ನ೦) ಕರ್ಮಗಳನ್ನು ನಾಶಪಡಿಸುವಿಕೆ, ಪಾಪಕರ್ಮಗಳನ್ನು ಪ್ರಾಯಶ್ಚಿತ್ತಾದಿಗಳಿಂದ ಕಡಮೆ ಮಾಡಿಕೊಳ್ಳುವಿಕೆ. कर्मणां निर्हरणम्—भावे "ल्युट्" (३-३-११५)। **-निर्हरः -ನಿರ್ಹಾರಃ.** ಭಾವೆ "घञ्" (३-३-१८)।

कर्मनिष्ठ ಕರ್ಮನಿಷ್ಠ (ವಿ೦) 1. ಯಾಗಾದಿ ಕರ್ಮಗಳಲ್ಲಿ ಆಸಕ್ತನಾದ, ಯಾಗಾದಿ ಕರ್ಮಾನುಷ್ಠಾನದಲ್ಲಿ ನಿರತನಾದ. कर्मणि निष्ठा यस्य। "ज्ञाननिष्ठा द्विजाः केचित्तपोनिष्ठा-स्तथापरे। तपःस्वाध्यायनिष्ठाश्च कर्मनिष्ठास्तथापरे" ಮನು೦ ३-१३४। (ಸ್ತ್ರೀ೦) **-निष्ठा -ನಿಷ್ಠಾ.** ಕರ್ಮಾನುಷ್ಠಾನದಲ್ಲಿ ಆಸಕ್ತಿ, ಯಾಗಾದಿಕರ್ಮಗಳಲ್ಲಿ ನಿರತನಾಗಿರುವಿಕೆ. कर्मसु निष्ठा।

कर्मन्द ಕರ್ಮಂದ (ಪು೦) ಭಿಕ್ಷುಸೂತ್ರಗಳನ್ನು ರಚಿಸಿದ ಒಬ್ಬ ಋಷಿ.

कर्मन्दिन् ಕರ್ಮಂದಿನ್ (ಪು೦) ಭಿಕ್ಷು, ಸಂನ್ಯಾಸಿ. कर्मन्देन प्रोक्तमधीते "इनिः" (४-३-११२)।

कर्मन्यास ಕರ್ಮನ್ಯಾಸ (ಪು೦) 1. ಕರ್ಮಗಳನ್ನು ಆಚರಿಸದೆ ಬಿಡುವಿಕೆ. ಕರ್ಮಸಂನ್ಯಾಸ. 2. ಕರ್ಮಫಲತ್ಯಾಗ, ಫಲಾಪೇಕ್ಷೆಯಿಲ್ಲದೆ ಈಶ್ವರಾರ್ಪಣಬುದ್ಧಿಯಿಂದ ಮಾಡುವ ಕರ್ಮಗಳ ಫಲತ್ಯಾಗ.

कर्मपथ ಕರ್ಮಪಥ (ಪು೦) 1. ಪುಣ್ಯ ಮತ್ತು ಪಾಪ ಕರ್ಮಗಳ ಮಾರ್ಗ. कर्मणां मानसादीनां पन्थाः "अः" (५-४-७४)। ಈ ಕರ್ಮಮಾರ್ಗಗಳು ಪಂಚ ವಿಧ. [ವಿವರಕ್ಕೆ "कर्मज" ಪದದಲ್ಲಿ ನೋಡಿ.] 2. ಕರ್ಮಲಬ್ಧವಾದ (1) ಅರ್ಚಿರಾದಿ ಮತ್ತು (2) ಧೂಮಾದಿ ಮಾರ್ಗಗಳು. (1) "अग्निर्ज्योतिरहः शुक्लः षण्मासा उत्तरायणम्।

तत्र प्रयाता गच्छन्ति ब्रह्म ब्रह्मविदो जनाः"। (2) धूमो रात्रिस्तथा कृष्णः षण्मासा दक्षिणायनम्। तत्र चान्द्रमसं ज्योतिर्योगी प्राप्य निवर्तते" गीता ८-२४, २५।

कर्मप्रवचनीय ಕರ್ಮಪ್ರವಚನೀಯ (ಪ್ರ೦) (ವ್ಯಾಕರಣ ಶಾಸ್ತ್ರದಲ್ಲಿ) ನಿಪಾತಗಳಿಗೆ ಹೇಳಿರುವ ಒಂದು ಸಂಜ್ಞೆ. ಇವುಗಳ ಯೋಗವಿದ್ದಲ್ಲಿ ದ್ವಿತೀಯಾ ಪಂಚಮೀ ಮತ್ತು ಸಪ್ತಮೀ ವಿಭಕ್ತಿಗಳು ಬರುವುವು.

ಈ ಕೆಳಗಿನ ನಿಪಾತಗಳು, ಎದುರಿಗೆ ನಿರ್ದಿಷ್ಟವಾದ ಅರ್ಥಗಳಲ್ಲಿ "**ಕರ್ಮಪ್ರವಚನೀಯ**" ಸಂಜ್ಞೆಯನ್ನು ಹೊಂದಿ ಆಯಾ ಕಾರ್ಯಗಳನ್ನು ಉಂಟುಮಾಡುವುವು :

ನಿಪಾತ	ಅರ್ಥವಿಶೇಷಗಳಲ್ಲಿ	ಕಾರ್ಯ	ಉದಾಹರಣೆ
(1) अनु	ಲಕ್ಷ್ಯಲಕ್ಷಣ (ಹೇತು ಹೇತು ಮತ್) ಭಾವ	ದ್ವಿತೀಯಾ ವಿಭಕ್ತಿ	जपमनु प्रावर्षत्।
"	ತೃತೀಯಾರ್ಥ (ಸಹಾರ್ಥ)	"	नदीमन्ववसिता सेना।
"	ಅಪಕರ್ಷ	"	अनु हरिं सुराः।
(2) उप	ಉತ್ಕರ್ಷ	ಸಪ್ತಮೀ	उप परार्धे हरेर्गुणाः।
"	ಅಪಕರ್ಷ	ದ್ವಿತೀಯಾ	उप हरिं सुराः।
(3) प्रति	(1) ಜ್ಞಾಪ್ಯ	ದ್ವಿತೀಯಾ	वृक्षं प्रति परि अनु वा विद्योतते विद्युत्।
(4) परि	ಜ್ಞಾಪಕ ಭಾವ		
(5) अनु	ಸಂಬಂಧ.		
	(2) ಪ್ರಕಾರ ವಿಶೇಷವನ್ನು ಹೊಂದಿರುವಿಕೆ	"	भक्तो विष्णुं प्रति परि अनु वा।
	(3) ಭಾಗ (ಸ್ವಸ್ವಾಮಿ ಭಾವ)	"	लक्ष्मीर्हरिं प्रति परि अनु वा।
	(4) ವೀಪ್ಸಾ	ಷತ್ವಾ ಭಾವ	वृक्षं वृक्षं प्रति परि अनु वा सिञ्चति।
(6) अभि	ಭಾಗ ಹೊರತು	ದ್ವಿತೀಯಾ	हरिमभिवर्तते।
	ಮೇಲಿನ	"	भक्तो हरिमभि।
	(ಮೂರು) ಅರ್ಥಗಳಲ್ಲಿ	ಷತ್ವಾ ಭಾವ	देवं देवमभि सिञ्चति।

ನಿಪಾತ	ಅರ್ಥವಿಶೇಷಗಳಲ್ಲಿ	ಕಾರ್ಯ	ಉದಾಹರಣೆ
(7) अधि	ಯಾವ ಅರ್ಥ	ಏನು	कुतोऽध्यागच्छति।
(8) परि	ವಿಶೇಷವೂ ಇಲ್ಲದಿದ್ದಲ್ಲಿ.	ದಾತ್ವಾ ಭಾವ	कुतःपर्यागच्छति।
(9) सु	ಪೂಜಾರ್ಥ	ಷತ್ವಾ ಭಾವ	सुसिक्तम्।
(10) अति	(1) ಅತಿಕ್ರಮಣ	ದ್ವಿತೀಯಾ	अति देवान् कृष्णः।
	(2) ಪೂಜಾರ್ಥ	"	"
(11) अपि	(1) ಪದಾರ್ಥ	ಷತ್ವಾ ಭಾವ	सर्पिषोऽपि स्यात्।
"	(2) ಸಂಭಾವನೆ (ಅತ್ಯುಕ್ತಿ)	"	अपि स्तुयाद्विष्णुम्।
"	(3) ಅನ್ವವಸರ್ಗ (ಕಾಮಚಾರಾನುಜ್ಞೆ)	"	अपि स्तुहि।
"	(4) ನಿಂದೆ	"	अपि स्तुयाद्वृषलम्।
"	(5) ಸಮುಚ್ಚಯ	"	अपि सिञ्च अपि स्तुहि।
(12) अप	ವರ್ಜನ	ಪಂಚಮೀ	अपि हरेः संसारः
(13) परि	"		परि हरेः संसारः
(14) आङ्	(1) ಮರ್ಯಾದೆ	"	आ मुक्तेः संसारः
	(2) ಅಭಿವಿಧಿ	"	आ बालात् हरिभक्तिः।
(15) प्रति	(1) ಪ್ರಾತಿನಿಧ್ಯ	"	प्रद्युम्नः कृष्णात् प्रति।
	(2) ಪ್ರತಿದಾನ	"	तिलेभ्यः प्रतियच्छति माषान्।
(16) अधि	ಸ್ವಸ್ವಾಮಿಭಾವ ಸಂಬಂಧ	ಸಪ್ತಮೀ	अधि भुवि रामः। इत्यादि

ಕೆಲವುಕಡೆ ಈ ಕರ್ಮಪ್ರವಚನೀಯಸಂಜ್ಞಕಪದಗಳ ಯೋಗದಿಂದ ಉಪಸರ್ಗನಿಮಿತ್ತವಾದ ಷತ್ವವೂ ಗತಿಸಂಜ್ಞಾನಿಮಿತ್ತವಾದ ಅನುದಾತ್ತಸ್ವರವೂ ಬರುವುದಿಲ್ಲ.

कर्मफल ಕರ್ಮಫಲ (ನ೦) ಶಾಸ್ತ್ರವಿಹಿತವಾದ ಪುಣ್ಯ ಮತ್ತು ನಿಷಿದ್ಧವಾದ ಪಾಪಕರ್ಮಗಳ ಪರಿಣಾಮವಾದ ಸುಖದುಃಖಗಳು, ಜನ್ಮಾಂತರದ ಕರ್ಮಗಳ ಫಲ. कर्मणां विहितानां निषिद्धानां वा फलम्। ಶಾಸ್ತ್ರವಿಹಿತ ಕರ್ಮ

गळन्नु फलापेक्षियिंद माडिदरे अवक्कनुगुणवाद फलप्राप्ति. फलाभिसंधियिल्लदे केवल आत्मशुद्धिगागि कर्मानुष्ठानमाडि स्थिरवाद आत्मानुभव रूपवाद सौख्यवन्नु हॊंदबहुदु. "युक्तः कर्मफलं त्यक्त्वा शान्तिमाप्नोति नैष्ठिकीम्। अयुक्तः कामकारेण फले सक्तो निबध्यते" गीता ५-१२।

कर्मबन्ध कर्मबंध (पु॰) कर्मदिंदमुंटागुव शरीर संबंध, संसार बंधन. कर्मणा बन्धः। "एषा तेऽभिहिता सांख्ये बुद्धिर्योगे त्विमां शृणु। बुद्धया युक्तो यया पार्थ कर्मबन्धं प्रहास्यसि" गीता २-४०।

कर्मबन्धन कर्मबंधन (न॰) 1. कर्मदिंद उंटाद शरीरसंबंध, संसारबंधन. (वि॰) कर्मवेंब बंधनसाधनदिंद कूडिद. परम पुरुषप्रीत्यर्थवाद कर्मक्किंतलू बेरेयाद कर्मवन्नु आचरिसुववनु संसारबंधनक्के ऒळगागुवनु. कर्मैव कर्मणा वा बन्धनं यस्य। "यज्ञार्थात्कर्मणोऽन्यत्र लोकोऽयं कर्मबन्धनः। तदर्थं कर्म कौन्तेय मुक्तसङ्गः समाचर" गीता ३-९।

कर्मभू कर्मभू (स्त्री॰) 1. व्यवसाय माडल्पट्ट भूमि. कर्मणः कृषिकर्मणो भूः। 2. भारत वर्ष.

कर्मभूमि कर्मभूमि (स्त्री॰) कर्मगळु आचरिसल्पडुव भारतवर्ष. कर्मणः यज्ञादिकर्मणः भूमिः। "उत्तरं यत्समुद्रस्य हिमाद्रेश्चैव दक्षिणम्। वर्षं तद्भारतं नाम भारती यत्र सन्ततिः। नवयोजनसाहस्रो विस्तारोऽस्य महामुने। कर्मभूमिरियं स्वर्गमपवर्गं च गच्छताम्" विष्णुपु॰ २-३-१, २।

कर्मभोग कर्मभोग (पु॰) माडिद कर्मदिंद उंटागुव सुखिदुःखगळ अनुभव.

कर्ममीमांसा कर्ममीमांसा (स्त्री॰) कर्मकांडद तात्पर्यवन्नु निर्णयिसुव मीमांसा शास्त्र. कर्मणः कर्मप्रतिपादकवेदभागस्य मीमांसा विचारः। [विवरक्के "मीमांसा" पददल्लि नोडि.]

कर्मवासना कर्मवासना (स्त्री॰) मुंदिन मुंदिन जन्मगळल्लि पुण्यपापकार्यगळन्नु माडिसुव हिंदिन जन्मगळल्लिन अनुभवद ऒंदु संस्कार.

कर्मयुग कर्मयुग (न॰) हिंसेयें प्रधानवाद कलियुग. कृणाति हिनस्ति परस्परं यस्मिन्—कृत् (हिंसायाम्) "मनिन्" (उ॰ ४-१४४)। कर्म च तद्युगं च।

कर्मयोग कर्मयोग (पु॰) फलापेक्षेयिल्लद कर्मानुष्ठान, उपदेशदिंद जीवात्म परमात्म विषयक यथार्थज्ञानवुळ्ळवनिंद शक्तिगनुगुणवागि फलाभिसंधियिल्लदे आचरिसल्पडुव जपतपो रूपवाद कर्मगळु, फलाभिसंधियिल्लद कर्मकौशल.

कर्मवत् कर्मवत् (वि॰) 1. कार्यवंत, यावुदादरॊंदु कार्यवुळ्ळवनु. कर्मास्यास्ति "मतुप्" (५-२-९४)। स्त्रियाम् "ङीप्" (४-१-६)। **-वती -वतिः.** (अव्य॰) 2. कर्मदंते. कर्मणा तुल्यम् "वतिः" (५-१-११५)।

कर्मविपर्यय कर्मविपर्यय (पु॰) कार्यद व्यत्यास, कार्यवु तप्पागि आगुविके, कार्यवु विरोधवागि आगुविके. कर्मणो विपर्ययः।

कर्मविपाक कर्मविपाक (पु॰) 1. पुण्यपाप कार्यगळ परिणाम, जन्मांतरद पुण्यपापकार्यगळ शुभाशुभ फल. कर्मणः पुण्यापुण्यरूपस्य विपाकः फलविशेषः। शातातपस्मृतियल्लि 84 विध पापकर्म फलगळु उक्तवागिवे. 2. अनुभविसुत्तिरुव नानाविध दुःखगळिगे कारण मत्तु अदर निवृत्त्युपायगळन्नु तिळिसुव ऒंदु ग्रंथ.

कर्मव्यति(ती)हार कर्मव्यति(ती)हार (पु॰) पर स्पर एकजातीय कार्यगळ विनिमय, समान कार्यगळ अन्योन्य बदलावणे. कर्मणः व्यति(ती)हारः अन्योन्यं क्रियाविनिमयः। केशाकेशि। दण्डादण्डि।

कर्मशाला कर्मशाला (स्त्री॰) कैगारिकेय प्रयोग शाले, कारखाने.

कर्मशील कर्मशील (वि॰) केलस माडुव स्वभाव दवनु. कर्म शीलं यस्य।

कर्मशूर कर्मशूर (वि॰) हिडिद कार्यवन्नु समाप्तिगॊळिसुवनु. कर्मणि शूरः।

कर्मश्रेष्ठ कर्मश्रेष्ठ (पु॰) 1. पुलहन मग; [पुलहनु ब्रह्मन नाभियिंद हुट्टिद ऒब्ब ब्रह्मर्षि. कर्दमब्रह्मन मगळाद गतियु ई ऋषिय पत्नि. इवळल्लि कर्मश्रेष्ठ, वरीयस्सु मत्तु सहिष्णुगळेंब मूवरु पुत्ररु जनिसिदरु.] (वि॰) कर्माचरणेयिंद श्रेष्ठनादवनु. कर्मणा श्रेष्ठः।

कर्मसंन्यास ಕರ್ಮಸಂನ್ಯಾಸ (ಪು೦) 1. ಕರ್ಮತ್ಯಾಗ, ಕರ್ಮಗಳನ್ನು ಆಚರಿಸದೆ ಬಿಡುವಿಕೆ. कर्मण: संन्यास: त्याग:। "तयोस्तु कर्मसंन्यासात्कर्मयोगो विशिष्यते" गीता ५-२। 2. ಕರ್ಮಫಲತ್ಯಾಗ; ಫಲವನ್ನು ಅಪೇಕ್ಷಿಸದೆ ಕರ್ಮವನ್ನಾಚರಿಸುವುದು ಫಲತ್ಯಾಗವೆನಿಸುವುದು. ಫಲಾಪೇಕ್ಷೆಯಿಲ್ಲದೆ ಕರ್ಮವನ್ನಾಚರಿಸುವವನಿಗೆ ಸಿದ್ಧಿಯುಂಟಾಗುವುದು. ಆತ್ಮಾವಲೋಕನದಲ್ಲಿ ಪ್ರವೃತ್ತವಾದ ಮನಸ್ಸಿನಿಂದ ಇಂದ್ರಿಯಗಳನ್ನು ಕಾರ್ಯದಲ್ಲಿ ಪ್ರೇರಿಸಿ ಕರ್ಮ ಮಾಡುವುದೇ ಸ್ವಭಾವವಾದ ಇಂದ್ರಿಯ (ಕರ್ಮೇಂದ್ರಿಯ) ಗಳಿಂದ ಫಲಾಪೇಕ್ಷೆಯಿಲ್ಲದೆ ಕರ್ಮವನ್ನು ಆಚರಿಸುವವನು (ಕರ್ಮಯೋಗಿಯು) ಜ್ಞಾನಯೋಗಿಗಳಿಗಿಂತಲೂ ಶ್ರೇಷ್ಠನು. "यस्त्विन्द्रियाणि मनसा नियम्यारभतेऽर्जुन। कर्मेन्द्रियै: कर्मयोगमसक्त: स विशिष्यते" गीता ३-७।

कर्मसंन्यासिक ಕರ್ಮಸಂನ್ಯಾಸಿಕ (ಪು೦) 1. ಕರ್ಮಸಂನ್ಯಾಸವುಳ್ಳವನು, ಕರ್ಮಗಳನ್ನು ತ್ಯಜಿಸಿರುವ ಸಂನ್ಯಾಸಿ, ಯತಿ. कर्मणां संन्यासोऽस्यास्ति "ठन्" (५-२-११५)। 2. ಕರ್ಮಫಲವನ್ನು ತ್ಯಾಗಮಾಡಿದವನು. "इनि:" (५-२-११५)। **–संन्यासिन्** **–ಸಂನ್ಯಾಸಿನ್.** ಜ್ಞಾನಿಯಾದವನು ಮೋಕ್ಷಕ್ಕಾಗಿಯೂ ಜ್ಞಾನಾಪೇಕ್ಷಿಯು ಜ್ಞಾನಕ್ಕಾಗಿಯೂ ಕರ್ಮಫಲತ್ಯಾಗ ಮಾಡುವನು. ಈ ರೀತಿ ಕರ್ಮಫಲತ್ಯಾಗವು ಎರಡು ವಿಧ. "द्विविध: कर्मणस्त्याग: फलसाधनभेदत:। फलाय ज्ञानिनस्त्यागो जिज्ञासोर्ज्ञानसिद्धये"।

कर्मसङ्ग ಕರ್ಮಸಂಗ (ಪು೦) ಕರ್ಮದಲ್ಲಿ ಆಸಕ್ತಿ, ಫಲಾಪೇಕ್ಷೆಯಿಂದ ಕರ್ಮಾಚರಣೆಯಲ್ಲಿ ಅಭಿನಿವೇಶ. कर्मणि सङ्ग: आसक्ति:।

कर्मसंग्रह ಕರ್ಮಸಂಗ್ರಹ (ಪು೦) ಮೂರು ವಿಧವಾದ ಕರ್ಮ. (1) ಕರ್ಮಸಾಧನವಾದ ದ್ರವ್ಯ, (2) ಯಾಗಾದಿ ಕರ್ಮ. (3) ಕರ್ಮವನ್ನು ಆಚರಿಸುವವನು ಎಂದು ಕರ್ಮವು ಮೂರು ವಿಧ. "करणं कर्म कर्तेति त्रिविध: कर्मसंग्रह:" गीता १८-१८।

कर्मसचिव ಕರ್ಮಸಚಿವ (ಪು೦) ರಾಜನ ಕಾರ್ಯಗಳಲ್ಲಿ ಸಹಾಯಕನಾಗಿರುವವನು. कर्मसु सचिव:।

कर्मसाक्षिन् ಕರ್ಮಸಾಕ್ಷಿನ್ (ಪು೦) ಈ ಲೋಕದಲ್ಲಿ ನಡೆಯುವ (ಮಾನವನ) ಕರ್ಮಗಳನ್ನೆಲ್ಲಾ ನೋಡುವ ಸೂರ್ಯ, ಚಂದ್ರ ಮೊದಲಾದವರು. साक्षात् (पश्यति) "इनि:" (५-२-९१)। कर्मण: साक्षी। "कर्मसाक्षी जगच्चक्षुरंशुमाली त्रयीतनु:" अम०। "सूर्य: सोमो यम: कालो महाभूतानि पञ्च च। एते शुभाशुभस्येह कर्मणो नव साक्षिण:"। (वि०) 2. (ನಡೆಯುತ್ತಿರುವ) ಕಾರ್ಯವನ್ನು ಎದುರಿಗೆ ನೋಡುವವನು. "यो यस्तत्कर्मसाक्षी चरति मयि रणे यश्च यश्च प्रतीप: क्रोधान्धस्तस्य तस्य स्वयमपि जगतामन्तकस्यान्तकोऽहम्" वेणी० ३-३२।

कर्मसाधन ಕರ್ಮಸಾಧನ (न०) ಕರ್ಮಾಚರಣೆಗೆ ಬೇಕಾದ ದ್ರವ್ಯ. ಕರ್ಮಾಚರಣೆಗೆ ಇಂದ್ರಿಯಗಳು ಮತ್ತು ಶರೀರ ಇವು ಮುಖ್ಯ ಸಾಧನ. "शरीरवाङ्मनोभिर्यत् कर्म प्रारभते नर:" गीता १८-१५।

कर्मसिद्धि ಕರ್ಮಸಿದ್ಧಿ (स्त्री०) ಕಾರ್ಯಸಿದ್ಧಿ, ಕಾರ್ಯವು ಕೈಗೂಡುವಿಕೆ, ಕಾರ್ಯದಫಲ ದೊರಕುವಿಕೆ. कर्मण: सिद्धि:। "जितेन्द्रिये शूलिनि पुष्पचाप: स्वकर्मसिद्धिं पुनराशशंसे" कुमा० ३-५७।

कर्मस्थ ಕರ್ಮಸ್ಥ (वि०) ಕಾರ್ಯದಲ್ಲಿರುವವನು, ಕೆಲಸದಲ್ಲಿ ನಿರತನಾದವನು. कर्मणि तिष्ठति—ष्ठा (गति-निवृत्तौ) "क:" (३-२-४)।

कर्मस्थान ಕರ್ಮಸ್ಥಾನ (न०) 1. ಕಾರ್ಯಾಲಯ, ಸಾರ್ವಜನಿಕ ಕಾರ್ಯಕ್ಷೇತ್ರ. 2. ಉದ್ಯೋಗಸ್ಥಾನ, ಕಾರಖಾನೆ. कर्मण: स्थानम्। 3. (ಜ್ಯೋತಿಷೋಕ್ತವಾದ) ಲಗ್ನದಿಂದ ಹತ್ತನೆಯ ಸ್ಥಾನ. "दशमो मान आज्ञापि करस्थानमिति स्मृत:। वृद्धि: कर्माभिधानं च वज्री संक्षय उच्यते।" मु० दी०।

कर्माङ्ग ಕರ್ಮಾಂಗ (न०) 1. ಕಾರ್ಯದ ಒಂದು ಭಾಗ. 2. ಯಾಗಾದಿ ಕರ್ಮದ ಒಂದು ಭಾಗ. कर्मण: अङ्गम्।

कर्माजीव ಕರ್ಮಾಜೀವ (पु०) 1. ಕೆಲಸದಿಂದ ಸಂಪಾದಿಸಲ್ಪಟ್ಟ ಜೀವನೋಪಾಯ, ಕೈಗಾರಿಕೆ ಮುಂತಾದ ಕಸಬಿನಿಂದ ಸಂಪಾದಿಸಲ್ಪಟ್ಟ ಜೀವನಾಧಾರ,—ಹೊಟ್ಟೆಪಾಡು. कर्मणा आजीवो जीवनम्। (वि०) 2. ಕಸಬಿನಿಂದ ಜೀವಿಸುವವನು, ಉದ್ಯೋಗದಿಂದ ಜೀವನೋಪಾಯವುಳ್ಳವನು. कर्मणा आजीवो यस्य।

कर्मात्मन् ಕರ್ಮಾತ್ಮನ್ (पु०) 1. ಮಾಡಿದ ಪುಣ್ಯ ಪಾಪ ಕಾರ್ಯಗಳಿಂದ ಹೊಂದಲ್ಪಟ್ಟ ಶರೀರವುಳ್ಳ ಜೀವ. कर्मणा आत्मा शरीरं यस्य। "तस्मिन् स्वपिति सुस्थे तु कर्मात्मान: शरीरिण:। स्वकर्मभ्यो निवर्तन्ते मनश्च ग्लानिमृच्छति" मनु० १-५३। (वि०) 2. ಕೆಲಸ ಮಾಡುವ ಸ್ವಭಾವದ. "कर्मात्मनां च देवानां सोऽसृजत् प्राणिनां प्रभु:। साध्यानां च गणं सूक्ष्मं यज्ञं चैव सनातनम्" मनु० १-२२। 3. ಕೆಲಸದಲ್ಲಿ ನಿರತನಾದವನು.

कर्माधिकार **कर्माधिकार** (पु०) कೆಲಸ ಮಾಡುವ ಹಕ್ಕು. ಲೌಕಿಕ ಮತ್ತು ವೈದಿಕ ಕರ್ಮಫಲಾಪೇಕ್ಷೆ, ಕರ್ಮಾಚರಣೆಯ ಸಾಮರ್ಥ್ಯ, ಶರೀರ ದಾಢ್ರ್ಯ, ಅರ್ಥಸಂಪತ್ತಿ, ಜನಸಂಪತ್ತಿ, ಕರ್ಮೋಪಯೋಗಿ ಶಾಸ್ತ್ರಾರ್ಥಜ್ಞಾನ, ವೇದಾಧ್ಯಯನ ಇವೆಲ್ಲವೂ ಇರುವುದಾವರೆ ಕರ್ಮಾಚರಣೆಯಲ್ಲಿ ಅಧಿಕಾರ.

कर्माधिकारिन् **कर्माधिकारिन्** (त्रि०) 1. ಕೆಲಸ ಮಾಡುವ ಹಕ್ಕುಳ್ಳವನು. 2. ಕರ್ಮಾಚರಣೆಯಲ್ಲಿ ಸಾಮರ್ಥ್ಯವುಳ್ಳವನು. कर्मणि अधिकारी।

कर्माध्यक्ष **कर्माध्यक्ष** (पु०) ಕೆಲಸವನ್ನು ಪ್ರತ್ಯಕ್ಷವಾಗಿ ನೋಡುವವನು, ಕಾರ್ಯದ ಮೇಲ್ವಿಚಾರಕ. कर्मणि अध्यक्षः।

कर्मान्त **कर्मान्त** (पु०) 1. ಯಾಗಾದಿ ಕೆಲಸದ ಕೊನೆ, ಕರ್ಮದ ಸಮಾಪ್ತಿ. कर्मणोऽन्तः। "कर्मान्ते दक्षिणां दद्यात्"। 2. ಕಾರ್ಯದ ಪೂರಯಿಕೆ, ಕಾರ್ಯದ ನೆರವೇರಿಕೆ. "अहन्यहन्यवेक्षेत कर्मान्तान् वाहनानि च" मनु० ८-४१९। 3. ಚೆನ್ನಾಗಿ ಉಳಲ್ಪಟ್ಟ ಭೂಮಿ. 4. ಧಾನ್ಯವನ್ನು ಸಂಗ್ರಹಿಸಿಡುವ ಸ್ಥಾನ, ಉಗ್ರಾಣ. "तेषामर्थे नियुञ्जीत शूरान् दक्षान् कुलोद्गतान्। शुचीनाकरकर्मान्ते भीरूनन्तर्निवेशने" मनु० ७-६२।

कर्मार **कर्मार** (पु०) 1. ಕಮ್ಮಾರ, ಕಬ್ಬಿಣದ ಕೆಲಸ ಮಾಡುವ ಒಂದು ಜಾತಿಯವನು. कर्म ऋच्छति—ऋ (गतौ) "अण्" (३-२-१)। "कर्मारस्य निषादस्य रङ्गावतरकस्य च। सुवर्णकर्तुर्वेणस्य शस्त्रविक्रयिणस्तथा" मनु० ४-२१५। 2. ಕೈಗೆಲಸಗಾರ, ಶಿಲ್ಪಿ.

कर्महं **कर्महर्** (पु०) 1. ಪುರುಷ, ಮನುಷ್ಯ. कर्म अर्हति—अर्ह (पूजायाम्) "अण्" (३-२-१)। (वि०) 2. ಕೆಲಸ ಮಾಡಲು ಸಮರ್ಥನಾದವನು, ಕೆಲಸಕ್ಕೆ ಯೋಗ್ಯನಾದವನು. 3. ಯಾಗಾದಿಕರ್ಮಗಳಿಗೆ ಯೋಗ್ಯನಾದವನು.

कर्माशय **कर्माशय** (पु०) ಜನ್ಮಾಂತರಗಳಲ್ಲಿ ಮಾಡಿದ ಪುಣ್ಯ ಮತ್ತು ಪಾಪ ಕರ್ಮಗಳಿಗೆ ಆಶ್ರಯವಾದ ಶರೀರ ಮನಸ್ಸು ಮುಂತಾದುವು.

कर्मिक **कर्मिक** (वि०) 1. ಕೆಲಸಗಾರ, ಕಾರ್ಯನಿರತ, ಉದ್ಯೋಗವುಳ್ಳವನು. कर्मास्यास्ति "ठन्" (५-२-११६)। 2. ಕೂಲಿಯವನು, ಕೆಲಸದವನು.

कर्मिन् **कर्मिन्** (वि०) 1. ಕೆಲಸಗಾರ, ಉದ್ಯೋಗಶೀಲ, ಕಾರ್ಯನಿರತ. कर्मास्यास्ति "इनिः" (५-२-११६)। 2. ಯಾಗಾದಿಕರ್ಮಗಳನ್ನು ಆಚರಿಸುವವನು. "तपस्विभ्यः अधिको योगी ज्ञानिभ्योऽपि मतोऽधिकः। कर्मिभ्यश्चाधिको योगी तस्माद्योगी भवार्जुन" गीता ६-४६। 3. ಕೂಲಿಯವನು, ಕೆಲಸಗಾರ.

कर्मिष्ठ **कर्मिष्ठ** (त्रि०) ಉದ್ಯಮಶೀಲ, ಹೆಚ್ಚಾಗಿ ಕೆಲಸದಲ್ಲಿ ಆಸಕ್ತಿಯುಳ್ಳವನು. अतिशयेन कर्मी "इष्ठन्" (५-३-५५)।

कर्मेन्द्रिय **कर्मेन्द्रिय** (न०) ವಾಕ್ಕು, ಪಾಣಿ, ಪಾದ, ಪಾಯು, ಉಪಸ್ಥಗಳೆಂಬ ಐದು ಇಂದ್ರಿಯಗಳು. कर्मणां वचनादीनां निमित्तमिन्द्रियम्। [ವಿವರಕ್ಕೆ "इन्द्रिय" "इन्द्रियव्यापार" "इन्द्रियाधिष्ठातृ" "इन्द्रियायतन" "इन्द्रियार्थ" ಪದಗಳಲ್ಲಿ ನೋಡಿ.]

कर्मोद्युक्त **कर्मोद्युक्त** (वि०) ಕಾರ್ಯದಲ್ಲಿ ನಿರತನಾದವನು, ಕೆಲಸದಲ್ಲಿ ತೊಡಗಿರುವವನು, कर्मणि उद्युक्तः।

कर्व-दर्पे (भ्वा० पर० अक० से०) कर्वति। चकर्व। अकर्वीत्। ಗರ್ವಪಡುವುದು, ಕೊಬ್ಬಿದವನಾಗು.

कर्व **कर्व** (पु०) 1. ಕಾಮ, ಮನ್ಮಥ. किरति विषयेषु चित्तम्—कॄ (विक्षेपे) "वः" (उ० १-१५३)। 2. ಮೂಷಕ, ಇಲಿ. "कर्वः कामः आखुश्च" सि० कौ०।

कर्वट **कर्वट** (पुंन०) 1. ಒಂದು ಜಿಲ್ಲೆಯ ಮುಖ್ಯ ಪಟ್ಟಣ. 2. ಇನ್ನೂರು ಹಳ್ಳಿಗಳ ಮಧ್ಯದಲ್ಲಿ ಸುಂದರವಾದ ಒಂದು ಪಟ್ಟಣ. "कर्वटोऽस्त्री द्रोणमुखं पट्टनं पुटभेदनम्" वैज०। "कर्वटं द्विशतग्राममध्ये ग्राममनोहरम्" हारा०। 3. ಹೆಬ್ಬೆ ಕಂಟಕದಿಂದ ಕೂಡಿದ ಗ್ರಾಮ. "द्वे शते कर्वटस्य स्यात् नगरस्य चतुःशतम्" याज्ञ० २-१६७। (पु०) 4. ಎಂಟುನೂರ ನಾಲ್ಕು ಗ್ರಾಮಗಳ ಮಧ್ಯದ ಒಂದು ಮುಖ್ಯಗ್ರಾಮ. "चतुरष्टशतग्रामान्तः द्रोणमुखकर्वटौ" त्रिकाण्ड०।

कर्वर **कर्वर** (पु०) 1. ವ್ಯಾಘ್ರ, ಹುಲಿ. 2. ರಾಕ್ಷಸ. 3. ಪಾಪ. कॄ (विक्षेपे) "ष्वरच्" (उ० २-१२२)। "कर्वरो व्याघ्ररक्षसोः" सि० कौ०। स्त्रियाम् "ङीष्" (४-१-४१)। **कर्वरी** **कर्वरी**. 1. ದುರ್ಗಾದೇವಿ. 2. ರಾತ್ರಿ. 3. ರಾಕ್ಷಸಿ. 4. ಹಿಂಗುಪತ್ರ.

कर्शन **कर्शन** (न०) 1. ಕೃಶವಾಗುವಿಕೆ, ತೆಳ್ಳಗೆ ಆಗುವಿಕೆ. कृश (तनूकरणे) भावे "ल्युट्" (३-३-११५)। (वि०) 2. ಕೃಶವಾಗಿ ಮಾಡುವ, ತೆಳ್ಳಗೆ ಮಾಡುವ. कृश + णिच् कर्तरि "ल्युः" (३-१-१३४)। 3. ತೊಂದರೆ ಕೊಡುವ, ಹಿಂಸಿಸುವ, ಪೀಡಿಸುವ.

कर्शनीय ಕರ್ಶನೀಯ (ವಿ॰) 1. ತೆಳ್ಳಗೆ ಮಾಡಲು ಅರ್ಹವಾದ, 2. ತೆಳ್ಳಗೆ ಮಾಡಲು ಶಕ್ಯವಾದ. 3. ತೆಳ್ಳಗೆ ಮಾಡಲ್ಪಡುವ. कृश (तनूकरणे) "अनीयर्" (३-१-९६)।

कर्शयत् ಕರ್ಶಯತ್ (ವಿ॰) ತೆಳ್ಳಗೆ ಮಾಡುತ್ತಿರುವ. कृश (तनूकरणे) + णिच् "शतृ" (३-२-१२४)। स्त्रियाम् "ङीप्" (४-१-६)। **-यन्ती -ಯಂ॰೫ೀ.**

कर्शित ಕರ್ಶಿತ (ವಿ॰) ತೆಳ್ಳಗೆ ಮಾಡಲ್ಪಟ್ಟ, ಕೃಶವಾಗಿ ಮಾಡಲ್ಪಟ್ಟ. कृश (तनूकरणे) + णिच् "क्तः" (३-२-१०२)।

कर्ष ಕರ್ಷ (ಪುಂನ॰) 1. ಚಿನ್ನ ಬೆಳ್ಳಿಗಳ ಒಂದು ತೂಕ, ಹದಿನಾರು ಆದ್ಯಮಾಷಕಗಳ ತೂಕ. 80 ರಿಕ್ತಗಳು, 1/4 ಪಲ, 1/400 ತುಲೆ, 176 ಗುಲಗಂಜಿಗಳ ತೂಕ. कृष (विलेखने) "अच्" (३-१-१३४)। 2. ಹದಿನಾರು ಆದ್ಯಮಾಷಕಗಳ ತೂಕದ ಚಿನ್ನ. (ಪುಂ॰) 3. ವಿಭೀತಕ ವೃಕ್ಷ, ತಾರೆಗಿಡ. 4. ಆಕರ್ಷಣ, ಎಳೆಯುವಿಕೆ. 5. ಬರೆಯುವಿಕೆ. कृष (विलेखने) भावे "घञ्" (३-३-१८)। 6. ಉದ್ಯಮ, ವ್ಯವಸಾಯ. 7. ನೇಗಿಲು. 8. ಗಾಲಿ (ಚಕ್ರ)ಯ ಪಾದು. 9. ಉಳುಮೆಮನು, 10. ಎಳೆಯುವಮನು.

कर्षक ಕರ್ಷಕ (ಪುಂ॰) 1. ಕುಜ, ಅಂಗಾರಕ. "कर्षको रुधिरो भौमः" ವೈಜ॰। (ವಿ॰) 2. ಎಳೆಯುವಮನು. 3. ಲೇಖಿಕ, ಬರೆಯುವಮನು. 4. ರೈತ, ಬೇಸಾಯಗಾರ. कृष (विलेखने) "ण्वुल्" (३-१-१३३)। "कच्चिच्च बीजं भक्तं च कर्षकस्यावसीदति" भा॰ सभा॰ ५-८२। "त्वं समीरण इव प्रतोक्षितः कर्षकेण वलजान् पुपूषता" माघ॰ १४-७।

कर्षण ಕರ್ಷಣ (ನ॰) 1. ಎಳೆಯುವಿಕೆ. "भज्यमानमतिमात्रकर्षणात् तेन वज्रपरुषस्वनं धनुः" रघु॰ ११-४६। 2. ನೇಗಿಲಿನಿಂದ ಉಳುವಿಕೆ. कृष (विलेखने) भावे "ल्युट्" (३-३-११५)। "मृतं तु याचितं भैक्षं प्रमृतं कर्षणं स्मृतम्" मनु॰ ४-५। 3. ಶೋಷಣ, ಒಣಗಿಸುವಿಕೆ. 4. ಪೀಡಿಸುವಿಕೆ, ಹಿಂಸಿಸುವಿಕೆ. "शरीरकर्षणात् प्राणाः क्षीयन्ते प्राणिनां यथा। तथा राज्ञामपि प्राणाः क्षीयन्ते राष्ट्रकर्षणात्" मनु॰ ७-११२। (वि॰) 5. ಎಳೆಯುವ, ಆಕರ್ಷಿಸುವ, 6. ನೇಗಿಲಿನಿಂದ ಉಳುವ. कृष (विलेखने) "ल्युः" (३-१-१३४)। (स्त्री॰) **कर्षणी** ಕರ್ಷಣೀ. ಹಾಲಿಗಿಡ, गौरा॰ "ङीष्" (४-१-४१)।

कर्षणीय ಕರ್ಷಣೀಯ (ವಿ॰) 1. ಎಳೆಯಲು ಅರ್ಹವಾದ. 2. ಎಳೆಯಲು ಶಕ್ಯವಾದ. 3. ಉಳಲು ಯೋಗ್ಯವಾದ. 4. ಉಳಲು ಶಕ್ಯವಾದ. कृष (विलेखने) 'अनीयर्" (३-१-९६)। 5. ಎಳೆಯಲ್ಪಡುವ. 6. ಉಳಲ್ಪಡುವ.

कर्षत् ಕರ್ಷತ್ (ವಿ॰) 1. ಉಳುತ್ತಿರುವ. 2. ಎಳೆಯುತ್ತಿರುವ, ಆಕರ್ಷಿಸುತ್ತಿರುವ. कृष (विलेखने) "शतृ" (३-२-१२४)। "धनुः स कर्षन् रहितमायासेनाऽऽससार ताम्" माघ॰ १९-१५। स्त्रियाम् "ङीप्" (४-१-६)। **कर्षन्ती** ಕರ್ಷ॰೫ೀ.

कर्षफल ಕರ್ಷಫಲ (ಪು॰) 1. ತಾರೆಗಿಡ. (ಸ್ತ್ರೀ॰) 2. ನೆಲ್ಲಿಗಿಡ. (ನ॰) 3. ತಾರೆಕಾಯಿ. 4. ನೆಲ್ಲಿಕಾಯಿ.

कर्षित ಕರ್ಷಿತ (ವಿ॰) 1. ಎಳೆಯಿಸಲ್ಪಟ್ಟ. कृष (विलेखने) + णिच् "क्तः" (३-२-१०२)। 2. ಉಳಿಸಲ್ಪಟ್ಟ, ಬೇಸಾಯ ಮಾಡಿಸಲ್ಪಟ್ಟ.

कर्षिन् ಕರ್ಷಿನ್ (ವಿ॰) 1. ಎಳೆಯುವ, ಆಕರ್ಷಿಸುವ. कृष (विलेखने) "णिनिः" (३-१-१३४)। "स्तम्बेरमा मुखरशृङ्खलकर्षिणस्ते" रघु॰ ५-७२। स्त्रियाम् "ङीप्" (४-१-५)। **कर्षिणी** ಕರ್ಷಿಣೀ. "घ्राणकान्तमधुगन्धकर्षिणीः पानभूमिरचनाः प्रियासखः" रघु॰ १९-११। (स्त्री॰) 2. ಕುದುರೆಯ ಕಡಿವಾಣದಲ್ಲಿರುವ ಕಬ್ಬಿಣದ ತುಂಡು. 3. ಹಾಲೆ ಗಿಡ.

कर्षू ಕರ್ಷೂ (ಪು॰) 1. ಒಣ ಬೆರಣಿಯಿಂದ ತಯಾರಿಸಲ್ಪಟ್ಟ ಬೆಂಕಿ. कृष (विलेखने) "ऊः" (उ॰ १-८१)। 2. ಜೀವಿಕೆ, ಜೀವನೋಪಾಯ. (ಸ್ತ್ರೀ॰) 3. ಕವಲು ನದಿ, ಕಾಲುವೆ. "कर्षूर्वार्ता करीषाग्निः कर्षूः कुल्याभिधायिनी" अम॰। 4. ಕೃಷಿ, ಬೇಸಾಯ. "कर्षूस्तु तुषाग्नौ कृषिकुल्ययोः" हेम॰। 5. ಇಷ್ಟಿಘಾತ, ಯಾಗಕ್ಕಾಗಿ ನೇಗಿಲಿನಿಂದ ಉತ್ತು ತೋಡಲ್ಪಟ್ಟ ಹಳ್ಳ. ನಾಲ್ಕು ಅಂಗುಲಗಳ ಅಗಲ ನಾಲ್ಕು ಅಂಗುಲಗಳ ಆಳ ಹನ್ನೆರಡು ಅಂಗುಲಗಳ ಉದ್ದವುಳ್ಳ ಒಂದು ಹಳ್ಳಕ್ಕೆ ಇಷ್ಟಿಘಾತವೆಂದು ಹೆಸರು. "चतुरङ्गुलपृथ्वीस्तावदन्तरास्तथाधःखाताः वितस्त्यायतास्तिस्रः कर्षूः कुर्यात्। कर्षूसमीपे अग्नित्रयमुपसमाधाय परिस्तीर्य तत्रैकैकस्मिन् आहुतित्रयं जुहुयात्" विष्णुसू॰। "कर्षूः पुमान् करीषाग्नौ स्त्रियाम् कुल्येष्टिखातयोः" मेदि॰। 6. ಗರ್ತ, ಹಳ್ಳ. 7. ಧಾನ್ಯದ ಹೊಟ್ಟು. "कर्षूः स्त्री तुषकोष्ठे कुल्यायां ना च ना करीषाग्नौ" वैज॰।

कर्हि ಕರ್ಹಿ (अव्य॰) ಯಾವಾಗ, ಯಾವಕಾಲದಲ್ಲಿ. किम् "हिल्" (५-३-२१)।

कर्हिचित् ಕರ್ಹಿಚಿತ್ (अव्य०) 1. ಒಂದು ಕಾಲದಲ್ಲಿ, ಒಂದು ಸಮಯದಲ್ಲಿ. 2. ಯಾವಾಗಲೂ, ಯಾವ ಕಾಲದಲ್ಲೂ. "अकामस्य क्रिया काचित् दृश्यते नेह कर्हिचित्" मनु० २-४।

कल–शब्दसंख्यानयोः (भ्वा० आत्म० शब्दे अकर्मकः संख्याने सकर्मकः से०)। कलते। चकले। कलिता। कलिष्यति। अकलिष्ट। 1. ಶಬ್ದ ಮಾಡು, ಸದ್ದುಮಾಡು. 2. ಎಣಿಸು, ಲೆಕ್ಕ ಮಾಡು.

कल–गतौ संख्याने च (चुरा० उभ० सक० से०)। कलयति, –ते। कलयां बभूव, –आस, –चकार, –चक्रे। 1. ಹೊಂದು, ಪಡೆ. 2. ಎಣಿಸು, ಲೆಕ್ಕಮಾಡು. "प्रह्लादश्चास्मि दैत्यानां कालः कलयतामहम्" गीता १०-३०। 3. ಉಚ್ಚರಿಸು, ಹೇಳು, ಮಾತಾಡು. "विहगाः कदम्बसुरभावि ह गाः कलयन्त्यनुक्षणमनेकलयम्" माघ० ४-३६। 4. ಗ್ರಹಿಸು, ಹಿಡಿದುಕೊ, ಧರಿಸು. "कलय वलयश्रेणीं पाणौ पदे कुरु नूपुरौ"। "कलयति हिमांशोर्निष्कलङ्कस्य लक्ष्मीम्" मालती० १-२५। 5. ಗ್ರಹಿಸು, ತಿಳಿದುಕೊ. "क्रियतेऽनुवृत्तिरुचितैव ततः कलयेदमानमनसं सखि माम्" माघ० ९-५८। 6. ಹೋಗು, ನಡೆ, ಮುಂದುವರಿಸಾಗು, ದಾರಿಹಿಡಿದು ನಡೆ. "साक्षादप्सरसो विमानकलितव्योमान एवाभवत्" नैष० २-१०४।

ಈ ಧಾತುವಿಗೆ ಉಪಸರ್ಗಯೋಗದಿಂದುಂಟಾಗುವ ಅರ್ಥಭೇದಗಳು:

(1) आ + कल = आकलितः। 1. ಕಟ್ಟಿಹಾಕು, ಬಂಧಿಸು, ಬಿಗಿ. "सुवर्णसूत्राकलिताधराम्बरां विडम्बयन्तं शितिवाससस्तनुम्" माघ० १-६। 2. ತಿಳಿದುಕೊ, ಮನದಟ್ಟು ಮಾಡಿಕೊ, ಗ್ರಹಿಸು. "क्षिप्ता इवेन्दोः सरुचोऽधिवेलं मुक्तावलीराकलयांचकार" माघ० ३-७३।

(2) उद् + कल = उत्कलितः। ಮೇಲಕ್ಕೆ ಎತ್ತಿ ಹಿಡಿದುಕೊ. "स तस्य हस्तोत्कलितस्तदासुरो विक्रीडतो यद्वदहिर्गरुत्मतः" भाग० ७-८-२६।

(3) प्रति + आ + कल = प्रत्याकलनम्। ಅರಿತುಕೊ, ತಿಳಿದುಕೊ. "प्रत्याकलितस्वदुर्नयः" दशकु०।

(4) वि + अव + कल = व्यवकलनम्। ಕಳೆದು ಹಾಕು, ತೆಗೆದು ಹಾಕು. "यदि व्यक्ते युक्तिव्यवकलनमार्गेऽसि कुशला" लीला०।

(5) सम् + कल = सङ्कलनम्। ಲೆಕ್ಕಗಳನ್ನು ಕೂಡು, –ಸೇರಿಸು. "अथ सङ्कलनव्यवकलनयोः करणसूत्रम्" लीला०।

कल–क्षेपे (चुरा० उभ० सक० से०)। कालयति, –ते। कालयां बभूव, –आस, –चकार, –चक्रे। 1. ಪ್ರೇರಿಸು, ಮುಂದಕ್ಕೆ ತಳ್ಳು. 2. ಅಟ್ಟು, ಓಡಿಸು. "षष्टिं गवां सहस्राणि त्रिगर्ताः कालयन्ति ते" भा० विरा० ३३-१५। 3. ಎಸೆ, ಬಿಸಾಡು.

कल ಕಲ (पु०) 1. ಕಾಮ, ಮನ್ಮಥ. 2. ಇಂಪಾದ ಮತ್ತು ಅಸ್ಪಷ್ಟವಾದ ಶಬ್ದ. कल (शब्दे) "अच्" (३-१-१३४)। "प्रगीयते सिद्धगणैश्च योषितामुदारमन्ते कलभाविकस्वरैः" माघ० ४-३३। 3. ಸಾಲವೃಕ್ಷ, ಮತ್ತಿ ಮರ. 4. ಬದರೀವೃಕ್ಷ. ಬೋರೆಗಿಡ. 5. ಅಂಗುಷ್ಠದಿಂದ ವೀಣೆಯ ತಂತಿಗಳನ್ನು ಮುಟ್ಟುವಿಕೆ. "तन्त्रीष्वङ्गुष्ठसंस्पर्शः कलः" वैज०। (न०) 6. ಶುಕ್ರಧಾತು, ವೀರ್ಯ. "कलं शुक्रे त्रिष्वजीर्णे चाव्यक्तमधुरध्वनौ" मेदि०। (वि०) 7. ಜೀರ್ಣವಾಗದಿರುವ. 8. ಮೂಗ, ಮಾತಾಡುವ ಶಕ್ತಿಯಿಲ್ಲದವನು. 9. ಕಲಾನ್ವಿತ, ಕುಶಲವಿದ್ಯೆಯಿಂದ ಕೂಡಿದವನು. कलाऽस्त्यस्य "अच्" (५-२-१२७)। 10. ಮನೋಹರವಾದ. 11. ಮಧುರವಾದ, ಇಂಪಾದ. "कलमन्यभृतासु भाषितं कलहंसीषु मदालसं गतम्" रघु० ८-५९। (क्रि० वि०) ಗಂಭೀರವಾಗಿ. "कलं चलद्भिः सुरसैन्यसिन्धुरैः" कुमा० १४-२४।

कलक ಕಲಕ (पु०) 1. ಮತ್ಸ್ಯ, ಮೀನು. कल (गतौ) "ष्वुल्" (३-१-१३३)। (वि०) 2. ಎಣಿಸುವ, ಲೆಕ್ಕ ಮಾಡುವ.

कलकण्ठ ಕಲಕಂಠ (पु०) 1. ಕೋಗಿಲೆ. 2. ಹಂಸಪಕ್ಷಿ. 3. ಕಪೋತ, ಪಾರಿವಾಳದ ಹಕ್ಕಿ. कलः अव्यक्तमधुरः कण्ठोऽस्य। स्त्रियाम् "ङीप्" (४-१-५५)। **–कण्ठी –कण्ठिः**. (वि०) 4. ಅವ್ಯಕ್ತವೂ ಮಧುರವೂ ಆದ ಧ್ವನಿಯುಳ್ಳ.

कलकल ಕಲಕಲ (पु०) 1. ಕೋಲಾಹಲ ಧ್ವನಿ, ಗಡಿಬಿಡಿಯ ಶಬ್ದ, ಗುಂಪಿನಗಲಭೆ. कलप्रकारः – प्रकारे द्वित्वम् (८-१-१२)। "रणसंमदोदयविकासिबलकलकलाकुलीकृते" माघ० १५-७७। 2. ಮತ್ತಿಮರದ ರಸ. "कलकल उक्तः कोलाहले तथा सालनिर्यासे" मेदि०।

कलघोष ಕಲಘೋಷ (पु०) ಕೋಗಿಲೆ. कलो घोषोऽस्य।

कलङ्क ಕಳಂಕ (पु०) 1. ಚಿಹ್ನೆ, ಗುರುತು. 2. ಮಾಲಿನ್ಯ, ಕೊಳೆ. कं ब्रह्माणं लङ्कयति हीनतां गमयति–लकि (गतौ) + णिच् "अण्" (३-२-१)। "बहुरूपकसालभञ्जिका मुखचन्द्रेषु कलङ्करङ्कवः" नैष० २-८३। "आभाति

वेला लवणाम्बुराशेः धारानिबद्धेव कलङ्करेखा" रघु० १३-१५। 3. अपवाद, अपयशस्सु, अकीर्ति. "त्वादृशस्य सकलः स कलङ्कः शीतभासि शशकः परमङ्कः" नैष० ५-१२०। 4. श्यामु मोदलाद धातुगळ मल. "शशिकृपाणकवचेषु कलङ्काः" काद०। 5. पाप, पातक.

कलङ्कित ಕಳಂಕಿತ (वि०) 1. गुरुतु माडल्पट्टिरुव, बेह्नेयिंद कूडिद. 2. अपकीर्तियुळ्ळ. अपयशस्सन्नु संपादिसिरुव. अपवादवुळ्ळ. कलङ्कोऽस्य सञ्जातः "इतच्" (५-२-३६)। "कुङ्कुमपङ्ककलङ्कित-देहा गौरपयोधरकम्पितहारा" भर्तृ० २-९। 3. कोळेयागिरुव. 4. पापवुळ्ळ.

कलङ्कुर ಕಲಂಕುರ (पु०) जलावर्त, नीरिन सुळि. कं जलं लङ्कयति — लकि (गतौ) + णिच् "उरच्" वाहु०। "अथाम्भसां भ्रमः। तानूरो वायुगुल्मश्च कणलाभः कलङ्कुरः" त्रिकाण्ड०।

कलञ्ज ಕಳಂಜ (पु०) 1. विषबिळिद बाणदिंद कोल्ल ल्पट्ट मृग. मत्तु 2. पक्षि. (न०) 3. इंतह मृग पक्षिगळ मांस. "न कलञ्जं भक्षयेत्" श्रुतिः। 4. होगेसोप्पु. "कलञ्जसंवेष्टनधूमपानात्स्याद्दन्त-शुद्धिर्मुखरोगहानिः"।

कलट ಕಲಟ (न०) मनेगे पोदिसुव हुल्लु मोद लादुदु, मनेय हुल्लिन मेल्हावण. कं जलं लटति—लट (बाल्ये) "अच्" (३-१-१३४)।

कलतूलिका ಕಲತೂಲಿಕಾ (स्त्री०) कामुक हेंगसु, व्यभिचारिणि. कं सुखं लाति — ला (आदाने) "कः" (३-२-४)। कलः कामः तं तूलयति निष्कर्षति पूरयति वा — तूल (निष्कर्षे) + णिच् "ण्वुल्" (३-१-१३३)। "वाञ्छिनी तु स्याल्लञ्जिका कलतूलिका" त्रिकाण्ड०।

कलत्र ಕಳತ್ರ (न०) 1. पत्नि, हेंडति. गडयते — गड (सेचने) "अत्रन्" आदेः कश्च (उ० ३-१०६)। डलयोरभेदः। "यः प्रीणयेत् सुचरितैः पितरं स पुत्रो यद्भर्तुरेव हितमिच्छति तत्कलत्रम्" भर्तृ० १-५९। 2. नितंब प्रदेश, हेंगसर हिरुद. "कलत्रभारेण विलोलनीविना गलद्दुकूलस्तनशालिनोरसा" किरा० ८-१७। 3. कळत्र स्थान, लग्नदिंद एळनेयस्थान. "कलत्रसौख्यवैवाहं भोगस्थानं मनोहरम्। अलंकृतिश्च सर्वेषां भावोऽयं सप्तमः स्मृतः" मु० दी०। 4. दुर्ग, कोटे.

कलत्रता ಕಳತ್ರತಾ (स्त्री०) पत्नीत्व, हेंडतियागिरुवि. कलत्रस्य भावः "तल्" (५-१-११९)।

कलत्रवत् ಕಳತ್ರವತ್ (वि०) 1. सपत्नीक, पत्नीसमेत नाद. पत्नियन्नु हेंदिरुव. कलत्रमस्यास्ति "मतुप्" (५-२-९४)। मस्य वः (७-२-९)। "कलत्रवन्त-मात्मानमवरोधे महत्यपि" रघु० १-३२। (अव्य०) 2. पत्नियंते, हेंडतियंते. कलत्रेण तुल्यम् "वतिः" (५-१-११५)।

कलत्रिन् ಕಳತ್ರಿನ್ (वि०) कळत्रवुळ्ळवनु, पत्नीसमेत नादवनु, पत्नियन्नु हेंदिरुववनु. कलत्र "इनिः" (५-२-११५)। "वसुधेयमवेक्ष्यतां त्वया वसु-मत्या हि नृपाः कलत्रिणः" रघु० ८-८३।

कलधूत ಕಲಧೂತ (न०) रजत, बेळ्ळि.

कलधौत ಕಲಧೌತ (न०) 1. सुवर्ण, चिन्न. 2. बेळ्ळि, रजत. कलः मलो धौतोऽस्य। "यस्यां कपोलैः कलधौत-धामस्तम्भेषु भेजे मणिदर्पणश्रीः" माघ० ३-४७। "अधि-रात्रि यत्र निपतन्नभोलिहां कलधौतधौतशिलवेश्मनां रुचौ" माघ० १३-५१। 3. कलध्वनि, इंपाद कंठ. "कलधौतं रूप्यहेम्नोः कलधौतं कलध्वनौ" विश्व०।

कलध्वनि ಕಲಧ್ವನಿ (पु०) 1. अस्पष्ट मत्तु मधुर वाद शब्द, इंपाद तग्गु दनि. कलो ध्वनिः। 2. कपोत, पारिवाळद हक्कि. कलो ध्वनिरस्य। 3. कोगिले. 4. मयूर, नविलु. (वि०) 5. मधुरवाद मत्तु अस्पष्टवाद शब्दवुळ्ळ. कलो ध्वनिरस्य। "कलध्वनिः परभृते पारावतकलापिनोः" हेम०।

कलन ಕಲನ (न०) 1. चिह्ने, गुरुतु. 2. अपराध, तप्पु. 3. ग्रहण, स्वीकार, तेगेदुकोळ्ळुविके. कल (गतौ) "ल्युट्" (३-३-११५)। 4. ग्रास, सुंगुविके. "कलनात्सर्वभूतानां स कालः परिकीर्तितः"। 5. ज्ञान, अरिवु, तिळिवळिके. कल कर० "ल्युट्" (३-३-११७)। "लोकानामन्तकृत्कालः कालोऽन्यः कलनात्मकः" सू० सि०। 6. सद्दु माडुविके, शब्द माडुविके. कल (गतौ शब्दे च) भावे "ल्युट्" (३-३-११५)।

कलना ಕಲನಾ (स्त्री०) 1. ज्ञान, तिळियुविके, अरियुविके. कल (गतौ) + णिच् भावे "युच्" (३-३-१०७)। 2. ग्रहण, हिडिदुकोळ्ळुविके, 3. स्वीकार, तेगेदुकोळ्ळुविके. 4. धरिसुविके, तोडुविके. 5. तेगेदु

ಪಾಕುವಿಕೆ. "अवाप वाल्योचितनीलकण्ठपिच्छावचूडा-कलनामिवोरः" माघ० ३-५।

कलनाद ಕಲನಾದ (पु०) 1. ಮಧುರ ಮತ್ತು ತಗ್ಗು ದನಿ. कलो नादः। "पयोधिलक्ष्मीमुषि केलिपल्वले रिरंसुहंसी-कलनादसादरम्" नैष० १-११७। 2. ಹಂಸ. कलो नादोऽस्य। (वि०) 3. ಅಸ್ಫುಟ ಮತ್ತು ಮಧುರವಾದ ಧ್ವನಿಯುಳ್ಳ. कलो नादो यस्य।

कलभ ಕಲಭ (पु०) 1. ಮೂವತ್ತುವರ್ಷವಯಸ್ಸಿನ ಆನೆ. कल (शब्दे) "अभच्" (उ० ३-१२२)। "कुशेशयैरत्र जलाशयोषिता मुदा रमन्ते कलभा विकस्वरैः" माघ० ४-३३। 2. ಆನೆಯ ಮರಿ. "इह मुहुर्मुदितैः कलभैरवः प्रतिदिशं क्रियते कलभैरवः" माघ० ४-६०। "ननु कलभेन यूथपतेरनुकृतम्" माल० ५। 3. ದತ್ತೂರಿ ಗಿಡ. कं वातं लभते—डु लभष् (प्राप्तौ) "अच्" (३-१-१३४)।

कलम ಕಲಮ (पु०) 1. ಬತ್ತ. कलते—कल (संख्याने) "अमः" (उ० ४-८४)। "आपादपद्मप्रणताः कलमा इव ते रघुम्" रघु० ४-३७। "गीतानि गोप्याः कलमं मृगव्रजो न नूनमत्तीति हरिर्व्यलोकयत्" माघ० १२-४३। 2. ಲೇಖನಿ. 3. ಜೋರ, ಕಳ್ಳ. "कलमः पुंसि लेखन्यां शालौ पाटच्चरेऽपि च" मेदि०। 4. ಅಂಕುರ. ಮೊಳಕೆ. "कलमोऽङ्कुरलेखन्योः" वैज०।

कलम्ब ಕಲಂಬ (पु०) 1. ಶರ, ಬಾಣ. कल (क्षेपे) "अम्बच्" (उ० ४-८२)। ಶತ್ರುಗಳ ಮೇಲೆ ಎಸೆದು ಪ್ರಯೋಗಿಸುವುದರಿಂದ ಈ ಹೆಸರು. 2. ಕದಂಬ ವೃಕ್ಷ. कड (मदे) "अम्बच्" (उ० ४-८२)। डलयोरभेदः। ವಿರಹಿಗಳಿಗೆ ಮದವನ್ನು ಅಟುಮಾಡುವುದರಿಂದ ಈ ಹೆಸರು. 3. ಅಂಕುರ, ಮೊಳಕೆ. "त्वद्भ्रूयुगं यस्य खलु द्विपत्री तवाधरो रज्यति यत्कलम्बः" नैष० ३-१२०। (स्त्री०) **कलम्बी ಕಲಂಬೀ**. ಹಂಬು ಬಳಸೆ. "कलम्बी शाकभेदे स्यात् कदम्बशरयोः पुमान्" मेदि०।

कलम्बुट ಕಲಂಬುಟ (न०) ನವನೀತ, ಹೊಸದಾದ ಬೆಣ್ಣೆ. के जले लम्बते—लबि (अवस्रंसने) "उटः" बाहु०। "हैयङ्गवीनं सरजं मन्थजं च कलम्बुटम्" हारा०।

कलयत् ಕಲಯತ್ (वि०) 1. ತಿಳಿಯುವ, ಅರಿತು ಕೊಳ್ಳುವ. कल (गतौ) + णिच् "शतृ" (३-२-१२४)। "कलयन्नपि सव्यथोऽवतस्थेऽशकुनेन स्खलितः किलेत-रोऽपि" माघ० ९-८३। 2. ನೋಡುತ್ತಿರುವ, ವೀಕ್ಷಿಸುತ್ತಿರುವ. "निमीलनस्पष्टविलोकनाभ्यां कदर्थितस्ताः कलयन् कटाक्षैः" नैष० ६-२२। 3. ಎಸೆಯುತ್ತಿರುವ. 4. ಬಿಸಾಡುತ್ತಿರುವ. 5. ಎಣಿಸುತ್ತಿರುವ. "प्रह्लादश्चास्मि दैत्यानां कालः कलयतामहम्" गीता १०-३०। 6. ಧರಿಸುತ್ತಿರುವ, ಪಿಡಿಯುತ್ತಿರುವ. "राज्ञामस्य शतेन किं कलयतो हेतिं शतघ्नीं कृतं लक्षैर्लक्षभिदो दृशैव जयतः पद्मानि पद्मैरलम्" नैष० १२-५८। 7. ಸ್ವೀಕರಿಸುತ್ತಿರುವ, ಅಂಗೀಕರಿಸುತ್ತಿರುವ. "अस्य क्षोणिपतेः परार्धपरया लक्षीकृताः संख्यया प्रज्ञाचक्षुरवेक्ष्यमाणतिमिरप्रख्याः किलाकीर्तयः। गीयन्ते स्वरमष्टमं कलयता जातेन वन्ध्यो-दरान्मूकानां प्रकरेण कूर्मरमणीदुग्धोदधे रोधसि" नैष० १२-१०६। स्त्रियाम् "ङीप्" (४-१-६)। **कलयन्ती ಕಲಯನ್ತೀ**. "कोपितं विरहखेदितचित्ता कान्तमेव कलयन्त्यनुनिन्ये" माघ० १०-२९।

कलरव ಕಲರವ (पु०) 1. ಕಪೋತ, ಪಾರಿವಾಳದ ಪಕ್ಕಿ. 2. ಕೋಗಿಲೆ. कलो रवोऽस्य। 3. ಅಸ್ಪಷ್ಟಮಧುರಧ್ವನಿ, ಇಂಪಾದ ತಗ್ಗು ದನಿ. कलो रवः। (वि०) 4. ಅಸ್ಪಷ್ಟವಾದ ಮಧುರ ಧ್ವನಿಯುಳ್ಳ. "कलरवमुपगीते षट्पदौघेन धत्तः कुमुदकमलखण्डे तुल्यरूपामवस्थाम्" माघ० ११-१५। स्त्रियाम् जाति० "ङीष्" (४-१-६३)। **-रवी -ರವೀ**.

कलल ಕಲಲ (न०) 1. ಗರ್ಭದ ಮೊದಲನೆಯ ಅವಸ್ಥೆ, ಸ್ತ್ರೀಯರ ಗರ್ಭಕೋಶವನ್ನು ಪ್ರವೇಶಿಸಿದ ಮೊದಲನೆಯ ರಾತ್ರಿಯಲ್ಲಿ ಉಂಟಾಗುವ ರೇತಸ್ಸಿನ ವಿಕಾರ. "कर्मणा दैवनेत्रेण जन्तुर्देहोपपत्तये। स्त्रियां प्रविष्ट उदरं पुंसो रेतःकणाश्रयः। कललं त्वेकरात्रेण पञ्चरात्रेण बुद्बुदम्" भाग० ३-३१-१, २। 2. ಚರ್ಮದ ಚೀಲ. "चर्मकोशं तु कललम्" वैज०। 3. ಎಲುಬು. ಮೂಳೆ. "अथास्थि कीकसं विड्डं कललं क्रूरमाढिकम्" वैज०।

कलविङ्क ಕಲವಿಂಕ (पु०) 1. ಗುಬ್ಬಚ್ಚಿ. कलं वङ्कते—वकि (गतौ) "अच्" (३-१-१३४)। पृषो०। "कलविङ्कप्लवं हंसं चक्राह्वं ग्रामकुक्कुटम्" मनु० ५-१२। 2. ಹಳದಿ ತಲೆಯ ಗುಬ್ಬಚ್ಚಿ. "मार्जारभक्षिते दुःखं यादृशं गृह-कुक्कुटे। न तादृङ्ममताशून्ये कलविङ्केऽथ मूषके" प्रबोध० ५-२०। "कलविङ्कस्त्वसौ पीतमुण्डः" वैज०।

कलश ಕಲಶ (त्रि०) 1. ಘಟ, ಕೊಡ, ಬಿಂದಿಗೆ, ಹರವೆ. केन जलेन लसति—लस (श्लेषणे) "अच्" (३-१-१३४)। तालव्यान्तः प्रामाणिकप्रयोगः। "कलश इव गरीयान् दिग्भिराकृष्यमाणः" माघ० ११-४४। 2. ಹದಿನಾರು

ಆದ್ಯಮಾಪಕಗಳ ತೂಕ, ಎಂಬತ್ತು (80) ರಿತ್ತಿಗಳು, 1/4 ಪಲ, 1/400 ತುಲೆ, 176 ಗುಲಗಂಜಿತೂಕ. स्त्रियाम् जाति० "ङीष्" (४-१-६३)। **–शी –ಶೀ.**

कलशजन्मन् ಕಲಶಜನ್ಮನ್, –भू –ಭೂ (पु०) ಕುಂಭದಿಂದ ಹುಟ್ಟಿದ 1. ಅಗಸ್ತ್ಯಮಹರ್ಷಿ. 2. ವಸಿಷ್ಠಮಹರ್ಷಿ.

कलशयोनि ಕಲಶಯೋನಿ (पु०) 1. ಅಗಸ್ತ್ಯಮಹರ್ಷಿ. 2. ವಸಿಷ್ಠಮಹರ್ಷಿ. कलशं योनिरस्य।

कलशि ಕಲಶಿ (स्त्री०) 1. ಕುಂಭ, ಕೊಡ, ಬಿಂದಿಗೆ, ಘಟ. 2. ಕಡೆಯುವ ದೊಡ್ಡ ಮೊಸರಿನ ಪಾತ್ರೆ. 3. ನಿಂಬಾಲದ ಹುಲ್ಲು. कलं श्यति अजीर्णं नाशयति –शो (तनूकरणे) "इन्" (उ० ४-११७)। बहि० आकारलोपः। "शशिनमिव सुरौघाः सारमुद्धर्तुमेते कलशिमुदधिगुर्वीं वल्लवा लोडयन्ति" माघ०११-८। स्त्रियाम् वा "ङीष्" (ग० ४-१-४५)। **–शी –ಶೀ.**

कलशीपदी ಕಲಶೀಪದೀ (स्त्री०) ಬಿಂದಿಗೆಯಂತೆ ಕಾಲುಗಳುಳ್ಳ ಹೆಂಗಸು. कलशी इव पादौ यस्याः। पादस्य पदादेशः (६-४-१३०)। "ङीप्" (५-४-१३९)।

कलशीसुत ಕಲಶೀಸುತ (पु०) 1. ಅಗಸ್ತ್ಯಮಹರ್ಷಿ. 2. ವಸಿಷ್ಠಮಹರ್ಷಿ. कलश्याः सुत इव। ["अगस्त्य" ಪದದಲ್ಲಿ ನೋಡಿ]

कलशोदधि ಕಲಶೋದಧಿ (पु०) ಕ್ಷೀರ ಸಮುದ್ರ.

कलस ಕಲಸ (त्रि०) ಘಟ, ಬಿಂದಿಗೆ, ಕೊಡ. केन जलेन लसति–लस (श्लेषणक्रीडनयोः) "अच्" (३-१-१३४)। ದೇವಶಿಲ್ಪಿಯಾದ ವಿಶ್ವಕರ್ಮನು ಸಮುದ್ರಮಥನ ಕಾಲದಲ್ಲಿ ಅಮೃತವನ್ನು ತುಂಬಿಡಲು ದೇವತೆಗಳ ಕಲೆಗಳಿಂದ ಕಲಶವನ್ನು ನಿರ್ಮಿಸಿದನಾದುದರಿಂದ ಈ ಹೆಸರಾಯಿತು ಎಂದೂ ಪುರಾಣದಲ್ಲಿದೆ. "सागरे मथ्यमाने तु पीयूषार्थं सुरासुरैः। पीयूषधारणार्थाय निर्मितो विश्वकर्मणा। कलाः कलास्तु देवानामपि तास्ताः पृथक् पृथक्। यतः कृतास्तु कलसाः ततस्ते परिकीर्तिताः" कालिकापु०। "कलसे निजहेतुदण्डजः किमु चक्रभ्रम कारितागुणः" नैष० २-३२।

कलसी ಕಲಸೀ (स्त्री०) ಘಟ, ಬಿಂದಿಗೆ, ಕೊಡ, ಹರವೆ. केन जलेन लसति–लस (श्लेषणे) "इन्" (उ० ४-११७)। जाति० "ङीष्" (४-१-६३)। "अवलम्बित-कर्णशष्कुलीकलसीकं रचयन्नवोचत" नैष० २-८।

कलह ಕಲಹ (पु०) 1. ಜಗಳ, ವಾಗ್ವಿವಾದ. कलो मधुरध्वनिः तं हन्ति–हन (हिंसागत्योः) "ड:" (वा० ३-२-४८)। "कलहान्न घनाद्यदुत्थितादधुनाप्युज्झति घर्घरस्वरः" नैष० २-८५। 2. ಯುದ್ಧ, ಕದನ. "विलम्बितुं न खलु सहा मनस्विनो विधित्सतः कलह-मवेक्ष्य विद्विषः" माघ० १७-५०। ಮೇದಿನೀಕೋಶದಲ್ಲಿ ನಪುಂಸಕಲಿಂಗವಾಗಿ ಉಕ್ತವಾಗಿದೆ. 3. ಕತ್ತಿಯ ಒರೆ. 4. ಮಾರ್ಗ, ದಾರಿ, ರಸ್ತೆ. 5. ತಾಡನ, ಹೊಡೆತ. "कलहं युधि वाटे ना खड्गकोशे च भण्डने" मेदि०।

कलहंस ಕಲಹಂಸ (पु०) 1. ದೊಡ್ಡ ಜಾತಿಯ ಹಂಸ ಪಕ್ಷಿ. कलो मधुरवचनो हंसः। "अविशद्वनवेश्म विस्मितः स्मृति-लग्नैः कलहंसशंसितैः" नैष० २-६३। 2. ರಾಜಹಂಸ, ಕೆಂಪು ಕಾಲು ಮತ್ತು ಕೊಕ್ಕುಳ್ಳ ಹಂಸಪಕ್ಷಿ. "वधूदुकूलं कलहंसलक्षणं गजाजिनं शोणितबिन्दुवर्षि च" कुमा० ५-६७। 3. ಶ್ರೇಷ್ಠನಾದ ದೊರೆ, ಉತ್ತಮನಾದ ರಾಜ. 4. ಪರಮಾತ್ಮ, ಪರಬ್ರಹ್ಮ. "कलहंसस्तु कादम्बे राजहंसे नृपोत्तमे" मेदि०। स्त्रियाम् जाति० "ङीष्" (४-१-६३)। **–हंसी –ಹಂಸೀ.** "कलमन्यभृतासु भाषितं कलहंसीषु मदालसं गतम्" रघु० ८-५९।

कलहकार ಕಲಹಕಾರ (पु०) 1. ನಾರದಮಹರ್ಷಿ. 2. ಜಗಳವಾಡುವವನು. कलहं करोति–डु कृञ् (करणे) "अण्" (३-२-१)। "हन्तुं कलहकारोऽसौ शब्दकारः पपात खम्" भट्टि० ५-१००।

कलहप्रिय ಕಲಹಪ್ರಿಯ (पु०) 1. ನಾರದಮಹರ್ಷಿ. कलहः प्रियोऽस्य। (वि०) 2. ಜಗಳವೇ ಪ್ರಿಯವಾಗಿ ಉಳ್ಳವನು. (स्त्री०) **–प्रिया –ಪ್ರಿಯಾ.** ಸಾರಸಪಕ್ಷಿ.

कलहान्तरिता ಕಲಹಾಂತರಿತಾ (स्त्री०) ಎಂಟುವಿಧ ಅವಸ್ಥೆಗಳುಳ್ಳ ನಾಯಿಕೆಯರಲ್ಲಿ ಒಂದು ಭೇದ, ಪ್ರಿಯವಾದ ಮಾತುಗಳನ್ನಾಡುತ್ತಿರುವ ಪತಿಯನ್ನು ಕೋಪದಿಂದ ನಿರಾಕರಿಸಿ ಬಳಿಕ ಪಶ್ಚಾತ್ತಾಪ ಪಡುವ ಒಬ್ಬ ನಾಯಿಕೆ. "चाटुकारमपि प्राणनाथं दोषादपास्य या। पश्चात्तापमवाप्नोति कलहान्तरिता तु सा" सा० द० ३-८२। "नो चाटुश्रवणं कृतं न च दृशा हारोऽन्तिके वीक्षितः कान्तस्य प्रियहेतवो निजसखीवाचोऽपि दूरी-कृताः। पादान्ते विनिपत्य तत्क्षणमसौ गच्छन् मया मूढया पाणिभ्यामवरुन्ध्य हन्त सहसा कण्ठे कथं नार्पितः" सा० द०।

कला ಕಲಾ (स्त्री०) 1. ಚಂದ್ರನ (ಚಂದ್ರಬಿಂಬದ) ಹದಿನಾರನೆಯ ಒಂದು ಭಾಗ. कलयति–कल (संख्याने) + णिच् "अच्" (३-१-१३४)। "आननेन शशिनः कलां

दधद्दशंनक्षयितकामविग्रहः" माघ० १४-१८। "व्यवधावपि वा विधोः कलां मृडचूडानिलयां न वेद कः" नैष० २-१९। **ಚಂದ್ರನ ಹದಿನಾರು ಕಲೆಗಳು:** (1) अमृता, (2) मानदा, (3) पूषा, (4) तुष्टिः, (5) पुष्टिः, (6) रतिः, (7) धृतिः, (8) शशिनी, (9) चन्द्रिका, (10) कान्तिः, (11) ज्योत्स्ना, (12) श्रीः, (13) प्रीतिः, (14) अङ्गदा, (15) पूर्णा, (16) पूर्णामृता। 2. ಸೂರ್ಯಮಂಡಲದ ಹನ್ನೆರಡನೆಯ ಒಂದು ಭಾಗ. **ಸೂರ್ಯನ ಹನ್ನೆರಡು ಕಲೆಗಳು:** (1) तपिनी, (2) तापिनी, (3) धूम्रा, (4) मरीचिः, (5) ज्वालिनी, (6) रुचिः, (7) सुषुम्णा, (8) भोगदा, (9) विश्वा, (10) बोधिनी, (11) धारिणी, (12) क्षमा। 3. ಅಗ್ನಿಮಂಡಲದ ಹತ್ತನೆಯ ಒಂದು ಭಾಗ. **ಅಗ್ನಿಮಂಡಲದ ಹತ್ತು ಕಲೆಗಳು:** (1) धूम्रार्चिः, (2) ऊष्मा, (3) ज्वलिनी, (4) ज्वालिनी, (5) विस्फुलिङ्गिनी, (6) सुश्रीः, (7) सुरूपा, (8) कपिला, (9) हव्यम्, (10) कव्यम्। 4. ಬಡ್ಡಿ, ಮೂಲಧನದ ವೃದ್ಧ್ಯಂಶ. "घनवीथि वीथिमवतीर्णवतो निधिरम्भसामुपचयाय कलाः" माघ० ९-३२। 5. ಶಿಲ್ಪ, ಕುಶಲ ವಿದ್ಯೆ. **ಅರವತ್ತನಾಲ್ಕು (64) ವಿಧ ಕುಶಲ ವಿದ್ಯೆಗಳು:**

(1) गीतम्	ಹಾಡುಗಾರಿಕೆ.
(2) वाद्यम्	ವೀಣೆ, ವೇಣು, ಮೃದಂಗ ಮುಂತಾದುವು.
(3) नृत्यम्	ಭರತನಾಟ್ಯ, ಕುಣಿತ.
(4) आलेख्यम्	ಚಿತ್ರರಚನೆ.
(5) विशेषकच्छेद्यम्	ಹಣೆಯಲ್ಲಿ ಬರೆಯುವ ತಿಲಕವನ್ನು ಅನೇಕ ರೀತಿಯಲ್ಲಿ ತಿದ್ದಿ ಕೊರೆಯುವುದು.
(6) तण्डुलकुसुमबलिविकाराः	ಬಣ್ಣ ಬಣ್ಣದ ಅಕ್ಕಿ ಮತ್ತು ಹೂವುಗಳಿಂದ ದೇವರ ಮುಂದೆ ಪದ್ಮಾದಿರೂಪಗಳನ್ನು ರಚಿಸುವುದು.
(7) पुष्पास्तरणम्	ಹೂವುಗಳನ್ನು ಹರಡಿ ಅಲಂಕರಿಸುವುದು.
(8) दशनवसनाङ्गरागः	ಮೈ, ಹಲ್ಲು ಮತ್ತು ಬಟ್ಟೆಗಳಿಗೆ ಬಣ್ಣ ಹಾಕುವುದು.
(9) मणिभूमिकाकर्म	ರತ್ನಾಲಂಕಾರ ಕಾರ್ಯ.
(10) शयनरचनम्	ಹಾಸಿಗೆಯನ್ನು ಹಾಸಿ ಶೃಂಗರಿಸುವುದು.
(11) उदकवाद्यम्	ಜಲತರಂಗ ವಾದ್ಯ.
(12) उदकाघातः	ಕೊಳವೆಯಿಂದ ನೀರನ್ನು ಹೊಡೆಯುವುದು.
(13) चित्राश्च योगाः	ಅನೇಕ ಕಷ್ಟಗಳನ್ನು ಕೊಡುವುದರ ಮೂಲಕ ಇಂದ್ರಿಯಗಳನ್ನು ನಿಃಸತ್ವಪನ್ನಾಗಿ ಮಾಡುವುದು.
(14) माल्यग्रथनविकल्पाः	ಬಗೆಬಗೆಯ ಹಾರಗಳನ್ನು ರಚಿಸುವಿಕೆ.
(15) शेखरकापीडयोजनम्	ತಲೆ ಗುಟುಹಾಕಿ ಅಲಂಕರಿಸುವಿಕೆ.
(16) नेपथ्यप्रयोगः	ವೇಷ ಹಾಕುವುದು.
(17) कर्णपत्रभङ्गाः	ರತ್ನಖಚಿತವಾದ ಪತ್ರಾಕಾರದ ಆಭರಣಗಳಿಂದ ಕಿವಿಯನ್ನು ಅಲಂಕರಿಸುವುದು.
(18) गन्धयुक्तिः	ಪರಿಮಳದ್ರವ್ಯಗಳನ್ನು ಸೇರಿಸಿದ್ದಪಡಿಸುವುದು.
(19) भूषणयोजनम्	ಅವಯವಗಳಿಗೆ ತಕ್ಕಂತ ಒಡವೆಗಳನ್ನು ತೊಡಿಸುವುದು.
(20) ऐन्द्रजालः कौचुमाराश्च योगाः	ಯಕ್ಷಿಣಿ ಮತ್ತು ಶರೀರ ಸಂಬಂಧವಾದ ನಷ್ಟಗಳನ್ನು ಹೋಗಲಾಡಿಸಿ ಸೌಭಾಗ್ಯವನ್ನುಂಟುಮಾಡುವ ಯೋಗಗಳು.
(21) हस्तलाघवम्	ಕೈಚಳಕ, ಜಾಣತನ, ಚುರುಕು.
(22) विचित्रशाकयूषभक्ष्यविकारक्रिया	ಬಗೆ ಬಗೆಯ ಹಸುರುವಾಣಿಗಳಿಂದ ಊಟದ ಪದಾರ್ಥಗಳನ್ನು ತಯಾರಿಸುವುದು. (ಚಿತ್ರಾನ್ನ, ಹುಳಿ, ತಿಂಡಿ ಮುಂತಾದುವು).
(23) पानकरसरागासवयोजनम्	ಪಾನಕ ಮೊದಲಾದ ಪಾನೀಯಗಳನ್ನು ಸಿದ್ಧಗೊಳಿಸುವುದು.
(24) सूचीवानकर्माणि	ಕಸೂತಿ ಕೆಲಸಗಳು, ಹೊಲಿಗೆ ಕೆಲಸಗಳು.
(25) सूत्रक्रीडा	ನೂಲಿನ ಆಟ, ನೂಲನ್ನು ಕತ್ತರಿಸಿ ಪುನಃ ಅಖಂಡವಾಗಿ ತೋರಿಸುವುದು. ನೂಲನ್ನು

		ಸುಟ್ಟು ಪುನಃ ಮೊದಲಿನಂತೆಯೇ ನೂಲನ್ನು ತೋರಿಸುವುದು.
(26)	वीणाडमरुकवाद्यानि	ವೀಣೆ ಡಮರು (ಬುಡುಬುಡಿಕೆ) ಮೊದಲಾದ ವಾದ್ಯಗಳು.
(27)	प्रहेलिका	ಒಗಟು, ಗೂಢಾರ್ಥವಾಕ್ಯ ಪ್ರಯೋಗ.
(28)	प्रतिमाला	ಅಂತ್ಯಾಕ್ಷರೀಪಠನ. (ಒಂದು ಶ್ಲೋಕದ ಕೊನೆಯ ಅಕ್ಷರವನ್ನು ಪ್ರಾರಂಭಿಸಿ ಮತ್ತೊಂದು ಶ್ಲೋಕವನ್ನು ಹೇಳುವುದು).
(29)	दुर्वाचकयोगाः	ವಾದಕ್ಕಾಗಿಯೂ ವಿನೋದಕ್ಕಾಗಿಯೂ ಉಚ್ಚರಿಸಲಾಗದ ಅಕ್ಷರಗಳಿಂದ ಕೂಡಿದ ಶಬ್ದಗಳ ಪ್ರಯೋಗ.
(30)	पुस्तकवाचनम्	ಪುಸ್ತಕಗಳನ್ನು ಓದುವುದು.
(31)	नाटकाख्यायिका-दर्शनम्	ನಾಟಕ ಕಥೆ ಮೊದಲಾದುವುಗಳನ್ನು ಅಭಿನಯಿಸಿ ತೋರಿಸುವುದು.
(32)	काव्यसमस्यापूरणम्	ಪದ್ಯರೂಪದಿಂದ ಸಮಸ್ಯೆಗಳನ್ನು ಪೂರ್ತಿಗೊಳಿಸುವುದು.
(33)	पट्टिकावेत्रवान विकल्पाः	ಬೆತ್ತದಿಂದ ಬುಟ್ಟಿ, ತಟ್ಟಿ ಮುಂತಾದುವನ್ನು ಹೆಣೆಯುವುದು.
(34)	तक्षकर्माणि	ಮರಗೆಲಸ.
(35)	तक्षणम्	ಗುಡಿಗಾರಿಕೆ, ಮರಗಳನ್ನು ಕೆತ್ತಿ ಮಂಚ, ಆಸನ, ಬೊಂಬೆ ಮೊದಲಾದುವನ್ನು ತಯಾರಿಸುವುದು.
(36)	वास्तुविद्या	ಗೃಹನಿರ್ಮಾಣ ಮುಂತಾದ ಶಿಲ್ಪವಿದ್ಯೆ.
(37)	रूप्यरत्नपरीक्षा	ಬೆಳ್ಳಿ, ರತ್ನ ಮೊದಲಾದುವನ್ನು ಪರೀಕ್ಷಿಸುವುದು.
(38)	धातुवादः	ಕಲ್ಲು, ಮಣ್ಣು, ಲೋಹ, ರತ್ನ ಮೊದಲಾದ ಧಾತುಗಳ ಶೋಧನ ಮೇಳನ ಮುಂತಾದ ಜ್ಞಾನಕ್ಕಾಗಿ ಲೋಹ ವಿದ್ಯೆ.
(39)	मणिरागाकरज्ञानम्	ರತ್ನಗಳ ಬಣ್ಣ ಮತ್ತು ಆಕಾರಗಳನ್ನು ತಿಳಿಯುವುದು.
(40)	वृक्षायुर्वेदयोगाः	ಸಸಿ ಮರಗಳನ್ನು ಬೆಳೆಯಿಸಿ ತೋಟಗಳನ್ನು ನಿರ್ಮಾಣ ಮಾಡುವುದು.
(41)	मेषकुक्कुट-लावकयुद्धविधिः	ಟಗರು, ಕೋಳಿ, ತಿತ್ತಿರಿಪಕ್ಷಿ ಇವುಗಳ ಕಾಳಗವನ್ನು ಮಾಡಿಸುವುದು.
(42)	शुकशारिका-प्रलापनम्	ಗಿಳಿ ಮೊದಲಾದ ಪಕ್ಷಿಗಳಿಂದ ಮಾತನಾಡಿಸುವುದು.
(43)	उत्सादने संवाहने केशमर्दने च कौशलम्	ಕಾಲಿನಿಂದ ತುಳಿಯುವುದು, ಮೈಯನ್ನು ಒತ್ತುವುದು, ತಲೆಗೆ ಎಣ್ಣೆ ಒತ್ತುವುದು ಇವುಗಳಲ್ಲಿ ನೈಪುಣ್ಯ.
(44)	अक्षरमुष्टिका-कथनम्	ಗುಟ್ಟಾದ ವಿಷಯಗಳನ್ನು ಕುರಿತು ಮಾತಾಡುವುದಕ್ಕೂ ಗ್ರಂಥಗಳನ್ನು ಸಂಗ್ರಹಿಸಿ ಹೇಳುವುದಕ್ಕೂ ಬೆರಳುಗಳಿಂದ ಮುದ್ರೆಗಳ ಮೂಲಕ ಅಕ್ಷರಗಳನ್ನು ಸೂಚಿಸಿ ವಿಷಯಗಳನ್ನು ತಿಳಿಸುವುದು.
(45)	म्लेच्छितविकल्पाः	ಗುಟ್ಟಾದ ವಿಷಯಗಳನ್ನು ತಿಳಿಸಲು ಸರಿಯಾದ ಶಬ್ದಗಳನ್ನು ಉಪಯೋಗಿಸಿದರೂ ಇತರರಿಗೆ ಸ್ಪಷ್ಟವಾಗಿ ತಿಳಿಯದಿರಲು ಅಕ್ಷರಗಳನ್ನು ಬದಲಾಯಿಸಿ ಹೇಳುವುದು.
(46)	देशभाषाविज्ञानम्	ಆಯಾ ದೇಶಭಾಷೆಗಳನ್ನು ತಿಳಿಯುವುದು.
(47)	पुष्पशकटिका	ಹೂವಿನ ಬಂಡಿಯನ್ನು ತಯಾರಿಸುವುದು.
(48)	निमित्तज्ञानम्	ಶಕುನಗಳನ್ನು ತಿಳಿಯುವುದು.
(49)	यन्त्रमातृका	ಸಜೀವ ಮತ್ತು ನಿರ್ಜೀವ ಯಂತ್ರಗಳನ್ನು ಪ್ರಯಾಣ ಮತ್ತು ಜಲಯುದ್ಧಕ್ಕಾಗಿ ಜೋಡಿಸುವ ಶಾಸ್ತ್ರ.
(50)	धारणमातृका	ಓದಿದ ಶಾಸ್ತ್ರವನ್ನು ಗ್ರಹಿಸಿ ದೃಢವಾಗಿ ಟ್ಟುಕೊಳ್ಳಲು ಅವಶ್ಯವಾದ ಶಾಸ್ತ್ರ.

(51)	संपाठ्यम्	ಚೆನ್ನಾಗಿ ಓದುವುದು.
(52)	मानसी	ಕಣ್ಣಿಗೆ ಕಾಣುವ ಮತ್ತು ಕಾಣಿಸದಿರುವ ವಸ್ತುಗಳ ಭೇದವಿಷಯವಾದ ಚಿಂತೆ.
(53)	काव्यक्रिया	ಕಾವ್ಯಗಳ ರಚನೆ.
(54)	अभिधानकोशः	ನಿಘಂಟು.
(55)	छन्दोज्ञानम्	ವೃತ್ತಗಳ ಜ್ಞಾನ.
(56)	क्रियाकल्पः	ಕಾರ್ಯವಿಧಾನದ ತಿಳಿವಳಿಕೆ.
(57)	छलितकयोगाः	ಜೂಜು ಮೊದಲಾದುವುಗಳಲ್ಲಿ ಇತರರನ್ನು ಮರುಳು ಮಾಡುವುದು.
(58)	वस्त्रगोपनानि	ವಸ್ತ್ರಗಳ ರಕ್ಷಣೆ.
(59)	द्यूतविशेषाः	ಬಗೆಬಗೆಯ ಜೂಜುಗಳು.
(60)	आकर्षक्रीडा	ಪಗಡೆಯಾಟ.
(61)	बालक्रीडनकानि	ಮಕ್ಕಳ ಆಟಗಳು.
(62)	वैनयिकीनाम्	ವಿನಯವನ್ನು ಬೋಧಿಸುವ.
(63)	वैजयिकीनाम्	ವಿಜಯದ ವಿಧಾನವನ್ನು ಬೋಧಿಸುವ ಮತ್ತು
(64)	व्यायामिकीनां च विद्यानां ज्ञानम्	ವ್ಯಾಯಾಮಕ್ರಮವನ್ನು ಬೋಧಿಸುವ ವಿದ್ಯೆಯ ಜ್ಞಾನ.

"कलाः चतुःषष्टिरुपंतु वासं तस्यां कथं सुभ्रुवि नाम नास्याम्" नैष० ७-१०७। "कलासु तस्याः सकलासु पण्डिताः" नैष० १५-२६। 6. ಒಂದು ವಸ್ತುವಿನ ಒಂದು ಸಣ್ಣ ಭಾಗ, ಅಂಶ. "सर्वे ते जपयज्ञस्य कलां नार्हन्ति षोडशीम्" मनु० २-७६। 7. ಕಾಲದ ಒಂದು ಭಾಗ, ಮೂವತ್ತು (30) ಕಾಷ್ಠೆಗಳ ಕಾಲ; ಒಂದು ಹ್ರಸ್ವಾಕ್ಷರವನ್ನು ಉಚ್ಚರಿಸುವಷ್ಟು ಕಾಲವು ಒಂದು (ಅಕ್ಷಿ) ನಿಮೇಷ. ಹದಿನೈದು (15) ಸಲ ರೆಪ್ಪೆಯಾಡಿಸುವಷ್ಟು ಕಾಲವು ಒಂದು ಕಾಷ್ಠೆ. ಮೂವತ್ತು (30) ಕಾಷ್ಠೆಗಳ ಕಾಲವು ಒಂದು ಕಲೆ. "लघ्वक्षरोच्चारणमात्रोऽक्षिनिमेषः, पञ्चदशाक्षिनिमेषाः काष्ठा, त्रिंशत् काष्ठाः कला, विंशतिकलो मुहूर्तः, त्रिंशन्मुहूर्तमहोरात्रम्" सुश्रुत० सूत्र० ६-५। 8. ಮನುಷ್ಯನ ಶರೀರದ ಒಂದು ಭಾಗ: ಮನುಷ್ಯನ ಶರೀರದಲ್ಲಿ ಏಳು ಕಲೆಗಳಿರುವುವು. (1) मांसधरा, (2) रक्तधरा, (3) मेदोधरा, (4) श्लेष्मधरा, (5) मलधरा, (6) पित्तधरा, ಮತ್ತು (7) रेतोधरा ಇವು ಸಪ್ತ (ಏಳು) ಕಲೆಗಳು. ಇವು ಮಾಂಸ ರಕ್ತ ಮೊದಲಾದ ಸಪ್ತಧಾತುಗಳಿಗೂ ಸ್ಥಾನಗಳಾಗಿರುವುವು. "कलाः खल्वपि सप्त भवन्ति धात्वाशयान्तरमर्यादाः" सुश्रुत० शारीर० ४-५।

(1) **"मांसधर"** ಕಲೆಯಲ್ಲಿ ನರ, ಸ್ನಾಯು (ಮಾಂಸಖಂಡ) ಮುಂತಾದುವು ವೃದ್ಧಿಹೊಂದುವುವು. "यथा बिसमृणालानि विवर्धन्ते समन्ततः। भूमौ पङ्कोदकस्थानि तथा मांसे सिरादयः" सुश्रुत० शारीर० ४-९।

(2) ಮಾಂಸದ ಮಧ್ಯದಲ್ಲಿ **"रक्तधर"** ಕಲೆಯಿರುವುದು. ವೃಕ್ಷವನ್ನು ಗಾಯಗೊಳಿಸಿದರೆ ಅದರ ಒಳಗಿನಿಂದ ಹಾಲು ಹೊರಡುವಂತೆ ಮಾಂಸಕ್ಕೆ ಏಟು ತಗುಲಿದರೆ ಒಳಗಿನಿಂದ ರಕ್ತವು ಸ್ರವಿಸುವುದು. "वृक्षाद्यथाभिप्रहतात् क्षीरिणः क्षीरमास्रवेत्। मांसादेव क्षतात् क्षिप्रं शोणितं संप्रसिच्यते" सुश्रुत० शारीर० ४-११।

(3) ಸಕಲ ಪ್ರಾಣಿಗಳಿಗೂ ಉದರದಲ್ಲಿ ದೊಡ್ಡ ಎಲುಬುಗಳಲ್ಲಿ ಮಜ್ಜೆಯೂ ಸಣ್ಣ ಎಲುಬುಗಳಲ್ಲಿ ಮೇದಸ್ಸೂ (ಕೊಬ್ಬೂ) ಇರುವುದು. ಇದೇ **"मेदोधर"**. "स्थूलास्थिषु विशेषेण मज्जा त्वभ्यन्तराश्रितः। अथेतरेषु सर्वेषु सरक्तं मेद उच्यते" सुश्रुत० शारीर० ४-१३।

(4) **"श्लेष्मधर"**ಯು ಪ್ರಾಣಿಗಳ ದೇಹದ ಎಲ್ಲಾ ಸಂಧಿ (ಕೀಲು) ಗಳಲ್ಲಿಯೂ ಇರುವುದು. ಚಕ್ರದೊಳಗಿರುವ ಡೂರಿಗೆ ಎಣ್ಣೆಯನ್ನು ಹಾಕಿದರೆ ಚಕ್ರವು ಸುಖವಾಗಿ ತಿರುಗುವಂತೆ ಶರೀರದಲ್ಲಿ ಎಲುಬುಗಳ ಸಂಧಿಗಳು ಶ್ಲೇಷ್ಮದಿಂದ ಚೆನ್ನಾಗಿ ಕೆಲಸ ಮಾಡುವುವು. "स्नेहाभ्यक्ते यथा ह्यक्षे चक्रं साधु प्रवर्तते। सन्धयः साधु वर्तन्ते संश्लिष्टाः श्लेष्मणा तथा" सुश्रुत० शारीर० ४-१५।

(5) ಒಳಹೊಟ್ಟೆಯಲ್ಲಿ ಪಕ್ವಾಶಯದಲ್ಲಿರುವ **"मलधरे"**ಯು ಮಲಮೂತ್ರಗಳನ್ನು ಪ್ರತ್ಯೇಕಿಸುವುದು. "पञ्चमी पुरीष(मल) धरा नाम, याऽन्तःकोष्ठे मलमभिविभजते पक्वाशयस्था" सुश्रुत० शारीर० ४-१६।

(6) ಜಠರಾಗ್ನಿಯೆಂಬ **"पित्तधरे"**ಯು ಆಮಾಶಯದಿಂದ ಕೆಳಗೆ ಜಾರಿಕೊಂಡು ಪಕ್ವಾಶಯಕ್ಕೆ ಹೊರಟಿರುವ ನಾಲ್ಕು ವಿಧ ಅನ್ನ (ಅಶಿತ, ಖಾದಿತ, ಪೀತ, ಲೀಢ) ಗಳನ್ನು ಜೀರ್ಣವಾಗಿಸಲು ವಹಿಸಿಕೊಳ್ಳುವುದು "षष्ठी पित्तधरा, या चतुर्विधमन्नपानमामाशयात्प्रच्युतं पक्वाशयोपस्थितं धारयति" सुश्रुत० शारीर० ४-१७।

(7) **"रेतोधरे"**ಯು ಸಕಲ ಪ್ರಾಣಿಗಳ ದೇಹದಲ್ಲಿಯೂ, ಹಾಲಿನಲ್ಲಿ ತುಪ್ಪವೂ ಕಬ್ಬಿನೊಳಗೆ ರಸವೂ ಸೇರಿಕೊಂಡಿರುವಂತೆ ಸರ್ವಾವಯವಗಳಲ್ಲಿಯೂ ಸೇರಿಕೊಂಡಿರುವುದು. "सप्तमी शुक्रधरा, या सर्वप्राणिनां सर्वशरीरव्यापिनी"। "यथा पयसि सर्पिस्तु गूढश्चेक्षौ रसो

यथा। शरीरेषु तथा शुक्रं नृणां विद्यात् भिषग्वरः" सुश्रुत० शारीर० ४-२०, २१। 9. (ಜ್ಯೋತಿಷದಲ್ಲಿ) ಅಂಶದ ಅರವತ್ತನೆಯ ಒಂದು ಭಾಗ. ರಾಶಿಯ ಮೂವತ್ತನೆಯ ಒಂದು ಭಾಗವು ಅಂಶ. "विकलानां कला षष्टचा तत्षष्टचा भाग उच्यते। तत्त्रिंशता भवेद्राशिः भगणो द्वादशैव ते" सू० सि० १-७। 10. ಕೂಡುವುದು. ಒಟ್ಟು, ಸೇರಿಸುವುದು, ಲೆಕ್ಕ ಹಾಕುವುದು. 11. ಬಹಳ ಸೂಕ್ಷ್ಮಾಂಶ, ಪರಮಾಣು. 12. ಜ್ಞಾನ, ತಿಳಿವಳಿಕೆ. 13. ಹೆಂಗಸರ ರಜಸ್ಸು. 14. ನೌಕೆ, ಹಡಗು, ನಾವೆ. 15. ಕೌಶಲ, ಜಾಣತನ. "कलांशमात्रे शिल्पादौ कलना कालभेदयोः। इन्दोश्च षोडशे भागे स्यान्मूलधनवर्धने" नानार्थर०। 16. ಪಂಚಮಹಾಭೂತಗಳು. 17. ಅಂಗ, ಅವಯವ. 18. ಇಂದ್ರಿಯ. "कालशिल्पे वित्तवृद्धौ चन्द्रांशे कलने कला। महाभूतेष्विन्द्रियेषु ज्ञानावयववयो-रपि" वैज०। 19, ಮನುಷ್ಯನ ಶರೀರ ರಚನೆಗೆ ಬೇಕಾದ ಪದಿನಾರು (16) ಉಪಾಧಿಗಳು. (1) प्राणः, (2) श्रद्धा, (3) आकाशः, (4) वायुः, (5) तेजः, (6) जलम्, (7) पृथ्वी, (8) इन्द्रियम्, (9) मनः, (10) अन्नम्, (11) वीर्यम्, (12) तपः, (13) मन्त्रः, (14) कर्म, (15) लोकः ಮತ್ತು (16) नाम ಇವು ಉಪಾಧಿಗಳು. "तस्मै स होवाच इहैवान्तःशरीरे सोम्य। स पुरुषो यस्मिन्नेताः षोडश कलाः प्रभवन्ति इति" प्रश्नोप०।

कलाकुल ಕಲಾಕುಲ (न०) ಹಾಲಾಹಲವಿಷ. कलया मात्रयापि आकुलयति — आकुलि नामधा० "अच्" (३-१-१३४)।

कलाकुशल ಕಲಾಕುಶಲ (वि०) ಕುಶಲ ವಿದ್ಯೆಯಲ್ಲಿ ನಿಪುಣನಾದವನು. कलायां कुशलः।

कलाकेलि ಕಲಾಕೇಳಿ (पु०) ಕಾಮ, ಮನ್ಮಥ. कलया केलिरस्य। "रागरज्जुः कलाकेलिमधुदीपरवीषुरः" त्रिकाण्ड०।

कलाक्षय ಕಲಾಕ್ಷಯ (पु०) ಚಂದ್ರನ ಕಲೆಗಳು ಕಡಮೆಯಾಗುವಿಕೆ. कलानां षोडशकलानां क्षयो नाशः। "पर्यायपीतस्य सुरैर्हिमांशोः कलाक्षयः श्लाघ्यतरो हि वृद्धेः" रघु० ५-१६। ಕೃಷ್ಣಪಕ್ಷದ ಪಾಡ್ಯ ಮೊದಲು ಗೊಂಡು ಹದಿನೈದು ದಿನಗಳಲ್ಲಿ ಅಗ್ನಿ ಮೊದಲಾದ ಹದಿನೈದು ದೇವತೆಗಳು ಪಾನಮಾಡುವುದರಿಂದ ಚಂದ್ರನ ಕಲೆಗಳು ಕ್ರಮೇಣ ಕಡಮೆಯಾಗುತ್ತ ಬಂದು ಪುನಃ ಪಕ್ಷಾಂತ್ಯದಲ್ಲಿ ಯಾಗಗಳಲ್ಲಿ ಹುತವಾದ ಹವಿಸ್ಸುಗಳು ಅಮೃತ ರೂಪದಿಂದ ಕ್ರಮೇಣ ಆ ಕಲೆಗಳಾಗಿ ಚಂದ್ರನನ್ನು ಸೇರುವುವು. ಹೀಗೆ ಅಮಾವಾಸ್ಯೆವರೆಗೂ ಕಲೆಗಳು ಕ್ಷಯ ಹೊಂದಿ ಪುನಃ ಪೂರ್ಣಿಮೆಯ ವೇಳೆಗೆ ತುಂಬಿಕೊಂಡು ಚಂದ್ರಬಿಂಬವು ಪೂರ್ಣವಾಗುವುದು. ಇದೇ ಪೂರ್ಣಿಮೆ. "प्रथमां पिबते वह्निर्द्वितीयां पिबते रविः। विश्वेदेवास्तृतीयां तु चतुर्थीं सलिलाधिपः। पञ्चमीं तु वषट्कारः षष्ठीं पिबति वासवः। सप्तमीं ऋषयो दिव्याः अष्टमीमज एकपात्। नवमीं कृष्णपक्षेऽस्य यमः प्राश्नाति वै कलाम्। दशमीं पिबते वायुः पिबत्येकादशीमुमा। द्वादशीं पितरः सर्वे समं प्राश्नन्ति भागशः। त्रयोदशीं धनाध्यक्षः कुबेरः पिबते कलाम्। चतुर्दशीं पशुपतिः पञ्चदशीं प्रजापतिः। निष्पीतः कलया शेषश्चन्द्रमा न प्रकाशते। कला षोडशिका या सात्वपः प्रविशते सदा। अमायां तु सदा सोम ओषधीः प्रतिपद्यते। तमोषधिगतं गावः पिबत्यम्बुगतं च यत्। तत् क्षीरममृतं भूत्वा मन्त्रपूतं द्विजातिभिः। हुतमग्निषु यज्ञेषु पुनराप्यायते शशी। दिने दिने कलावृद्धिः पौर्णमास्यां तु पूर्णता"।

कलाङ्कुर ಕಲಾಂಕುರ (पु०) 1. ಸಾರಸ ಪಕ್ಷಿ. कलस्याङ्कुरो यत्र। 2. ಚೌರ್ಯಶಾಸ್ತ್ರಪ್ರವರ್ತಕನಾದ ಮೂಲದೇವ. कलानामङ्कुरो यत्र। "कर्णीसुतो मूलदेवो मूलभद्रः कलाङ्कुरः" त्रिकाण्ड०।

कलाची ಕಲಾಚೀ (स्त्री०) ಪೊಳಕೈ ಮತ್ತು ಮಣಿಕಟ್ಟುಗಳ ಮಧ್ಯಭಾಗ, ಮುಂಗೈ. कलामञ्चति — अञ्चु (गतौ) "अण्" (३-२-१)। गौरा० "ङीष्" (४-१-४१)। स्वार्थे "कन्"। **कलाचिका ಕಲಾಚಿಕಾ.**

कलाद ಕಲಾದ (पु०) ಅಕ್ಕಸಾಲೆ, ಚಿನ್ನ ಬೆಳ್ಳಿ ಕೆಲಸಗಾರ. कलामंशमादत्ते—आ डु दाञ् (दाने) "कः" (३-२-४)। "वयं कलादा इव दुर्विदग्धं त्वद्गौरिमस्पर्धि दहेम हेम" नैष० ८-९९।

कलादक ಕಲಾದಕ (पु०) ಸ್ವರ್ಣಕಾರ, ಅಕ್ಕಸಾಲೆ, ಚಿನ್ನ ಬೆಳ್ಳಿ ಕೆಲಸಗಾರ. कलामंशमत्ति—अद (भक्षणे) "ण्वुल्" (३-१-१३३)।

कलाधर ಕಲಾಧರ (पु०) 1. ಚಂದ್ರ. धरति — धृञ् (धारणे) "अच्" (३-१-१३४)। कलानां धरः। 2. ಶಿವ, ಪರಮೇಶ್ವರ. (वि०) 3. ಅರವತ್ತನಾಲ್ಕು ಕಲೆಗಳನ್ನು ಬಲ್ಲವನು.

कलानिधि ಕಲಾನಿಧಿ (पु०) ಚಂದ್ರ. कला निधीयन्तेऽस्मिन् — नि + डु धाञ् (धारणपोषणयोः) "किः"

(३-३-९२)। "अहो महत्त्वं महतामपूर्वं विपत्तिकालेऽपि परोपकारः। यथाऽऽस्यमध्ये पतितोऽपि राहोः कलानिधिः पुण्यचयं ददाति" उद्भ०।

कलान्तर ಕಲಾಂತರ (पु०) 1. ಬಡ್ಡಿ, ಮೂಲಧನದ ವೃದ್ಧ್ಯಂಶ. अन्या कला अंशः। 2. ಚಂದ್ರನ ಮತ್ತೊಂದು ಕಲೆ. "पुपोष लावण्यमयान् विशेषान् ज्योत्स्नान्तराणीव कलान्तराणि" कुमा० १-२५। "मासे शतस्य यदि पञ्च कलान्तरं स्यात्" लीला०।

कलाप ಕಲಾಪ (पु०) 1. ಸಮೂಹ, ಗುಂಪು, ರಾಶಿ. कलां मात्रामाप्नोति — आप्लृ (व्याप्तौ) "अण्" (३-१-२)। "क्रियाकलापैरिदमेव योगिनः श्रद्धान्विताः साधु यजन्ति सिद्धये" भाग० ४-२४-६२। 2. ನವಿಲಿನ ಪುಕ್ಕ. "पक्षस्य-तावद्बहुचन्द्रकोऽपि कलापिनां येन जितः कलापः" नैष० ७-२०। 3. ಭೂಷಣ, ಒಡವೆ. "कण्ठस्य तस्याः स्तन-बन्धुरस्य मुक्ताकलापस्य च निस्तलस्य" कुमा० १-४२। 4. ಡಾಬು, ಒಡ್ಯಾಣ. 5. ಚಂದ್ರ. 6. ಜಾಣ, ಬುದ್ಧಿವಂತ. 7. ಕಾತಂತ್ರವೆಂಬ ಒಂದು ವ್ಯಾಕರಣ. 8. ಬತ್ತಳಿಕೆ, ಬಾಣಗಳನ್ನಿಡುವ ಚರ್ಮದ ಚೀಲ. "कलापः संहतौ बर्हे काञ्च्यां भूषणतूणयोः। चन्द्रे विदग्धे व्याकरणभेदेऽपि कथ्यते बुधैः" मेदि०। 9. ಒಂದು ಗ್ರಾಮ, ಒಂದು ಹಳ್ಳಿ. "देवापिर्योगमास्थाय कलापग्राममास्थितः। सोम-वंशे कलौ नष्टे कृतादौ स्थापयिष्यति" भाग० ९-१२-१३। 10. ಧನುಸ್ಸು, ಬಿಲ್ಲು, ಅಂಬು. 11. ಬಾಣ, ಶರ. 12. ಆನೆಯ ಕತ್ತಿನ ಹಗ್ಗ.

कलापक ಕಲಾಪಕ (पु०) 1, "कलाप" ಪದದ ಅರ್ಥ. कलाप स्वार्थे "कन्"। 2. ಏಕಕರ್ತೃಕ್ರಿಯಾತ್ಮಕವಾಗಿ ಒಂದೇ (ಅನ್ವಯವುಳ್ಳ) ವಾಕ್ಯವಾಗಿರುವ ನಾಲ್ಕು ಶ್ಲೋಕಗಳು. "द्वाभ्यां युग्ममिति प्रोक्तं त्रिभिः श्लोकैर्विशेषकम्। कलापकं चतुर्भिः स्यात् तदूर्ध्वं कुलकं मतम्"। 3. ನವಿಲುಗಳು ಪುಕ್ಕವನ್ನು ಬಿಚ್ಚುವ ಕಾಲದಲ್ಲಿ ಕೊಡಬೇಕಾದ ಸಾಲ. यस्मिन् काले मयूराः कलापिनो भवन्ति स कलापी तत्र देयं ऋणम् "वुन्" (४-३-४८)।

कलापद्वीप ಕಲಾಪದ್ವೀಪ (पु०) "ಕಲಾಪ" ವೆಂಬ ಒಂದು ಗ್ರಾಮ. ಇದು ಹಿಮವತ್ಪರ್ವತಕ್ಕಿಂತಲೂ ಉತ್ತರದಲ್ಲಿರುವುದು. "सत्यभामा तथैवान्या देव्यः कृष्णस्य संमताः। वनं प्रविविशू राजन् तपसे कृतनिश्चयाः। फलमूलादिभोजिन्यो हरिध्यानैकतत्पराः। हिमवन्तम-तिक्रम्य कलापग्राममाविशन्" भा० मौसल० ७।

कलापिन् ಕಲಾಪಿನ್ (पु०) 1. ಮಯೂರ, ನವಿಲು. कलापोऽस्यास्ति "इनिः" (५-२-११५)। "ननृतुश्च वारिधरधीरवारणध्वनिहृष्टकूजितकलाः कलापिनः" माघ० १३-५। 2. ಆಲದಮರ. 3. ಕೋಗಿಲೆ. कलस्यापी — आप्लृ (व्याप्तौ) "णिनिः" (३-१-१३४)। 4. ನವಿಲುಗಳು ಪುಕ್ಕವನ್ನು ಬಿಚ್ಚುವಕಾಲ. (वि०) 5. ಬಾಣಗಳಿಂದ ತುಂಬಿದ ಬತ್ತಳಿಕೆಯನ್ನು ಧರಿಸಿರುವ. स्त्रियाम् "ङीप्" (४-१-५)। **कलापिनी** ಕಲಾಪಿನೀ.

कलापिनी ಕಲಾಪಿನೀ (स्त्री०) 1. ರಾತ್ರಿ. कलापः चन्द्रोऽस्त्यस्याम् "इनिः" (५-२-११५)। "ङीप्" (४-१-५)। 2. ನಾಗರಮುಸ್ತೆ. 3. ಹೆಣ್ಣು ನವಿಲು.

कलापूर्ण ಕಲಾಪೂರ್ಣ (पु०) 1. ಹುಣ್ಣಿಮೆಯ ಚಂದ್ರ. कलाभिः षोडशकलाभिः पूर्णः। (वि०) 2. ಕುಶಲ ವಿದ್ಯೆಯಿಂದ ತುಂಬಿದ, ಸಕಲ ಕಲೆಗಳಲ್ಲಿಯೂ ನಿಪುಣನಾದ. "सदा भवान् फाल्गुनस्य गुणानस्मासु कत्थसे। न चार्जुनः कलापूर्णः मम दुर्योधनस्य वा" भा० विरा० ४०-२९।

कलाभृत् ಕಲಾಭೃತ್ (पु०) 1. ಚಂದ್ರ. 2. ಶಿಲ್ಪಿ, ಕಲೆಗಾರ, ಕಲಾವಿದ, ಕಲಾಭಿಜ್ಞ. कलां बिभर्ति—डु भृञ् (धारणपोषणयोः) "क्विप्" (३-२-६१)। "दशाब्दाख्यं पौरसख्यं पञ्चाब्दाख्यं कलाभृताम्" मनु० २-१३४।

कलाय ಕಲಾಯ (पु०) ನೆಲಗಡಲೆ ಗಿಡ. कलामयते — अय (गतौ) "अण्" (३-२-१)। "विकसत्कलाय-कुसुमासितद्युतेरलघूद्वपाण्डु जगतामधीशितुः" माघ० १३-२१।

कलालाप ಕಲಾಲಾಪ (पु०) ಭ್ರಮರ, ದುಂಬಿ. कलमाल-पति—आ+लप (व्यक्तायां वाचि) "अण्" (३-२-१)।

कलावत् ಕಲಾವತ್ (पु०) 1. ಚಂದ್ರ. कलाः सन्त्यस्मिन् "मतुप्" (५-२-९४)। "कला च सा कान्तिमती कलावतः त्वमस्य लोकस्य च नेत्रकौमुदी" कुमा० ५-७१। (वि०) 2. ಕಲಾವಿದ, ಗೀತ ನೃತ್ಯ ಮುಂತಾದ ಕಲೆಗಳನ್ನು ಬಲ್ಲವನು. स्त्रियाम् "ङीप्" (४-१-६)। **-वती** -ವತೀ.

कलावती ಕಲಾವತೀ (स्त्री०) 1. ತುಂಬುರುವಿನ ಪತ್ನಿ. कलाः गीतरागादयः सन्त्यस्याम्" "मतुप्" (५-२-९४)। "ङीप्" (४-१-६)। "विश्वावसोस्तु बृहती तुम्बुरोस्तु कलावती। महती नारदस्य स्यात् सरस्वत्यास्तु कच्छपी"। 2. ದ್ರುಮಿಲರಾಜನ ಮಗಳು. 3. ರಾಧೆಯ ತಾಯಿ, ವೃಷಭಾನುವಿನ ಪತ್ನಿ. 4. ಗಂಗೆ.

कलाविक **ಕಲಾವಿಕ** (पु०) ಕುಕ್ಕುಟ, ಕೋಳಿ. कलेन सम्यक् विकायति—आ+वि+कै (शब्दे) "कः" (३-१-१३६)। "कुक्कुटस्तु विवृत्ताक्षो रात्रिवेदी कलाविकः" त्रिकाण्ड०। स्त्रियाम् जाति० "ङीष्" (४-१-६३)। **कलाविकी** **ಕಲಾವಿಕೀ**.

कलाविद् **ಕಲಾವಿದ್** (वि०) ಕಲೆಗಳನ್ನು ಅರಿತವನು, ಶಿಲ್ಪವಿದ್ಯೆಗಳನ್ನು ಬಲ್ಲವನು. कलाः वेत्ति—विद (ज्ञाने) "क्विप्" (३-२-६१)।

कलाहक **ಕಲಾಹಕ** (पु०) ಕಹಳೆಯೆಂಬ ಒಂದು ವಾದ್ಯ. कलमाहन्ति — आ + हन (हिंसागत्योः) "क्विप्"। संज्ञायां "कन्"।

कलि **ಕಲಿ** (पु०) 1. ಕಲಿಯುಗ, ಚತುರ್ಯುಗಗಳಲ್ಲಿ ನಾಲ್ಕನೆಯ ಯುಗ. कलयति पापेन जडयति कलुषितं करोति — कल (गतौ संख्याने च) "इः" (उ० ४-१३८)।

कलियुगमानः ಕೃತ ತ್ರೇತಾ ದ್ವಾಪರ ಮತ್ತು ಕಲಿಗಳೆಂಬ ನಾಲ್ಕುಯುಗಗಳ ಮಾನವು :

ದೇವವರ್ಷಗಳು		ಮಾನುಷವರ್ಷಗಳು
12,000		43,20,000
4,800	ಕೃತಯುಗ ...	17,28,000
3,600	ತ್ರೇತಾಯುಗ ...	12,96,000
2,400	ದ್ವಾಪರಯುಗ ...	8,64,000
1,200	ಕಲಿಯುಗ ...	4,32,000
12,000		43,20,000

ಈ ಯುಗಮಾನಗಳ ಆರನೆಯ ಒಂದು ಭಾಗವು (ಯುಗಗಳ ಆದ್ಯಂತಗಳಲ್ಲಿ) ಸಂಧ್ಯಾ ಸಂಧ್ಯಾಂಶಗಳು. ಈ ಆರನೆಯ ಒಂದು ಭಾಗವನ್ನು ಕಳೆದರೆ ಕೃತಯುಗ 4,000; ತ್ರೇತಾಯುಗ 3,000; ದ್ವಾಪರಯುಗ 2,000; ಕಲಿಯುಗ 1,000 ದೇವ ವರ್ಷಗಳು ಈ ರೀತಿ ಚತುರ್ಯುಗಮಾನವಾಗುವುದು.

ಕೃತಯುಗದಲ್ಲಿ ಧರ್ಮವು ಸಂಪೂರ್ಣವಾಗಿರುವುದರಿಂದ ಧರ್ಮಪುರುಷನ ನಾಲ್ಕು ಪಾದಗಳೂ ಭೂಮಿಯ ಮೇಲಿರುವುವು. ತ್ರೇತಾಯುಗದಲ್ಲಿ ಮೂರು ಭಾಗ ಧರ್ಮ ಒಂದು ಭಾಗ ಅಧರ್ಮವಿರುವುದರಿಂದ ಧರ್ಮಪುರುಷನ ಒಂದು ಪಾದವು ಮೇಲಕ್ಕೆ ಏಳುವುದು. ದ್ವಾಪರಯುಗದಲ್ಲಿ ಎರಡು ಭಾಗ ಅಧರ್ಮವಿರುವುದರಿಂದ ಎರಡು ಪಾದಗಳು ಮೇಲಕ್ಕೆ ಏಳುವುವು. ಕಲಿಯುಗದಲ್ಲಿ ಮೂರು ಭಾಗ ಅಧರ್ಮ ಒಂದು ಭಾಗ ಧರ್ಮ. ಇದರಿಂದ ಮೂರು ಪಾದಗಳು ಮೇಲಕ್ಕೆ ಹೋಗುವುವು. ಕಲಿಯುಗದ ಕೊನೆಯಲ್ಲಿ ಅಧರ್ಮಭೂಯಿಷ್ಠವಾಗುವುದರಿಂದ ಕೊನೆಗೆ ಆ ಒಂದು ಪಾದವೂ ಮೇಲಕ್ಕೆ ಹೋಗುವುದು. ಇದರಿಂದ ಯುಗಮಾನವು ಒಂದೊಂದು ಯುಗಕ್ಕೂ ನಾಲ್ಕನೆಯ ಒಂದು ಭಾಗದಷ್ಟು ಕಡಮೆಯಾಗುವುದು. "तद्द्वादशसहस्राणि चतुर्युगमुदाहृतम्। सूर्याब्दसंख्यया द्वित्रिसागरैरयुताहतैः। सन्ध्यासन्ध्यांशसहितं विज्ञेयं तच्चतुर्युगम्। कृतादीनां व्यवस्थेयं धर्मपादव्यवस्थया" सू०सि० १-१५, १६। ಇಂತಹ ಅಧರ್ಮಭೂಯಿಷ್ಠವಾದ ಈ ಕಲಿಯುಗದಲ್ಲಿ ಧರ್ಮಹ್ರಾಸ, ಜನರ ದುಃಸ್ವಭಾವ, ಹಿಂಸಾಕೃತ್ಯ ಮುಂತಾದುವು ಶ್ರೀಮದ್ಭಾಗವತ, ಮಹಾಭಾರತ ಮುಂತಾದುವುಗಳಲ್ಲಿ ಈ ರೀತಿ ಹೇಳಲ್ಪಟ್ಟಿವೆ:—ಕಲಿಯುಗದ ಪ್ರಾರಂಭದಲ್ಲಿಯೇ ದಿನ ದಿನಕ್ಕೂ ಧರ್ಮವು ಕಡಮೆಯಾಗಿ ಅಧರ್ಮವು ಬೆಳೆಯುತ್ತಾ ಬಂದಂತೆಲ್ಲಾ ಭೂಮಿಯಲ್ಲಿ ಊರಿದ್ದ ಧರ್ಮಪುರುಷನ ಒಂದು ಕಾಲೂ ಮೇಲಕ್ಕೆ ಹೋಗುತ್ತಾ ಬಂದು ಯುಗಾಂತ್ಯದಲ್ಲಿ ಅಧರ್ಮವೂ ಹಿಂಸಾಕೃತ್ಯಗಳೂ, ಅನ್ಯಾಯವೂ ಅಧಿಕವಾಗುತ್ತ ಬರುವುವು. ಕಲಿ ಮಹಿಮೆಯಿಂದ ಜನರಲ್ಲಿ ಧರ್ಮ, ಸತ್ಯ, ಕ್ಷಮೆ, ದಯೆ, ಶೌಚ, ಆಚಾರವ್ಯವಹಾರಗಳು, ಆಯುಃಪ್ರಮಾಣ, ದೈಹಿಕ ಶಕ್ತಿ, ಸ್ಮೃತಿಶಕ್ತಿ ಇವೆಲ್ಲಾ ನಶಿಸುತ್ತಾ ಬರುವುವು. ಧನವೊಂದೇ ಪ್ರಧಾನವಾಗಿ ಅದರಿಂದಲೇ ಮನುಷ್ಯನಿಗೆ ವಂಶ, ಆಚಾರ, ಗುಣ, ಶೀಲ ಮುಂತಾದುವುಗಳ ಮೇಲ್ಮೆಯುಂಟಾಗುವುದು. ಧರ್ಮ ಮತ್ತು ನ್ಯಾಯಗಳ ವ್ಯವಸ್ಥೆಗೆ ಧನಬಲವೇ ಪ್ರಧಾನವಾಗುವುದು. ದಾಂಪತ್ಯಸಿದ್ಧಿಗೆ ಪರಸ್ಪರ ಪ್ರೀತಿಯೇ ಕಾರಣವೇ ಹೊರತು ವಂಶ, ವರ್ತನೆ ಮುಂತಾದುವುಗಳ ವಿಮರ್ಶೆಯಿರುವುದಿಲ್ಲ. ಸುರತ (ಸಂಭೋಗ) ವೊಂದೇ ಸ್ತ್ರೀತ್ವ ಮತ್ತು ಪುರುಷತ್ವ ಪ್ರಕಾಶಕವಾಗುವುದು. ದೇಹದಲ್ಲಿ ದಾರವೊಂದು ಮಾತ್ರ ಬ್ರಾಹ್ಮಣತ್ವಕ್ಕೆ ಗುರುತಾಗಿ ಉಳಿಯುವುದು. ಮತ್ತಾವ ಬ್ರಾಹ್ಮಣ ಧರ್ಮವೂ ಇರಲಾರದು. ಆಶ್ರಮಧರ್ಮಗಳಾವುವೂ ಇಲ್ಲದೆ ತ್ರಿದಂಡ ಮುಂತಾದುವು ಮಾತ್ರ ಆಶ್ರಮಲಕ್ಷಣವಾಗಿ ಉಳಿಯುವುವು. ವ್ಯಾಪಾರದಲ್ಲಿ ದ್ರೋಹವೇ ಮುಖ್ಯವಾಗುವುದು. ದಾರಿದ್ರ್ಯದೋಷದಿಂದ ಬಡವನ ವಿಷಯದಲ್ಲಿ ನ್ಯಾಯವೂ ದುರ್ಬಲವಾಗುವುದು. ಜ್ಞಾನವು ಮಾಯವಾಗಿ ಬಾಯಿಗೆ ಬಂದಂತೆ ಮಾತನಾಡುವುದೇ ಪಾಂಡಿತ್ಯ ಪ್ರದರ್ಶನವಾಗುವುದು. ಮನುಷ್ಯನು ದಾರಿದ್ರ್ಯದೋಷದಿಂದ ದುರ್ಜನನೆನಿಸಿಕೊಳ್ಳುವನೇ ಹೊರತು ಅವನ ದುರ್ಗುಣದಿಂದಲ್ಲ. ಶಾಸ್ತ್ರವಿಧಿಗಳಾವುವೂ ಇಲ್ಲದೆ ಕೇವಲ ಸ್ವೀಕಾರದಿಂದ ವಿವಾಹಸಿದ್ಧಿಯಾಗುವುದು. ಮೈಯ ಕೊಳೆ

ಹೋಗಲು ಮಾತ್ರ ಸ್ನಾನವೇ ಹೊರತು ಪುಣ್ಯತೀರ್ಥಗಳಲ್ಲಿ ಸ್ನಾನವಿಲ್ಲ. ಕುಟುಂಬಭರಣವೊಂದೇ ಮನುಷ್ಯನಿಗೆ ದೊಡ್ಡ ಸಾಧನೆಯೇ ಹೊರತು ಮತ್ತಾವ ಪುರುಷಾರ್ಥಸಾಧನೆಯಿಲ್ಲ. ಕೀರ್ತಿಗಳಿಸಲು ದಾನ ಧರ್ಮಗಳೇ ಹೊರತು ಪಾರಲೌಕಿಕ ಸಾಧನೆಗಲ್ಲ. ಈ ರೀತಿ ಭೂಮಂಡಲವೆಲ್ಲಾ ದುಷ್ಕೃತ್ಯಗಳಿಂದ ತುಂಬಿ ವರ್ಣಾಶ್ರಮವೆಲ್ಲಾ ನಶಿಸಿಹೋಗಿ ಬಲಶಾಲಿಯಾದವನೇ ರಾಜನಾಗುವನು. ಈ ರೀತಿ ರಾಜನಾದವನು ಲುಬ್ಧನೂ, ನಿರ್ದಯನೂ, ಚೌರ್ಯಧರ್ಮವುಳ್ಳವನೂ ಆಗಿದ್ದು ಜನರ ಧನಕನಕಾದಿಗಳನ್ನು ಬಲಾತ್ಕಾರದಿಂದ ಅಪಹರಿಸುವುದರಿಂದ ಪ್ರಜೆಗಳೆಲ್ಲರೂ ಈ ದುಷ್ಟರಾಜರ ಬಾಧೆಯನ್ನು ತಪ್ಪಿಸಲಾರದೆ ಸರ್ವಸ್ವವನ್ನೂ ಬಿಟ್ಟು ಕೊಟ್ಟು ದೇಶಭ್ರಷ್ಟರಾಗಿ ಓಡಿಹೋಗಿ ಕಾಡುಪಾಲಾಗಿ ಸಕಾಲದಲ್ಲಿ ಆಹಾರಕ್ಕೆ ಗತಿಯಿಲ್ಲದೆ ಕಾಡಿನಲ್ಲಿ ಗೆಡ್ಡೆ ಗೆಣಸುಗಳನ್ನು ತಿಂದು ನಾನಾರೋಗಪೀಡಿತರಾಗಿ ಸಾಯುವರು. ಅನಾವೃಷ್ಟಿಯಿಂದ ಕಲವು ವೇಳೆ ಈ ಆಹಾರಗಳೂ ದೊರಕದೆ ಹಸಿವುಬಾಯಾರಿಕೆಗಳಿಂದಲೂ ಬಿಸಿಲಿನ ಬಾಧೆಯಿಂದಲೂ ಪ್ರಾಣಬಿಡುವರು. ಕಲಿಯುಗಾಂತ್ಯದಲ್ಲಿ ಮನುಷ್ಯನ ಆಯುಃಪ್ರಮಾಣವು ಪರಮಾವಧಿ ಹದಿನಾರು, ಇಪ್ಪತ್ತು ಅಥವಾ ಮೂವತ್ತು ವರ್ಷಗಳು. ದಸ್ಯುಧರ್ಮವುಳ್ಳ ಈ ರಾಜರಿಗೆ ತಕ್ಕಂತೆಯೇ ಪ್ರಜೆಗಳೂ ಚೌರ್ಯ, ಅನೃತ, ದ್ರೋಹ, ಹಿಂಸೆ ಮುಂತಾದುವುಗಳಲ್ಲಿ ನಿರತರಾಗಿ ಜೀವಿಸುವರು. ವರ್ಣಾಶ್ರಮಧರ್ಮಗಳೆಲ್ಲವೂ ನಾಶವಾಗಿ ಭೂಮಿಯೆಲ್ಲಾ ಮ್ಲೇಚ್ಛಪ್ರಾಯವಾಗುವುದು. ಮೈಥುನ ಮಾತ್ರಸುಖವುಳ್ಳ ಗೃಹಸ್ಥಾಶ್ರಮವೇ ಪ್ರಧಾನವಾದ ಆಶ್ರಮವಾಗುವುದು. ಧಾನ್ಯವೆಲ್ಲಾ ಅಣುಪ್ರಾಯವಾಗುವುದು. ಸಸ್ಯವೆಲ್ಲವೂ ಪ್ರಮಾಣದಲ್ಲಿಯೂ ಅತ್ಯಲ್ಪವಾಗಿ ಅಲ್ಪಫಲವನ್ನು ಕೊಡುವುವು. ಮೇಘದಲ್ಲಿ ಮಿಂಚಿನ ಹೊರಳಾಟವೇ ಹೊರತು ಮಳೆಯೇ ಇಲ್ಲವಾಗುವುದು. ಈ ರೀತಿ ಧರ್ಮಕ್ಕೆ ಸಂಪೂರ್ಣ ಚ್ಯುತಿಯುಂಟಾಗಿ ಅಧರ್ಮವು ಅತ್ಯುಚ್ಚದಶೆಯನ್ನು ಮುಟ್ಟಿದಾಗ ಪರಮಾತ್ಮನು ಧರ್ಮರಕ್ಷಣೆಗಾಗಿ ಶಂಭಳವೆಂಬ ಒಂದು ಗ್ರಾಮದಲ್ಲಿ ವಿಷ್ಣುಯಶನೆಂಬ ಬ್ರಾಹ್ಮಣನೊಬ್ಬನ ಮನೆಯಲ್ಲಿ ಕಲ್ಕಿಯೆಂಬ ಅಭಿಧಾನದಿಂದ ಅವತರಿಸಿ ಶೌರ್ಯವೀರ್ಯಸ್ಥೈರ್ಯಗಳಿಂದ ಪರಿಶೋಭಿಸುತ್ತ ಅತಿ ವೇಗಶಾಲಿಯಾದ "ದೇವದತ್ತ" ವೆಂಬ ಅಶ್ವವನ್ನೇರಿ ದುಷ್ಟನಿಗ್ರಹ ಶಿಷ್ಟ ಪರಿಪಾಲನೆಗಾಗಿ ಖಡ್ಗವೊಂದನ್ನು ಧರಿಸಿ ರಾಜವೇಷದಿಂದ ದಸ್ಯುಧರ್ಮಿಗಳಾದ ದುಷ್ಟರನ್ನೆಲ್ಲಾ ಕೋಟಿಗಟ್ಟಲೆ ಸಂಹರಿಸುತ್ತಾ ಬಂದಾಗ ಪ್ರಜೆಗಳ ಮನಸ್ಸಿನಲ್ಲಿ ನೆಮ್ಮದಿ ಮೂಡಲು ಆರಂಭವಾಗುವುದು. ಕಲ್ಕಿರೂಪಿಯಾದ ಆ ಪರಮಾತ್ಮನ

ದೇಹದ ಗಂಧದ ವಾಸನೆಯಿಂದ ಎಲ್ಲರ ಮನಸ್ಸಿನಲ್ಲಿಯೂ ಕಲಿದೋಷವು ನಿವೃತ್ತಿಯಾಗಿ ಜನರಿಗೆ ವೈರಾಗ್ಯವು ಹುಟ್ಟಿ (ಕಲ್ಕಿಯ ಅವತಾರವಾದಕೂಡಲೆ) ಕೃತಯುಗವಾಗಿ ಬದಲಾವಣೆ ಹೊಂದುವುದು. ಪ್ರಜೆಗಳೆಲ್ಲರೂ ಸತ್ತ್ವಗುಣ ಪ್ರಚುರರಾಗುವರು. ಸೂರ್ಯಚಂದ್ರಬೃಹಸ್ಪತಿಗಳು ಪುಷ್ಯ ನಕ್ಷತ್ರದಲ್ಲಿ ಏಕರಾಶಿಯಲ್ಲಿ ಸೇರಿದಾಗ ಕೃತಯುಗಾರಂಭವಾಗುವುದು. "ततश्चानुदिनं धर्मः सत्यं शौचं क्षमा दया। कालेन बलिना राजन् नङ्क्ष्यत्यायुर्बलं स्मृतिः। वित्तमेव कलौ नृणां जन्माचारगुणोदयः। धर्मन्याय-व्यवस्थायां कारणं बलमेव हि। दाम्पत्येऽभिरुचिर्हेतु-र्मायैव व्यावहारिके। .....

.....

वासुदेवे भगवति सत्त्वमूर्तौ हृदि स्थिते। यदावतीर्णो भगवान् कल्किर्धर्मपतिर्हरिः। कृतं भविष्यति तदा प्रजासूतिश्च सात्त्विकी। यदा चन्द्रश्च सूर्यश्च तथा तिष्य-बृहस्पती। एकराशौ समेष्यन्ति तदा भवति तत्कृतम्" ಭಾಗ० ೧೨-೨। "कृते चतुष्पात्सकलो निर्व्याजोपाधि-वर्जितः। वृषः प्रतिष्ठितो धर्मः मनुष्ये भरतर्षभ। अधर्म-पादविद्धस्तु त्रिभिरंशैः प्रतिष्ठितः। त्रेतायां द्वापरेऽर्धेन व्यामिश्रो धर्म उच्यते। त्रिभिरंशैरधर्मस्तु लोकानाक्रम्य तिष्ठति। तामसं युगमाश्रित्य तदा भरतसत्तम। चतुर्थां-शेन धर्मस्तु मनुष्यानुपतिष्ठति। आयुर्वीर्यं मनो बुद्धिर्बलं तेजश्च पाण्डव। मनुष्याणामनुयुगं ह्रसन्तीति निबोध मे। ब्राह्मणाः क्षत्रिया वैश्याः शूद्राश्चैव युधिष्ठिर। व्याजेनैर्धर्मं चरिष्यन्ति धर्मवैतंसिका नराः। सत्यं संक्षेप्स्यते लोके नरैः पण्डितमानिभिः। सत्यहान्या ततस्तेषामायुरल्पं भविष्यति। .....

.....। ईदृशो भविता लोको युगान्ते पर्युपस्थिते। वस्त्राणां प्रवरा शाणी धान्यानां कोरदूषकाः।

.....

.....। पिता पुत्रस्य भोक्ता च पितुः पुत्रस्तथैव च। अतिक्रान्तानि भोज्यानि भविष्यन्ति युगक्षये। परमायुश्च भविता तदा वर्षाणि षोडश। ततः प्राणान् विमोक्ष्यन्ति युगान्ते समुपस्थिते। पञ्चमे वाऽथ षष्ठे वा वर्षे कन्या प्रसूयते। सप्तवर्षाष्टवर्षाश्च प्रजा-स्यन्ति नरास्तथा। .....

.....। अकालवर्षी भगवान् भविष्यति सहस्रदृक्। सस्यानि च न रोक्ष्यन्ति युगान्ते पर्युपस्थिते। पुत्राश्च मातापितरौ हनिष्यन्ति युगक्षये। सूदयिष्यन्ति

च पतीन् स्त्रियः पुत्रानपाश्रिताः। पानीयं भोजनं चापि याचमानांस्तदाध्वगाः। न लप्स्यन्ते निवासान् वा निरस्ताः पथि शेरते।.....
.....
.....। ततः कालान्तरेऽन्यस्मिन् पुनर्लोकविवृद्धये। भविष्यन्ति पुनर्देवमनुकूलं यदृच्छया। कल्की विष्णुयशा नाम द्विजः कालप्रचोदितः। संभूतः शम्भलग्रामे ब्राह्मणावसथे शुभे। मनसा तस्य सर्वाणि वाहनान्यायुधानि च। उपस्थास्यन्ति योधाश्च शस्त्राणि कवचानि च। स धर्मविजयी राजा चक्रवर्ती भविष्यति। उत्सादयिष्यति तदा सर्वम्लेच्छगणान् द्विजः" भा० वन० १९३।

ಕಲಿಯುಗದಲ್ಲಿ ಸಾಮಾನ್ಯವಾಗಿ ಸೇವಿಸಲ್ಪಡಬೇಕಾದ ಧರ್ಮಗಳು:

ಯುಗಪ್ರಮಾಣವು ಕಡಮೆಯಾದಂತೆಲ್ಲಾ ಧರ್ಮಗಳು ಒಂದೊಂದು ಯುಗಕ್ಕೂ ಬೇರೆ ಬೇರೆಯಾಗುವುವು. ಕೃತ ಯುಗದಲ್ಲಿ ತಪಸ್ಸು, ತ್ರೇತಾಯುಗದಲ್ಲಿ ಆತ್ಮಜ್ಞಾನ, ದ್ವಾಪರಯುಗದಲ್ಲಿ ಯಜ್ಞ, ಕಲಿಯುಗದಲ್ಲಿ ದಾನ ಇವು ಮುಖ್ಯವಾದ ಧರ್ಮಗಳು. "अन्ये कृतयुगे धर्मास्त्रेतायां द्वापरे परे। अन्यं कलियुगे नृणां युगह्रासानुरूपतः। तपः परं कृतयुगे त्रेतायां ज्ञानमुच्यते। द्वापरे यज्ञमेवाहुः दानमेकं कलौ युगे" मनु० १-८५, ८६। ಕೃತಯುಗದಲ್ಲಿ ಪ್ರಾಣಗಳು ಅಸ್ಥಿಗತವಾಗಿರುವುವು. ತ್ರೇತಾಯುಗದಲ್ಲಿ ಮಾಂಸವನ್ನಾಶ್ರಯಿಸಿರುವುವು. ಮಾಂಸವಿರುವವರೆಗೂ ಬದುಕಿರುವನು. ದ್ವಾಪರಯುಗದಲ್ಲಿ ಪ್ರಾಣಗಳು ರಕ್ತಗತವಾಗಿರುವುವು. ಕಲಿಯುಗದಲ್ಲಿ ಅನ್ನಗತವಾಗಿರುವುವು. ಕೇವಲ ಅನ್ನಾಹಾರದಿಂದಲೇ ಮನುಷ್ಯನು ಬದುಕಿರಬೇಕಾಗುವುದು. "कृते चास्थिगताः प्राणाः त्रेतायां मांसमास्थिताः। द्वापरे रुधिरं यावत् कलावन्नादिषु स्थिताः" परा०।

ಕಲಿಯುಗದಲ್ಲಿ ಅಧರ್ಮದಿಂದ ಧರ್ಮಕ್ಕೂ ಅನೃತದಿಂದ ಸತ್ಯಕ್ಕೂ ಭೃತ್ಯರಿಂದ ರಾಜರಿಗೂ ಸ್ತ್ರೀಯರಿಂದ ಪುರುಷರಿಗೂ ಅಪಜಯವುಂಟಾಗುವುದು. "धर्मो जितो ह्यधर्मेण जितः सत्योऽनृतेन तु। जिता भृत्यैस्तु राजानः स्त्रीभिश्च पुरुषा जिताः" परा०।

ಕಲಿಯುಗದಲ್ಲಿ ಉಂಟಾಗುವ ಧರ್ಮಹ್ರಾಸಗಳು: "सीदन्ति चाग्निहोत्राणि गुरुपूजा प्रणश्यति। कुमार्यश्च प्रसूयन्ते तस्मिन् कलियुगे सदा" परा०।

ಕಲಿಯುಗದಲ್ಲಿ ವರ್ಜ್ಯ (ತ್ಯಜಿಸಬೇಕಾದ) ಧರ್ಮಗಳು: ಸಮುದ್ರಯಾನ, ಕಮಂಡಲುಗ್ರಹಣ (ಸಂನ್ಯಾಸ), ದ್ವಿಜರಿಗೆ ಅಸವರ್ಣಸ್ತ್ರೀಯೊಡನೆ ವಿವಾಹ, ದೇವರ (ಭಾವಮೈದುನ) ನಿಂದ ಸುತೋತ್ಪತ್ತಿ, ಮಧುಪರ್ಕದಲ್ಲಿ ಪಶುಮಾಂಸ, ಶ್ರಾದ್ಧದಲ್ಲಿ ಮಾಂಸಭಕ್ಷಣ, ವಾನಪ್ರಸ್ಥಾಶ್ರಮ, ಅಕ್ಷತಕನ್ಯೆಯ ಪುನರ್ವಿವಾಹ, ಬಹಳ ಕಾಲದವರೆಗೂ ಬ್ರಹ್ಮಚರ್ಯ, ಮನುಷ್ಯಮೇಧ, ಅಶ್ವಮೇಧ, ಗೋಮೇಧ, ಮಹಾಪ್ರಸ್ಥಾನ ಇವಲ್ಲವೂ ಕಲಿಯುಗದಲ್ಲಿ ವರ್ಜ್ಯಗಳು. "समुद्रयात्रास्वीकारः कमण्डलु विधारणम्। द्विजानामसवर्णासु कन्यासूपयमस्तथा। देवराच्च सुतोत्पत्तिर्मधुपर्के पशोर्वधः।.....
.....
.....। इमान् धर्मान् कलियुगे वर्ज्यानाहुर्मनीषिणः" निर्णयसि०। "'अग्निहोत्रं गवालम्भं संन्यासं पलपैतृकम्। देवराच्च सुतोत्पत्तिं कलौ पञ्च विवर्जयेत्"।

ಕೃತಯುಗದಲ್ಲಿ ಧ್ಯಾನದಿಂದಲೂ ತ್ರೇತಾಯುಗದಲ್ಲಿ ಯಜ್ಞದಿಂದಲೂ ದ್ವಾಪರಯುಗದಲ್ಲಿ ಅರ್ಚನೆಯಿಂದಲೂ ಹೊಂದಬಹುದಾದ ಫಲವನ್ನು ಕಲಿಯುಗದಲ್ಲಿ ಕೇಶವ ನಾಮಸಂಕೀರ್ತನದಿಂದ ಹೊಂದಬಹುದು. "ध्यायन् कृते यजन् यज्ञैस्त्रेतायां द्वापरेऽर्चयन्। यदाप्नोति तदाप्नोति कलौ संकीर्त्य केशवम्" विष्णुपु०। ಅಲ್ಪೋಪಾಯದಿಂದ ಮುಕ್ತಿಯನ್ನು ಅಪೇಕ್ಷಿಸುವುದಾದರೆ ಕಲಿಯುಗದಲ್ಲಿ ಗಂಗಾನದಿಯನ್ನಾಶ್ರಯಿಸಬೇಕು. "भक्तिमुक्तिफलप्रेप्सुरल्पोपायेन चेन्नरः। तीर्थान्येवाश्रयेद्विद्वान् कलौ गङ्गां विशेषतः" स्कान्द०। 2. ಕಲಿಯುಗದ ಅಭಿಮಾನಿದೇವತೆ.

ಈ ದೇವತೆಯ ಉತ್ಪತ್ತಿ ಮೊದಲಾದ ವಿವರ: ಚತುರ್ಮುಖನು ಪ್ರಳಯಕಾಲದ ಕೊನೆಯಲ್ಲಿ ತನ್ನ ಪೃಷ್ಠದೇಶದಿಂದ ಮಲಿನವಾಗಿಯೂ ಘೋರರೂಪಿಯಾಗಿಯೂ ಇರುವ ಒಂದು ಪಾತಕವನ್ನು ಸೃಷ್ಟಿಸಿದನು. ಅದೇ ಅಧರ್ಮ. ಈ ಅಧರ್ಮದ ಹೆಂಡತಿ ಮಿಥ್ಯೆ. ಮಿಥ್ಯೆಯ ಮಗ ದಂಭ. ದಂಭನು ತನ್ನ ತಂಗಿಯಾದ ಮಾಯೆಯಲ್ಲಿ ಲೋಭನೆಂಬ ಪುತ್ರನನ್ನೂ ನಿಕೃತಿಯೆಂಬ ಪುತ್ರಿಯನ್ನೂ ಪಡೆಯುವನು. ಇವರಿಬ್ಬರಲ್ಲಿ ಕ್ರೋಧನು ಜನಿಸುವನು. ಕ್ರೋಧನು ತಂಗಿಯಾದ ಹಿಂಸೆಯಲ್ಲಿ ಕಲಿಯೆಂಬ ಮಗನನ್ನು ಪಡೆಯುವನು. ಈ ಕಲಿಯ ಅವತಾರಕ್ರಮವು ಈ ರೀತಿಯಿರುವುದರಿಂದ ಜಗತ್ತಿನಲ್ಲಿ ನಡೆಯುತ್ತಿರುವ ಮತ್ತು ಮುಂದೆ ನಡೆಯಬಹುದಾದ ಅಧರ್ಮ, ಅನ್ಯಾಯ, ಪಾಪಕೃತ್ಯ ಹಿಂಸಾಕೃತ್ಯಗಳಿಗೆಲ್ಲಾ ಈ ಕಲಿಯೇ ಕಾರಣನೆಂದು ಹೇಳಬೇಕಾಗಿಯೇ ಇಲ್ಲ. "प्रलयान्ते जगत्स्रष्टा ब्रह्मा लोकपितामहः। ससर्ज घोरं मलिनं पृष्ठदेशात्स पातकम्।

स चाधर्म इति ख्यातस्तस्य वंशानुकीर्तनात्। श्रवणात्स्मरणाल्लोकः सर्वपापैः प्रमुच्यते। अधर्मस्य प्रिया भार्या मिथ्या मार्जारलोचना। तस्याः पुत्रोऽतितेजस्वी दम्भः परमकोपनः। स मायायां भगिन्यां तु लोभं पुत्रं च कन्यकाम्। निकृतिं जनयामास तयोः क्रोधः सुतोऽभवत्। स हिंसायां भगिन्यां तु जनयामास तं कलिम्" कल्किपु०। ಕಲಿ ಪುರುಷನು ದಮಯಂತಿಯ ಸ್ವಯಂವರಕ್ಕೆಂದು ಹೋಗುತ್ತಿದ್ದಾಗ ಇಂದ್ರನಿಂದ ನಳದಮಯಂತಿಯರ ಸ್ವಯಂವರ ವಿಷಯವನ್ನು ತಿಳಿದು ದೇವತೆಗಳು ಎಷ್ಟು ಹೇಳಿದರೂ ಕೇಳದೆ ನಳನು ದಮಯಂತಿಯೊಡನೆ ಸುಖವಾಗಿರದಂತೆ ಮಾಡುವೆನೆಂದು ಪ್ರತಿಜ್ಞೆ ಮಾಡಿ ನಳಚಕ್ರವರ್ತಿಯ ಶರೀರವನ್ನು ಪ್ರವೇಶಿಸಲು ಸಮಯ ಕಾಯುತ್ತಿದ್ದನು. ಒಂದು ದಿನ ನಳನು ಕಾಲುಗಳನ್ನು ಸರಿಯಾಗಿ ತೊಳೆದುಕೊಳ್ಳದೆ ಸಂಧ್ಯಾವಂದನೆಗೆ ಕುಳಿತಿರಲು ಇವನು ಆ ಕೂಡಲೇ ಅವನ ಶರೀರವನ್ನು ಪ್ರವೇಶಿಸಿ ಪುಷ್ಕರನಲ್ಲಿಗೆ ಹೋಗಿ ನಳನೊಡನೆ ಜೂಜಾಡಿದರೆ ತಾನು ಗೆಲ್ಲಿಸುವೆನೆಂದು ಹೇಳಿ ನಳನನ್ನು ಜೂಜಿನಲ್ಲಿ ಸೋಲಿಸಿದನು. ಸೋತ ನಳನು ರಾಜ್ಯಭ್ರಷ್ಟನಾಗಿ ಪತ್ನಿಯೊಡನೆ ಅರಣ್ಯಕ್ಕೆ ಹೋಗಿ ಅನೇಕ ಕಷ್ಟಗಳನ್ನೂ ಅನುಭವಿಸಬೇಕಾಯಿತು. ಭಾ० ವನ० ೫೮, ೫೯।

ಶ್ರೀಕೃಷ್ಣನ ನಿರ್ಯಾಣಾನಂತರ ಧರ್ಮವೆಲ್ಲಾ ಕ್ಷಯಿಸಿ ಹೋಗುತ್ತಿರಲು ಭೂದೇವಿಯು ಬಹಳ ದುಃಖಾಕ್ರಾಂತೆಯಾಗಿದ್ದಳು. ಇದೇ ಸಮಯ ನೋಡಿ ಕಲಿಪುರುಷನು ಧರ್ಮಪುರುಷನನ್ನು ಕಾಲಿನಿಂದ ಒದೆಯುತ್ತಿರುವಲ್ಲಿ ಪರೀಕ್ಷಿದ್ರಾಜನು ಕಲಿಯನ್ನು ನಿಗ್ರಹಿಸಲು ಆಯುಧವನ್ನು ಎತ್ತಲು ಕಲಿಯು ಪೆದರಿ ಪರೀಕ್ಷಿತ್ತಿನ ಕ್ಷಮೆ ಬೇಡಿ ಆ ದೇಶದಿಂದ ಓಡಿಹೋದನು. ಭಾಗ० ೧-೧೭।

ಇವನ ಹಾವಳಿಯನ್ನು ತಡೆಯಲಾರದೆ ಭೂದೇವಿಯು ಶ್ರೀಮನ್ನಾರಾಯಣನಲ್ಲಿ ಪೂರೈಸಲು ನಾರಾಯಣನು ಕಲ್ಕಿರೂಪದಿಂದ ಅವತರಿಸಿ ಕಲಿಯನ್ನು ನಿಗ್ರಹಿಸುವನು. ಭಾ० ವನ० ೧೪೧। 3. ವಿಭೀತಕವೃಕ್ಷ, ತಾರೆಗಿಡ. ನಳನ ಶರೀರವನ್ನು ಪ್ರವೇಶಿಸಲು ಸಮಯ ಕಾಯುತ್ತಿದ್ದ ಕಲಿಗೆ ಈ ಮರವು ಆಶ್ರಯವಾಗಿದ್ದುದರಿಂದ ಈ ಹೆಸರು. "विभीतकमधिष्ठाय तथाभूतेन तिष्ठता। तेन भीमभुवोऽभीकः स राजर्षिरधर्षि न। तमालम्बनमासाद्य वैदर्भीनिषधेशयोः। कलुषं कलिरन्विष्यन् अवात्सीद्वत्सरान् बहून्" नैष० ೧೨-೨೧೬, ೧೨। 4. ಕಲಹ, ಜಗಳ. "वसतिमुपगतेन धाम्नि तस्याः शठ कलिरेष महांस्त्वयाद्य दत्तः" माघ० ೨-೫೫। 5. ಶೂರ, ಪರಾಕ್ರಮಿ. 6. ಯುದ್ಧ. 7. ಶರ, ಬಾಣ. (स्त्री०) 8. ಮೊಗ್ಗು, ಅರಳದ ಹೂವು. "कलिः स्त्री कलिकायां ना शराजिकलहे युगे" मेदि०। "कलिर्विभीतके शूरे विवादेऽन्ययुगे युधि" हेम०।

कलिका ಕಲಿಕಾ (स्त्री०) 1. ಕೋರಕ, ಮೊಗ್ಗು, ಅರಳದ ಹೂವು. कलिरेव स्वार्थे "कन्"। "मुहुरुपहसितामिवालिनादैर्वितरसि नः कलिकां किमर्थमेनाम्" माघ० ೨-೫೫। "चूतानां चिरनिर्गतापि कलिका बध्नाति न स्वं रजः" शाकु० ६-४। 2. ಬೀಜದ ಮೂಲಭಾಗ.

कलिकार ಕಲಿಕಾರ (पु०) 1. ನಾರದಮಹರ್ಷಿ. कलिं कलहं करोति—ड कृञ् (करणे) "अण्" (३-२-१)। 2. ನದಿಯಲ್ಲಾಡುವ ಕುಕ್ಕುಟಿಯೆಂಬ ಒಂದು ಪಕ್ಷಿ. कलिकामृच्छति—ऋ (गतौ) "अण्" (३-२-१)। स्त्रियाम् जाति० "ङीष्" (४-१-६३)। **–कारी –ಕಾರಿ.** 3. ತಪಸಿಗಿಡ. (वि०) 4. ಕಲಹವನ್ನುಂಟುಮಾಡುವ. 5. ಮೊಗ್ಗನ್ನು ಪಡೆಯುವ. कलिं करोति कलिकां ऋच्छति वा। "ण्वुल्" (३-१-१३३)। **–कारकः –ಕಾರಕಃ.**

कलिकाल ಕಲಿಕಾಲ (पु०) ಕಲಿಪುರುಷನ ಕಾಲ, ಕಲಿಯುಗದ ಕಾಲ.

कलिकुञ्चिका ಕಲಿಕುಂಚಿಕಾ (स्त्री०) ಗಂಡನ ಕಿರಿಯ ಸಹೋದರಿ, ಗಂಡನ ತಂಗಿ. ನಾದಿನಿ.

कलिङ्ग ಕಳಿಂಗ (पु० ब० व०) 1. ಕಳಿಂಗ ದೇಶ. 2. ಕಳಿಂಗ ದೇಶದ ಜನರು. "जगन्नाथात् समारभ्य कृष्णातीरान्तगं प्रिये। कलिङ्गदेशः संप्रोक्तो वाममार्गपरायणः"। "उत्कलादर्शितपथः कलिङ्गाभिमुखो ययौ" रघु० ४-३८। (पु०) 3. ಕೆರೆ ನದಿಗಳ ನೀರಿನೊಳಗೆ ಆಟವಾಡುವ ಕುಕ್ಕುಟಿಯೆಂಬ ಒಂದು ಪಕ್ಷಿ. के मूर्ध्नि लिङ्गमस्य। ಈ ಪಕ್ಷಿಯ ತಲೆಯಮೇಲೆ ಮೊಗ್ಗಿನ ಆಕಾರದ ಪಳದಿಯ ಗುರುತೊಂದಿರುವುದರಿಂದ ಈ ಪೆಸರಾಯಿತು. 4. ತಪಸಿಗಿಡ. (पुन०) 5. ಕೊಡಲಿಗೆಯ ಪಣ್ಣು. (स्त्री०) **कलिङ्गा ಕಳಿಂಗಾ.** 6. ಉತ್ತಮ ಹೆಂಗುಸು. "कलिङ्गः पूतिकरजे धूम्याटे भूम्नि नीवृति। न द्वयोः कौटजफले महिलायां तु योषिति" मेदि०।

कलित ಕಲಿತ (वि०) 1. ತಿಳಿಯಲ್ಪಟ್ಟ. कल (गतौ) "क्तः" (३-२-१०२)। 2. ಅಂಗೀಕರಿಸಲ್ಪಟ್ಟ. "स्वरभेदमुपैतु या कथं कलितानल्पमुखारवा न वा" नैष० २-९८। 3. ಹೇಳಲ್ಪಟ್ಟ. 4. ಮಾಡಲ್ಪಟ್ಟ. "लवङ्गमालाकलितावतंसास्ते नारिकेलान्तरपः पिबन्तः" माघ० ३-८१। 5. ಎಣಿಸಲ್ಪಟ್ಟ. कल (संख्याने) "क्तः"

(३-२-१०२)। 6. ಹೊಂದಲ್ಪಟ್ಟ, ಪಡೆಯಲ್ಪಟ್ಟ. 7. ಒಡಯಲ್ಪಟ್ಟ, ಬೇರ್ಪಡಿಸಲ್ಪಟ್ಟ. 8. ಕಟ್ಟಲ್ಪಟ್ಟ.

कलिद्रुम ಕಲಿದ್ರುಮ (पु०) ವಿಭೀತಕವೃಕ್ಷ, ತಾರೆಗಿಡ. कलेराश्रयः द्रुमः। ನಳಚಕ್ರವರ್ತಿಯ ಶರೀರವನ್ನು ಪ್ರವೇಶಿಸಲು ಸಮಯ ಕಾಯುತ್ತ ಈ ಮರದಲ್ಲಿ ಕಲಿಯು ಕುಳಿತಿದ್ದರಿಂದ ಈ ಹೆಸರು. "कलिद्रुमः परं नासीदासीत्कल्पद्रुमोऽपि सः" नैष० १७-२१३।

कलिन्द ಕಳಿಂದ (पु०) 1. ಒಂದು ಬೆಟ್ಟ. कलिं द्यति—दो (अवखण्डने) "खच्"। मुमागमः। "कलिन्द-गिरिनन्दिनीतटसुरद्रुमालम्बिनी मदीयमतिचुम्बिनी भवतु कापि कादम्बिनी" रसगं०। 2. ತಾರೆಗಿಡ.

कलिन्दकन्या ಕಳಿಂದಕನ್ಯಾ (स्त्री०) ಕಳಿಂದಗಿರಿಯ ಮಗಳು, ಯಮುನಾ ನದಿ. कलिन्दस्य कन्या। "कलिन्द-कन्या मथुरां गतापि गङ्गोर्मिसंसक्तजलेव भाति" रघु० ६-४८। ಇದೇ ಅರ್ಥದಲ್ಲಿ **कलिन्दजा ಕಳಿಂದಜಾ, –तनया –ತನಯಾ, –नन्दिनी ನಂದಿನೀ, –सुता –ಸುತಾ** ಇತ್ಯಾದಿ.

कलिप्रिय ಕಲಿಪ್ರಿಯ (पु०) ಕಲಹವೇ ಪ್ರಿಯವಾಗುಳ್ಳ ನಾರದಮಹರ್ಷಿ. कलिः कलहः प्रियोऽस्य।

कलिमारक ಕಲಿಮಾರಕ (पु०) ತಪಸಿಗಿಡ. कलिं मार-यति—मृङ् (प्राणत्यागे) "ण्वुल्" (३-१-१३३)।

कलियुग ಕಲಿಯುಗ (न०) ಕಲಿರೂಪವಾದ ಒಂದು ಯುಗ, ಕಲಿಪುರುಷನ ಕಾಲ. कलेर्युगम्। [कलियुगद प्रमाण मुंतादुवुगळिगे "अब्द" मत्तु "कलि" पदगळल्लि नोडि]. "अन्ये कृतयुगे धर्मास्त्रेतायां द्वापरेऽपरे। अन्ये कलियुगे नृणां युगह्रासानुसारतः" मनु० १-८५।

कलिल ಕಲಿಲ (न०) 1. ಕಾಲುಷ್ಯ. कल (गतौ संख्याने च) "इलच्" (उ० १-५४)। "यदा ते मोहकलिलं बुद्धिर्व्यतितरिष्यति" गीता २-५२। 2. ದೊಡ್ಡ ರಾಶಿ. (वि०) 3. ಮಿಶ್ರವಾದ, ಬೆರತಿರುವ. "लोकालोकी कलोऽकल्ककलिलौऽलिकुलालकः" माघ० १९-९८।

कलिहारी ಕಲಿಹಾರೀ (स्त्री०) ನೀರುಹಿಪ್ಪಲಿ. कलिं हरति—हृञ् (हरणे) "अण्" (३-२-१)। "ङीष्" (४-१-४१)।

कलुष ಕಲುಷ (पुंस्त्री०) 1. ಮಹಿಷ, ಎಮ್ಮೆ. लुष (हिंसायाम्) "कः" (३-१-१३५)। कस्य जलस्य लुषः घातकः। स्त्रियाम् "ङीष्" (४-१-६३)। **–षी –ಷೀ.** 2. ಶ್ವಪಾಕಿಯಲ್ಲಿ ಕ್ಷತ್ರಿಯನಿಗೆ ಜನಿಸಿದ ಮಗ. "जरन्तः कलुषः पोत्री वीरस्कन्धो रजस्वलः" "श्वपाकी कलुषं सूता कीलुषं घर्घरी मिषम्" वैज०। (न०) 3. ಪಾಪ. 4. ಕೊಳೆ, ಮಲ. 5. ಕೆಸರು. 6. ಬಗ್ಗಡ, ಕಶ್ಮಲದ ನೀರು. कल (संख्याने शब्दे च) "उषच्" (उ० ४-७५)। "ऊतं कलुषमाविलम्" वैज०। 7. ಕೋಪ. (वि०)8. ಪಾಪವುಳ್ಳ. 9. ಸ್ವಚ್ಛವಲ್ಲದ, ಬಗ್ಗಡವಾದ. "लोल-त्वादपहरतां तदङ्गरागं संजज्ञे स कलुष आशयो जलानाम्" माघ० ८-४७। 10. ಕೊಳೆಯಿಂದ ಕೂಡಿದ. 11. ಅಸಮಾಧಾನದಿಂದ ಕೂಡಿದ. 12. ಅಸಮರ್ಥವಾದ. "भावावबोधकलुषा दयितेव रात्रौ निद्रा चिरेण नयनाभिमुखी बभूव" रघु० ५-६४। 13. ನಿಂದಿತವಾದ, ದುಷ್ಟವಾದ. "त्वां प्रत्यकस्मात्कलुषप्रवृत्तावस्त्येव मन्युर्भरताग्रजे मे" रघु० १४-७३।

कलुषता ಕಲುಷತಾ (स्त्री०) 1. ಪಾಪದಿಂದ ಕೂಡಿರುವಿಕೆ. 2. ಕೆಸರಾಗಿರುವಿಕೆ. 3. ಸ್ವಚ್ಛವಾಗಿಲ್ಲದಿರುವಿಕೆ. कलुषस्य भावः "तल्" (५-१-११९)। "त्वः" **कलुषत्वम् ಕಲುಷತ್ವಮ್.**

कलुषमति ಕಲುಷಮತಿ (वि०) 1. ಕೆಟ್ಟ ಮನಸ್ಸುಳ್ಳ, ನೀಚಬುದ್ಧಿಯುಳ್ಳ. 2. ಅಸಮಾಧಾನಗೊಂಡ ಮನಸ್ಸುಳ್ಳ. कलुषा मतिर्यस्य।

कलुषात्मन् ಕಲುಷಾತ್ಮನ್ (वि०) 1. ಕೆಟ್ಟ ಹೃದಯವುಳ್ಳ, ನೀಚ ಮನಸ್ಸುಳ್ಳ. कलुष आत्मा यस्य। 2. ಅಸಮಾಧಾನ ಹೊಂದಿದ, ಕಲಕಿದ ಹೃದಯವುಳ್ಳ.

कलुषित ಕಲುಷಿತ (वि०) 1. ಅಸಮಾಧಾನಗೊಂಡಿರುವ. 2. ಸ್ವಚ್ಛವಾಗಿಲ್ಲದ, ಬಗ್ಗಡವಾಗಿರುವ. 3. ನಿಂದಿತ, ದೂಷಿತ. कलुषोऽस्य सञ्जातः "इतच्" (५-२-३६)।

कलुषीकृत ಕಲುಷೀಕೃತ (वि०) 1. ಕಲಕಲ್ಪಟ್ಟ, ಕೆರಳಿಸಲ್ಪಟ್ಟ. 2. ಅಸಮಾಧಾನಗೊಳಿಸಲ್ಪಟ್ಟ, ಸಿಟ್ಟುಗೊಳಿಸಲ್ಪಟ್ಟ. 3. ಬಗ್ಗಡವಾಗಿ ಮಾಡಲ್ಪಟ್ಟ. अकलुषः कलुषः कृतः "च्विः" (५-४-५०)। दीर्घः (७-४-२६)। "विवर्तयन् मदकलुषीकृते दृशौ कराहतक्षिति-कृतभैरवारवः" माघ० १७-१३।

कलेबर ಕಳೇಬರ (न०) 1. ದೇಹ, ಶರೀರ, ಮೈ. कले शुक्रधातौ वरं श्रेष्ठम्। सप्तम्या "अलुक्" (६-३-९)। "यं यं वापि स्मरन् भावं त्यजत्यन्ते कलेबरम्" गीता। "शरीरे जर्जरीभूते व्याधिग्रस्ते

कलेबरे। औषधं जाह्नवीतोयं वैद्यो नारायणो हरिः"। 2. ಗುಗ್ಗುಳ, ಲೋಬಾನ, ಧೂಪದ ವಾಸನೆಯ ಪುಡಿ.

कल्क कल्क (पुं.नं०) 1. ಕಪಟ, ಛಲ, ಠಕ್ಕು, ಬೂಟಾಟಿಕೆ. 2. ತಾರೆಗಿಡ. 3. ಎಣ್ಣೆ ತುಪ್ಪ ಇವುಗಳ ಗಷ್ಟು. 4. ಕಿವಿಯ ಮಲ, ಗುಗ್ಗೆ. 5. ಪಾಪ. कल्क (शब्दसंख्यानयोः) "कः" (त० ३-४०)। 6. ವಿಷ್ಠೆ, ಮಲ, ಪುರೀಷ, ಅಮೇಧ್ಯ. 7. ಚೂರ್ಣ, ಪುಡಿ. "तां लोध्रकल्केन हृताङ्गतैलामाश्यानकालेयकृताङ्गरागाम्" कुमा० ७-१। (वि०) 8. ಪಾಪಾತ್ಮ, ಪಾಪಿಷ್ಠ. "कल्कोऽस्त्री घृत-तैलादिशेषे दम्भे विभीतके। विट्किट्टयोश्च पापे च त्रिषु पापाशये पुनः" मेदि०।

कल्कन कल्कन (न०) ವಂಚನೆ, ಮೋಸ. कल्क + णिच् भावे "ल्युट्" (३-३-११५)।

कल्कफल कल्कफल (न०) ದಾಳಿಂಬೆ ಹಣ್ಣು. कल्कस्य विभीतकस्य फलमिव फलमस्य।

कल्किन् कल्किन् (पुं०) ಮಹಾವಿಷ್ಣುವಿನ ಹತ್ತನೆಯ ಅವತಾರ, ಕಲ್ಕ್ಯವತಾರ. कल्कोऽस्त्यस्य हार्यंतया "इनिः" (५-२-११५)। [ಕಲಿಯುಗದ ಕೊನೆಯಲ್ಲಿ ಅಧರ್ಮವು ಹೆಚ್ಚಿದಂತೆಲ್ಲಾ ಕಲಿಮಹಾಪುರುಷನ ಅನುಯಾಯಿಗಳಾದವರು ತಾಯಿತಂದೆಗಳನ್ನೂ ಪೀಡಿಸುವರು. ದ್ವಿಜರು ವೇದ ಶೂನ್ಯರಾಗುವರು. ಜನರೆಲ್ಲರೂ ಕ್ರೂರವೃತ್ತಿಯುಳ್ಳವರಾಗುವರು. ಪರಸ್ತ್ರೀಲೋಲುಪರಾಗಿ ಕೇವಲ ಕಾಮಾಸಕ್ತರಾಗಿಯೂ, ಉದರಂಭರಣಪರಾಯಣರಾಗಿಯೂ, ಮಾಂಸ ಭೋಜಿಗಳಾಗಿಯೂ, ಪ್ರಜಾವಿಧ್ವಂಸಕರಾಗಿಯೂ, ಇತರರ ಸ್ವತ್ತನ್ನು ಅಪಹರಿಸುವವರಾಗಿಯೂ, ಸ್ತ್ರೀಯರೆಲ್ಲರೂ ತಮ್ಮ ಪತಿಗಳನ್ನು ತಿರಸ್ಕರಿಸಿ ಪರಪುರುಷರೊಡನೆ ವಿಹರಿಸುವವರಾಗಿಯೂ ಆಗುವರು. ರಾಜರೆಲ್ಲರೂ ಪ್ರಜೆಗಳ ಕಷ್ಟ ಸುಖಗಳನ್ನು ಲಕ್ಷಿಸದೆ ನಾನಾ ರೀತಿಯಲ್ಲಿ ಪೀಡಿಸುವವರಲ್ಲದೆ ಅವರ ರಕ್ತಪೆಲ್ಲಪನ್ನೂ ಹಿಂಡುವರು. ದುಷ್ಟರಾಜರ ಹಿಂಸೆಯಿಂದ ಜನರೆಲ್ಲರೂ ದೇಶಭ್ರಷ್ಟರಾಗಿ ಓಡಿಹೋಗುವರು. ಕಲಿಯುಗದ ಪ್ರಥಮಪಾದದಲ್ಲಿ ಪ್ರಜೆಗಳು ದೇವರನ್ನು ನಿಂದಿಸುವರು. ದ್ವಿತೀಯಪಾದದಲ್ಲಿ ದೇವರ ಹೆಸರನ್ನೇ ಮರೆತುಬಿಡುವರು. ತೃತೀಯಪಾದದಲ್ಲಿ ವರ್ಣಸಂಕರವಾಗುವುದು. ನಾಲ್ಕನೆಯ ಪಾದದಲ್ಲಿ ಜಾತಿಭೇದವೆಲ್ಲಾ ಅಳಿದುಹೋಗಿ ಒಂದೇ ಜಾತಿಯಾಗುವುದು. ವೇದವೆಲ್ಲಾ ನಶಿಸಿಹೋಗಿ ಹವ್ಯಕವ್ಯಗಳೂ ಯಜ್ಞಯಾಗಗಳೂ ಸಂಪೂರ್ಣವಾಗಿ ನಿಂತು ಹೋದಮೇಲೆ ದೇವತೆಗಳೆಲ್ಲರೂ ಹವಿಸ್ಸೇ ಇಲ್ಲದವರಾಗುವರು. ಈ ರೀತಿ ಲೋಕವೆಲ್ಲಾ ಅಧರ್ಮಭೂಯಿಷ್ಠವಾಗಿ ಮ್ಲೇಚ್ಛಮಯವಾಗುವುದರಿಂದ ದುಷ್ಟರಾಜರ ಹಾವಳಿಯನ್ನು ತಡೆಯಲಾರದೆ ಜನರೆಲ್ಲರೂ ತಡೆಯಲಶಕ್ಯವಾದ ನಾನಾ ವಿಧವಾದ ತೊಂದರೆಗಳನ್ನನುಭವಿಸುತ್ತಿರುವಾಗ ಚತುರ್ಮುಖ ಮತ್ತು ದೇವತೆಗಳೊಡನೆ ಭೂದೇವಿಯು ಈ ಅಧರ್ಮ ರಾಜ್ಯಭಾರವನ್ನು ಕೊನೆಗಾಣಿಸಬೇಕೆಂದು ಮಹಾವಿಷ್ಣುವಿನಲ್ಲಿ ಮೊರೆಯಿಡಲು ವಿಷ್ಣುವು ಶಂಭಳ ಗ್ರಾಮದಲ್ಲಿ ವಿಷ್ಣುಯಶನೆಂಬ ಬ್ರಾಹ್ಮಣನೊಬ್ಬನ ಮನೆಯಲ್ಲಿ "**ಕಲ್ಕಿ**"ಯೆಂಬ ಅಭಿಧಾನದಿಂದ ಅವತರಿಸಿ ಶೌರ್ಯ ಧೈರ್ಯ ಸ್ಥೈರ್ಯಾದಿಗಳಿಂದ ಪರಿಶೋಭಿಸುತ್ತಾ ಖಡ್ಗಧಾರಿಯಾಗಿ ಅಶ್ವಾರೂಢನಾಗಿ ಹೊರಟು ಕೋಟಿಗಟ್ಟಲೆ ದುಷ್ಟ ಮ್ಲೇಚ್ಛ ಸಮೂಹವನ್ನು ಸಂಹರಿಸಿ ಧರ್ಮಸಂರಕ್ಷಣೆಮಾಡಿ ಜಗತ್ತಿನಲ್ಲಿ ಶಾಂತಿ ಸೌಖ್ಯಗಳನ್ನುಂಟುಮಾಡಿ ಪ್ರಜೆಗಳನ್ನು ಸಂರಕ್ಷಿಸುವನು.]

कल्किपुराण कल्किपुराण (न०) ಒಂದು ಉಪಪುರಾಣ. [ಈ ಪುರಾಣದಲ್ಲಿ ಪ್ರತಿಪಾದ್ಯವಿಷಯ: ಕಲಿಯುಗದಲ್ಲಿ ಆಚಾರವ್ಯವಹಾರಗಳ ಅಳಿವು, ದೇವತೆಗಳು ಭೂದೇವಿಯೊಡನೆ ಬ್ರಹ್ಮಲೋಕಕ್ಕೆ ಹೋಗುವುದು, ಬ್ರಹ್ಮಲೋಕ ವರ್ಣನೆ, ಬ್ರಹ್ಮನಲ್ಲಿ ಕಲಿಯ ದೋಷಗಳನ್ನು ತಿಳಿಸುವುದು, ಬ್ರಹ್ಮನೊಡನೆ ದೇವತೆಗಳು ಗೋಲೋಕಕ್ಕೆ ತೆರಳುವುದು, ಮಹಾವಿಷ್ಣುವು ಇವರ ಮೊರೆಯನ್ನು ಕೇಳಿ ಶಂಭಳ ಗ್ರಾಮದಲ್ಲಿ ಕಲ್ಕಿರೂಪದಿಂದ ಅವತರಿಸುವುದಾಗಿಯೂ, ದುಷ್ಟ ನಿಗ್ರಹ ಶಿಷ್ಟಪರಿಪಾಲನೆ ಮಾಡುವುದಾಗಿಯೂ ಆಶ್ವಾಸನೆ ಕೊಡುವುದು, ಕಲ್ಕಿಯ ಅವತಾರ, ಕಲ್ಕಿಯ ಉಪನಯನ, ಗುರುವಿನಿಂದ ಧರ್ಮೋಪದೇಶ, ಸಿಂಹಳದಲ್ಲಿ ಪದ್ಮಾವತೀ ರೂಪದಿಂದ ಜನಿಸಿದ ಲಕ್ಷ್ಮಿಯೊಡನೆ ಕಲ್ಕಿಯ ವಿವಾಹ, ಶಂಕರನಿಂದ ಕಲ್ಕಿಗೆ ಖಡ್ಗ, ಬಾಣ, ಕುದುರೆಗಳ ಪ್ರಾಪ್ತಿ, ಕಲಿಪುರುಷನ ದೌಷ್ಟ್ಯವನ್ನು ಕಂಡು ಕ್ರೋಧಾವಿಷ್ಟನಾದ ಕಲ್ಕಿಯು ಅಶ್ವವನ್ನೇರಿ ಖಡ್ಗವನ್ನು ಹಿಡಿದು ದುಷ್ಟರಾದ ಮ್ಲೇಚ್ಛಯವನರೆಲ್ಲರನ್ನೂ ಯುದ್ಧದಲ್ಲಿ ಸಂಹರಿಸಿ ಜನರ ಕಷ್ಟಗಳನ್ನು ಪರಿಹರಿಸಿ ಜನರಿಗೆ ಶಾಂತಿಸೌಖ್ಯಗಳನ್ನು ಕಲ್ಪಿಸುವುದು, ಬಳಿಕ ಕೃತಯುಗಾರಂಭ, ಇತ್ಯಾದಿ.]

कल्प कल्प (पुं०) 1. ಜಗತ್ತಿನ ಸೃಷ್ಟಿಕಾಲ, ಬ್ರಹ್ಮನು ಜಗತ್ತನ್ನು ಸೃಷ್ಟಿಸುವ ಕಾಲ, ಬ್ರಹ್ಮನ ಹಗಲು. 2. ಬ್ರಹ್ಮನ ರಾತ್ರಿ, ಜಗತ್ತಿನ ವ್ಯಾಪಾರವಿಲ್ಲದ ಪ್ರಳಯ ಕಾಲ. कल्पते स्वक्रियायै समर्थः असमर्थश्च भवति— कृप् (सामर्थ्ये) अधि० "घञ्" (३-३-१२१)। "यदा स देवो जागर्ति तदेदं चेष्टते जगत्। यदा स्वपिति शान्तात्मा तदा सर्वं निमीलति" मनु० १-५२।

"कल्पस्यान्ते मारुतेनोपनुन्नाश्चेलुश्चण्डं गण्डशैला इवेभाः" माघ० १८-६।

ಚತುರ್ಮುಖನ ಒಂದು ಹಗಲಿಗೂ ಅದೇ ಪ್ರಮಾಣವುಳ್ಳ ಒಂದು ರಾತ್ರಿಗೂ ಕಲ್ಪವೆಂದು ಹೆಸರು. ಚಾಂದ್ರಮಾನದಲ್ಲಿ ಮನುಷ್ಯರ ಒಂದು ತಿಂಗಳು ಪಿತೃ ದೇವತೆಗಳಿಗೆ ಒಂದು ದಿವಸ. ಸೌರಮಾನದಲ್ಲಿ ಮನುಷ್ಯರ ಒಂದು ವರ್ಷವು ದೇವತೆಗಳಿಗೆ ಒಂದು ದಿವಸ. ಈ ರೀತಿ 43,20,000 ಮಾನುಷ ವರ್ಷಗಳು ಅಥವಾ 12,000 ದೇವತೆಗಳ ವರ್ಷಗಳು ಕಳೆದರೆ ಒಂದು ಚತುರ್ಯುಗವಾಗುವುದು. [ಯುಗಮಾನಕ್ಕೆ "ಶಬ್ದ" ಮತ್ತು "ಕಲಿ" ಪದಗಳಲ್ಲಿ ನೋಡಿ.] ಈ ರೀತಿ ಒಂದು ಸಾವಿರ ಚತುರ್ಯುಗಗಳು (1,20,00,000 ದೇವ ವರ್ಷಗಳು ಅಥವಾ 4,32,00,00,000 ಮಾನುಷ ವರ್ಷಗಳು) ಕಳೆದರೆ ಬ್ರಹ್ಮನಿಗೆ ಒಂದು ಹಗಲಾಗುವುದು. ಮತ್ತು ಇಷ್ಟೇ ಕಾಲದಲ್ಲಿ ಒಂದು ರಾತ್ರಿಯಾಗುವುದು. ಬ್ರಹ್ಮನ ಈ ಹಗಲಿನಲ್ಲಿ ಜಗತ್ತಿನ ಸೃಷ್ಟಿಕಾರ್ಯವೂ ರಾತ್ರಿಯಲ್ಲಿ ಪ್ರಳಯವೂ ನಡೆಯುವುವು. ಈ ಹಗಲು ಮತ್ತು ರಾತ್ರಿಗಳಿಗೆ **"ಕಲ್ಪ"** ವೆಂದು ಹೆಸರು. 8,64,00,00,000 ಸೌರ ವರ್ಷಗಳು ಕಳೆದರೆ ಬ್ರಹ್ಮನಿಗೆ ಒಂದು ಹಗಲೂ ಒಂದು ರಾತ್ರಿಯೂ ಆಗುವುದು. ಬ್ರಹ್ಮನ ಒಂದು ಹಗಲಿನಲ್ಲಿ ಸ್ವರ್ಗಲೋಕದಲ್ಲಿ ಹದಿನಾಲ್ಕು ಮಂದಿ ಇಂದ್ರರೂ ಹದಿನಾಲ್ಕು ಮಂದಿ ಮನುಗಳೂ ರಾಜ್ಯವಾಳುವರು. ರಾತ್ರಿಯ ಕಾಲದಲ್ಲಿ ಪ್ರಳಯವಾಗುವುದು. [ವಿವರಕ್ಕೆ "ಪ್ರಳಯ" ಪದದಲ್ಲಿ ನೋಡಿ] ಇಂತಹ 30 ದಿನಗಳಿಗೆ ಬ್ರಹ್ಮನ ಒಂದು ತಿಂಗಳು.

ಬ್ರಹ್ಮನ ತಿಂಗಳ ಮೂವತ್ತು ದಿನಗಳು : (1) ಶ್ವೇತ. (2) ನೀಲಲೋಹಿತ, (3) ವಾಸುದೇವ. (4) ರಥಂತರ, (5) ರೌರವ, (6) ಪ್ರಾಣ, (7) ಬೃಹತ್, (8) ಕಂದರ್ಪ, (9) ಸದ್ಯ. (10) ಈಶಾನ, (11) ವ್ಯಾನ, (12) ಸಾರಸ್ವತ, (13) ಉದಾನ, (14) ಗಾರುಡ, (15) ಕೌರ್ಮ, (16) ನಾರಸಿಂಹ, (17) ಸಮಾನ, (18) ಆಗ್ನೇಯ, (19) ಸೋಮ, (20) ಮಾನವ. (21) ತತ್ಪುರುಷ. (22) ವೈಕುಂಠ, (23) ಲಕ್ಷ್ಮಿ. (24) ಸಾವಿತ್ರಿ. (25) ಘೋರ, (26) ವಾರಾಹ, (27) ವೈರಾಜ, (28) ಗೌರಿ (ಈಗಿನ ಶ್ವೇತವರಾಹಕಲ್ಪ), (29) ಮಾಹೇಶ್ವರ ಮತ್ತು (30) ಪಿತೃ ಇವುಗಳಲ್ಲಿ ಕೌರ್ಮಕಲ್ಪವು ಪೂರ್ಣಮೆ. ಪಿತೃಕಲ್ಪವು ಅಮಾವಾಸ್ಯೆ. ಈ ಮೂವತ್ತು ಕಲ್ಪಗಳಿಗೆ ಬ್ರಹ್ಮನ ಒಂದು ತಿಂಗಳು. ಇಂತಹ ಹನ್ನೆರಡು ತಿಂಗಳಿಗೆ ಒಂದು ವರ್ಷ. ಇಂತಹ ಒಂದು ನೂರು ವರ್ಷಗಳು ಬ್ರಹ್ಮನ ಆಯುಸ್ಸು. ಬ್ರಹ್ಮನ ಈ ಆಯುಃಪ್ರಮಾಣಕ್ಕೆ ಒಂದು **"ಪರ"** ವೆಂದು ಹೆಸರು. [ಬ್ರಹ್ಮನ ಆಯುಃಪ್ರಮಾಣಕ್ಕೆ "ಅಬ್ದ" ಪದದಲ್ಲಿ ನೋಡಿ.] ಬ್ರಹ್ಮನಿಗೆ ಈಗ ಮೊದಲನೆಯ ಪರಾರ್ಧವು (50 ವರ್ಷಗಳು) ಕಳೆದು ದ್ವಿತೀಯ ಪರಾರ್ಧವು ನಡೆಯುತ್ತಿದೆ. ಈಗ ಬ್ರಹ್ಮನ ಆಯುಸ್ಸಿನಲ್ಲಿ ಐವತ್ತೊಂದನೆಯ ವರ್ಷದ ಮೊದಲನೆಯ ತಿಂಗಳ ಇಪ್ಪತ್ತೈದು ದಿನಗಳು ಕಳೆದು ಇಪ್ಪತ್ತಾರನೆಯ ಹಗಲಿನ ಮೊದಲನೆಯ ಯಾಮವು ನಡೆಯುತ್ತಿರುವುದು. ನಾವು ಈಗ ಶ್ವೇತವರಾಹಕಲ್ಪದಲ್ಲಿದ್ದೇವೆ. 3. ವೈದಿಕ ಕರ್ಮಾನುಷ್ಠಾನದ ವಿಧಿ. ನಿಯಮ. ಕಟ್ಟಳೆ. कल्पते विधीयतेऽसौ —कृप् कर्म० "घञ्" (३-३-१९)। "एष वै प्रथमः कल्पः प्रदाने हव्यकव्ययोः। अनुकल्पस्त्वयं ज्ञेयः सदा सद्भिरनुष्ठितः" मनु० ३-१४७। 4. ಶಾಸ್ತ್ರ. "कल्पवित् कल्पयामास वन्यामेवास्य संविधाम्" रघु० १-९४। 5. ನ್ಯಾಯ. "कल्पः शास्त्रे विधौ न्याये संवर्ते ब्रह्मणो दिने" मेदि०। 6. ವಿಕಲ್ಪ, ಎರಡು ವಿಷಯಗಳಲ್ಲಿ ಯಾವುದಾದರೊಂದಕ್ಕೆ ಅವಕಾಶ, ಪಕ್ಷಾಂತರ. 7. ಕಲ್ಪವೃಕ್ಷ. "कल्पो विकल्पे कल्पद्रौ संवर्ते ब्रह्मवासरे। शास्त्रे न्याये विधौ" हेम०। 8. (ವ್ಯಾಕರಣದಲ್ಲಿ) ಸಮಾನಾರ್ಥಕವಾದ ಒಂದು ಪ್ರತ್ಯಯ. "कल्पप्"। विद्वत्कल्पः, ब्राह्मणकल्पः, रात्रिकल्पः, मित्रकल्पः ಇತ್ಯಾದಿ. 9. ಆರು ವೇದಾಂಗಗಳಲ್ಲಿ ಒಂದು. (1) शिक्षा, (2) व्याकरणम्, (3) छन्दः, (4) निरुक्तम्, (5) ज्योतिषम् ಮತ್ತು (6) कल्पः ಇವು ಆರು ವೇದಾಂಗಗಳು. ವೇದಕ್ಕೆ ಛಂದಸ್ಸು ಪಾದಗಳು. ಕಲ್ಪವು ಹಸ್ತಗಳು. ಜ್ಯೋತಿಷವು ಕಣ್ಣುಗಳು. ನಿರುಕ್ತವು ಕಿವಿಗಳು. ಶಿಕ್ಷೆಯು ಮೂಗು. ವ್ಯಾಕರಣವು ಮುಖ. ಆದುದರಿಂದ ಇವು ಆರು ಅಂಗಗಳನ್ನೂ ಅಧ್ಯಯನ ಮಾಡಿದರೆ ವೇದಾಧ್ಯಯನವು ಪೂರ್ಣವಾಗುವುದು. "छन्दः पादौ तु वेदस्य हस्तौ कल्पोऽथ पठ्यते। ज्योतिषामयनं चक्षुः निरुक्तं श्रोत्रमुच्यते। शिक्षा घ्राणं तु वेदस्य मुखं व्याकरणं स्मृतम्। तस्मात्साङ्गमधीत्यैव ब्रह्मलोके महीयते"।

कल्पक ಕಲ್ಪಕ (पु०) 1. "कल्प" ಪದದ ಅರ್ಥ. कल्प स्वार्थे "कन्"। 2. ನಾಪಿತ. ಕ್ಷೌರಿಕ. कल्पयति क्षौरादिना वेशं रचयति—कृप् (सामर्थ्ये) + णिच् "ण्वुल्" (३-१-१३३)। (वि०) 3. ರಚಿಸುವವನು, ನಿರ್ಮಿಸುವವನು, ತಯಾರಿಸುವವನು. कल्पयति

रचयति—कृप् + णिच् "ण्वुल्"। 4. ಕಚ್ಚೂರ, ಕಚೋರ.

कल्पकार ಕಲ್ಪಕಾರ (पु०) 1. ಕಲ್ಪಸೂತ್ರಕಾರರು, ಮತ ಧರ್ಮಾಚರಣೆಯ ಸಂಬಂಧವಾದ ವಿಧಿಸೂತ್ರಕಾರರು ; ಆಶ್ವಲಾಯನ, ಆಪಸ್ತಂಬ ಮೊದಲಾದವರು. कल्पं कल्पसूत्रं करोति—कृ कृञ् (करणे) "अण्" (३-२-१)। 2. ನಾಪಿತ, ಕ್ಷೌರಿಕ. (वि०) 3. ವೇಷಗಳನ್ನು ಹಾಕುವವನು. कल्पं वेशं करोति—कृ कृञ् (करणे) "अण्" (३-२-१)। "ण्वुल्" (३-१-१३३)। **–कारक:** **–कारकः.**

कल्पक्षय ಕಲ್ಪಕ್ಷಯ (पु०) ಕಲ್ಪಕಾಲದ ಕೊನೆ, ಜಗತ್ತಿನ ಪ್ರಳಯಕಾಲ. कल्पस्य सृष्टिविशेषस्य क्षयो यत्र। "कल्पक्षये पुनस्ते तु प्रविशन्ति परं पदम्" विष्णुपु०।

कल्पतरु ಕಲ್ಪತರು (पु०) 1. ಸಕಲ ಇಷ್ಟಾರ್ಥಪ್ರದವಾದ ಐದು ದೇವವೃಕ್ಷಗಳಲ್ಲೊಂದು. "आसीत्कल्पतरुच्छाया-माश्रिता सुरभिः पथि" रघु० १-७५। 2. ಉದಾರ, ಕೊಡುಗೈಯುಳ್ಳವನು. ಇಷ್ಟಾರ್ಥವನ್ನು ಕೊಡುವುದರಿಂದ ದಾತೃವೂ ಕಲ್ಪತರು. (लाक्ष०)।

कल्पद्रु ಕಲ್ಪದ್ರು (पु०) 1. ಸಕಲ ಇಷ್ಟಾರ್ಥಪ್ರದವಾದ ಕಲ್ಪವೃಕ್ಷ, ಐದು ದೇವತರುಗಳಲ್ಲೊಂದು. 2. ಕೇಶವಕವಿ ರಚಿತವಾದ ಒಂದು ನಿಘಂಟು, ಒಂದು ಶಬ್ದಕೋಶ. ಇದೇ ಅರ್ಥದಲ್ಲಿ **–द्रुमः –द्रुमः.** "अनुकूलयतीन्द्रोऽपि कल्पद्रुमविभूषणैः" कुमा० २-३९। **–पादपः–पादपः.** "मृषा न चक्रेऽल्पितकल्पपादपः" नैष० १-१५। **–वृक्षः –वृक्षः, –शाखी –शाखी** ಇತ್ಯಾದಿ.

कल्पन ಕಲ್ಪನ (न०) 1. ರಚನೆ, ನಿರ್ಮಾಣ. 2, ಮಾಡುವಿಕೆ, ಸಿದ್ಧಪಡಿಸುವಿಕೆ, ಏರ್ಪಡಿಸುವಿಕೆ. कृप् (सामर्थ्ये) + णिच् भावे "ल्युट्" (३-३-११५)। 3. ಛೇದನ, ಕತ್ತರಿಸುವಿಕೆ. 4. ಊಹಿಸುವಿಕೆ, ಶಂಕಿಸುವಿಕೆ. 5. ಕಲ್ಪಿಸಿ ಹೇಳುವಿಕೆ, ಇಲ್ಲದುದನ್ನು ಸೃಷ್ಟಿಸಿ ಹೇಳುವಿಕೆ. ಆರೋಪಣೆ. 6. ಕಲ್ಪಿತಕಥೆ, ಕಟ್ಟುಕಥೆ. 7. ಅನುಮಾನ ಅಥವಾ ಅರ್ಥಾಪತ್ತಿಪ್ರಮಾಣದಿಂದ ಊಹಿಸಿ ವಿಷಯವನ್ನು ನಿರ್ಮಾನಿಸುವಿಕೆ.

कल्पना ಕಲ್ಪನಾ (स्त्री०) 1. ರಚನೆ, ನಿರ್ಮಾಣ. 2. ಮಾಪುವಿಕೆ. कृप् (सामर्थ्ये) + णिच् भावे "युच्" (३-३-१०७)। "प्रस्थानकालक्षमवेषकल्पनाकृतक्षण-क्षेपमुदैक्षताच्युतम्" माघ० १२-१। 3. ಊಹಿಸುವಿಕೆ, ಶಂಕಿಸುವಿಕೆ. "मदन्यदानं प्रति कल्पना या वेदस्त्वदीये हृदि तावदेषा" नैष० ३-७५। 4. ಆನೆಯನ್ನು ಅಲಂಕರಿಸುವಿಕೆ, ಆನೆಯ ಬೆನ್ನಿನಮೇಲೆ ಗವುಸನ್ನು ಹೊದ್ದಿಸಿ ಶೃಂಗರಿಸುವಿಕೆ. "सकल्पनं द्विरदगणं वरूथिन-स्तुरङ्गिणो जयनयुजश्च वाजिनः" माघ० १७-२३। 5. ಒಂದು ವಿಷಯದ ನಿಜಾಂಶವು ಹೀಗಿರಬಹುದೆಂದು ಮಾಡುವ ಊಹೆ ; ಇದನ್ನು ನೈಯಾಯಿಕರು ಅನುಮಾನವೆನ್ನುವರು. ಮೀಮಾಂಸಕರು ಅರ್ಥಾಪತ್ತಿಪ್ರಮಾಣವೆನ್ನುವರು. 6. ಸಿದ್ಧಿ, ಕೈಗೂಡುವಿಕೆ. "श्रद्धालुसंकल्पित-कल्पनायां कल्पद्रुमस्याथ रथाङ्गपाणेः" नैष १०-६९।

कल्पनी ಕಲ್ಪನೀ (स्त्री०) ಕತ್ತರಿ.

कल्पनीय ಕಲ್ಪನೀಯ (वि०) 1. ರಚಿಸಲ್ಪಡಬೇಕಾದ. 2. ರಚಿಸಲು ಶಕ್ಯವಾದ. 3. ರಚಿಸಲು ಅರ್ಹವಾದ. कृप् (सामर्थ्ये) + णिच् "अनीयर्" (३-२-९६)। 4. ನಿಜಾಂಶವು ಹೀಗಿರಬಹುದೆಂದು ಊಹಿಸಲ್ಪಡುವ. 5. ಊಹಿಸಲು ಶಕ್ಯವಾದ. 6. ಊಹಿಸಲು ಅರ್ಹವಾದ. "तव्यः" **कल्पितव्यः कल्पितव्यः** (णिजभावे)।

कल्पमान ಕಲ್ಪಮಾನ (वि०) 1. ರಚನೆಯಾಗುತ್ತಿರುವ, ನಿರ್ಮಾಣವಾಗುತ್ತಿರುವ. 2. ಸಮರ್ಥವಾಗುತ್ತಿರುವ. कृप् (सामर्थ्ये) "शानच्" (३-२-१२४)। 3. ಸಿದ್ಧವಾಗುತ್ತಿರುವ. "कालपाशनिगृहीतमरातिं कल्पमान-मभवाय विवेद" याद० २१-५५।

कल्पयत् ಕಲ್ಪಯತ್ (वि०) 1. ಸೃಷ್ಟಿಸುತ್ತಿರುವ, ನಿರ್ಮಿಸುತ್ತಿರುವ. 2. ರಚಿಸುತ್ತಿರುವ, ಮಾಡುತ್ತಿರುವ. 3. ಚಿಂತಿಸುತ್ತಿರುವ, ಊಹಿಸುತ್ತಿರುವ, ಶಂಕಿಸುತ್ತಿರುವ. कृप् (सामर्थ्ये) + णिच् "शतृ" (३-२-१२४)। "क्षणशयितविबुद्धाः कल्पयन्तः प्रयोगानुदधिमहति राज्ये काव्यवद्दुर्विगाहे" माघ० ११-६। 4. ಏರ್ಪಡಿಸುತ್ತಿರುವ, ಸಿದ್ಧಗೊಳಿಸುತ್ತಿರುವ. स्त्रियाम् "ङीप्" (४-१-६)। **–यन्ती –यन्ती.** "शानच्" (३-२-१२४)। **कल्पयमानः कल्पयमानः.**

कल्पयितव्य ಕಲ್ಪಯಿತವ್ಯ (वि०) "कल्पनीय" ಪದದ ಅರ್ಥ. कृप् (सामर्थ्य) + णिच् "तव्यः" (३-२-९६)।

कल्पलता ಕಲ್ಪಲತಾ –वल्ली –ವಲ್ಲೀ. (स्त्री०) "कल्पतरु" ಪದದ ಅರ್ಥ. कल्पस्य संकल्पविषयस्य साधनं लता। "क्व याचतां कल्पलतासि मां प्रति क्व दृष्टिदाने तव बद्धमुष्टिता" नैष० ९-१०९।

कल्पविद् ಕಲ್ಪವಿದ್ (वि०) ಯಜ್ಞಸಂಬಂಧವಾದ ವಿಧಿಗಳನ್ನು ಅರಿತಿರುವ, ಪ್ರತಪ್ರಯೋಗಗಳನ್ನು ತಿಳಿದಿರುವ,

ಶಾಸ್ತ್ರನಿಯಮಗಳನ್ನು ಅರಿತಿರುವ. कल्पं वेत्ति—विद (ज्ञाने) "क्विप्" (३-२-६१)। "कल्पवित् कल्पयामास नियमापेक्षया मुनिः" रघु० १-१४।

कल्पसूत्र ಕಲ್ಪಸೂತ್ರ (न०) ವೈದಿಕ ಕರ್ಮಾಚರಣೆಯನ್ನು ಹೇಳುವ ಸೂತ್ರ. कल्पस्य वैदिककर्मानुष्ठानस्य प्रतिपादकं सूत्रम्। ಆಶ್ವಲಾಯನ ಆಪಸ್ತಂಬ ಮುಂತಾದವರಿಂದ ರಚಿತವಾದ ಧರ್ಮಸೂತ್ರ, ಗೃಹ್ಯಸೂತ್ರ, ಶ್ರೌತಸೂತ್ರ ಗ್ರಂಥಗಳು.

कल्पात्यय ಕಲ್ಪಾತ್ಯಯ (पु०) ಕಲ್ಪಕಾಲದ ಕೊನೆ, ಪ್ರಳಯಕಾಲ. कल्पस्यात्ययः। "रथादिषोषैरथ शार्ङ्गपाणेः कल्पात्ययैकार्णवनादकल्पैः" याद० २०-१।

कल्पान्त ಕಲ್ಪಾಂತ (पु) ಕಲ್ಪದ ಕೊನೆ, ಪ್ರಳಯಕಾಲ, ಬ್ರಹ್ಮನ ಹಗಲಿನ ಕೊನೆ. कल्पस्यान्तः। [ವಿವರಕ್ಕೆ "प्रलय" ಪದದಲ್ಲಿ ನೋಡಿ.]

कल्पित ಕಲ್ಪಿತ (वि०) 1. ರಚಿಸಲ್ಪಟ್ಟ, ನಿರ್ಮಿಸಲ್ಪಟ್ಟ. कृप् (सामर्थ्ये) + णिच् "क्तः" (३-२-१०२)। "भैमीविनोदाय मुदा सखीभिस्तदाकृतीनां भुवि कल्पितानाम्" नैष० ६-७४। 2. ಏರ್ಪಡಿಸಲ್ಪಟ್ಟ. "मुदितयुवमनस्कास्तुल्यमेव प्रदोषे रुचमदधुरुभय्यः कल्पिता भूषिताश्च" माघ० ११-२७। 3. ಮಾಡಲ್ಪಟ್ಟ. "आक्रीडपर्वतास्तेन कल्पिताः स्वेषु वेश्मसु" कुमा० २-४३। 4. ಸಿದ್ಧಪಡಿಸಲ್ಪಟ್ಟ, ಸಜ್ಜುಗೊಳಿಸಲ್ಪಟ್ಟ. "प्रजापतिः कल्पितयज्ञभागं शैलाधिपत्यं स्वयमन्वतिष्ठत्" कुमा० १-१७। "स्पर्शभाजि विशदच्छविचारौ कल्पिते मृगदृशां सुरताय" माघ० १०-३९। 5. ಊಹಿಸಲ್ಪಟ್ಟ. ತರ್ಕಿಸಲ್ಪಟ್ಟ. 6. ಆಚರಿಸಲ್ಪಟ್ಟ, ಅನುಷ್ಠಿಸಲ್ಪಟ್ಟ. 7. ಪರಿಗಣಿಸಲ್ಪಟ್ಟ, ಭಾವಿಸಲ್ಪಟ್ಟ. "स्वक्षेत्रे संस्कृतायां तु स्वयमुत्पादयेद्धि यम्। तमौरसं विजानीयात्पुत्रं प्रथमकल्पितम्" मनु० ९-१६६। 8. ಕೃತ್ರಿಮವಾದ, ಸೃಷ್ಟವಾದ. ವಾಸ್ತವವಲ್ಲದ,

कल्पिन् ಕಲ್ಪಿನ್ (पु०) 1. ನಾಪಿತ, ಕ್ಷೌರಿಕ, ನಾಯಿಂದ. कल्पयति — कृप् (सामर्थ्ये) + णिच् "णिनिः" (३-१-१३४)। (वि०) 2. ನಿರ್ಮಿಸುವ. 3. ಮಾಡುವ. 4. ಮೇಲಕ್ಕೆ ಹತ್ತಿಸುವ, ಏರಿಸುವ. 5. ವೇಷ ಹಾಕುವ.

कल्प्य ಕಲ್ಪ್ಯ (वि०) 1. ರಚಿಸಲ್ಪಡುವ, ನಿರ್ಮಿಸಲ್ಪಡುವ. कृप् (सामर्थ्ये) + णिच् "यत्" (३-१-९७)। 2. ಮೇಲಕ್ಕೆ ಏರಿಸಲ್ಪಡುವ, ಹತ್ತಿಸಲ್ಪಡುವ. 3. ಸೃಷ್ಟಿಸಲ್ಪಡುವ, ಹೊಸದಾಗಿ ಮಾಡಲ್ಪಡುವ. 4. ಏರ್ಪಡಿಸಲ್ಪಡುವ. 5. ಸಿದ್ಧಪಡಿಸಲ್ಪಡುವ, ಸಜ್ಜುಗೊಳಿಸಲ್ಪಡುವ. "आनन्दबाष्पैरपि कल्प्यमम्भः पृच्छा विधेया मधुभिर्वचोभिः" नैष० ७-२१। "कालोपपन्नातिथिकल्प्यभागं वन्यं शरीरस्थितिसाधनं वः" रघु० ५-१। 6. ಅನುಷ್ಠಿಸಲ್ಪಡುವ, ಆಚರಿಸಲ್ಪಡುವ. 7. ಊಹಿಸಲ್ಪಡುವ, ತರ್ಕಿಸಲ್ಪಡುವ. 8. ಪರಿಗಣಿಸಲ್ಪಡುವ, ಭಾವಿಸಲ್ಪಡುವ.

कल्प्यमान ಕಲ್ಪ್ಯಮಾನ (वि०) 1. ರಚಿಸಲ್ಪಡುತ್ತಿರುವ, ನಿರ್ಮಿಸಲ್ಪಡುತ್ತಿರುವ. कृप् (सामर्थ्ये) + कर्म० "यक्" (३-१-६७)। "शानच्" (३-२-१२४)। 2. ಮಾಡಲ್ಪಡುತ್ತಿರುವ. 3. ಏರ್ಪಡಿಸಲ್ಪಡುತ್ತಿರುವ. 4. ಊಹಿಸಲ್ಪಡುತ್ತಿರುವ. 5. ಸಜ್ಜುಗೊಳಿಸಲ್ಪಡುತ್ತಿರುವ. "कल्प्यमानममुनाचमनार्थं गाङ्गमम्बु चुलकोदरचुम्बि" नैष० २१-१०।

कल्मष ಕಲ್ಮಷ (पु०) 1. ಒಂದು ನರಕ. कर्म शुभकर्म स्यति — षो (अन्तकर्मणि) "कः" (३-२-३)। पृषो० लत्वषत्वे। (न०) 2. ಪಾಪ. "कल्मषं किल्बिषे क्लीबं पुंसि स्यान्नरकान्तरे" मेदि०। "स हि गगनविहारी कल्मषध्वंसकारी दशशतकरधारी ज्योतिषां मध्यचारी" हितो० २-२१। 3. ಕಶ್ಮಲ, ಕೊಳೆ. 4. ಗಸಿ, ಗಪ್ಪು, ಮಲ. 5. ಧೂಳು. 6. ಅಪವಾದ, ಅಪಕೀರ್ತಿ. 7. ಕಲ್ಮಷಮಾಸ, ಮಲಮಾಸ. (वि०) 8. ಕೊಳೆಯಿಂದ ಕೂಡಿದ, ಮಲಿನವಾದ. 9. ಪಾಪಿಷ್ಠ. 10. ಅಪವಾದದಿಂದ ಕೂಡಿದವನು.

कल्माष ಕಲ್ಮಾಷ (पु०) 1. ಚಿತ್ರವರ್ಣ. कलयति — कल (संख्याने) "क्विप्" (३-२-१७२)। माषयति हिंसयति वर्णान्—मष (हिंसायाम्) + णिच् "अच्" (३-१-१३४)। कल् चासौ माषश्च। 2. ಕೃಷ್ಣವರ್ಣ, ಕಪ್ಪುಬಣ್ಣ. 3. ಕಪ್ಪು ಬಿಳುಪು ಬೆರೆತ ಬಣ್ಣ. 4. ರಾಕ್ಷಸ. "कल्माषो राक्षसे कृष्णे शबलेऽपि" हेम०। 5. ಅಗ್ನಿಯ ಒಂದು ರೂಪ. "अग्नीनां वासुदेवेन संसक्तानां महामृधे। ते जातवेदसः सर्वे कल्माषः कुसुमस्तथा। दहनः शोषणश्चैव तपनश्च महालयः" हरिवं०। (वि०) 6. ಚಿತ್ರವರ್ಣದ. 7. ಕಪ್ಪು ಬಿಳುಪು ಬೆರೆತ ಬಣ್ಣದಿಂದ ಕೂಡಿದ. (स्त्री०) **—षी —षी.** ಜಮದಗ್ನಿಯ ಹಸು.

कल्माषकण्ठ ಕಲ್ಮಾಷಕಂಠ (पु०) ಶಿವ, ಈಶ್ವರ, ನೀಲಕಂಠ. कल्माषः कृष्णः कण्ठो यस्य। **—ग्रीवः —ग्रीवः.**

कल्माषपाद ಕಲ್ಮಾಷಪಾದ (पु०) ಸೂರ್ಯವಂಶದ ಒಬ್ಬ ದೊರೆ; ಇವನಿಗೆ ಮಿತ್ರಸಹ, ಸೌದಾಸ ಎಂಬ ಹೆಸರೂ

ಇವೆ. [ಈ ರಾಜನು ಒಮ್ಮೆ ಬೇಟೆಗಾಗಿ ಕಾಡಿಗೆ ಹೋಗಿದ್ದಾಗ ಒಬ್ಬ ರಾಕ್ಷಸನನ್ನು ಕೊಂದು ಅವನ ಸಹೋದರನಾದ ಮತ್ತೊಬ್ಬ ರಾಕ್ಷಸನನ್ನು ಅಲಕ್ಷ್ಯದಿಂದ ಕೊಲ್ಲದೆ ಬಿಟ್ಟು ಬಂದನು. ಆ ರಾಕ್ಷಸನು ಅದೇ ದ್ವೇಷದಿಂದ ಪ್ರತೀಕಾರ ಮಾಡಲೆಣಿಸಿ ಆ ರಾಜನ ಅರಮನೆಯಲ್ಲಿ ವೇಷ ಧಾರಿಯಾಗಿ ಅಡಿಗೆಯವನಾಗಿ ಸೇರಿಕೊಂಡು ಒಂದು ದಿನ ಅರಮನೆಗೆ ಭೋಜನಾರ್ಥಿಯಾಗಿ ಬಂದ ರಾಜನ ಕುಲ ಗುರುವಾದ ವಸಿಷ್ಠಮಹರ್ಷಿಗೆ ನರಮಾಂಸವನ್ನು ಪಾಕ ಮಾಡಿ ಬಡಿಸಲಾಗಿ ಇದರಿಂದ ಕುಪಿತರಾದ ವಸಿಷ್ಠರು ಸ್ವಲ್ಪವೂ ಯೋಚಿಸದೆ "ನೀನು ನರಮಾಂಸಭಕ್ಷಕನಾದ ರಾಕ್ಷಸನಾಗು" ಎಂದು ರಾಜನನ್ನು ಶಪಿಸಿದರು. ಅನಂತರ ಇದು ರಾಕ್ಷಸನ ಕೃತ್ಯವೆಂದು ತಿಳಿದು ಶಾಪಕ್ಕೆ ಹನ್ನೆರಡು ವರ್ಷಗಳು ಮಾತ್ರ ಅವಧಿಯನ್ನು ಕೊಟ್ಟರು. ರಾಜನೂ ವಸಿಷ್ಠರಿಗೆ ಪ್ರತಿಶಾಪವನ್ನು ಕೊಡಲು ಕೈಯಲ್ಲಿ ನೀರನ್ನು ತೆಗೆದುಕೊಂಡಾಗ ಅವನ ಪತ್ನಿಯಾದ ಮದಯಂತಿಯು ತಡೆಯಲು ಆ ಶಾಪಜಲವನ್ನು ತನ್ನ ಕಾಲಿನ ಮೇಲೆಯೇ ಬಿಟ್ಟುಕೊಂಡನು. ಅದರಿಂದ ಅವನ ಕಾಲುಗಳು ಸುಟ್ಟು ಕಪ್ಪಾದುದರಿಂದ ಆ ರಾಜನಿಗೆ **"ಕಲ್ಮಾಷಪಾದ"** ನೆಂಬ ಹೆಸರಾಯಿತು. ಅಂದಿನಿಂದ ಅವನು ರಾಕ್ಷಸ ರೂಪದಿಂದ ಅರಣ್ಯದಲ್ಲಿ ಸಂಚರಿಸುತ್ತಾ ಒಂದು ಕಡೆ ಮುನಿದಂಪತಿಗಳು ಕಾಮಾರ್ತರಾಗಿ ವಿಹರಿಸುತ್ತಿದ್ದಾಗ ಆ ಮುನಿಯನ್ನು ಹಿಡಿದು ಭಕ್ಷಿಸಿದನು. ಮುನಿಪತ್ನಿಯು ದುಃಖಿತಳಾಗಿ "ನೀನು ಪತ್ನಿಯೊಡನೆ ಸಂಗಮಿಸಿದೆಯಾದರೆ ಅದೇ ನಿನಗೆ ಮೃತ್ಯುವಾಗಲಿ" ಎಂದು ರಾಜನನ್ನು ಶಪಿಸಿದಳು. ಹನ್ನೆರಡು ವರ್ಷಗಳನಂತರ ವಸಿಷ್ಠರ ಶಾಪದಿಂದ ವಿಮೋಚನೆ ಹೊಂದಿ ಮುನಿಪತ್ನಿಯ ಶಾಪದಿಂದ ಸ್ತ್ರೀಸೌಖ್ಯವನ್ನು ತೊರೆದು ವಸಿಷ್ಠರ ಅನುಗ್ರಹದಿಂದ ಅಶ್ಮಕನೆಂಬ ಪುತ್ರನನ್ನು ಪಡೆದನು.] ಭಾಗ೦ ೯-೯।

कल्माषी ಕಲ್ಮಾಷೀ (ಸ್ತ್ರೀ೦) 1. ಚಿತ್ರವರ್ಣದ ಹಸು. 2. ಯಮುನಾನದಿ. कल्माष "ಙೀಷ್" (೪-೧-೪೦)। "प्रतिकर्तुं नृपश्रेष्ठो यतमानोऽपि भारत। अभितः सोऽथ कल्माषीं गङ्गाकूले परिभ्रमन्" ಭಾ೦ ಆದಿ೦।

कल्य ಕಲ್ಯ (ನ೦) 1. ಪ್ರಾತಃಕಾಲ. कलयति चेष्टामत्र— कल (गतौ संख्याने च) "यक्" (ಉ೦ ೪-೧೧೧)। "अनुनयमगृहीत्वा व्याजसुप्ता पराची रुतमथ कृकवाकोस्तारमाकर्ण्य कल्ये" माघ० ೧೧-೯। 2. ಜೀನುತುಪ್ಪ. (ವಿ೦) 3. ಕಿವುಡ ಮತ್ತು ಮೂಗ, ಶ್ರೋತ್ರೇಂದ್ರಿಯ ಮತ್ತು ವಾಗಿಂದ್ರಿಯಗಳಿಲ್ಲದವನು, ಕೇಳುವ (ಶ್ರವಣ) ಮತ್ತು ಮಾತಾಡುವ ಶಕ್ತಿಯಿಲ್ಲದವನು. 4. ಸಮರ್ಥನಾದ, ದಕ್ಷನಾದ. "कल्याणि कल्यानि तवाङ्गकानि कच्चित्तमां चित्तमनाविलं ते" ನೈಷ೦ ೮-೪೭। 5. ಸಿದ್ಧವಾಗಿರುವ. "कथयस्व कथामेतां कल्याः स्म श्रवणे तव" ಭಾ೦ ಆದಿ೦ ೪-೩। 6. ರೋಗವಿಲ್ಲದವನು, ಆರೋಗ್ಯದಿಂದಿರುವವನು. 7. ಮಂಗಳವಚನವನ್ನಾಡುವ, ಒಳ್ಳೆಯ ಮಾತನ್ನಾಡುವ. 8. ಉಪಾಯದ ಮಾತನ್ನಾಡುವ. (स्त्री०) **–ल्या –ल्ला.** 9. ಮದ್ಯ, ಹೆಂಡ. 10. ಶುಭವಚನ, ಮಂಗಳವಚನ. "कल्यं प्रभाते मधुनि सज्जे दक्षे निरामये। कल्या कल्याणवाचि स्यात्" ಹೇಮ೦। "कल्यं प्रभाते क्लीबं स्यात् कल्यो वाक्श्रुतिवर्जिते। सज्जनीरोगदक्षेषु कल्याणवचनेऽपि च। उपायवचनेऽपि स्यात् त्रिषु मद्ये तु योषिति" ಮೇದಿ೦। "स्यात् कल्या तु शुभात्मिका" ಅಮ೦।

कल्यजग्धि ಕಲ್ಯಜಗ್ಧಿ (ಸ್ತ್ರೀ೦) ಪ್ರಾತಃಕಾಲದ ಊಟ.

कल्यता ಕಲ್ಯತಾ (ಸ್ತ್ರೀ೦) ಆರೋಗ್ಯಪಡೆಯುವಿಕೆ. ರೋಗದಿಂದ ಚೇತರಿಸಿಕೊಳ್ಳುವಿಕೆ. कल्यस्य भावः "तल्" (೫-೧-೧೧೯)। "त्वः"। **–त्वम् –ತ್ವಮ್.**

कल्यवर्त ಕಲ್ಯವರ್ತ (ಪುಂ೦) ಪ್ರಾತಃಕಾಲದ ಊಟ. कल्ये प्रातर्वर्त्यते – वृतु (वर्तने) + णिच् "अच्" (೩-೧-೧೩೪)।

कल्याण ಕಲ್ಯಾಣ (ನ೦) 1. ಶುಭ, ಮಂಗಳ. कल्ये प्रातःकाले अण्यते – अण (शब्दे) "घञ्" (೩-೩-೧೯)। "कल्याणानां त्वमसि महसां भाजनं विश्वमूर्ते धुर्यां लक्ष्मीमिह मयि भृशं धेहि देव प्रसीद" मालती० ೧-೫। "सन्तुष्टो भार्यया भर्ता भर्त्रा भार्या तथैव च। यस्मिन्नेव कुले नित्यं कल्याणं तत्र वै ध्रुवम्" ಮನು೦ ೩-೬೦। 2. ಸುವರ್ಣ, ಚಿನ್ನ. 3. ಹಬ್ಬ, ಉತ್ಸವ. 4. ಸಂತೋಷ. 5. ಸ್ವರ್ಗ. 6. ಒಳ್ಳೆಯ ಅದೃಷ್ಟ. (ವಿ೦) 7. ಮಂಗಳಕರವಾದ, ಶುಭವಾದ. 8. ಒಳ್ಳೆಯ ಅದೃಷ್ಟಶಾಲಿಯಾದ. 9. ಸಂತೋಷವುಳ್ಳ. 10. ಗುಣಶಾಲಿಯಾದ. स्त्रियाम् "ङीष्" (೪-೧-೪೫)। **–णी –ಣೀ.** "कल्याणी बत गाधेयं लौकिकी प्रतिभाति मे। एति जीवन्तमानन्दो नरं वर्षशतादपि" ರಾಮಾ೦। "त्वमेव कल्याणि तयोस्तृतीया" ರಘು೦ ೬-೨೯। "उपोपविष्टः कल्याणीः कथाश्चक्रे मनोरमाः" ಭಾ೦ ವನ೦ ೧೨೫-೩। (स्त्री०) **–णी –ಣೀ.** 11. ಮಾಷಪರ್ಣ, ಕಾಡುದ್ದಿನ ಗಿಡ, 12. ಗೋವು, ಹಸು.

कल्याणकर ಕಲ್ಯಾಣಕರ (ವಿ೦) 1. ಶುಭಕರವಾದ, ಮಂಗಳವನ್ನುಂಟುಮಾಡುವ. 2. ಶುಭಕಾರ್ಯವನ್ನು

मॉडुव. करोति – ड्डु कृञ् (करणे) "अच्" (३-१-१३४)। कल्याणस्य करः। कल्याणं करोति – ड्डुकृञ् "अण्" (३-२-१)। **–कारः** –ಕಾರಃ. "ण्वुल्" (३-१-१३३)। **–कारकः** –ಕಾರಕಃ. "न निषेध्योऽल्पबाधस्तु सेतुः कल्याणकारकः" याज्ञ० २-१५६। "क्विप्" (३-२-६१)। **–कृत्** –ಕೃತ್. ಒಳ್ಳೆಯ ಕಾರ್ಯವನ್ನು ಮಾಡುವ. ಶುಭಕಾರ್ಯವನ್ನು ನಡೆಸುವ. "न हि कल्याणकृत् कश्चित् दुर्गतिं तात गच्छति" गीता ६-४०।

कल्याणधर्मन् ಕಲ್ಯಾಣಧರ್ಮನ್ (वि०) ಒಳ್ಳೆಯ ಗುಣಶಾಲಿಯಾದ, ಧರ್ಮಶೀಲನಾದ. कल्याणो धर्मोऽस्यास्ति "अनिच्" (५-४-१२४)।

कल्याणनगर ಕಲ್ಯಾಣನಗರ (न०) ಬೆಂಗಳೂರು ನಗರ.

कल्याणमय ಕಲ್ಯಾಣಮಯ (वि०) ಮಂಗಳಪ್ರಚುರವಾದ, ಶುಭವಿಷಯಗಳಿಂದ ತುಂಬಿದ.

कल्याणमित्र ಕಲ್ಯಾಣಮಿತ್ರ (न०) ಒಳ್ಳೆಯ ಸ್ನೇಹಿತ, ಗುಣಶಾಲಿಯಾದ ಗೆಳೆಯ.

कल्याणयोग ಕಲ್ಯಾಣಯೋಗ (पु०) (ಜ್ಯೋತಿಷದಲ್ಲಿ) ಯಾತ್ರಾಲಗ್ನದಿಂದ ಶುಭಸ್ಥಾನಗಳಲ್ಲಿ ಗ್ರಹಗಳು ಸೇರುವ ಒಂದು ಯೋಗ; ಯಾತ್ರಾಲಗ್ನದಿಂದ ಕೇಂದ್ರ (1, 4. 7 ಮತ್ತು 10 ನೆಯ) ಸ್ಥಾನಗಳಲ್ಲಿ ಅಥವಾ ತ್ರಿಕೋಣದಲ್ಲಿ ಗುರುವೂ ಲಾಭ (11ನೆಯ) ಅಥವಾ ಕರ್ಮ (10ನೆಯ) ಸ್ಥಾನದಲ್ಲಿ ರವಿಯೂ ಇದ್ದರೆ ಕಲ್ಯಾಣಯೋಗ ವೆನಿಸುವುದು. ಈ ಯೋಗವು ರಾಜನಿಗೆ ಮಂಗಳಪ್ರದವಾದುದು. "गुरौ केन्द्रे त्रिकोणे वा रविर्लाभे च कर्मणि। कल्याणयोगो भूपस्य यातुः कल्याणकृद्भवेत्"।

कल्याणवत् ಕಲ್ಯಾಣವತ್ (वि०) 1. ಶುಭವುಳ್ಳ, ಮಂಗಳವುಳ್ಳ. कल्याणमस्यास्ति "मतुप्" (५-२-९४)। 2. ಭಾಗ್ಯಶಾಲಿ. 3. ಸಂತೋಷವುಳ್ಳವನು. ಸ್ತ್ರಿಯಾಮ್ "ಙೀಪ್" (४-१-६)। **–वती** –ವತೀ.

कल्याणवचन ಕಲ್ಯಾಣವಚನ (न०) ಶುಭವಾಕ್ಯ, ಮಂಗಳಕರವಾದ ಮಾತು.

कल्याणवाचन ಕಲ್ಯಾಣವಾಚನ (न०) ಬ್ರಾಹ್ಮಣರಿಂದ ಮಂಗಳಕರವಾದ ಮಂತ್ರಗಳನ್ನು ಹೇಳಿಸುವುದು, ಶುಭ ಕಾರ್ಯವನ್ನು ಪ್ರಾರಂಭಿಸುವ ಮೊದಲು ಬ್ರಾಹ್ಮಣರ ಮೂಲಕ ಮಾಡಿಸುವ ಸ್ವಸ್ತಿವಾಚನ.

कल्याणिका ಕಲ್ಯಾಣಿಕಾ (स्त्री०) ಮೆಣಸಿಲಿ. कल्याण संज्ञायां "कन्"। अत इत्वम्।

कल्याणिन् ಕಲ್ಯಾಣಿನ್ (वि०) 1. ಸಂತೋಷವುಳ್ಳ. 2. ಶುಭವುಳ್ಳ, ಮಂಗಳವುಳ್ಳ. 3. ಭಾಗ್ಯವುಳ್ಳವನು, ಅದೃಷ್ಟಶಾಲಿ. कल्याणमस्यास्ति "इनिः" (५-२-११५)। स्त्रियाम् "ङीप्" (४-१-५)। **–निनी** –ಣಿನೀ.

कल्याणी ಕಲ್ಯಾಣೀ (स्त्री०) "कल्याण" ಪದದಲ್ಲಿ ನೋಡಿ.

कल्यापाल ಕಲ್ಯಾಪಾಲ (वि०) ಮದ್ಯವನ್ನು ತಯಾರಿಸುವವನು, ಭಟ್ಟಿ ಇಳಿಸುವವನು. कल्यां सुरां पालयति – पाल (रक्षणे) "अण्" (३-२-१)। "ण्वुल्" (३-१-१३३)। **–पालकः** –ಪಾಲಕಃ.

कल्ल ಕಲ್ಲ (वि०) ಬಧಿರ, ಕಿವುಡ. कल्ल (अव्यक्ते शब्दे) "अच्" (३-१-१३४)। "कल्लो बधिरः खोरखञ्जकौ" त्रिकाण्ड०।

कल्लता ಕಲ್ಲತಾ (स्त्री०) ಕಿವುಡು, ಶಬ್ದ ಕೇಳಿಸದಿರುವಿಕೆ. कल्लस्य भावः "तल्" (५-१-११९)। "त्वः"। **–त्वम्** –ತ್ವಮ್.

कल्लमूक ಕಲ್ಲಮೂಕ (वि०) ಕಿವುಡ ಮತ್ತು ಮೂಗ, ಶಬ್ದ ಕೇಳಿಸದಿರುವವನು ಮತ್ತು ಮಾತಾಡುವ ಶಕ್ತಿಯಿಲ್ಲದವನು. कल्लश्चासौ मूकश्च।

कल्लोल ಕಲ್ಲೋಲ (पु०) 1. ಅಲೆ, ತರಂಗ, ತೆರೆ. कल्लन्तेऽनेन नद्यः – कल्ल (अव्यक्ते शब्दे) वाहु० "कोलच्"। "आयुः कल्लोललोलं कतिपयदिवसस्थायिनी यौवनश्रीः" भर्तृ० ३-३६। 2. ಹರ್ಷ, ಸಂತೋಷ. 3. ಶತ್ರು, ವೈರಿ, ಹಗೆ. "कल्लोलः पुंसि हर्षे स्यात् उल्लोलवैरिणोरपि" मेदि०।

कल्लोलित ಕಲ್ಲೋಲಿತ (वि०) ಅಲೆಯುಂಟಾಗಿರುವ, ತೆರೆಯಿದ್ದಿರುವ. कल्लोलोऽस्य सञ्जातः "इतच्" (५-२-३६)।

कल्लोलिनी ಕಲ್ಲೋಲಿನೀ (स्त्री०) ಅಲೆಗಳಿಂದ ಕೂಡಿದ ಪ್ರದೇಶ, ನದಿ, ಹೊಳೆ. कल्लोलाः सन्त्यस्याम् "इनिः" (५-२-१३५)।

कव ಕವ (पु०) ಶಬ್ದ, ಧ್ವನಿ. कु (शब्दे) भावे "अप्" (३-३-५७)।

कवक ಕವಕ (न०) 1. ಗ್ರಾಸ, ಕಬಳ. ತುತ್ತು. 2. ನಾಯಿಕೊಡೆ. "लशुनं गृञ्जनं चैव पलाण्डुं कवकानि च। अभक्ष्याणि द्विजातीनाममेध्यप्रभवाणि च" मनु० ५-५।

कवच ಕವಚ (पुन०) 1. ಕವಚ, ಅಂಗಿ. कं वातं वञ्चति – वञ्चु (प्रलम्भने) "कः" (वा० ३-२-५)।

"निर्दयं खड्गभिन्नेभ्यः कवचेभ्यः समुत्थितः। आसन् व्योम दिशस्तूलैः पलितैरिव पाण्डुराः" कुमा० १६-६। 2. पटह, तमटे. 3. बिसुरिमर. "कवचो गर्दभाण्डे च सन्नाहे पटहेऽपि च" मेदि०।

कवचहर ಕವಚಹರ (वि०) ಕವಚವನ್ನು ಧರಿಸುವ ಮತ್ತು ಒಯ್ಯುವ ವಯಸ್ಸುಳ್ಳ ಹುಡುಗ. कवचं हरति—हृञ् (हरणे) "अच्" (३-२-१०)। "कवचहरः कुमारः" सि० कौ०।

कवचित ಕವಚಿತ (वि०) 1. ಅಂಗಿಯಿಂದ ಆವೃತವಾದ. ಅಂಗಿ ತೊಟ್ಟಿರುವ. कवचोऽस्य संजातः "इतच्" (५-२-३६)। 2. ಮುಚ್ಚಲ್ಪಟ್ಟ. (लाक्ष०)।

कवचिन् ಕವಚಿನ್ (वि०) ಕವಚವನ್ನು ಧರಿಸಿರುವ. कवचमस्यास्ति "इनिः" (५-२-११५)। स्त्रियाम् "ङीप्" (४-१-५)। **कवचिनी** ಕವಚಿನೀ.

कवटी ಕವಟೀ (स्त्री०) ಕವಾಟ. ಕದ. ಬಾಗಿಲು. कौति शब्दायते—कु (शब्दे) "अटन्" (उ० ४-७१)। गौरा० "ङीष्" (४-१-४१)।

कवयितृ ಕವಯಿತೃ (पु०) 1. ಕವಿ, ಕಾವ್ಯ ರಚಿಸುವವನು, ವರ್ಣಿಸುವವನು. कवृ (वर्णने) + णिच् "तृच्" (३-१-१३३)। 2. ಕವಿಯಂತೆ ನಟಿಸುವವನು. कवि + क्विप् "तृच्" (३-१-१३३)। स्त्रियाम् "ङीप्" (४-१-५)। **कवयित्री** ಕವಯಿತ್ರೀ.

कवर ಕವರ (पु०) 1. ಉಪಾಧ್ಯಾಯ, ಪಾಠ ಹೇಳುವವನು. कु (शब्दे) "अरन्" (उ० ४-१५४)। (न०) 2. ಲವಣ, ಉಪ್ಪು. 3. ಹುಳಿ. (वि०) 4. ಚಿತ್ರ, ವರ್ಣದ. ನಾನಾಬಣ್ಣದ. स्त्रियाम् **कबरा** ಕಬರಾ. वबयोरभेदः। "व्याकीर्णमाल्यकबरां कबरीं तरुण्याः" माघ० ५-१९। (स्त्री०) **-री** -ರೀ. ಕೇಶಪಾಶ, ಹೆಂಗಸರ ಜಡೆ. कबरी केशानां सन्निवेशश्चेत्। कबरान्या। सि० कौ०। "व्याकीर्णमाल्यकबरां कबरीं तरुण्याः" माघ० ५-१९। **-भारः** -ಭಾರಃ. ಉತ್ತಮವಾದ ಜಡೆ, ಚೆನ್ನಾಗಿ ಬೆಳೆದು ಉದ್ದವಾಗಿರುವ ಹೆಂಗಸರ ವೇಣಿ. "अमरीकबरीभारभ्रमरीमुखरीकृतम्। दूरीकरोतु दुरितं गौरीचरणपङ्कजम्" कुव०।

कवर्ग ಕವರ್ಗ (पु०) क ख ग घ ङ ವರ್ಣಗಳ ಗುಂಪು. ಈ ಐದು ವರ್ಣಗಳೂ ಒಂದೇ ಸ್ಥಾನ (ಕಂಠ) ದಲ್ಲಿ ಹುಟ್ಟುವುದರಿಂದ ಒಂದೇ ಗುಂಪಿಗೆ ಸೇರಿದುವು. अ-कवर्ग-हविसर्गाणां कण्ठः।

कवल ಕವಲ (पु०) 1. ಗ್ರಾಸ, ತುತ್ತು. ಬಾಯಿ ತುಂಬುವಷ್ಟು ಆಹಾರ. केन जलेन वलते—वल (सञ्चलने) "अच्" (३-१-१३४)। "आस्वादवद्भिः कबलैस्तृणानां कण्डूयनैर्दंशनिवारणैश्च" रघु० २-५। 2. ಮತ್ಸ್ಯ, ಮೀನು. के जले वलते—वल "अच्"। स्त्रियाम् जाति० "ङीष्" (४-१-६३)। 3. ನಾಲಿಗೆ ಮತ್ತು ಹಲ್ಲುಗಳ ಮಲನಿವಾರಣೆಯಾಗಿ ಬಾಯಿ ಶುದ್ಧವಾಗಲು ಮಾಡುವ ಗಂಡೂಷ, ಬಾಯಿ ಮುಕ್ಕಳಿಸುವ ದ್ರವವಸ್ತು. "दोषप्रच्यवनार्थाय रुजादाहक्षयाय च। जिह्वादन्त-समुत्थस्य हरणार्थं मलस्य च। शोधनो रोपणश्चैव व्रणस्य मुखजस्य वै। उष्णो वा यदि वा शीतः कवलग्राह इष्यते" सुश्रुत० चिकित्सा० १-१२७, २८।

कवलन ಕವಳನ (न०) ನುಂಗುವಿಕೆ. ಕಬಳಿಸುವಿಕೆ. कवल तत्करोति "णिच्" (ग० ७-४-१७) भावे "ल्युट्" (३-३-११५)।

कवलिका ಕವಳಿಕಾ (स्त्री०) ವ್ರಣಚಿಕಿತ್ಸೆಗಾಗಿ ಹಾಕುವ ಬಟ್ಟೆಯ ಕಟ್ಟು, ಪಕ್ಕೆಗಳ ಎಲುಬು ಮುರಿದರೆ ಕಟ್ಟುವ ಬಟ್ಟೆಯ ಕಟ್ಟು; ಎಡಭಾಗದ ಅಥವಾ ಬಲಭಾಗದ ಎಲುಬು (पार्श्वास्थि) ಗಳು ಮುರಿದರೆ ಆವನನ್ನು ನಿಲ್ಲಿಸಿ ಆ ಜಾಗಕ್ಕೆ ತುಪ್ಪವನ್ನು ಬಳಿದು ಕೈಗೆ ತುಪ್ಪವನ್ನು ಸವರಿ ಕೊಂಡು ಚೆನ್ನಾಗಿ ಉಜ್ಜಿಕೊಟ್ಟು ಅನಂತರ ಬಟ್ಟೆಯ ಪಟ್ಟಿಯನ್ನು ಕಟ್ಟಬೇಕು. ಇದಕ್ಕೆ **"ಕವಳಿಕೆ"** ಯೆಂದು ಹೆಸರು. ಅಥವಾ ಎಣ್ಣೆಯ ಕೊಪ್ಪರಿಗೆಯಲ್ಲಾಗಲಿ ತೊಟ್ಟಿಯಲ್ಲಾಗಲಿ ಮಲಗಿಸಬೇಕು. "पर्शुकास्वथ भग्नासु घृताभ्यक्तस्य तिष्ठतः। दक्षिणास्वथवा वामास्वनुमृज्य निबन्धनीः। ततः कवलिकां दत्त्वा वेष्टयेत्सुसमाहितः। तैलपूर्णे कटाहे वा द्रोण्यां वा शाययेन्नरम्" सुश्रुत० चिकित्सा० ३-२९, ३०।

कवलित ಕವಳಿತ (वि०) ತಿನ್ನಲ್ಪಟ್ಟ. ನುಂಗಲ್ಪಟ್ಟ. कवलं करोति—कवल+तत्करोति णिच्+"क्तः" (३-२-१०२)।

कवाट ಕವಾಟ (न०) ಬಾಗಿಲಿನ ಕದ. ದ್ವಾರದ ಗರಿ. कु (शब्दे) भावे "अप्" (३-३-५७)। कवं शब्दमटति "अण्" (३-२-१)। "उरःश्रिया तत्र च गोपुरस्फुरत्-कवाटदुर्धर्षतिरःप्रसारिता" नैष० १-२२। ಮನೆಯ ಕವಾಟ ಮೊದಲಾದುವನ್ನು ತಯಾರಿಸಲು ಕ್ಷೀರವೃಕ್ಷ (ಹಾಲು ಬರುವ ಮರ), ಪಕ್ಷಿಗಳು ವಾಸಿಸುವ ಮರ, ಗಾಳಿಯಿಂದ ಮುರಿದು ಬಿದ್ದ, ಬೆಂಕಿ ತಗುಲಿ ಸುಟ್ಟುಹೋದ, ಆನೆಯಿಂದ ಮುರಿಯಲ್ಪಟ್ಟ, ಸಿಡಿಲಿನಿಂದ ಬಿದ್ದುಹೋದ,

ಮತ್ತು ದೇವಾಲಯಗಳಲ್ಲಿ ಹುಟ್ಟಿ ಬೆಳೆದ ಮರಗಳನ್ನೂ ಬೇವು, ವಿಭೀತಕ (ತಾರೆ), ಅಶ್ವತ್ಥ, ಆಲದ ಮರಗಳನ್ನೂ, ಮುಳ್ಳುಗಿಡಗಳು, ಶಾಲ್ಮಲಿ, ಪಲಾಶ (ಮುತ್ತುಗ) ಗಳನ್ನೂ ಉಪಯೋಗಿಸಕೂಡದು.

कवाटघ्न कवाटघ्न (वि०) ಚೋರ, ತಸ್ಕರ, ಕಳ್ಳ. कवाटं हन्ति – हन (हिंसागत्योः) "टक्" (३-२-५४)। कवाटघ्नश्चोरः। सि० कौ०।

कवार कवार (न०) ಪದ್ಮ, ಕಮಲ. कं जलं वृणोति – वृञ् (वरणे) "अण्" (३-२-१)। "पद्मे कवारं पङ्केजम्" त्रिकाण्ड०।

कवि कवि (पुं०) 1. ಬ್ರಹ್ಮ, ಕ್ರಾಂತದರ್ಶಿ, ಅತೀಂದ್ರಿಯ ವಸ್ತುಗಳನ್ನು ನೋಡುವ ಶಕ್ತಿಯುಳ್ಳ ಪರಬ್ರಹ್ಮ; ಬ್ರಹ್ಮನು ಸರ್ವಗತನಾಗಿಯೂ ಸರ್ವಜ್ಞನಾಗಿಯೂ, ಕ್ರಾಂತದರ್ಶಿಯಾಗಿಯೂ ಇರುವುದರಿಂದ ಈ ಹೆಸರು. "कविं पुराणमनुशासितारमणोरणीयांसमनुस्मरेद्यः। सर्वस्य धातारमचिन्त्यरूपमादित्यवर्णं तमसः परस्तात्" गीता ८-९। 2. ಬ್ರಹ್ಮನ ಹೃದಯದಿಂದ ಜನಿಸಿದ ಭೃಗು ಋಷಿಯ ಮಗ, ಶುಕ್ರಾಚಾರ್ಯರ ತಂದೆ. 3. ಕವಿಯ ಮಗನಾದ ಶುಕ್ರಾಚಾರ್ಯ, ಅಸುರರ ಗುರು. कु (शब्दे) "इः" (उ० ४-१३८)। "ब्रह्मणो हृदयं भित्त्वा निःसृतो भगवान् भृगुः। भृगोः पुत्रः कविर्विद्वान् शुक्रः कविसुतो ग्रहः" भा० आदि० ६७। [ವಿವರಕ್ಕೆ "शुक्र" ಪದದಲ್ಲಿ ನೋಡಿ.] 4. ಕಾವ್ಯವನ್ನು ರಚಿಸುವವನು, ಕವಿತೆ ಮಾಡುವವನು, ವರ್ಣಿಸುವವನು. कवृ (वर्णने) "इः" (उ० ४-१३८)। "तेजः क्षमा वा नैकान्तं कालज्ञस्य महीपतेः। नैकमोजः प्रसादो वा रसभावविदः कवेः" माघ० २-८३। "मन्दः कवियशःप्रार्थी गमिष्याम्यपहास्यताम्" रघु० १-३। 5. ವಿದ್ವಾಂಸ, ಪಂಡಿತ. ಬುದ್ಧಿವಂತ. "अध्यापयामास पितॄन् शिशुराङ्गिरसः कविः" मनु० २-१५१। 6. ವಾಲ್ಮೀಕಿ ಮಹರ್ಷಿ. "कविर्वाल्मीकिशुक्रयोः। सूरौ काव्यकरे पुंसि स्यात्खलीने तु योषिति" मेदि०। (वि०) 7. ಸ್ತೋತ್ರ ಮಾಡುವವನು. 8, ಸ್ತುತಿಸಲ್ಪಡುವವನು. (स्त्री०) वा "ङीष्" (ग० ४-१-४५)। **कविः कविः, कवी कवी**. ಲಗಾಮು, ಕಡಿವಾಣ. मेदि०।

कविक कविक (पुं०) ಲಗಾಮು, ಕಡಿವಾಣ. कवि स्वार्थे "कन्"।

कविका कविका (स्त्री०) ಲಗಾಮು, ಕಡಿವಾಣ. कवते – कु (शब्दे) "इः" (उ० ४-१३८)। स्वार्थे "कन्"। "सोत्सेधैः स्कन्धदेशैः खरतरकविकाकर्षणात्यर्थभुग्नैः" मुद्रा० ४-७।

कविज्येष्ठ कविज्येष्ठ (पुं०) ವಾಲ್ಮೀಕಿ. "प्राचेतसस्तु वाल्मीकिः कविज्येष्ठः कुशीवशः" त्रिकाण्ड०।

कवितर कवितर (वि०) ಇಬ್ಬರು ಕವಿಗಳಲ್ಲಿ ಶ್ರೇಷ್ಠನಾದ ಒಬ್ಬ ಕವಿ. अनयोः अतिशयेन कविः "तरप्" (५-३-५७)। **–तमः –तमः**. ಅನೇಕ ಕವಿಗಳಲ್ಲಿ ಶ್ರೇಷ್ಠನಾದ ಒಬ್ಬ ಕವಿ. एतेषामतिशयेन कविः "तमप्" (५-३-५५)।

कविता कविता (स्त्री०) ಕವಿಯ ವ್ಯಾಪಾರ, ಗದ್ಯ ಅಥವಾ ಪದ್ಯರೂಪವಾದ ಕಾವ್ಯ ರಚಿಸುವಿಕೆ. कवेर्भावः कर्म वा "तल्" (५-१-११९)। "व्रीडा चेत् किमु भूषणैः सुकविता यद्यस्ति राज्येन किम्" भर्तृ० १-१७। "त्वः" (५-१-११९)। **–त्वम् –त्वम्**. "कवित्वगान-प्रियवादसत्यान्यस्या विधाता व्यधिताधिकण्ठम्" नैष० ७-६७।

कवितार्किकसिंह कवितार्किकसिंह (पुं०) ಕವಿ ಮತ್ತು ತಾರ್ಕಿಕರಲ್ಲಿ ಶ್ರೇಷ್ಠರಾದ ಶ್ರೀನಿಗಮಾಂತದೇಶಿಕರು, ಶ್ರೀವೇಂಕಟನಾಥರು. कविषु तार्किकेषु च सिंहः।

कविनन्दन कविनंदन –पुत्र –पुत्र, –सुत –सुत (पुं०) ಭೃಗುಪುತ್ರನಾದ ಕವಿಯ ಮಗ, ಶುಕ್ರಾಚಾರ್ಯ. कवेः नन्दनः पुत्रः सुतो वा। "भृगोः पुत्रः कविर्विद्वान् शुक्रः कविसुतो ग्रहः" भा० आदि० ६७।

कविय कवियु (न०) ಕಡಿವಾಣ, ಲಗಾಮು. कुङ् (शब्दे) बाहु० "इयः"। "कवियं कविकोच्यते" त्रिकाण्ड०।

कविराज कविराज (पुं०) ಕವಿಶ್ರೇಷ್ಠ, ಉತ್ತಮನಾದ ಕವಿ. कवीनां राजा "टच्" (५-४-९१)। "श्रीहर्षं कविराजराजिमुकुटालङ्कारहीरः सुतम्" नैष० १-१४५।

कवोष्ण कवोष्ण (न०) 1. ಬೆಚ್ಚಗಿರುವಿಕೆ, ಸ್ವಲ್ಪ ಬಿಸಿ. ईषदुष्णम् कोः वा कवादेशः (६-३-१०७)। पक्षे कादेशः (६-३-१०४)। **कोष्णम् कोष्ण नपुं०**. उभयाभावे "कत्" (६-३-१०१)। **कदुष्णम् कदुष्ण नपुं०**. (वि०) 2. ಸ್ವಲ್ಪ ಬಿಸಿಯಾಗಿರುವ, ಬೆಚ್ಚಗಿರುವ. "पयः पूर्वैः स्वनिःश्वासैः कवोष्णमुपभुज्यते" रघु० १-६७।

कव्य कव्य (न०) ಪಿತೃದೇವತೆಗಳಿಗೆ ಯೋಗ್ಯವಾದ ಅನ್ನ, ಪಿತೃಗಳನ್ನು ಉದ್ದೇಶಿಸಿ ಕೊಡುವ ಅನ್ನ. कूयते पितृभ्यः–

कु (शब्दे) "यत्" (३-१-९७)। "श्रोत्रियायैव देयानि हव्यकव्यानि दातृभिः। अर्हत्तमाय विप्राय तस्मै दत्तं महाफलम्" मनु० ३-१२७। ಪಿತೃಗಳನ್ನು ಉದ್ದೇಶಿಸಿ ಕೊಡಲ್ಪಡುವ ಅನ್ನ (कव्य) ವನ್ನು ಜ್ಞಾನಿಗೆ ಕೊಡಬೇಕು. "ज्ञानोत्कृष्टाय देयानि कव्यानि च हवींषि च। न हि हस्तावसृग्दिग्धौ रुधिरेणैव शुध्यतः" मनु० ३-१३२।

कव्यभुज् कव्यभुज् (पु०) ಪಿತೃಗಳು ಅಥವಾ ಪಿತೃ ದೇವತೆಗಳ ಗಣ. कव्यं भुङ्क्ते — भुज (पालनाभ्यवहारयोः) "क्विप्" (३-२-७६)।

कव्यवाह कव्यवाह (पु०) ದೇವತೆಗಳಿಗೆ ಹವಿಸ್ಸನ್ನು ತಲುಪಿಸುವ ಅಗ್ನಿದೇವತೆ. कव्यं वहति — वह (प्रापणे) "अण्" (३-२-१)। "ण्युट्" (३-२-६५)। **—वाहनः —वाहनः.**

कशा कशा (स्त्री०) ಎತ್ತು ಕುದುರೆ ಮೊದಲಾದುವುಗಳನ್ನು ಹೊಡೆಯುವ ಚಾವಟಿ, ಬಾರುಗೋಲು. कशति — कश (गतिशासनयोः) "अच्" (३-१-१३४)। "तेजोनिरोधसमताऽवहितेन यन्त्रा सम्यक्कशात्रयविचारवता नियुक्तः" माघ० ५-१०। ಉತ್ತಮ, ಮಧ್ಯಮ ಮತ್ತು ಅಧಮರೂಪವಾದ ಅಶ್ವಗಳಲ್ಲಿ ಮೃದು, ಸಮ ಮತ್ತು ನಿಷ್ಠುರರೂಪವಾದ ಮೂರು ರೀತಿಯಾದ ತಾಡನವನ್ನು ಸಂದರ್ಭಾನುಸಾರ ಪ್ರಯೋಗಿಸಬೇಕು.

कशार्ह कशार्ह (पु०) ಚಾವಟಿಯಿಂದ ಹೊಡೆಯಿಸಿ ಕೊಳ್ಳಲ್ಪಡುವ ದುಷ್ಟಕುದುರೆ, ಚಾವಟಿಯ ಏಟಿಗೆ ಅರ್ಹವಾದ ಕುದುರೆ. कशामर्हति — अर्ह (पूजायाम्) "अण्" (३-२-१)।

कशिक कशिक (पु०) ನಕುಲ, ಮುಂಗುಸಿ. कशति हिनस्ति सर्पम् — बाहु० "इकः"।

कशिपु कशिपु (पु०) 1. ಅನ್ನ. 2. ವಸ್ತ್ರ, ಬಟ್ಟೆ. कशति दुःखम् — कश (गतिशासनयोः) "कुः" (उ० १-३७)। निपा०। 3. ಅನ್ನ ಮತ್ತು ವಸ್ತ್ರ. "कशिपुर्भक्ताच्छादनयोरेकोक्त्या पृथक् तयोः पुंसि" मेदि०। (पुन०) 4. ಶಯ್ಯೆ, ಹಾಸಿಗೆ. "कल्पैः कशिपुभिः कान्तं पर्यङ्कव्यजनासनैः" भाग० ३-२३-१६। "अस्त्री कशिपुशय्यायां वस्त्रेऽन्ने तद्द्वयेऽपि च" नानार्थर०।

कशेरुक कशेरुक (न०) ಬೆನ್ನಿನ ಎಲುಬು, ಬೆನ್ನುಮೂಳೆ.

कशेरु (रू) कशेरु (रू) (स्त्री०) ಬೆನ್ನಿನ ಎಲುಬು, ಬೆನ್ನುಮೂಳೆ. कं वायुं शृणाति — शृ (हिंसायाम्) "ऊः" एरङादेशश्च (उ०१-८८)। बाहु० वा "उः"। **कशेरुः कशेरुः.** स्वार्थे "कन्" (५-४-५)। **कशेरुका कशेरुका.**

कश्चन कश्चन (अव्य०) ಯಾವನೋ ಒಬ್ಬ, ಒಬ್ಬ ಅನಿರ್ದಿಷ್ಟ ವ್ಯಕ್ತಿ. ಅಸಾಕಲ್ಯಾ (ಅಸಂಪೂರ್ಣಾ)ರ್ಥದಲ್ಲಿ ಇದು ಒಂದು ಪದವೆಂದು ಕೆಲವರ ಮತ. ಪಾಣಿನಿ ಮತ್ತು ಅಮರಕಾರರ ಮತದಲ್ಲಿ कः चन ಎಂದು ಎರಡು ಪದಗಳು. "दमघोषसुतेन कश्चन प्रतिशिष्टः प्रतिभानवानथ" माघ० १६-१। ಹೀಗೆಯೇ कःचित् कश्चित्, कञ्चित्, केनचित्, कस्मैचित् ಇತ್ಯಾದಿ.

कश्मल कश्मल (न०) 1. ಕೊಳೆ. 2. ಪಾಪ. 3. ಸಂಮೋಹ, ಬುದ್ಧಿಭ್ರಂಶ. कश (गतिशासनयोः) "कलः" मुट् च (उ० १-१०६)। "कुतस्त्वा कश्मलमिदं विषमे समुपस्थितम्" गीता २-२। (वि०) 4. ಮಲಿನವಾದ, ಕೊಳೆಯಾದ.

कश्मीर कश्मीर (पु० ब० व०) 1. ಕಾಶ್ಮೀರ ದೇಶ. कश (गतिशासनयोः) "ईरन्" मुट् च (उ० ४-३२)। 2. ಕಾಶ್ಮೀರದೇಶನಿವಾಸಿಗಳು. 3. ಕಾಶ್ಮೀರದೇಶದ ದೊರೆಗಳು. कश्मीराणां राजा "अण्" (वा० ४-१-१६६)। अलो "लुक्" (२-४-६२)। "शारदामठमारभ्य कुङ्कुमाद्रितटान्तकः। तावत् कश्मीरदेशः स्यात् पञ्चाशद्योजनात्मकः"।

कश्मीरज कश्मीरज (पु०) 1. ಕೇಸರಿ. (वि०) 2. ಕಾಶ್ಮೀರ ದೇಶದಲ್ಲಿ ಹುಟ್ಟಿದವನು. कश्मीरे जायते।

कश्मीरजन्मा कश्मीरजन्मन् (पु०) ಕುಂಕುಮ ಕೇಸರಿ. कश्मीरे जन्म यस्य।

कश्य कश्य (न०) 1. ಮದ್ಯ, ಹೆಂಡ. कशत्यनेन — कश (गतिशासनयोः) बाहु० "यः"। 2. ಅಶ್ವದ ಮಧ್ಯ ಭಾಗ, ಕುದುರೆಯ ಬೆನ್ನು. कशामर्हति — "यः" (५-१-६६)। (वि०) 3. ಚಾವಟಿಯ ಏಟಿಗೆ ಅರ್ಹವಾದ, ಚಾವಟಿಯಿಂದ ಹೊಡೆಯಲು ಅರ್ಹವಾದ. "कश्यं त्रिषु कशार्हे स्यात् क्लीबं मद्याश्वमध्ययोः" मेदि०।

कश्यप कश्यप (पु०) 1. ಬ್ರಹ್ಮನ ಮಾನಸಪುತ್ರನಾದ ಮರೀಚಿ ಮಹರ್ಷಿಯ ಮಗ. कश्यं पिबति — पा (पाने) "कः" (३-२-४)। "ब्रह्मणस्तनयो योऽभूत् मरीचिरिति विश्रुतः। कश्यपस्तस्य पुत्रोऽभूत् कश्यपानात्स कश्यपः" मार्क०। [कश्यपमहर्षियು ಬ್ರಹ್ಮನ ಮಾನಸಪುತ್ರನಾದ ಮರೀಚಿಮಹರ್ಷಿಯ ಮಗ. ಕರ್ದಮಪುತ್ರಿಯಾದ

ಕಲೆಯು ಈ ಋಷಿಯ ತಾಯಿ. ಈ ಮಹರ್ಷಿಯು ದಕ್ಷ ಪ್ರಜಾಪತಿಯ ಮಕ್ಕಳಾದ ಅದಿತಿ ದಿತಿ ಮೊದಲಾದ ಹದಿಮೂರು ಮಂದಿ ಕನ್ಯೆಯರನ್ನು ಮದುವೆಯಾಗಿ ಅನೇಕ ಮಂದಿ ಪ್ರಜೆಗಳನ್ನು ಪಡೆದನು. ದೈತ್ಯರು, ದೇವತೆಗಳು, ದಾನವರು, ಸಿದ್ಧರು, ಗಂಧರ್ವರು, ಅಪ್ಸರಸಿಯರು, ಯಕ್ಷರು, ಲತಾವೃಕ್ಷಗಳು ಮೊದಲಾದುವು, ಮಾಂಸಾಹಾರಿ ಗಳಾದ ಮುಷ್ಟಮೃಗಗಳು, ಅಶ್ವ, ಅಶ್ವತರ, ಗರ್ದಭ, ಶ್ಯೇನ, ಗೃಧ್ರ, ಗೋವುಗಳು, ಅರುಣ, ಗರುಡ ಮತ್ತು ಸರ್ಪಗಳು ಕಶ್ಯಪನ ಸಂತಾನಗಳು.

ಕಶ್ಯಪನು ತಪಸ್ಸು ಮಾಡಿ ಬ್ರಹ್ಮನಿಂದ ವಿಷಹರವಿದ್ಯೆ ಯನ್ನು ಕಲಿತನು. ವರುಣನ ಗೋವನ್ನು ಯಜ್ಞಕ್ಕಾಗಿ ತಂದು ಅದನ್ನು ಹಿಂತಿರುಗಿಸದೆ ಭೂಮಿಯಲ್ಲಿ ಹುಟ್ಟು ವಂತೆ ಶಾಪ ಹೊಂದಿದನು. ಶೃಂಗಿಯ ಶಾಪದಿಂದ ಸರ್ಪಗಳಿಗೆ ಹೆದರಿದ ಪರೀಕ್ಷಿತನು ಸಮುದ್ರಮಧ್ಯದಲ್ಲಿ ವಾಸಮಾಡುತ್ತಿದ್ದಾಗ ಆವನನ್ನು ಕಚ್ಚಲು ತಕ್ಷಕನು ಬ್ರಾಹ್ಮಣವೇಷದಿಂದ ಹೋಗುತ್ತಿರಲು ತನ್ನ ಮಂತ್ರಶಕ್ತಿ ಯಿಂದ ಪರೀಕ್ಷಿತನನ್ನು ಬದುಕಿಸಲು ಕಶ್ಯಪನೂ ಅಲ್ಲಿಗೆ ಹೊರಟನು. ಕಶ್ಯಪನ ಮಂತ್ರಶಕ್ತಿಯನ್ನು ಅನೇಕ ರೀತಿ ಯಲ್ಲಿ ಪರೀಕ್ಷಿಸಿದ ತಕ್ಷಕನು ಕಶ್ಯಪನನ್ನು ಉಪಾಯದಿಂದ ಒಂದಕ್ಕೆ ಕಳುಹಿಸಿಬಿಡುವನು.

ಗೋತ್ರಪ್ರವರ್ತಕರಾದ ಮಹರ್ಷಿಗಳಲ್ಲಿ ಕಶ್ಯಪ ಋಷಿಯೂ ಒಬ್ಬನು.] ಮಾ॰ ಆದಿ॰ ೨೦, ೩೧, ೪೨, ೬೬ ಅಧ್ಯಾಯಾ:। 2. ಒಂದು ಜಾತಿಯ ಮೃಗ. 3. ಮತ್ಸ್ಯ, ಮೀನು. 4. ಕಮಠ, ಆಮೆ.

कष-हिंसायाम् (भ्वा॰ पर॰ सक॰ से॰)। कषति। चकाष। अकषीत्, अकाषीत्। ಹಿಂಸಿಸು, ಪೀಡಿಸು.

कष कಷ (पु॰) 1. ಸಾಣೆಕಲ್ಲು. 2. ಚಿನ್ನದ ಬಣ್ಣವನ್ನು ಪರೀಕ್ಷಿಸಲು ಉಪಯೋಗಿಸುವ ಒಂದು ಜಾತಿಯ ಕಲ್ಲು, ಒರೆಗಲ್ಲು. कषति — कष (हिंसायाम्) "अच्" (३-१-१३४)। (वि॰) 3. ಉಜ್ಜುವ. 4. ಒರೆಹಚ್ಚುವ. 5. ಅಳಿಸುವ. "छदहेम कषन्निवालसत् कषपाषाणनिभे नभस्तले" नैष॰ २-६९।

कषण कಷಣ (न॰) 1. ಒರೆಹಚ್ಚುವುದು. 2. ಉಜ್ಜುವುದು, ತಿಕ್ಕುವುದು. कष (हिंसायाम्) "ल्युट्" (३-३-११५)। "कषणकम्पनिरस्तमहाहिभिः क्षणविमत्त-मतङ्गजवर्जितैः" किरा॰ ५-४७।

कषत् कಷತ್ (वि॰) ಉಜ್ಜುತ್ತಿರುವ, ತಿಕ್ಕುತ್ತಿರುವ. कष (हिंसायाम्) "शतृ" (३-२-१२४)। "छदहेम कषन्निवालसत्" नैष॰ २-६९।

कषा कಷಾ (स्त्री॰) ಬಾಮಟಿ, ಎತ್ತು ಕುದುರೆ ಮುಂತಾದು ವನ್ನು ಹೊಡೆಯುವ ಬಾರುಗೋಲು. कष्यतेऽनया — कष (हिंसायाम्) कर॰ "अच्" बाहु॰।

कषाकु कಷಾಕು (पु॰) 1. ಅಗ್ನಿ. 2. ಸೂರ್ಯ. कष (हिंसायाम्) "काकुः" (उ॰ ३-७७)।

कषाय कಷಾಯ (पुंन॰) 1. ಕಷಾಯರಸ, ಒಗರು ರಸ, ಆರು ಭೋಜ್ಯರಸಗಳಲ್ಲೊಂದು. कषति कण्ठम् — कष (हिंसायाम्) "आयः" बाहु॰। "तुवरस्तु कषायोऽस्त्री" अम॰। (1) मधुरः, (2) अम्लः, (3) लवणः, (4) कटुः, (5) तिक्तः ಮತ್ತು (6) कषायः ಇವು ಆರು ಭೋಜ್ಯರಸಗಳು. ಆಪ್ಯ (ಜಲದಿಂದುಂಟಾದ) ರಸವು ಉಳಿದ ಭೂತಗಳ ಸಂಸರ್ಗದಿಂದ ಈ ಆರು ರಸಗಳಾಗಿ ಪರಿಣಮಿಸುವುದು. (1) ಪೃಥ್ವಿ ಮತ್ತು ಜಲಗುಣಬಾಹುಳ್ಯದಿಂದ ಮಧುರರಸ, (2) ಪೃಥ್ವಿ ಮತ್ತು ಅಗ್ನಿಗುಣಬಾಹುಳ್ಯದಿಂದ ಆಮ್ಲರಸ, (3) ಜಲ ಮತ್ತು ಅಗ್ನಿಗುಣಬಾಹುಳ್ಯದಿಂದ ಲವಣರಸ, (4) ವಾಯು ಮತ್ತು ಅಗ್ನಿಗುಣಬಾಹುಳ್ಯದಿಂದ ಕಟುರಸ, (5) ವಾಯು ಮತ್ತು ಆಕಾಶಗುಣಬಾಹುಳ್ಯದಿಂದ ತಿಕ್ತರಸ ಮತ್ತು (6) ಪೃಥ್ವಿ ಮತ್ತು ವಾಯುಗುಣಬಾಹುಳ್ಯದಿಂದ ಕಷಾಯ ರಸ. ಸುಶ್ರುತ॰ ಸೂತ್ರ॰ ೪೨-೩। "यो वक्त्रं परिशोषयति जिह्वां स्तम्भयति कण्ठं बध्नाति हृदयं कर्षति पीडयति च स कषायः" ಸುಶ್ರುತ॰ ಸೂತ್ರ॰ ೪೨-೯। ಪಂಚಭೂತಗಳು ಪರಸ್ಪರಸಂಸರ್ಗ,–ಉಪಕಾರ, –ಅನುಪ್ರವೇಶ (ಏಕಾತ್ಮೀಭಾವ)ಗಳಿಂದ ಎಲ್ಲಾ ಭೂತ ಗಳಲ್ಲೂ ಎಲ್ಲವೂ ಇದ್ದರೂ ಅವುಗಳ ಪ್ರಾಧಾನ್ಯದಿಂದ ಆಯಾ ಭೂತಗಳೆನಿಸಿಕೊಳ್ಳುವುವು. ಸುಶ್ರುತ॰ ಸೂತ್ರ॰ ೪೨-೩। 2. ನಿರ್ಯಾಸ, ಮರದ ರಸ. "घृष्टो वटकषायेण अनुलिप्तः प्रियङ्गुणा। क्षीरेण षष्टिकान् भुक्त्वा सर्वपापैः प्रमुच्यते" भा॰ अनु॰। 3. ವಿಲೇಪನ. "कर्णार्पितो लोध्रकषायरूक्षे गोरोचनाक्षेपनितान्तगौरे" कुमा॰ ७-१७। 4. ಅಂಗರಾಗ, ಮೈಗೆ ಸುವಾಸನೆಯ ಪುಡಿಯನ್ನು ಹಾಕುವಿಕೆ. 5. ಪರಿಮಳ, ಸುವಾಸನೆ. 6. ಅನುರಾಗ, ಪ್ರೇಮ. 7. ಕ್ವಾಥ, ಕಷಾಯ, ಔಷಧ ವಸ್ತುವಿನೊಡನೆ ಕುದಿಯಿಸಿ ಇಂಗಿಸಿದ ರಸ. 8. ಚಿತ್ತ ವಿಕ್ಷೋಭ, ಮನಸ್ಸಿನ ಅಶಾಂತಿ. "रागे क्वाथे कषायोऽस्त्री निर्यासे सौरभे रसे" वैज॰। 9. ಕೆಂಪು. (पु॰) 10. ರಾಗ ದ್ವೇಷ ಮೊದಲಾದ ದೋಷ. "आहारशुद्धौ सत्त्वशुद्धिः सत्त्वशुद्धौ ध्रुवा स्मृतिः। स्मृतिलम्भे

सर्वग्रन्थीनां विप्रमोक्षस्तस्मै मृदितकषायाय तमसः पारं दर्शयति" छान्दोग्य०। 11. श्योनाकवृक्ष, हेम्मर. 12. कलियुग. 13. कೆಂಪು ಮತ್ತು ಹಳದಿ ಮಿಶ್ರವಾದ ಬಣ್ಣ. (वि०) 14. सुवासनೆಯಾಗಿರುವ, ಪರಿಮಳದಿಂದ ಕೂಡಿದ. "प्रत्यूषेषु स्फुटितकमलामोदमैत्रीकषायः" मेघ० १-३१। 15. ಕೆಂಪಗಿರುವ. "चूताङ्कुरास्वाद-कषायकण्ठः पुंस्कोकिलो यन्मधुरं चुकूज" कुमा० ३-३२। 16. ಪಟುವಾಗಿಲ್ಲದ, ಜೆರುಕಾಗಿಲ್ಲದ. 17. ಕಷಾಯ ರಸದಿಂದ ಕೂಡಿದ. 18. ಚಿತ್ತವಿಕ್ಷೋಭೆಯುಳ್ಳ, ಅಶಾಂತಿಯುಳ್ಳ. 19. ಅನುರಾಗದಿಂದ ಕೂಡಿದ.

कषायवर्ग कषायवर्ग (पु०) ಕಷಾಯರಸವುಳ್ಳ ವಸ್ತುಗಳ ಗುಂಪು. न्यग्रोधादिः अम्बष्ठादिः प्रियङ्ग्वादिः रोध्रादिः [ವಿವರಕ್ಕೆ सुश्रुत० सूत्र० ३८ ನೋಡಿ] त्रिफला (ಆಳಲೆಕಾಯಿ, ತಾರೆಕಾಯಿ ಮತ್ತು ನೆಲ್ಲಿಕಾಯಿ), शल्लकी (ಆನೆಪೇಲ), जम्बु (ನೇರಳೆ), आम्रः (ಮಾವು), वकुलः (ಪವಳ), तिन्दुकः (ತೂಬರೆ) ಮುಂತಾದುವು ಕಷಾಯ ವರ್ಗಕ್ಕೆ ಸೇರಿದುವು.

कषायित कषायित (वि०) 1. ಬಣ್ಣಹಾಕಿರುವ. 2. ಕೆಂಪಾಗಿರುವ, ಕೆಂಪಗೆ ಮಾಡಲ್ಪಟ್ಟಿರುವ. कषायोऽस्य सञ्जातः "इतच्" (५-२-३६)। "प्रियमिति वनिता नितान्तमागःस्मरणसरोषकषायितायताक्षी" माघ० ७-११। 3. ಕ್ಷೋಭೆಹೊಂದಿದ, ಅಶಾಂತಮಾದ. "घुसृणैर्यत्र कषायिताशया" नैष० २-७७।

कषायिन् कषायिन् (पु०) 1. शालवृक्ष, ಮುತ್ತಿಮರ. 2. ಖರ್ಜೂರದ ಮರ. कषायो निर्यासोऽस्त्यस्य "इनिः" (५-२-११५)। (वि०) 3. ಕೆಂಪುಬಣ್ಣದಿಂದ ಕೂಡಿದ.

कषि कषि (वि०) 1. ಹಿಂಸಿಸುವ, ಪೀಡಿಸುವ. कष (हिंसायाम्) "इन्" (उ० ४-११७)।

कषीका कषीका (स्त्री०) ಒಂದು ಜಾತಿಯ ಪಕ್ಷಿ. कष (हिंसायाम्) "ईकन्" (उ० ४-१६)।

कष्ट कष्ट (न०) 1. ಪೀಡೆ, ಹಿಂಸೆ. 2. ವ್ಯಥೆ, ದುಃಖ. कष (हिंसायाम्) "क्तः" (३-३-१७४)। "इन्दुरादि-रजनिष्ट कलङ्की कष्टमत्र स भवानपि मा भूत्" नैष० ५-११९। (वि०) 3. ದುಃಖಕರವಾದ, ವ್ಯಥೆಯನ್ನು ಉಂಟುಮಾಡುವ. कष्टो मोहः। 4. ಹಿಂಸೆಯನ್ನು ಕೊಡುವ, ಪೀಡಿಸುವ. "बन्धनानि च कष्टानि परप्रेष्यत्वमेव च" मनु० १२-७८। 5. ಕಷ್ಟಸಾಧ್ಯವಾದ. 6. ತಿಳಿಯಲು ಕಷ್ಟವಾದ. कष्टं शास्त्रम्।

कष्टकर कष्टकर (वि०) 1. ಪೀಡಾಕರವಾದ, ಹಿಂಸೆಯನ್ನು ಉಂಟುಮಾಡುವ. कष्ट + डु कृञ् (करणे) "टः" (३-२-२०)। 2. ವ್ಯಥೆಯನ್ನುಂಟುಮಾಡುವ, ದುಃಖಕರವಾದ.

कष्टकार कष्टकार (वि०) "कष्टकर" ಪದದ ಅರ್ಥ. कष्टं करोति — डु कृञ् (करणे) "अण्" (३-२-१)।

कष्टतर कष्टतर (वि०) ಎರಡರಲ್ಲಿ ಹೆಚ್ಚು ಕಷ್ಟವಾದ. अतिशयेन कष्टम्। "तरप्" (५-३-५७)। "तमप्" (५-३-५५)। **—तमः —तमः.**

कष्टरिपु कष्टरिपु (पु०) ಕಷ್ಟಸಾಧ್ಯನಾದ ಶತ್ರು. ಜಯಿಸಲು ಕಷ್ಟವಾದ ಶತ್ರು. कष्टो रिपुः। "प्राज्ञं कुलीनं शूरं च दक्षं दातारमेव च। कृतज्ञं धृतिमन्तं च कष्टमाहुररिं बुधाः" मनु० ७-२१०।

कस-गतौ (भ्वा० पर० सक० से०)। कसति। चकास। अकसीत्, अकासीत्। ಹೋಗು, ಚಲಿಸು, ನಡೆ.

ಈ ಧಾತುವಿಗೆ ಉಪಸರ್ಗಗಳ ಯೋಗದಿಂದ ಉಂಟಾಗುವ ಅರ್ಥಭೇದಗಳು:—

(1) निर्, निस् + कस = निष्कासः। निष्कासितः। ಹೊರಕ್ಕೆ ಓಟ್ಟು.

(2) वि + कस = विकसति। विकासः। 1. ಪ್ರಕಾಶಿಸು. 2. ಅರಳು. "विकसति हि पतङ्गस्योदये पुण्डरीकं द्रवति च हिमरश्मावुद्गते चन्द्रकान्तः" मालती० १-२७।

(3) प्र + वि + कस = प्रविकासः। ಹೆಚ್ಚು ಪ್ರಕಾಶಿಸು. "प्रविकसति चिराय द्योतिताशेषलोके दशशतकरमूर्ता-वक्षिणीव द्वितीये" माघ० ११-६३।

कस-शातने (अदा० आत्म० सक० से०)। कस्ते कसाते कसते। अकसिष्ट। ಉಜ್ಜು, ತಿಕ್ಕು.

कस कस (पु०) ಸಾಣೆಕಲ್ಲು. कस्ते — कस (शातने) "अच्" (३-१-१३४)।

कसन कसन (न०) 1. ಕಾಸರೋಗ. (स्त्री०) **—ना —नम्.** 2. ಜೀಡರ ಹುಳು. कस्ते हिनस्ति — कस (शातने) "ल्युः" (३-१-१३४)। "पिच्छिला कसनादंशात् रुधिरं शीतलं भवेत्" सुश्रुत०।

कस्तूरिका कस्तूरिका (स्त्री०) ಕಸ್ತೂರಿ, ಒಂದು ಮೃಗದ ಮದ, ಕಸ್ತೂರೀಮೃಗದ ಹೊಕ್ಕುಳಿನಲ್ಲಿ ಸಿಕ್ಕುವ ಒಂದು ಸುಗಂಧದ್ರವ್ಯ. "सखीमुखायोत्सृजतीमपाङ्गात् कर्पूरकस्तूरिकयोः प्रवाहम्" नैष० १०-१०२।

कस्तूरिकामृग ಕಸ್ತೂರಿಕಾಮೃಗ (ಪು೦) ಕಸ್ತೂರೀ ಮೃಗ. "कस्तूरिकामृगविमर्दसुगन्धिरेति रागीव सक्तिमधिकां विषयेषु वायुः" माघ० ४-६१।

कस्तूरी ಕಸ್ತೂರೀ (ಸ್ತ್ರೀ೦) ಒಂದು ಮೃಗದ ಮದ, ಕಸ್ತೂರೀಮೃಗದ ಹೊಕ್ಕುಳಿನಲ್ಲಿ ಸಿಕ್ಕುವ ಒಂದು ಸುಗಂಧ ದ್ರವ್ಯ. कसति गन्धोऽस्याः दूरतः — कस (गतौ) "ऊरः" (उ० ४-९०)। पृषो०। ಕಸ್ತೂರಿಯು ಕಾಮು ರೂಪೋದ್ಭವಾ, ನೈಪಾಳೀ ಮತ್ತು ಕಾಶ್ಮೀರಜಾ ಎಂದು ಮೂರು ವಿಧ. "कस्तूरी त्रिविधा स्मृता। कामरूपोद्भवा श्रेष्ठा नैपाली मध्यमा स्मृता। कामरूपोद्भवा कृष्णा नैपाली नीलवर्णयुक्। काश्मीरदेशसंभूता कस्तूरीत्वधमा मता" भावप्र०।

कस्तूरीमृग ಕಸ್ತೂರೀಮೃಗ (ಪು೦) ಕಸ್ತೂರಿಯನ್ನು ಕೊಡುವ ಒಂದು ಮೃಗ.

कस्मल ಕಸ್ಮಲ (ನ೦) 1. ಕಶ್ಮಲ, ಕೊಳೆ. 2. ಪಾಪ. 3. ಸಂಮೋಹ. कस (गतौ) "कलः" मुट् च (उ० १-१०६)।

कस्वर ಕಸ್ವರ (ವಿ೦) 1. ಹೋಗುವವನು, ನಡೆಯುವವನು. 2. ಬೀಡಿಸುವವನು. कस (गतौ शातने च) "वरच्" (३-२-१७५)।

कहय ಕಹಯ (ಪು೦) ಸೂರ್ಯನ ಕುದುರೆ. कस्य सूर्यस्य हयः।

कहोड ಕಹೋಡ (ಪು೦) ಒಬ್ಬ ಋಷಿ, ಉದ್ದಾಲಕ ಋಷಿಯ ಶಿಷ್ಯ, ಅಷ್ಟಾವಕ್ರನ ತಂದೆ. "उद्दालकस्य नियतः शिष्य एको नाम्ना कहोडेति बभव राजन्" भा० वन० १३४-८। [ವಿವರಕ್ಕೆ "अष्टावक्र" ಪದದಲ್ಲಿ ನೋಡಿ.] ङस्य वा "लः" **कहोलः** ಎಂದೂ ಪ್ರಯೋಗವುಂಟು.

कह्लार ಕಹ್ಲಾರ (ನ೦) ಎಳೆಗೆಂಪಿನ ಬಿಳಿನೈದಿಲೆ. के जले ह्लादते — ह्लादी (सुखे च) "अच्" (३-१-१३४)। पृषो०। "आह्लादिकह्लारसमीरणाहते पुरः पपाताम्भसि यामुने रजः" माघ० १२-६६।

कह्व ಕಹ್ವ (ಪುಂಸ್ತ್ರೀ೦) ಬಕಪಕ್ಷಿ. के जले ह्वयति — ह्वेञ् (स्पर्धायां शब्दे च) "कः" (वा० ३-२-५)।

कांस ಕಾಂಸ (ವಿ೦) ಕಂಸದೇಶದ ಜನರು, ಕಂಸದೇಶದಲ್ಲಿರುವ, ಕಂಸದೇಶದಲ್ಲಿ ಹುಟ್ಟಿದ. कंसो देशः अभिजनोऽस्य "अण्" (४-३-९३)।

कांसीकृत ಕಾಂಸೀಕೃತ (ವಿ೦) ಕಂಚಿನ ಪಾತ್ರೆಯಾಗಿ ಮಾಡಲ್ಪಟ್ಟ. अकांस्यं कांस्यं कृतम् — कंसाय हितम् "छः" (५-१-५)। कंसीयम्। तस्य विकारः "यञ्" छस्य "लुक्" (४-३-१६८)। कांस्यम्। अकांस्यं कांस्यं कृतम् "च्विः" (५-४-५०)। यलोपः (६-४-१५२)। दीर्घः (७-४-२६)।

कांस्य ಕಾಂಸ್ಯ (ನ೦) 1. ಕಂಚು, ತಾಮ್ರತವರಗಳಿಂದ ತಯಾರಾದ ಒಂದು ಲೋಹ. कंसाय पानपात्राय हितम् "छः" (५-१-५)। कंसीयम्। तस्य किकारः "यञ्" छलोपश्च (४-३-१६८)। "ताम्रायःकांस्यरैत्यानां त्रपुणः सीसकस्य च। शौचं यथार्हं कर्तव्यं क्षाराम्लोदकवारिभिः" मनु० ५-११४। 2. ಕಂಚಿನ ಜಾಗಟೆ. (पुं०) 3. ಕಂಚಿನ ಕುಡಿಯುವ ಪಾತ್ರೆ. "कांस्यमुपहितसरोजपतद्भ्रमरौघभारगुरु राजयोषितः" माघ० १५-८१। "न पादौ धावयेत् कांस्ये कदाचिदपि भाजने" मनु० ४-६५।

कांस्यकार ಕಾಂಸ್ಯಕಾರ (ಪು೦) ಕಂಚುಗಾರ, ಕಂಚಿನ ಪಾತ್ರೆ ತಯಾರಿಸುವವನು. कांस्यं तत्पात्रं करोति — ङ कृञ् (करणे) "अण्" (३-२-१)।

कांस्यताल ಕಾಂಸ್ಯತಾಳ (ಪು೦) ಕಂಚಿನ ಕೈತಾಳ, ಝಲ್ಲರಿ.

कांस्यभाजन ಕಾಂಸ್ಯಭಾಜನ (ನ೦) ಕಂಚಿನ ಪಾತ್ರೆ.

कांस्यमल ಕಾಂಸ್ಯಮಲ (ನ೦) ಕಿಲುಬು, ಕಂಚಿನ ಮೇಲಿನ ಕೊಳೆ.

काक ಕಾಕ (ಪು೦) 1. ಪಾಯಸ, ಕಾಗೆ. कायति — कै (शब्दे) "कन्" (उ० ३-४३)। "वसन्तकाले संप्राप्ते काकः काकः पिकः पिकः"। "यदेष सौधाग्रनटे पटाञ्चले चलेऽपि काकस्य पदार्पणग्रहः" नैष० १२-२१। "काकोऽपि जीवति चिराय बलिं च भुङ्क्ते" पञ्चतं०। ನಿಂದ್ಯಾರ್ಥದಲ್ಲಿ ಮತ್ತು ಹೀನಾರ್ಥದಲ್ಲಿ ಇದರ ನಾಮ್ಯ ಕೊಡುವುದುಂಟು. "न त्वां काकमहं मन्ये" ನಿನ್ನನ್ನು ಕಾಗೆಗಿಂತಲೂ ಕಡೆಯಾಗಿ ಭಾವಿಸುತ್ತೇನೆ. 2. ಕಾಕದ್ವೀಪ, ಕಾಗೆಗಳೇ ಪ್ರಧಾನವಾಗಿರುವ ಒಂದು ಭೂಭಾಗ. (ನ೦) 3. ಕಾಕಸ್ನಾನ, ತಲೆಯನ್ನು ಮಾತ್ರ ತೊಳೆದುಕೊಳ್ಳುವುದು. ನೀರಿನಲ್ಲಿ ಮುಳುಗಿ ಸ್ನಾನ ಮಾಡಲು ಹೆದರಿ ತಲೆಯನ್ನು ಮಾತ್ರ ನೀರಿನಲ್ಲಿ ಅದ್ದಿ ಮಾಡುವ ಸ್ನಾನವನ್ನು "काकस्नानम्" ಎಂದು ಹೇಳುವರು. 4. ಕಾಗೆಗಳ ಸಮೂಹ. काकानां समूहः "अण्" (४-२-३७)। 5. ಒಂದು ವಿಧ ಸುರತಬಂಧ. ["काकपद" ಪದದಲ್ಲಿ ನೋಡಿ] 6. ಸ್ವಲ್ಪ ನೀರು. ईषत् कम् ईषज्जलम् — "कादेशः" (६-३-१०५)।

काककङ्गु काकंगु (पु०) कागेगे प्रियवाद नवणे. काकप्रियः कङ्गुः।

काकगवेषण काकगवेषण (न०) व्यर्थवाद मत्तु अप्रयोजकवाद केलस.

नाटचपरिभाषा नाट्यपरिभाषा (स्त्री०) ನಾಟ್ಯದಲ್ಲಿ ರಾಜ ರಾಣಿ ಅಮಾತ್ಯ ಸೇವಕ ಮುಂತಾದವರು ಪರಸ್ಪರ ಸಂಬೋಧಿಸಿ ಕರೆಯುವ ಪಾರಿಭಾಷಿಕ ಪದ. ರಾಜನನ್ನು ಭೃತ್ಯ(ಸೇವಕ)ರು "ಸ್ವಾಮಿನ್" "ದೇವ" ಎಂದೂ ರಾಜರ್ಷಿಗಳು ಮತ್ತು ವಿದೂಷಕನು "ವಯಸ್ಯ" ಎಂದೂ ಋಷಿಗಳು "ರಾಜನ್" ಎಂದೂ ಮತ್ತು ಅಪತ್ಯ ಪ್ರತ್ಯಯಾಂತ "ದಾಶರಥೇ", "ಪಾಂಡವ", "ಪೌರವ" ಮುಂತಾದ ಪದಗಳಿಂದಲೂ ವಿಪ್ರನು ವಿಪ್ರನನ್ನು ಅವನ ಹೆಸರಿನಿಂದಲೂ ಅಥವಾ "ಆರ್ಯ" ಪದದಿಂದಲೂ ಸಂಬೋಧಿಸಬೇಕು. ರಾಜನು ವಿದೂಷಕನನ್ನು ಅವನ ಹೆಸರಿನಿಂದಲೂ ಅಥವಾ "ವಯಸ್ಯ" ಎಂದೂ ನಟಿಸ ನಾತ್ರ ಧಾರರು ಪರಸ್ಪರ "ಆರ್ಯ" "ಆರ್ಯೆ" ಎಂದೂ ಪಾರಿಪಾರ್ಶ್ವಕನು ಸೂತ್ರಧಾರನನ್ನು "ಭಾವ" ಎಂದೂ ಸೂತ್ರಧಾರನು ಅವನನ್ನು "ಮಾರಿಷ" ಎಂದೂ ಕರೆಯಬೇಕು. ದೇವತೆಗಳು ಋಷಿಗಳು ಮತ್ತು ಯತಿಗಳನ್ನು ಎಲ್ಲರೂ "ಭಗವನ್" ಎಂದು ಸಂಬೋಧಿಸಬೇಕು. ವಿದೂಷಕನು ರಾಣಿಯನ್ನೂ ಚೇಟಿಯನ್ನೂ "ಭವತಿ" ಎಂದು ಸಂಬೋಧಿಸಬೇಕು. ಸಾರಥಿಯು ರಾಜನನ್ನು "ಆಯುಷ್ಮನ್" ಎನ್ನಬೇಕು. ಮಗನು "ವತ್ಸ" "ಪುತ್ರ" "ತಾತ" ಮುಂತಾದ ಪದಗಳಿಂದ ಸಂಬೋಧಿಸಲ್ಪಡಬೇಕು. ಇತ್ಯಾದಿ. सा० द० ६।

नाटचप्रिय नाट्यप्रिय (पुं०) ಮಹಾದೇವ, ನಟರಾಜ, ಪರಶಿವ. नाटचं प्रियमस्य।

नाटचभाषा नाट्यभाषा (स्त्री०) ನಾಟ್ಯದಲ್ಲಿ ಪಾತ್ರಗಳು ಉಪಯೋಗಿಸಬೇಕಾದ ಭಾಷೆಗಳು. **ಭಾಷಾ ವಿಭಾಗ :** ಉತ್ತಮ ಮತ್ತು ಮಧ್ಯಮ ಪಾತ್ರಗಳು ಮತ್ತು ವಿದ್ವಾಂಸರಿಗೆ ಸಂಸ್ಕೃತ ಭಾಷೆ (ರಾಜ ಅಮಾತ್ಯ ರಾಜಪುರೋಹಿತ ರಾಜಕುಮಾರ ಇತ್ಯಾದಿ), ಉತ್ತಮ

ಸ್ತ್ರೀ ಪಾತ್ರಗಳಿಗೆ ಶೌರಸೇನೀ ಭಾಷೆ. ಇದೇ ಸ್ತ್ರೀಪಾತ್ರಗಳಿಗೆ ಶ್ಲೋಕಗಳಲ್ಲಿ ಮಹಾರಾಷ್ಟ್ರಭಾಷೆ. ರಾಜನ ಅಂತಃಪುರದಲ್ಲಿರುವ ವಾಮನ ಷಂಡ ಕಂಚುಕಿಗಳಿಗೆ ಮಾಗಧೀ ಭಾಷೆ. ಚೇಟ (ಭೃತ್ಯ) ರಿಗೆ ಅರ್ಧಮಾಗಧಿ. ವಿದೂಷಕನಿಗೆ ಗೌಡೀ ಭಾಷೆ. ಧೂರ್ತ (ಜೂಜುಗಾರ ಮುಂತಾದವ) ರಿಗೆ ಅವಂತೀಭಾಷೆ. ಯೋಧರು ಮತ್ತು ಪಟ್ಟಣಿಗರಿಗೆ ವೈದರ್ಭೀಭಾಷೆ. ಶಬರರಿಗೆ ಶಾಬರೀ ಭಾಷೆ. ಇತ್ಯಾದಿ. "पुरुषाणामनीचानां संस्कृतं स्यात्कृतात्मनाम्। शौरसेनी प्रयोक्तव्या तादृशीनां च योषिताम्। आसामेव तु गाथासु महाराष्ट्रीं प्रयोजयेत्। अत्रोक्ता मागधी भाषा राजान्तःपुरचारिणाम्। चेटानां राजपुत्राणां श्रेष्ठानां चार्धमागधी। प्राच्या विदूषकादीनां धूर्तानां स्यादवन्तिजा। योधनागरिकादीनां दाक्षिणात्या हि दीव्यताम्। शबराणां शकादीनां शाबरीं संप्रयोजयेत्" सा० द० ६।

नाटघरासक नाट्यरासक (न०) ಹದಿನೆಂಟು ವಿಧ ಉಪರೂಪಕಗಳಲ್ಲೊಂದು. **ಇದರ ಲಕ್ಷಣ:** ನಾಟ್ಯರಾಸಕವು ಒಂದು ಏಕಾಂಕಉಪರೂಪಕ. ಅನೇಕ ವಿಧ ತಾಳ ಮತ್ತು ಲಯಗಳಿಂದ ಕೂಡಿರುವುದು. ಇದರಲ್ಲಿ ನಾಯಕನು ಉದಾತ್ತಗುಣವುಳ್ಳವನು ಮತ್ತು ಪೀಠ ಮರ್ದನು ಉಪನಾಯಕನಾಗಿರುವನು. ಶೃಂಗಾರರಸ ಮಿಶ್ರವಾದ ಹಾಸ್ಯರಸವು ಪ್ರಧಾನವಾದುದು. ವಾಸಕ ಸಜ್ಜಿಕೆಯು ನಾಯಿಕ. ಮುಖ ಮತ್ತು ನಿರ್ವಹಣ ಎರಡು ಮಾತ್ರ ಸಂಧಿಗಳು. ಇತ್ಯಾದಿ. "नाटघरासकमेकाङ्कं बहुतालल्यस्थिति। उदात्तनायकं तद्वत् पीठमर्दोपनायकम्। हास्योऽङ्गयत्र सशृङ्गारो नारी वासकसज्जिका। मुखनिर्वहणे सन्धी लास्याङ्गानि दशापि च" इत्यादि. सा० द० ६।

नाटघशाला नाट्यशाला (स्त्री०) ನಾಟಕಮಂದಿರ, ನಾಟ್ಯವನ್ನು ಪ್ರದರ್ಶಿಸುವ ಗೃಹ, ಕಲಾಹವ್ಯಾಸಿಗಳ ರಂಗ ಮಂದಿರ. ನಾಟ್ಯಾರ್ಥೆ ಶಾಲಾ।

नाटघाङ्ग नाट्याङ्ग (न०) ಲಾಸ್ಯದ ಹತ್ತು ವಿಧ ಅಂಗಗಳು. (1) गेयपदम्, (2) स्थितिपाठ्यम्, (3) आसीनम्, (4) पुष्पगण्डिका, (5) प्रच्छेदकः, (6) त्रिगूढकम्, (7) सैन्धवम्, (8) द्विगूढकम्, (9) उत्तमोत्तमकम् ಮತ್ತು (10) उक्तिप्रत्युक्तिकम् ಇವು ಹತ್ತು ವಿಧ ಲಾಸ್ಯಾಂಗಗಳು.

(1) **गेयपदम्** — ಆಸನದಲ್ಲಿ ಕುಳಿತು ಮುಂಭಾಗದಲ್ಲಿರುವ ವೀಣೆಯನ್ನು ನುಡಿಸುತ್ತ ಹಾಡುವುದು "ಗೇಯಪದ". "तन्त्रीभाण्डं पुरस्कृत्योपविष्टस्यासने पुरः। शुष्कं गानं गेयपदम्" सा० द० ६-२१४।

(2) **स्थितिपाठ्यम्** — ಮನ್ಮಥಬಾಧೆಯಿಂದ ಪೀಡಿತಳಾಗಿ ನಿಂತು ಪ್ರಾಕೃತವನ್ನು ಓದುವುದು "ಸ್ಥಿತಿಪಾಠ್ಯ". "स्थितिपाठ्यं तदुच्यते। मदनोत्तापिता यत्र पठति प्राकृतं स्थिता" सा० द० ६-२१५।

(3) **आसीनम्**—ವೀಣಾ ವೇಣು ಮೃದಂಗ ಮೊದಲಾದ ಯಾವ ವಿಧವಾದ ವಾದ್ಯವೂ ಇಲ್ಲದೆ ಯಾವ ಆಲಂಕಾರವನ್ನೂ ಮಾಡಿಕೊಳ್ಳದೆ ದುಃಖ ಮತ್ತು ಚಿಂತಾಕ್ರಾಂತಳಾಗಿ ಕೂಡುವುದು "ಆಸೀನ". "निखिलातोद्यरहितं शोकचिन्ताकुलाबला। अप्रसाधितगात्रं यदासीनासीनमेव तत्" सा० द० ६-२१६।

(4) **पुष्पगण्डिका** — ವೀಣಾ ವೇಣು ಮೃದಂಗ ವಾದ್ಯಗಳೊಡನೆ ಹೆಂಗಸರು ಪುರುಷನಂತೆಯೂ ಪುರುಷರು ಹೆಂಗಸಿನಂತೆಯೂ ಅಭಿನಯ ಮಾಡುತ್ತಾ ಹಾಡುವುದು "ಪುಷ್ಪಗಂಡಿಕೆ". "आतोद्यमिश्रितं गेयं छन्दांसि विविधानि च। स्त्रीपुंसयोर्विपर्यासचेष्टितं पुष्पगण्डिका" सा० द० ६-२१७।

(5) **प्रच्छेदकः**—ಪತಿಯು ಪರಸ್ತ್ರೀಯಲ್ಲಿ ಆಸಕ್ತನಾಗಿರುವುದನ್ನು ತಿಳಿದು ದುಃಖಿಗೊಂಡು ನಾಯಿಕೆಯು ವೀಣೆಯೊಡನೆ ತಾನೂ ಹಾಡುವುದು "ಪ್ರಚ್ಛೇದಕ". "अन्यासक्तं पतिं मत्वा प्रेमविच्छेदमन्युना। वीणापुरःसरं गानं स्त्रियाः प्रच्छेदको मतः" सा० द० ६-२१८।

(6) **त्रिगूढकम्** — ಪುರುಷರು ಸ್ತ್ರೀವೇಷವನ್ನು ಧರಿಸಿ ನಾಟ್ಯವಾಡುವುದು "ತ್ರಿಗೂಢಕ". "स्त्रीवेषधारिणां पुंसां नाटघं श्लक्ष्णं त्रिगूढकम्" सा० द० ६-२१९।

(7) **सैन्धवम्** — ಸಂಕೇತಸ್ಥಾನವನ್ನು ಗೊತ್ತುಮಾಡಿ ಅಲ್ಲಿಗೆ ಬರದೆ ತಪ್ಪಿಸಿಕೊಂಡ ನಾಯಕನು ವೀಣಾದಿ ವಾದ್ಯಗಳೊಡನೆ ಪ್ರಾಕೃತದಲ್ಲಿ ಮಾತನಾಡುವುದು "ಸೈಂಧವ". "कश्चन भ्रष्टसंकेतः सुव्यक्तकरणान्वितः। प्राकृतं वचनं वक्ति यत्र तत्सैन्धवं मतम्" सा० द० ६-२२०।

(8) **द्विगूढम्** — ಉಕ್ತಿಪ್ರತ್ಯುಕ್ತಿಗಳಿಂದ ಕೂಡಿ ರಸಭಾವ ಪರಿಪೂರ್ಣವಾದ ಸಪ್ತಸ್ವರಸಹಿತವಾದ ಸಂಗೀತವು "ದ್ವಿಗೂಢ". "चतुरस्रपदं गीतं मुखप्रतिमुखान्वितम्। द्विगूढं रसभावाढ्यम्" सा० द० ६-२२१।

(9) **उत्तमोत्तमकम्** — ಕೋಪ ಮತ್ತು ಪ್ರಸನ್ನತೆಗಳಿಂದ ಉಂಟಾದ ಮತ್ತು ತಿರಸ್ಕಾರದಿಂದ ಕೂಡಿದ ಹಾಗೂ ರಸಭಾವಗರ್ಭಿತವಾದ ಮತ್ತು ಹಾವಲೀಲೆಗಳಿಂದಲೂ ಚಿತ್ರಶ್ಲೋಕ ಬಂಧಗಳಿಂದಲೂ ಮನೋಹರ

ವಾದ ಗಾನವು "ಉತ್ತಮೋತ್ತಮಕ". "उत्तमोत्तमकं पुनः। कोपप्रसादजमधिक्षेपयुक्तं रसोत्तरम्। हावहेलान्वितं चित्रश्लोकबन्धमनोहरम्" सा० द० ६-२२२।

(10) **उक्तिप्रत्युक्तम्** — ಉಕ್ತಿಪ್ರತ್ಯುಕ್ತಿಗಳಿಂದಲೂ ನಿಂದೆಯೊಡಗೂಡಿದ ಅಪ್ರಿಯ ವಚನಗಳಿಂದಲೂ ವಿಲಾಸದಿಂದಲೂ ಕೂಡಿದ ಗೀತಾರ್ಥವು "ಉಕ್ತಿಪ್ರತ್ಯುಕ್ತ". "उक्तिप्रत्युक्तिसंयुक्तं सोपालम्भमलीकवत्। विलासान्वितगीतार्थमुक्तप्रत्युक्तमुच्यते" सा० द० ६-२२३।

नाटचालङ्कार नाट्यालंकार (पुं०) ನಾಟ್ಯದ ಅಲಂಕಾರ, ನಾಟ್ಯದ ಸೊಗಸಿಗೆ ಕಾರಣವಾದ ಸಂದರ್ಭ. ನಾಟ್ಯಾಲಂಕಾರವು ಮೂವತ್ತಮೂರು (33) ವಿಧ. (1) आशीः, (2) आक्रन्दः, (3) कपटम्, (4) अक्षमा, (5) गर्वः, (6) उद्यमः, (7) आश्रयः, (8) उत्प्रासनम्, (9) स्पृहा, (10) क्षोभः, (11) पश्चात्तापः. (12) उपपत्तिः, (13) आशंसा, (14) अध्यवसायः, (15) विसर्पः, (16) उल्लेखः, (17) उत्तेजनम्, (18) परीवादः, (19) नीतिः, (20) अर्थविशेषणम्, (21) प्रोत्साहनम्, (22) साहाय्यम्, (23) अभिमानः, (24) अनुवर्तनम्, (25) उत्कीर्तनम्, (26) याच्ञा, (27) परिहारः, (28) निवेदनम्, (29) प्रवर्तनम्, (30) आख्यानम्, (31) युक्तिः, (32) प्रहर्षः ಮತ್ತು (33) उपदेशनम्। सा० द० ६।

आशीः — ಬಂಧುಜನರ ಶುಭಾಶಂಸನ, ಒಳ್ಳೆಯದಾಗಬೇಕೆಂಬ ಬಂಧುಗಳ ಕೋರಿಕೆ. "आशीरिष्टजनाशंसा" सा० द० ६-१९९। "ययातेरिव शर्मिष्ठा भर्तुर्बहुमता भव। सुतं त्वमपि सम्राजं सेव पूरुमवाप्नुहि" शाकु० ४-६।

आक्रन्दः — ದುಃಖದಿಂದ ಅಳುವುದು. "आक्रन्दः प्रलपितं शुचा" सा० द० ६-१९९। "हा देवि कुन्ति भोजराजभवनपताके" वेणी० ६।

कपटम् — ಮಾಯೆಯಿಂದ ರೂಪವನ್ನು ಬದಲಾಯಿಸಿಕೊಂಡು ಮೋಸಗೊಳಿಸುವುದು. "कपटं मायया यत्र रूपमन्यद्विभाव्यते" सा० द० ६-१९९। "मृगरूपं परित्यज्य विधाय कपटं वपुः। नीयते रक्षसा तेन"।

अक्षमा — ಸ್ವಲ್ಪವೂ ಅವಮಾನವನ್ನು ಸಹಿಸದಿರುವಿಕೆ. "अक्षमा सा परिभवः स्वल्पोऽपि न विषह्यते" सा० द० ६-२००। "भोः सत्यवादिन् किं पुनरिमामतिसन्धाय लभ्यते। शार्ङ्गरवः—विनिपातः" शाकु० ५।

गर्वः — ಅಹಂಕಾರದ ಮಾತು. "गर्वोऽवलेपजं वाक्यम्" सा० द० ६-२००। "ममापि नाम सत्त्वैरभिभूयन्ते गृहाः" शाकु० ६।

उद्यमः — ಕಾರ್ಯದ ಪ್ರಾರಂಭ. "कार्यस्यारम्भ उद्यमः" सा० द० ६-२००। "पश्यामि शोकविवशोऽन्तकमेव तावत्" ಇಲ್ಲಿ ರಾವಣನಲ್ಲಿ ಯುದ್ಧದ ಮನೋಭಾವವು ಸೂಚಿಸಲ್ಪಟ್ಟಿದೆ.

आश्रयः — ತನ್ನ ಶ್ರೇಯಸ್ಸಿಗಾಗಿ ಸಜ್ಜನರನ್ನು ಸೇರುವುದು. "ग्रहणं गुणवत्कार्यहेतोराश्रय उच्यते" सा० द० ६-२०१। "विभीषणः — राममेवाश्रयामि"।

उत्प्रासनम् — ತಾನೇ ಉತ್ತಮನೆಂದು ತಿಳಿದಿರುವ ಅನುತ್ತಮನ ವಿಷಯದಲ್ಲಿ ಮಾಡುವ ಅಪಹಾಸ್ಯ. "उत्प्रासनं त्वपहासो योऽसाधौ साधुमानिनि" सा० द० ६-२०१। "यदा तु पूर्ववृत्तमन्यसङ्गाद्विस्मृतो भवान् तदा कथमधर्मभीरुः" शाकु० ५।

स्पृहा — ಸುಂದರವಾದ ವಸ್ತುವನ್ನು ಹೊಂದುವ ಆಸೆ. "आकाङ्क्षा रमणीयत्वाद्वस्तुनो या स्पृहा तु सा" सा० द० ६-२०२। "चारुणा स्फुरितेनायमपरिक्षतकोमलः। पिपासतो ममानुज्ञां ददातीव प्रियाधरः"।

क्षोभः — ತಿರಸ್ಕಾರ ಮತ್ತು ದೂಷಣೆಗಳಿಂದ ಆಗುವ ಮನೋವ್ಯಥೆ. "अधिक्षेपवचःकारी क्षोभः प्रोक्तः स एव तु" सा० द० ६-२०२। "त्वया तपस्विचण्डाल प्रच्छन्नवधवर्तिना। न केवलं हतो वाली स्वात्मा च परलोकतः"।

पश्चात्तापः — ಅಜ್ಞಾನದಿಂದ ತಿರಸ್ಕರಿಸಲ್ಪಟ್ಟ ವಿಷಯದಲ್ಲಿ ಅನಂತರ ಪರಿತಪಿಸುವುದು. "मोहावधीरितार्थस्य पश्चात्तापः स एव तु" सा० द० ६-२०३। "किं देव्या न विचुम्बितोऽस्मि बहुशो मिथ्याभिशप्तस्तदा"।

उपपत्तिः — ಕಾರ್ಯಸಿದ್ಧಿಗಾಗಿ ಅದಕ್ಕೆ ಅನುಕೂಲವಾದ ಉಪನ್ಯಾಸ. "उपपत्तिर्मता हेतोरुपन्यासोऽर्थसिद्धये" सा० द० ६-२०३। "म्रियते म्रियमाणे या त्वयि जीवति जीवति। तां यदीच्छसि जीवन्तीं रक्षात्मानं ममासुभिः"।

आशंसा — ತನ್ನ ಇಷ್ಟಾರ್ಥವು ಕೈಗೂಡುವ ಅಪೇಕ್ಷೆ. "आशंसनं स्यादाशंसा" सा० द० ६-२०४। "तत्पश्येयमनङ्गमङ्गलगृहं भूयोऽपि तस्या मुखम्" मालती० ५-९।

अध्यवसायः — ಉತ್ಸಾಹದಿಂದ ಮಾಡುವ ಪ್ರತಿಜ್ಞೆ, ದೃಢಸಂಕಲ್ಪ. "प्रतिज्ञाध्यवसायकः" सा० द० ६-२०४। "अस्य वक्षः क्षणेनैव निर्मथ्य गदयाऽनया। लीलयोन्मूलयाम्येष भुवनद्वयमद्य वः"।

विसर्पः — ಅನಿಷ್ಟಫಲವನ್ನು ಕೊಡುವ ಕಾರ್ಯ. "विसर्पो यत्समारब्धं कर्मानिष्टफलप्रदम्" सा० द० ६-२०४।

"एकस्य तावत्पाकोऽयं दारुणो भुवि वर्तते। केशग्रहे द्वितीयेऽस्मिन् नूनं निःशेषिताः प्रजाः" वेणी० ३-१४।

उल्लेखः — ಕಾರ್ಯವನ್ನು ನಿರ್ದೇಶಮಾಡಿ ಹೇಳುವುದು. "कार्यदर्शनमुल्लेखः" सा० द० ६-२०५। "राजन् समिदाहरणाय प्रस्थिता वयम्। एष कुलपतेः कण्वस्याश्रमो दृश्यते। न चेदन्यकार्यातिपातः प्रविश्य प्रतिगृह्यतामातिथेयः सत्कारः" शाकु० १।

उत्तेजनम् — ತನ್ನ ಕಾರ್ಯಸಿದ್ಧಿಗಾಗಿ ವಿತ್ತೊಬ್ಬನನ್ನು ಹುರಿದುಂಬಿಸಲು ಆಡುವ ಕಠಿನವಾದ ಮಾತು. "उत्तेजनमितीष्यते। स्वकार्यसिद्धयेऽन्यस्य प्रेरणाय कठोरवाक्" सा० द० ६-२०५। "इन्द्रजिच्चण्डवीर्योऽसि नाम्नैव बलवानसि। धिक् धिक् प्रच्छन्नरूपेण युध्यसेऽस्मद्भयाकुलः"।

परिवादः — ಬೆದರಿಸಿ ಮಾತಾಡುವುದು. "भर्त्सना तु परिवादः" सा० द० ६-२०६। "धिक् धिक् सूत किं कृतवानसि। वत्सस्य मे प्रकृतिदुर्ललितस्य पापो पापं व्यवस्यति समक्षमुदायुधोऽसौ" वेणी० ४-५।

नीतिः — ಶಾಸ್ತ್ರದಂತೆ ನಡೆಯುವುದು. "नीतिः शास्त्रेण वर्तनम्" सा० द० ६-२०६। "विनीतवेषेण प्रवेष्टव्यानि तपोवनानि नाम। इदं तावद्गृह्यताम्" शाकु० १।

अर्थविशेषणम् — ಒಬ್ಬನು ಪ್ರತಿಕೂಲವಾಗಿ ಹೇಳಿದ ಮಾತನ್ನು ಖಂಡಿಸಿ ತಾನು ಮೊದಲು ಹೇಳಿದ ಮಾತನ್ನೇ ಅನೇಕ ಸಲ ಹೇಳಿ ಸ್ಥಿರಪಡಿಸುವುದು. "उक्तस्यार्थस्य यत्तु स्यादुत्कीर्तनमनेकधा। उपालम्भविशेषेण तत्स्यादर्थविशेषणम्" सा० द० ६-२०७। "आः कथमिदं नाम। ननु भवानेव नितरां लोकवृत्तान्तनिष्णातः। सतीमपि ज्ञातिकुलैकसंश्रयां जनोऽन्यथा भर्तृमतीं विशङ्कते। अतः समीपे परिणेतुरिष्यते प्रियाप्रिया वा प्रमदा स्वबन्धुभिः" शाकु० ५-१७।

प्रोत्साहनम् — ಪ್ರೋತ್ಸಾಹದ ಮಾತು ಹೇಳಿ ಕಾರ್ಯವನ್ನು ಮಾಡಿಸುವುದು. "प्रोत्साहनं स्यादुत्साहगिरा कस्यापि योजनम्" सा० द० ६-२०७। "कालरात्रिकरालेयं स्त्रीति किं विचिकित्स्यसि। तज्जगत्त्रितयं त्रातुं तात ताडय ताटकाम्" बालरा०।

साहाय्यम् — ಇತರರ ಕಷ್ಟಕಾಲದಲ್ಲಿ ಅವರಿಗೆ ಅನುಕೂಲವಾಗಿ ವರ್ತಿಸುವುದು. "साहाय्यं संकटे यत् स्यात्सानुकूल्यं परस्य च" सा० द० ६-२०८। "अश्वत्थामा — त्वमपि तावद्राज्ञः पार्श्ववर्ती भव। कृपः — गच्छाम्यहमत्र प्रतिविधातुम्" वेणी० ३।

अभिमानः — ಗರ್ವ, ಅಹಂಕಾರ. "अभिमानः स एव स्यात्" सा० द० ६-२०८। "दुर्योधनः — मातः किमप्यसदृशं कृपणं वचस्ते सुक्षत्रिया क्व भवती क्व च दीनतैषा" वेणी० ५-३।

अनुवर्तनम् — ವಿನಯದಿಂದ ಅನುಸರಿಸಿ ನಡೆದುಕೊಳ್ಳುವುದು. "प्रश्रयादनुवर्तनम्" सा० द० ६-२०८। "राजा — अपि तपो वर्धते। अनसूया — इदानीमतिथिविशेषलाभेन" शाकु० १।

उत्कीर्तनम् — ಹಿಂದೆ ನಡೆದ ವೃತ್ತಾಂತವನ್ನು ಹೇಳುವುದು. "भूतकार्याख्यानमुत्कीर्तनम्" सा० द० ६-२०९। "अत्रासीत्फणिपाशबन्धनविधिः शक्त्या भवद्देवरे गाढं वक्षसि ताडिते हनुमता द्रोणाद्रिरत्राहृतः" बालरा०।

याच्ञा — ತಾನು ನೇರವಾಗಿ ಅಥವಾ ದೂತನ ಮೂಲಕ ಯಾಚಿಸುವುದು. "याच्ञा तु क्वापि याच्ञा या स्वयं दूतमुखेन वा" सा० द० ६-२०९। "भो लङ्केश्वर दीयतां जनकजा रामः स्वयं याचते"। "अद्यापि देहि वैदेहीं दयालुस्त्वयि राघवः। शिरोभिः कन्दुकक्रीडां किं कारयसि वानरान्।

परिहारः — ಅಕಾರ್ಯ ಮಾಡಿದವನ ಅಪರಾಧವನ್ನು ಮನ್ನಿಸುವುದು. "परिहार इति प्रोक्तः कृतानुचितमार्जनम्" सा० द० ६-२१०। "प्राणप्रयाणदुःखार्त उक्तवानस्म्यनक्षरम्। तत्क्षमस्व विभो किं च सुग्रीवस्ते समर्पितः"।

निवेदनम् — ತಿರಸ್ಕೃತವಾದ ಕರ್ತವ್ಯವನ್ನು ಹೇಳುವುದು. "अवधीरितकर्तव्यकथनं तु निवेदनम्" सा० द० ६-२१०। "आर्य, समुद्राभ्यर्थनया गन्तुमुद्यतोऽसि। तत्किमेतत्" राघवाभ्यु०।

प्रवर्तनम् — ಕರ್ತವ್ಯವನ್ನು ಸರಿಯಾದ ರೀತಿಯಲ್ಲಿ ಚೆನ್ನಾಗಿ ಮಾಡುವಂತೆ ಹೇಳುವುದು. "प्रवर्तनं तु कार्यस्य यत्स्यात्साधुप्रवर्तनम्" सा० द० ६-२११। "राजा — कञ्चुकिन् देवस्य देवकीनन्दनस्य बहुमानात् वत्सस्य मे भीमसेनस्य विजयमङ्गलाय प्रवर्तन्तां तदुचिताः समारम्भाः" वेणी० ६।

आख्यानम् — ಪೂರ್ವವೃತ್ತಾಂತವನ್ನು ಹೇಳುವುದು. "आख्यानं पूर्ववृत्तोक्तिः" सा० द० ६-२११। "देशः सोऽयमरातिशोणितजलैः यस्मिन् ह्रदाः पूरिताः" वेणी० ३-३३।

युक्तिः — ಕಾರ್ಯವನ್ನು ಅವಶ್ಯವಾಗಿ ಮಾಡಬೇಕೆಂಬ ನಿರ್ಧಾರ. "युक्तिरर्थविधारणम्" सा० द० ६-२११।

"यदि समरमपास्य नास्ति मृत्योः भयमिति युक्तमितोऽन्यतः प्रयातुम्" वेणी० ३-६।

प्रहर्षः— ಅತಿಶಯವಾದ ಆನಂದ. "प्रहर्षः प्रमदाधिक्यम्" सा० द० ६-२१२। "राजा — कथमिव संपूर्णमपि मे मनोरथं नाभिनन्दामि" शाकु० ७।

उपदेशनम् — ಉಪದೇಶದ ಮಾತು, ಅವಶ್ಯ ಕರ್ತವ್ಯದಲ್ಲಿ ತೊಡಗುವಂತೆ (ಮಾಡುವುದು) ಬೋಧಿಸುವುದು. "शिक्षा स्यादुपदेशनम्" सा० द० ६-२१२। "सखि न युक्तमाश्रमवासिनो जनस्य अकृतसत्कारमतिथिविशेषं विसृज्य स्वच्छन्दतो गमनम्" शाकु० १।

नाटयोक्ति नाट्योक्ति (स्त्री०) 1. ನಾಟ್ಯದಲ್ಲಿ ಉಪಯೋಗಿಸುವ ಪಾರಿಭಾಷಿಕ ಶಬ್ದ. नाट्ये नृत्तगीतादौ उक्तिः। ನಾಟಕಗಳಲ್ಲಿ ನಟನು ತಾನೊಬ್ಬನೇ ಮಾತನಾಡಿಕೊಳ್ಳುವಾಗ स्वगतम् ಎಂದೂ ಎಲ್ಲರಿಗೂ ಕೇಳಿಸುವಂತೆ ಇತರರೊಡನೆ ಮಾತನಾಡುವಾಗ प्रकाशम् ಎಂದೂ ರಹಸ್ಯವಾಗಿ ಮಾತನಾಡುವಾಗ अपवारितम् ಎಂದೂ ಪಕ್ಕದಲ್ಲಿರುವವರೊಡನೆ ಮಾತನಾಡುವಾಗ जनान्तिकम् ಎಂದೂ ಯಾವ ಪಾತ್ರವೂ ಇಲ್ಲದೆ ಯಾರೂ ಮಾತನಾಡದಿದ್ದರೂ ಮಾತು ಕೇಳಿಸಿದಂತೆ ನಟಿಸಿ ಆಕಾಶದ ಕಡೆಗೆ ಉತ್ತರ ಕೊಟ್ಟು ಮಾತನಾಡುವಾಗ आकाशभाषितम् ಎಂದೂ ಪಾರಿಭಾಷಿಕ ಶಬ್ದಗಳನ್ನು ಉಪಯೋಗಿಸಬೇಕು. "अश्राव्यं खलु यद्वस्तु तदिह स्वगतं मतम्। सर्वश्राव्यं प्रकाशं स्यात्तद्भवेदपवारितम्। रहस्यं तु यदन्यस्य परावृत्य प्रकाश्यते। त्रिपताकाकरेणान्यानपवार्यान्तिरा कथाम्। अन्योन्यामन्त्रणं यत्स्यात्तज्जनान्ते जनान्तिकम्। किं ब्रवीषीति यन्नाट्ये विना पात्रं प्रयुज्यते। श्रुत्वेवानुक्तमप्यर्थं तत्स्यादाकाशभाषितम्" सा० द० ६-१३७-४०। 2. ನಾಟಕಗಳಲ್ಲಿ ನಟರು ಪರಸ್ಪರ ಸಂಬೋಧಿಸಿ ಕರೆಯುವ ಪಾರಿಭಾಷಿಕ ಶಬ್ದ. "नाट्यपरिभाषा" ಪದದಲ್ಲಿ ನೋಡಿ.

नाड नाड (पुं०) ಒಳಗೆ ಟೊಳ್ಳಾಗಿರುವ ದಂಟು, ಸಸ್ಯದ ಟೊಳ್ಳು ದಂಟು. णल (बन्धे) "णः" (३-१-१४०)। डस्य लः।

नाडायन नाडायन (पुं०) ನಡನ ಗೋತ್ರದಲ್ಲಿ ಹುಟ್ಟಿದವನು. नडस्य गोत्रापत्यम् "फक्" (४-१-९९)।

नाडि नाडि (पुं०) 1. ನಡನ ಮಗ. (स्त्री०) 2. ನಾಡಿ, ಶರೀರದೊಳಗಿನ ಧಮನಿ. नल (भाषार्थे) +णिच् "अच्" (३-१-१३४)। "इः" (उ० ४-१३९)।

नाडिका नाडिका (स्त्री०) ಘಳಿಗೆ, ಅಹೋರಾತ್ರ ರೂಪವಾದ ಕಾಲದ ಅರವತ್ತನೆಯ ಒಂದು ಭಾಗ.

नाडिचीर नाडिचीर (न०) ನೆಯ್ಗೆಯಲ್ಲಿ ಹಾಸು ಎಳೆಗಳ ನಡುವೆ ಹೊಕ್ಕು ಎಳೆಗಳನ್ನು ಹಾಯಿಸುವ ಲಾಳಿ. नाडी चीरमिव।

नाडिन्धम नाडिंधम (पुं०) 1. ಸ್ವರ್ಣಕಾರ, ಚಿನ್ನದ ಕೆಲಸದವನು, ಅಕ್ಕಸಾಲಿಗ. नाडीं धमति — ध्मा (शब्दाग्निसंयोगयोः) "खश्" (३-२-३०)। ह्रस्वः (६-३-६६)। (वि०) 2. ಕೊಳವೆಯನ್ನು ಊದುವವನು.

नाडिन्धय नाडिंधय (वि०) ಕೊಳವೆಯ ಮೂಲಕ ಕುಡಿಯುವವನು, नडीं धयति — धेट् (पाने) "खश्" (३-२-३०)। ह्रस्वः (६-३-६६)।

नाडी नाडी (स्त्री०) ಸಿರೆ, ಶರೀರದೊಳಗಿನ ಧಮನಿ. णल (गन्धे) + णिच् "अच्" (३-१-१३४)। "ङीष्" (४-१-४१)। "नाडीनामुदयक्रमेण जगतः पञ्चामृतार्कर्षणात्" मालती० ५-२। ಶರೀರದಲ್ಲಿ ಏಳುನೂರು (700) ನಾಡಿಗಳಿರುವುವು. ನೀರನ್ನು ಹಾಯಿಸುವ ದೊಡ್ಡ ಕೊಳಾಯಿಗಳಿಂದ ತೋಟವೂ ಸಣ್ಣ ಕಾಲುವೆಗಳಿಂದ ಗದ್ದೆಗಳೂ ಪುಷ್ಟಿಗೊಳ್ಳುವಂತೆ ಶರೀರವು ಈ ರಸವಾಹಿನಿಯಾದ ನಾಡಿಗಳಿಂದ ಪುಷ್ಟಿಗೊಳ್ಳುವುದು. ಇದರಿಂದ ಕರಚರಣಾದಿ ಅವಯವಗಳ ಆಕುಂಚನ ಪ್ರಸಾರಣ ಭಾಷಣ ಸ್ವಾಪ ಮುಂತಾದ ಕಾರ್ಯಗಳಿಗೆ ಸೌಕರ್ಯವಾಗುವುದು. ಈ ಎಲ್ಲಾ ನಾಡಿಗಳಿಗೂ ನಾಭಿಯು (ಹೊಕ್ಕಳು) ಮೂಲಸ್ಥಾನವಾಗಿರುವುದು. ಅಲ್ಲಿಂದ ಮೇಲಕ್ಕೂ ಕೆಳಭಾಗಕ್ಕೂ ಪಾರ್ಶ್ವಗಳಿಗೂ ಹರಡಿಕೊಂಡಿರುವುವು. "सप्त सिराशतानि भवन्ति, याभिरिदं शरीरमाराम इव जलहारिणीभिः केदार इव च कुल्याभिरुपस्निह्यतेऽनुगृह्यते चाकुञ्चनप्रसारणाभिर्विशेषैः। द्रुमपत्रसेवनीनामिव तासां प्रतानाः। तासां नाभिर्मूलम्। ततश्च प्रसरन्त्यूर्ध्वमधस्तिर्यक् च" सुश्रुत० शारीर० ७-३। "यावत्यस्तु सिराः काये संभवन्ति शरीरिणाम्। नाभ्यां सर्वा निबद्धास्ताः प्रतन्वन्ति समन्ततः" सुश्रुत० शारीर० ७-४। "व्याप्नुवन्त्यभितो देहं नाभितः प्रसृताः सिराः। प्रतानाः पद्मिनीकन्दाद्विसादीनां यथा जलम्" सुश्रुत० शारीर० ७-२३। ಪ್ರಾಣಗಳ ಪ್ರಾಣಗಳೆಲ್ಲಾ ನಾಭಿಯಲ್ಲಿ ಸೇರಿಕೊಂಡಿರುವುವು. ನಾಭಿಯು ಪ್ರಾಣಗಳನ್ನು ಆಶ್ರಯಿಸಿಕೊಂಡಿರುವುದು. ಚಕ್ರದ ಆರೆಕಾಲುಗಳು ಗುಂಬವನ್ನು

ಆಶ್ರಯಿಸಿರುವಂತೆ ಸಿರೆ (ನಾಡಿ)ಗಳೆಲ್ಲಾ ನಾಭಿಯಲ್ಲಿ ಸೇರಿ ಕೊಂಡಿರುವುವು. ಆದುದರಿಂದ ನಾಡಿಗಳಿಗೂ ಪ್ರಾಣ ಗಳಿಗೂ ಆಧಾರಾಧೇಯ ಭಾವವಿರುವುದು. "नाभिस्था: प्राणिनां प्राणाः प्राणान्नाभिर्व्युपाश्रिता। सिराभिरावृता नाभिश्चक्रनाभिरिवारकैः" सुश्रुत० शारीर० ७-५। ಇವುಗಳಲ್ಲಿ ಮೂಲ ಸಿರೆ (ನಾಡಿ)ಗಳು ನಲವತ್ತು (40). ವಾತವು ಸಂಚರಿಸುವ ನಾಡಿಗಳು ಹತ್ತು (10). ಪಿತ್ತವು ಹರಿಯುವ ನಾಡಿಗಳು ಹತ್ತು (10). ಕಫ ಹರಿಯುವ ನಾಡಿಗಳು ಹತ್ತು (10). ರಕ್ತವು ಪ್ರವಹಿಸುವ ನಾಡಿ ಗಳು ಹತ್ತು (10).

ವಾತಸ್ಥಾನಗಳಲ್ಲಿ ನೂರ ಎಪ್ಪತ್ತೈದು (175) ವಾತ ನಾಡಿಗಳೂ ಪಿತ್ತಸ್ಥಾನಗಳಲ್ಲಿ ನೂರ ಎಪ್ಪತ್ತೈದು (175) ಪಿತ್ತನಾಡಿಗಳೂ ಕಫಸ್ಥಾನಗಳಲ್ಲಿ ನೂರ ಎಪ್ಪತ್ತೈದು (175) ಕಫನಾಡಿಗಳೂ ಯಕೃತ್ತು (ಉದರದ ಬಲಗಡೆಯ ದೊಡ್ಡ ಮಾಂಸ ಗ್ರಂಥಿ) ಮತ್ತು ಗುಲ್ಮ (ಉದರದ ಎಡ ಭಾಗದಲ್ಲಿ ಆನ್ನಕೋಶದ ಹಿಂದಿರುವ ಮಾಂಸ ಗ್ರಂಥಿ)ಗಳಲ್ಲಿ ರಕ್ತವು ಪ್ರವಹಿಸುವ ನೂರ ಎಪ್ಪತ್ತೈದು (175) ರಕ್ತ ನಾಡಿಗಳೂ ಇವೆ. "तासां मूलसिराश्चत्वारिंशत्। तासां वातवाहिन्यो दश। पित्तवाहिन्यो दश। कफवाहिन्यो दश। दश रक्तवाहिन्यः। तासां तु वातवाहिनीनां वातस्थानगतानां पञ्चसप्ततिशतं भवति। तावत्य एव पित्तवाहिन्यः पित्तस्थाने। कफवाहिन्यश्च कफस्थाने। रक्तवाहिन्यश्च यकृत्प्लीह्नोः। एवमेतानि सप्त सिरा-शतानि" सुश्रुत० शारीर० ७-६।

ಈ ಎಲ್ಲಾ ನಾಡಿಗಳೂ ಶರೀರದಲ್ಲಿ ವ್ಯಾಪಿಸಿ ರುವ ಸ್ಥಾನಗಳ ವಿವರ:

ಸ್ಥಾನ		ನಾಡಿಗಳ ಸಂಖ್ಯೆ
ಒಂದು ತೊಡೆಯಲ್ಲಿ:		
ವಾತವಾಹಿನಿ	25	
ಪಿತ್ತವಾಹಿನಿ	25	
ಕಫವಾಹಿನಿ	25	
ರಕ್ತವಾಹಿನಿ	25	100
ಇನ್ನೊಂದು ತೊಡೆಯಲ್ಲಿ:		
ವಾತವಾಹಿನಿ	25	
ಪಿತ್ತವಾಹಿನಿ	25	
ಕಫವಾಹಿನಿ	25	
ರಕ್ತವಾಹಿನಿ	25	100
ಒಳ ಹೊಟ್ಟೆಯ ಭಾಗ:		
ಗುದಪ್ರದೇಶ ಮತ್ತು ಜನನೇಂದ್ರಿಯ ಸೇರಿರುವ ಪಿರ್ಕ್ರಿಯಲ್ಲಿ		
ವಾತವಾಹಿನಿ	8	
ಪಿತ್ತವಾಹಿನಿ	8	
ಕಫವಾಹಿನಿ	8	
ರಕ್ತವಾಹಿನಿ	8	32
ಪಾರ್ಶ್ವಗಳಲ್ಲಿ:		
ವಾತವಾಹಿನಿ	2+2	
ಪಿತ್ತವಾಹಿನಿ	2+2	
ಕಫವಾಹಿನಿ	2+2	
ರಕ್ತವಾಹಿನಿ	2+2	16
ಪೃಷ್ಠದಲ್ಲಿ:		
ವಾತವಾಹಿನಿ	6	
ಪಿತ್ತವಾಹಿನಿ	6	
ಕಫವಾಹಿನಿ	6	
ರಕ್ತವಾಹಿನಿ	6	24
ಉದರದಲ್ಲಿ:		
ವಾತವಾಹಿನಿ	6	
ಪಿತ್ತವಾಹಿನಿ	6	
ಕಫವಾಹಿನಿ	6	
ರಕ್ತವಾಹಿನಿ	6	24
ವಕ್ಷಸ್ಸಿನಲ್ಲಿ:		
ವಾತವಾಹಿನಿ	10	
ಪಿತ್ತವಾಹಿನಿ	10	
ಕಫವಾಹಿನಿ	10	
ರಕ್ತವಾಹಿನಿ	10	40

ಸ್ಥಾನ	ನಾಡಿಗಳ ಸಂಖ್ಯೆ	
ಹೆಗಲ ಸಂಧಿಯ ಮೇಲುಭಾಗ:		
ಕಂಠದಲ್ಲಿ:		
ವಾತವಾಹಿನಿ	14	
ಪಿತ್ತವಾಹಿನಿ	14	
ಕಫವಾಹಿನಿ	14	
ರಕ್ತವಾಹಿನಿ	14	56
ಕಿವಿಗಳಲ್ಲಿ:		
ವಾತವಾಹಿನಿ	4	
ಪಿತ್ತವಾಹಿನಿ	4	
ಕಫವಾಹಿನಿ	4	
ರಕ್ತವಾಹಿನಿ	4	16
ನಾಲಗೆಯಲ್ಲಿ:		
ವಾತವಾಹಿನಿ	9	
ಪಿತ್ತವಾಹಿನಿ	9	
ಕಫವಾಹಿನಿ	9	
ರಕ್ತವಾಹಿನಿ	9	36
ನಾಸಿಕೆಯಲ್ಲಿ:		
ವಾತವಾಹಿನಿ	6	
ಪಿತ್ತವಾಹಿನಿ	6	
ಕಫವಾಹಿನಿ	6	
ರಕ್ತವಾಹಿನಿ	6	24
ನೇತ್ರಗಳಲ್ಲಿ:		
ವಾತವಾಹಿನಿ	8	
ಪಿತ್ತವಾಹಿನಿ	8	
ಕಫವಾಹಿನಿ	8	
ರಕ್ತವಾಹಿನಿ	8	32
		700

तत्र वातवाहिन्यः सिराः एकस्मिन् सक्थ्नि पञ्चविंशतिः; एतेन इतरसक्थिबाहू च व्याख्यातौ। विशेषतस्तु कोष्ठे चतुस्त्रिंशत्; तासां गुदमेढ्राश्रिताः श्रोण्यामष्टौ, द्वे द्वे पार्श्वयोः, षट् पृष्ठे, तावत्य एवोदरे, दश वक्षसि। एवं चत्वारिंशज्जत्रुण ऊर्ध्वम्; तासां चतुर्दश ग्रीवायाम्, कर्णयोश्चतस्रः, नव जिह्वायाम्, षट् नासिकायाम्, अष्टौ नेत्रयोः। एवमेतत् पञ्चसप्ततिशतं वातवाहिनीनां सिराणां व्याख्यातं भवति। एष एव विभागः शेषाणामपि। एवमेतानि सप्तसिराशतानि व्याख्यातानि" सुश्रुत० शारीर० ७-७।

ಈ ನಾಲ್ಕು ವಿಧ ನಾಡಿಗಳೂ ಶರೀರವನ್ನು ಸಂರಕ್ಷಿಸುವುವು. "चतुर्विधा यास्तु सिराः शरीरे प्रायेण ता मर्मसु सन्निविष्टाः। स्नाय्वस्थिमांसानि तथैव सन्धीन् सन्तर्प्य देहं प्रतियापयन्ति" सुश्रुत० शारीर० ६-१८।

ಆದರೆ ಉಪನಿಷತ್ತುಗಳಲ್ಲಿ ಎಲ್ಲಾ ನಾಡಿಗಳಿಗೂ ಹೃದಯವು ಮೂಲಸ್ಥಾನವೆಂದೂ ಹೃದಯದಲ್ಲಿ ನೂರ ಒಂದು ನಾಡಿಗಳು ಆಶ್ರಯ ಹೊಂದಿರುವುವೆಂದೂ ಜೀವಾತ್ಮನು ಉತ್ಕ್ರಮಣಸಮಯದಲ್ಲಿ ನೂರೊಂದನೆಯದಾದ ಸುಷುಮ್ಣಾನಾಡಿಯ ಮೂಲಕ ಊರ್ಧ್ವಮುಖವಾಗಿ ಶಿರಸ್ಸನ್ನು ಭೇದಿಸಿಕೊಂಡು ಹೊರಟು ಮೋಕ್ಷಸಾಮ್ರಾಜ್ಯವನ್ನು ಪಡೆಯುವನೆಂದೂ ಉಕ್ತವಾಗಿದೆ. "शतं चैका (सुषुम्णा) च हृदयस्य नाड्यः। तासां मूर्धानमभिनिःसृतैका (सुषुम्णा)। तयोर्ध्वमायन्नमृतत्वमेति। विष्वङ्ङन्या उत्क्रमणे भवन्ति" कठ०।

"अत्रैतत् एकशतं नाडीनाम्; तासां शतंशतमेकैकस्यां द्वासप्ततिद्वासप्ततिः। प्रतिशाखं नाडीसहस्राणि भवन्ति। आसु व्यानः चरति" प्रश्नोप०। हृदये नाडीनामेकशताधिकं वर्तते। तासां नाडीनां मध्ये एकैकस्याः द्वासप्ततिप्रभेदा भवन्ति। एकैकं द्वासप्ततिप्रभेदं प्रतिशाखाभूतनाडीसहस्राणि शतं शतं भवन्ति" रङ्गरा० भा०। "नाडीप्रकाश" ग्रंथದಲ್ಲಿ ನಾಡಿಗಳು ಮೂರೂವರೆ ಕೋಟಿಗಳಿರುವುವೆಂದು ಉಕ್ತವಾಗಿದೆ. "सार्धत्रिकोट्यो नाड्यो हि स्थूलाः सूक्ष्माश्च देहिनाम्। नाभिकन्दनिबद्धास्तास्तिर्यगूर्ध्वमधः स्थिताः"। ನಾಡಿಗಳು ಈರೀತಿ ಅಸಂಖ್ಯಾತವಾಗಿದ್ದರೂ ಪ್ರಧಾನವಾದ ನಾಡಿಗಳು ಹದಿನಾರು (16). (1) इडा, (2) पिङ्गला, (3) सुषुम्णा, (4) गान्धारी, (5) हस्तिजिह्वा, (6) पूषा, (7) वसुवशा, (8) अलम्बुषा, (9) कुहूः, (10) शङ्खिनी, (11) तालुजिह्वा, (12) इभजिह्वा, (13) विजया, (14) कामदा, (15) अमृता ಮತ್ತು (16) बहुला। "इडा च पिङ्गला चैव सुषुम्णा चापरा स्मृता। गान्धारी हस्तिजिह्वा च पूषा वसुवशा तथा। अलम्बुषा कुहूश्चैव शङ्खिनी दशमी स्मृता। तालुजिह्वेभजिह्वा च विजया कामदा परा। अमृता बहुला नाम नाड्यो वायुसमीरिताः"। "षडधिकदशनाडीचक्रमध्यस्थितात्मा हृदि विनिहितरूपः सिद्धिदस्तद्विदां यः। अविचलितमनोभिः साधकैर्मृग्यमाणः स जयति परिणद्धः शक्तिभिः शक्तिनाथः" मालती० ५-१।

ಅಪರಿಮಿತವಾದ ಸೂಕ್ಷ್ಮನಾಡಿಗಳಿಂದ ಕೂಡಿದ ಹದಿನಾರು ಪ್ರಧಾನ ನಾಡಿಗಳ ಸಮೂಹವೇ ರಕ್ತ ಮೇದಸ್ಸು ಮಾಂಸ ಮೊದಲಾದ ಧಾತುಗಳಿಂದ ತುಂಬಿ ಚರ್ಮದಿಂದ ಆಚ್ಛನ್ನವಾಗಿರುವ ಶರೀರ ಎಂದು ಯೋಗಿಗಳ ಅಭಿಪ್ರಾಯ. "अपरिमितसूक्ष्मनाडीसहितप्रधानषोडशनाडीसमूह एव रुधिरवसामांसादिधातुपरिपूरितं त्वगाच्छन्नं पिण्डशब्द-वाच्यं शरीरमिति योगमार्गः"।

ರೋಗಿಗಳ ರೋಗಸ್ವರೂಪವನ್ನು ವೈದ್ಯನು ಪುರುಷನ ಬಲಗೈ ನಾಡಿಗಳ ಮೂಲಕವೂ ಹೆಂಗಸಿನ ಎಡಗೈ ನಾಡಿಗಳ ಮೂಲಕವೂ ಪರೀಕ್ಷಿಸಿ ತಿಳಿದುಕೊಳ್ಳಬೇಕು. ಆಗತಾನೆ ಸ್ನಾನಮಾಡಿರುವ, ನಿದ್ದೆಯಿಂದ ಎದ್ದಿರುವ, ಹಸಿವು ಬಾಯಾರಿಕೆಗಳಿಂದ ಕೂಡಿರುವ ಮತ್ತು ವ್ಯಾಯಾಮದಿಂದ ಆಯಾಸಗೊಂಡಿರುವವನ ನಾಡಿಗಳು ದೇಹಸ್ಥಿತಿಯನ್ನು ಸರಿಯಾಗಿ ತಿಳಿಸುವುದಿಲ್ಲ. "पुंसो दक्षिणहस्तस्य स्त्रियो वामकरस्य तु। अङ्गुष्ठमूलजां नाडीं परीक्षेत भिषग्वरः। अङ्गुलीभिस्तु त्रिसृभिर्नाडीमवहितः स्पृशेत्। तच्चेष्टया सुखं दुःखं जानीयात् कुशलोऽखिलम्। सद्यः स्नातस्य सुप्तस्य क्षुत्तृष्णातपशीलिनः। व्यायामशान्त-देहस्य सम्यङ्नाडी न बुध्यते" भावप्र०।

ವೈದ್ಯನು ಪ್ರಾತಃಕಾಲದ ಕರ್ತವ್ಯಗಳನ್ನು ನೆರವೇರಿಸಿ ಕೊಂಡು ಸುಖಾಸೀನನಾಗಿರುವ ರೋಗಿಯನ್ನು ಪರೀಕ್ಷಿಸ ಬೇಕು. "प्रातः कृतसमाचारः कृताचारपरिग्रहम्। सुखासीनः सुखासीनं परीक्षार्थमुपाचरेत्"। "वातं पित्तं कफं द्वन्द्वं सन्निपातं तथैव च। साध्यासाध्यविवेकं च सर्वं नाडी प्रकाशयेत्"। 2. ಕೊಳವೆಯಂತೆ ಉದ್ದವಾದ ವ್ರಣ, ಭಗಂದರ. 3. ನಾಳ, ಕೊಳವೆ, 4. ಒಂದು ಜಾತಿಯ ಗರಿಕೆ ಹುಲ್ಲು. 5. ವೇಣು ವಾದ್ಯ. 6. ಒಂದು ಫಲಿಗೆ. 7. ವಂಚನೆ, ಮೋಸ. "नाडी नाले व्रणान्तरे। शिरायां गण्डदूर्वायां चर्यायां कुहनस्य च। तथा षट्क्षण-कालेऽपि" मेदि०।

नाडीक नाडीक (पुं०) ಕೀರೆದಂಟು. नाडया कायति—के (शब्दे) "कः" (३-२-४)।

नाडीकूट नाडीकूट (न०) (ವಿವಾಹಕ್ಕಾಗಿ) ವಧೂವರರ ನಕ್ಷತ್ರಗಳ ಹೊಂದಿಕೆಗಾಗಿ ನೋಡುವ ದ್ವಾದಶ (ದಿನ, ಗಣ ಮೊದಲಾದ ಹನ್ನೆರಡು) ಕೂಟಗಳಲ್ಲೊಂದು, ನಾಡೀ ಚಕ್ರದಲ್ಲಿ ಸೂಚಿಸಲ್ಪಟ್ಟ ನಕ್ಷತ್ರಗಳ ಗುಂಪು.

ಅಶ್ವಿನಿ ಆರ್ದ್ರಾ ಪುನರ್ವಸು ಉತ್ತರಫಲ್ಗುನಿ ಹಸ್ತ ಜ್ಯೇಷ್ಠಾ ಮೂಲ ಶತಭಿಷ ಪೂರ್ವಾಭಾದ್ರಾ ಇವು ಪ್ರಥಮ ಪಾರ್ಶ್ವನಾಡಿ.

ಭರಣಿ ಮೃಗಶಿರ ಪುಷ್ಯ ಪೂರ್ವಫಲ್ಗುನಿ ಚಿತ್ತಾ ಅನೂರಾಧಾ ಪೂರ್ವಾಷಾಢಾ ಧನಿಷ್ಠಾ ಉತ್ತರಾಭಾದ್ರಾ ಇವು ಮಧ್ಯನಾಡಿ.

ಕೃತ್ತಿಕಾ ರೋಹಿಣಿ ಆಶ್ಲೇಷಾ ಮಖಾ ಸ್ವಾತೀ ವಿಶಾಖಾ ಉತ್ತರಾಷಾಢಾ ಶ್ರವಣ ರೇವತಿ ಇವು ತೃತೀಯಪಾರ್ಶ್ವ ನಾಡಿ. ವಧೂವರರ ನಕ್ಷತ್ರಗಳು ಒಂದೇ ನಾಡಿಗೆ ಸೇರಿರ ಕೂಡದು. ಒಂದೇ ನಾಡಿಯಾದರೂ ಒಂದೇ ರಾಶಿಯಾಗಿ ಬೇರೆ ನಕ್ಷತ್ರವಾಗಿದ್ದರೂ ಅಥವಾ ಒಂದೇ ನಕ್ಷತ್ರವಾಗಿದ್ದು ಬೇರೆ ರಾಶಿಯಾಗಿದ್ದರೂ ನಾಡೀದೋಷವಿಲ್ಲವೆಂದು ಕೆಲವರ ಅಭಿಪ್ರಾಯ.

नाडीकेल नाडीकेल (पुं०) ತೆಂಗಿನಮರ.

नाडीचक्र नाडीचक्र (न०) 1. ನಾಭಿಪ್ರದೇಶದಲ್ಲಿರುವ ಒಂದು ಚಕ್ರ. ಸಕಲ ನಾಡಿಗಳೂ ನಾಭಿಯಿಂದ ಹೊರಟು ದೇಹದ ಎಲ್ಲಾ ಭಾಗಗಳಿಗೂ ಹರಡಿಕೊಳ್ಳುವುದರಿಂದ ನಾಭಿ ಮಂಡಲದಲ್ಲಿ ಒಂದು ಚಕ್ರದಂತಿರುವುದು. ಇದು ಒಂದು ಕುಕ್ಕುಟಾಂಡದಂತಿರುವುದು. "नाभिमण्डलमासाद्य कुक्कुट-टाण्डमिव स्थितम्। नाडीचक्रमिह प्राहुस्तस्मान्नाडयः समुद्गताः"। 2. (ವಿವಾಹಕ್ಕಾಗಿ) ವಧೂವರರ ನಕ್ಷತ್ರಗಳ ಹೊಂದಿಕೆಗಾಗಿ ನೋಡಬೇಕಾದ ನಕ್ಷತ್ರಗಳ (ಒಂದು ಚಕ್ರ) ಸಮೂಹ.

नाडीचरण नाडीचरण (पुं०) ಪಕ್ಷಿ, ಹಕ್ಕಿ. नाडी नालमिव चरणो यस्य। "पक्षी तु नाडीचरणः स्यात्" त्रिकाण्ड०।

नाडीजङ्घ नाडीजङ्घ (पुं०) 1. ಕಾಯಸ, ಕಾಗೆ. नाडीव नालमिव जङ्घास्य। "अपक्वणो नगरीबकः। ऐन्द्रिश्च नाडीजङ्घोऽथ" त्रिकाण्ड०। 2. ಬಕಪಕ್ಷಿ. "अस्ति खल्विन्द्रद्युम्नं नाम सरस्तस्मिन्नाडीजङ्घो नाम बकः प्रतिवसति सोऽस्मत्तश्चिरजाततरः तं पृच्छ" भा० वन० २०२-७।

नाडीतिक्त नाडीतिक्त (पुं०) ಒಂದು ಜಾತಿಯ ಬೇವಿನ ಮರ.

नाडीदेह नाडीदेह (पुं०) ಪರಶಿವನ ಒಬ್ಬ ಅನುಚರ.

नाडीनक्षत्र नाडीनक्षत्र (न०) ವಿವಾಹೋಪಯುಕ್ತವಾದ ನಾಡಿಗಳನ್ನು ತಿಳಿಸುವ ನಕ್ಷತ್ರ.

नाडीयन्त्र नाडीयन्त्र (न०) ಶಸ್ತ್ರಚಿಕಿತ್ಸೆಗೆ ಬೇಕಾದ ಒಂದು ಕೊಳವೆಯಾಕಾರದ ಉಪಕರಣ. —सलकरणे, —आयुध. नाडीव नालीव यन्त्रम्। नाडीवत् मध्य-सुषिरं यन्त्रम्। ಶಸ್ತ್ರಚಿಕಿತ್ಸೆಗೆ ಬೇಕಾದ ಯಂತ್ರಗಳು

ಆರುವಿಧ. (1) स्वस्तिकयन्त्राणि, (2) सन्दंशयन्त्राणि, (3) तालयन्त्राणि, (4) नाडीयन्त्राणि, (5) शलाकायन्त्राणि ಮತ್ತು (6) उपयन्त्राणि चेति सुश्रुत० सूत्र० ७-५। ನಾಡೀಯಂತ್ರಗಳು ಇಪ್ಪತ್ತು ಬಗೆ. ಇವುಗಳೂ ಅನೇಕ ರೀತಿಯಲ್ಲಿರುವುವು. "नाडीयन्त्राणि अनेकप्रकाराणि अनेकप्रयोजनानि एकतोमुखानि उभयतोमुखानि च; तानि स्रोतोगतशल्योद्धरणार्थं रोगदर्शनार्थम् आचूषणार्थं क्रियासौकर्यार्थं चेति; तानि स्रोतोद्वारपरिणाहानि यथायोगदीर्घाणि च" सुश्रुत० सूत्र० ७-१३।

नाडीवलय ನಾಡೀವಲಯ (ನ०) ಕಾಲಪರಿಜ್ಞಾನಕ್ಕಾಗಿ ವಲಯಾಕಾರವಾಗಿ ಮಾಡಿರುವ ಒಂದು ಯಂತ್ರ. नाड्या घटिकाया ज्ञानार्थं वलयं वलयाकारं यन्त्रम्।

नाडीव्रण ನಾಡೀವ್ರಣ (ಪುನ०) ಕೊಳವೆಯಾಕಾರದ ಒಂದು ವ್ರಣ, ಭಗಂದರ. (Fistula) नाड्यां व्रणम्। ಇದೊಂದು ಗುದದ್ವಾರದಲ್ಲಿ ಉಂಟಾಗುವ ವ್ರಣ. ಇದಕ್ಕೆ ಪ್ರಾರಂಭದಲ್ಲೇ ಚಿಕಿತ್ಸೆ ನಡೆಯಬೇಕು. ಇದು ಕೇವಲ ಊದಲು ಎಂದು ಉಪೇಕ್ಷೆ ಮಾಡಿದರೆ ಒಳಗೆ ಕೀವು ತುಂಬಿಕೊಂಡು ಅಪಥ್ಯದಿಂದ ಒಳಭಾಗಕ್ಕೂ ಹರಡಿ ಕೊಳವೆಯಾಕಾರದ ದೊಡ್ಡ ವ್ರಣವಾಗುವುದು. ಇದರಿಂದ ಇದಕ್ಕೆ "ನಾಡೀವ್ರಣ" ಎಂದು ಹೆಸರು. "शोफं न पक्वमिति पक्वमुपेक्षते यो यो वा व्रणं प्रचुरपूयमसाधुवृत्तः। अभ्यन्तरं प्रविशति प्रविदार्य तस्य स्थानानि पूर्वविहितानि ततः स पूयः। तस्यातिमात्रगमनाद्गतिरित्यतश्च नाडीव यद्वहति तेन मता तु नाडी" सुश्रुत० निदान० १०-९, १०।

नाडीशाक ನಾಡೀಶಾಕ (ಪುं०) ದಂಟುಕೀರೆ. नाडीप्रधानः शाकः।

नाणक ನಾಣಕ (ವಿ०) 1. ಕೃತ್ರಿಮ ಮುದ್ರೆ ಒತ್ತಿದ ಒಂದು ನಾಣ್ಯ, ವ್ಯವಹಾರದಲ್ಲಿಲ್ಲದ ಕೃತ್ರಿಮವಾದ ನಾಣ್ಯ. न आणकः, नशब्देन "सहसुपा" (२-१-४) इति समासः। "तुलाशासनमानानां कूटकृन्नाणकस्य च" याज्ञ० २-२४०। 2. ಕುತ್ಸಿತವಲ್ಲದ.

नाथ ನಾಥ (ಪುं०) 1. ಸ್ವಾಮಿ, ಯಜಮಾನ, ಪ್ರಭು. नाथति ईश्वरो भवति नाथृ (याच्ञोपतापैश्वर्याशीःषु) "अच्" (३-१-१३४)। "नाथे श्रीपुरुषोत्तमे त्रिजगतामेकाधिपे चेतसा" मु० मा०। 2. ಪತಿ, ಗಂಡ, "नाथो मे विपणिं गतो न गणयत्येषा सपत्नी च मां त्यक्त्वा मामिह पुष्पिणीति गुरवः प्राप्ता गृहाभ्यन्तरम्"।

नाथनीय ನಾಥನೀಯ (ವಿ०) 1. ಪ್ರಾರ್ಥಿಸಬೇಕಾದ, ಯಾಚಿಸಬೇಕಾದ. 2. ಪ್ರಾರ್ಥಿಸಲ್ಪಡುವ, ಯಾಚಿಸಲ್ಪಡುವ. 3. ಪ್ರಾರ್ಥಿಸಲು ಯೋಗ್ಯವಾದ, ಬೇಡಲು ಯೋಗ್ಯವಾದ. नाथृ (याच्ञोपतापैश्वर्याशीःषु) "अनीयर्" (३-१-९६)। "नातः परं किमपि मे त्वयि नाथनीयं मातर्दये मयि कुरुष्व तथा प्रसादम्" द०श०। 4. ಅಪೇಕ್ಷಿಸಬೇಕಾದ. 5. ಅಪೇಕ್ಷಿಸಲ್ಪಡುವ. 6. ಅಪೇಕ್ಷಿಸಲು ಯೋಗ್ಯವಾದ.

नाथमान ನಾಥಮಾನ (ವಿ०) ಅಪೇಕ್ಷಿಸುತ್ತಿರುವ. नाथृ (याच्ञोपतापैश्वर्याशीःषु) "शानच्" (३-२-१२४)।

नाथवत् ನಾಥವತ್ (ವಿ०) 1. ಪರತಂತ್ರ, ಒಬ್ಬನಿಗೆ ಅಧೀನನಾಗಿರುವವನು, ಒಬ್ಬನ ಆಶ್ರಯದಲ್ಲಿರುವವನು. नाथोऽस्यास्ति "मतुप्" (५-२-९४)। 2. ರಕ್ಷಕನುಳ್ಳ. "नाथवन्तस्त्वया लोकास्त्वमनाथा विपत्स्यसे" उ० रा० १-४३। स्त्रियां "ङीप्" (४-१-६)। **-वती** -ವತೀ. ಪತಿಯನ್ನು ಹೊಂದಿರುವವಳು, ಗಂಡನುಳ್ಳ ಹೆಂಗಸು.

नाथित ನಾಥಿತ (ನ०) 1. ಪ್ರಾರ್ಥನೆ, ಯಾಚನೆ, ಬೇಡಿಕೆ. 2. ಅಪೇಕ್ಷೆ. नाथृ भावे "क्तः"। (ವಿ०) 3. ಪ್ರಾರ್ಥಿಸಲ್ಪಟ್ಟ, ಬೇಡಲ್ಪಟ್ಟ, ಯಾಚಿಸಲ್ಪಟ್ಟ. 4. ಅಪೇಕ್ಷಿಸಲ್ಪಟ್ಟ. नाथृ (याच्ञोपतापैश्वर्याशीःषु) "क्तः" (३-२-१०२)।

नाथ्यमान ನಾಥ್ಯಮಾನ (ವಿ०) 1. ಪ್ರಾರ್ಥಿಸಲ್ಪಡುತ್ತಿರುವ, ಯಾಚಿಸಲ್ಪಡುತ್ತಿರುವ. 2. ಅಪೇಕ್ಷಿಸಲ್ಪಡುತ್ತಿರುವ. नाथृ (याच्ञोपतापैश्वर्याशीःषु) ಕರ್ಮ० "शानच्" (३-२-१२४)।

नाद ನಾದ (ಪुं०) 1. ಶಬ್ದ, ಧ್ವನಿ. णद (अव्यक्ते शब्दे) "घञ्" (३-३-१८)। "नादस्तावद्विकलकुररीकूजितस्निग्धतारश्चित्ताकर्षी परिचित इव श्रोत्रसंवादमेति' मालती० ५-२०। ವರ್ಣಗಳ ಉಚ್ಚಾರಣೆಯ ಹಿನ್ನೆಲೆಯ ವಿಧ ಬಾಹ್ಯ ಪ್ರಯತ್ನಗಳಲ್ಲೊಂದು. बाह्यप्रयत्नस्त्वेकादशधा—(1) विवारः, (2) संवारः, (3) श्वासः, (4) नादः (5) घोषः, (6) अघोषः, (7) अल्पप्राणः, (8) महाप्राणः (9) उदात्तः, (10) अनुदात्तः, (11) स्वरितः इति 3. ಪರಬ್ರಹ್ಮಸ್ವರೂಪವಾದ ಒಂದು ಘೋಷ, ನಾದ ಬ್ರಹ್ಮ. ಸಚ್ಚಿದಾನಂದಸ್ವರೂಪನಾದ ಪರಮೇಶ್ವರನಿಂದ ಒಂದು ಶಕ್ತಿಯುಂಟಾಗಿ ಅದರಿಂದ ನಾದವೂ ಅದರಿಂದ ಬಿಂದುವೂ ಹುಟ್ಟಿದುವು. ಅದು ನಾದ, ಬಿಂದು ಮತ್ತು ಬೀಜಗಳೆಂದು ಮೂರು ವಿಧ. ನಾಭಿಯ ಮೇಲುಭಾದಲ್ಲಿ ಹೃದಯದಲ್ಲಿರುವ ಪ್ರಾಣವಾಯುವು ಬ್ರಹ್ಮರಂಧ್ರದ ಕೊನೆಯಲ್ಲಿ ಅವ್ಯಕ್ತ ಶಬ್ದ ಮಾಡುವುದರಿಂದ "ನಾದ" ವೆಂದು ಹೆಸರಾಯಿತು. "नाभेरूर्ध्वं हृदि स्थानात् मारु

प्राणसंज्ञकः। नदति ब्रह्मरन्ध्रान्ते तेन नादः प्रकीर्तितः"। ನಾಭಿಯ ಮೇಲುಭಾಗದಲ್ಲಿ ಆಕಾಶ, ಅಗ್ನಿ ಮತ್ತು ವಾಯುಗಳಿಂದ ಹುಟ್ಟಿ ಮುಖದಲ್ಲಿ ವ್ಯಕ್ತವಾಗಿ ಹೊರಡುವ ಒಂದು ಶಬ್ದವು ನಾದವೆನಿಸುವುದು. "आकाशाग्निमरुज्जातो नाभेरूर्ध्वं समुच्चरन्। मुखेऽतिव्यक्तमायाति यः स नाद इतीरितः"। ಇದು ಪ್ರಾಣಿಗಳಿಂದ ಮತ್ತು ಅಪ್ರಾಣಿಗಳಿಂದ ಮತ್ತು ಎರಡರಿಂದಲೂ ಹೊರಡುವುದರಿಂದ ಮೂರು ವಿಧ. ಶರೀರದಿಂದ ಹೊರಡುವ ಶಬ್ದ ಪ್ರಾಣಿಭವ. ವೀಣೆ ಪಿಟೀಲು ಮೊದಲಾದವುಗಳಿಂದ ಹೊರಡುವ ಶಬ್ದ ಅಪ್ರಾಣಿಭವ. ಕೊಳಲು ವಾದ್ಯದಿಂದ ಹೊರಡುವ ಶಬ್ದ ಉಭಯಭವ. "स च प्राणिभवोऽप्राणिभवश्चोभयसम्भवः। आद्यः कायभवो वीणादिभवस्तु द्वितीयकः। तृतीयोऽपि च वंशादिभव इत्थं त्रिधा मतः"। ಬ್ರಹ್ಮನ ಸ್ಥಾನವಾದ ಬ್ರಹ್ಮಗ್ರಂಥಿಯು ಮಧ್ಯಭಾಗದಲ್ಲಿ ಪ್ರಾಣವಿರುವುದು. ಅದರಿಂದ ಅಗ್ನಿಯು ಉತ್ಪನ್ನವಾಗುವುದು. ಅಗ್ನಿ ಮತ್ತು ವಾಯುಸಂಯೋಗದಿಂದ ನಾದವು ಹುಟ್ಟುವುದು. ನಾದವಿಲ್ಲದೆ ಸಂಗೀತವಿಲ್ಲ. ನಾದವಿಲ್ಲದೆ ಸ್ವರವಿಲ್ಲ. ನಾದವಿಲ್ಲದೆ ಯಾವ ರಾಗವೂ ಇಲ್ಲ. ಆದುದರಿಂದ ಜಗತ್ತು ನಾದಮಯವಾದುದು. ನಾದವಿಲ್ಲದೆ ಜ್ಞಾನವಿಲ್ಲ. ಜ್ಞಾನ ಸಂಪಾದಿಸಿದ ಹೊರತು ಪರಶಿವನ ಸಾಕ್ಷಾತ್ಕಾರವಿಲ್ಲ. ಜ್ಯೋತಿಯು ನಾದರೂಪವಾದುದು. ಶ್ರೀ ಹರಿಯೂ ನಾದಸ್ವರೂಪನು. "यदुक्तं ब्रह्मणः स्थानं ब्रह्मग्रन्थिश्च यो मतः। तन्मध्ये संस्थिताः प्राणाः प्राणाद्वह्निसमुद्भवः। वह्निमारुतसंयोगान्नादः समुपजायते। न नादेन विना गीतं न नादेन विना स्वरः। न नादेन विना रागस्तस्मान्नादात्मकं जगत्। न नादेन विना ज्ञानं न नादेन विना शिवः। नादरूपं परं ज्योतिर्नादरूपी परं हरिः" सं० दा०। 4. ಒಂದು ಯೋಗದ ಹೆಸರು. नकारं प्राणनामानं दकारमनलं विदुः। जातः प्राणाग्निसंयोगात् तेन नादोऽभिधीयते"।

नादन नादन (न०) 1. ಶಬ್ದ ಮಾಡಿಸುವುದು. 2. ಸದ್ದು ಮಾಡಿಸುವುದು. 3. ಧ್ವನಿ ಹೊರಡಿಸುವುದು. णद (अव्यक्ते शब्दे) + णिच् "ल्युट्" (३-३-११५)।

नादनीय नादनीय (वि०) 1. ಶಬ್ದ ಮಾಡಿಸಲ್ಪಡುವ. 2. ಧ್ವನಿ ಹೊರಡಿಸಲ್ಪಡುವ. णद (अव्यक्ते शब्दे)+णिच् "अनीयर्" (३-१-९६)। 3. ಶಬ್ದ ಮಾಡಿಸಬೇಕಾದ.

नादयत् नादयत् (वि०)1. ಶಬ್ದ ಮಾಡಿಸುತ್ತಿರುವ. 2. ಧ್ವನಿ ಹೊರಡಿಸುತ್ತಿರುವ. णद (अव्यक्ते शब्दे)+णिच् "शतृ" (३-२-१२४)। स्त्रियां "ङीप्" (४-१-६)। **-यन्ती -यन्ती**. "नादयन्तो दिशः सर्वाः कर्णत्रस्ता विचेतसः" भा० कर्ण० ४४-७२।

नादयितव्य नादयितव्य (वि०) 1. ಶಬ್ದ ಮಾಡಿಸಲ್ಪಡುವ. 2. ಧ್ವನಿ ಹೊರಡಿಸಲ್ಪಡುವ. णद (अव्यक्ते शब्दे) + णिच् "तव्यः" (३-१-९६)।

नादित नादित (न०) 1. ನಾದ, ಶಬ್ದ. 2. ಧ್ವನಿ. णद (अव्यक्ते शब्दे) + णिच् भावे "क्तः" (३-३-११४)। (वि०) 3. ಶಬ್ದ ಮಾಡಿಸಲ್ಪಟ್ಟ. 4. ಧ್ವನಿ ಹೊರಡಿಸಲ್ಪಟ್ಟ. णद (अव्यक्ते शब्दे) + णिच् "क्तः" (३-२-१०२)।

नादितवत् नादितवत् (वि०) 1. ಶಬ್ದ ಮಾಡಿಸಿದವನು. 2. ಧ್ವನಿ ಹೊರಡಿಸಿದವನು. णद (अव्यक्ते शब्दे) +णिच् "क्तवतुः" (३-२-१०२)।

नाद्य नाद्य (वि०) 1. ಶಬ್ದ ಮಾಡಿಸಲ್ಪಡುವ. 2 ಧ್ವನಿ ಹೊರಡಿಸಲ್ಪಡುವ. णद (अव्यक्ते शब्दे) + ण्यत् (३-१-१२४)।

नादवत् नादवत् (पुं०) 1. ನಾದರೂಪವಾದ ಬಾಹ್ಯ ಪ್ರಯತ್ನದಿಂದ ಉಚ್ಚರಿಸಲ್ಪಡುವ ವರ್ಣ. नादो बाह्यप्रयत्नभेदोऽस्यास्ति "मत्तुप्" (५-२-९४)। (वि०) 2. ಶಬ್ದದಿಂದ ಕೂಡಿದ, 3, ಧ್ವನಿ ಸಹಿತವಾದ.

नादिन् नादिन् (वि०) 1. ಶಬ್ದ ಮಾಡುತ್ತಿರುವ. णद (अव्यक्ते शब्दे) "णिनिः" (३-१-१३४)। स्त्रियां "ङीप्" (४-१-५)। **-नादिनी -नादिनी**. "ततः प्रकोष्ठे हरिचन्दनाङ्किते प्रमथ्यमानार्णवधीरनादिनीम्" रघु० ३-५९। 2. ಜಿಂಕೆಯ ಜನ್ಮವನ್ನು ಪಡೆದ ಒಬ್ಬ ಬ್ರಾಹ್ಮಣ. ಗುರುವಿನ ಧೇನುವನ್ನು ಕೊಂದು ಪಿತೃ ಶ್ರಾದ್ಧವನ್ನು ಮಾಡಿದ ಅಪರಾಧಕ್ಕಾಗಿ ಗರ್ಗಮಹರ್ಷಿಯು ಶಿಷ್ಯರಿಗೆ ಮೃಗಜನ್ಮವು ಪ್ರಾಪ್ತವಾಯಿತು. ಅವರಲ್ಲಿ ಏಳನೆಯವನು ನಾದಿ. "उन्मुखो नित्यविस्रस्तः स्तब्धकर्णो विलोचनः। पण्डितो घस्मरो नादी नामतस्तेऽभवन्मृगाः"। (वि०) 3. ಶಬ್ದದಿಂದ ಕೂಡಿದ. नादोऽस्यास्ति "इनिः" (५-२-११५)।

नादेय नादेय (पुं०) 1. ಹಬ್ಬೆ ಗಿಡ. नद्यां भवः "ढक्" (४-२-९७)। 2. ನಾಗರಂಗವೃಕ್ಷ, ಹೇರಳೆ ಗಿಡ. 3. ಕಾಶತೃಣ, ಜಂಬುಹುಲ್ಲು. (न०) 4. ಸೈಂಧವ ಲವಣ. 5. ಸೌವೀರಾಂಜನ. (वि०) 6. ಸ್ವೀಕರಿಸಲು ಯೋಗ್ಯವಲ್ಲದ, ಅಗ್ರಾಹ್ಯವಾದ. 7. ಕೊಡಲು ಯೋಗ್ಯವಾದ. न आदेयम् अदेयं वा। "नादेयं नादेयं शरदि

वसन्ते च नादेयम्"। 8. ನದಿಯಲ್ಲಿ ಹುಟ್ಟಿದ. 9. ನದಿಯ ಸಂಬಂಧವಾದ. नद्यां जातः नद्या इदं वा "ढक्" (४-२-९७)। 10. ನದಿಯಲ್ಲಿರುವ. नद्यां भवः "ढक्" (४-२-९७)। (स्त्री०) -यी -य्या. 11. ನೀರು ಹಬ್ಬಿ ಗಿಡ. 12. ತಕ್ಕಲೆ ಗಿಡ. 13. ಭೂಮಿ ಜಂಬು, ಕಾಗೆ ಹೇರಿಳೆ. 14. ದಾಸಿಮಾಳದ ಗಿಡ. "नादेयो नागरङ्गे स्याज्जयायामम्बुवेतसे" मेदि०। "नादेयी जलवेतसे। तर्कार्यां भूमिजम्ब्वां च जपायां नागरङ्गके। नादेयं सिंधुलवणे त्रिषुत्वेष नदीभवे" नानार्थर०।

नादेश्वर ನಾದೇಶ್ವರ (पुं०) ಕಾಶಿಯಲ್ಲಿರುವ ಒಂದು ಶಿವ ಲಿಂಗ. "नादेश्वरं समभ्यर्च्य कैः कैर्नापि सुचिन्तितम्। तस्मात्काश्यां प्रयत्नेन सेव्यो नादेश्वरो नृभिः" काशीखं०।

नाध् – याच्ञोपतापैश्वर्याशीःषु (भ्वा० आत्म० सक० से०)। नाधते। ननाधे। नाधिता। अनाधिष्ट। ಇತ್ಯಾದಿ.

नाना ನಾನಾ (अव्य०) 1. ವಿನಾ, ಹೊರತು, ಬಿಟ್ಟು, ಇಲ್ಲದೆ. न "नञ्" (५-२-२७)। "नाना नारीर्निष्फला लोकयात्रा"। 2. ಅನೇಕವಾಗಿ, ಬಹಳವಾಗಿ, ಬಗೆ ಬಗೆಯಾಗಿ. 3. ಬೇರೆ ಬೇರೆಯಾಗಿ, ಎರಡಾಗಿ. (वि०) 4. ಬಗೆ ಬಗೆಯಾದ, ಅನೇಕ ವಿಧವಾದ. "नानाशस्त्रप्रहरणाः सर्वे युद्धविशारदाः" गीता १-९। "नानाजाववजानाना सा जनौघघनौजसा" माघ० १९-४०। "नानाशब्दो विनार्थे स्यात् तथानेकोभयार्थयोः" मेदि०। ಇದು ಉಪ ಪದವಾದಲ್ಲಿ "क्विप्" ಪ್ರತ್ಯಯಾರ್ಥದಲ್ಲಿ "कृञ्" ಮತ್ತು "भू" ಧಾತುಗಳಿಗೆ "क्त्वा" ಮತ್ತು "णमुल्" ಪ್ರತ್ಯಯ ಗಳು ಬರುವುವು (३-४-६२)। ಸಮಾಸದಲ್ಲಿ **नानाकृत्य** ನಾನಾಕೃತ್ಯ. ಅಸಮಾಸದಲ್ಲಿ **नानाकृत्वा** ನಾನಾಕೃತ್ವಾ. **नानाकारम्** ನಾನಾಕಾರಮ್. ಹೀಗೆಯೇ **नानाभूय** ನಾನಾ ಭೂಯ, **नानाभूत्वा** ನಾನಾಭೂತ್ವಾ, **नानाभावम्** ನಾನಾ ಭಾವಮ್ ಎಂದು ರೂಪಗಳಾಗುವುವು. ಅನೇಕ ವಿಧವಾಗಿ ಮಾಡಿ. ಅನೇಕ ವಿಧವಾಗಿ ಆಗಿ.

नानाजातीय ನಾನಾಜಾತೀಯ (वि०) ಭಿನ್ನವಾದ, ಸಾಮ್ಯವಿಲ್ಲದ, ಬಗೆ ಬಗೆಯಾದ, ಬೇರೆ ಬೇರೆಯ. नाना+जाति "छः" (५-४-१)।

नानान्द्र ನಾನಾಂದ್ರ (पुं०) ನಾದಿನಿಯ ಮಗ, ಗಂಡನ ಸಹೋದರಿಯ ಮಗ. ननान्दुरपत्यं पुमान् "अञ्" (४-१-१०४)।

नानान्द्रायण ನಾನಾಂದ್ರಾಯಣ (पुं०) ನಾದಿನಿಯ ಮೊಮ್ಮಗನ ಮಗ. ननान्दुः अपत्यं युवा—ननान्द्र "अञ्" (४-१-१०४)। ततो हरितादि० "फक्" (४-१-१००)।

नानारस ನಾನಾರಸ (वि०) 1. ಅನೇಕ ವಿಧ ಅಭಿರುಚಿ ಯುಳ್ಳ, ಅನೇಕ ವಿಧ ರುಚಿಯುಳ್ಳ. 2. ಅನೇಕ ವಿಧ (ಶೃಂಗಾರಾದಿ) ರಸಗಳುಳ್ಳ. नाना अनेकप्रकारा रसा यत्र। "त्रैगुण्योद्भवमत्र लोकचरितं नानारसं दृश्यते" माल० १-४।

नानारूप ನಾನಾರೂಪ (न०) 1. ಅನೇಕ ರೂಪಗಳು, ಬಹುವಿಧ ರೂಪ. नाना रूपाणि। "नानारूपैर्विरूपास्ते रूक्षैरशुभदर्शनाः" रामा०। (वि०) 2. ಅನೇಕ ವಿಧ ರೂಪಗಳುಳ್ಳ, ಅನೇಕ ಬಗೆಯ ಆಕಾರವುಳ್ಳ. नाना रूपाणि यस्य। "नानारूपाणि जायन्ते बीजानीह स्वभावतः" मनु० ९-३८।

नानार्थ ನಾನಾರ್ಥ (पुं०) 1. ಅನೇಕ ಅರ್ಥ. 2. ಅನೇಕ ಕಾರ್ಯ, ಅನೇಕ ಪ್ರಯೋಜನ. (वि०) 3. ಅನೇಕ ಕಾರ್ಯವುಳ್ಳ, ಅನೇಕ ರೀತಿಯ ಪ್ರಯೋಜನವುಳ್ಳ, ಅನೇಕ ಉದ್ದೇಶವುಳ್ಳ. 4. ಅನೇಕ ಅರ್ಥಗಳುಳ್ಳ. नाना अर्थाः प्रयोजनानि अभिधेयानि वा यस्य। "नानार्थाः केऽपि कान्तादिवर्गेष्वेवात्र कीर्तिताः" अम०। "हरि" ಪದವ್ ಯುವ, ವಾಯು, ಇಂದ್ರ, ಚಂದ್ರ, ಸೂರ್ಯ, ವಿಷ್ಣು ಸಿಂಹ, ಕಿರಣ, ಕುದುರೆ ಮುಂತಾದ ನಾನಾರ್ಥಗಳುಳ್ಳದ್ದು ಈ ರೀತಿ ಅನೇಕಾರ್ಥಗಳುಳ್ಳ ಪದಗಳು ನಾನಾರ್ಥ ಪದಗಳು.

नानार्थकोश ನಾನಾರ್ಥಕೋಶ (पुं०) ಅನೇಕ ಅರ್ಥ ಗಳುಳ್ಳ ಪದಗಳ ನಿಘಂಟು. एवम् नानार्थमञ्जरी नानार्थरत्नमाला, नानार्थशब्दकोशः ಇತ್ಯಾದಿ. "क्षीरं पयस्यपि पदे द्वयवाचिभूयं नानार्थकोशविषयोऽद्य मृषोद्य मस्तु" नैष० ११-७८।

नानावर्ण ನಾನಾವರ್ಣ (वि०) ಅನೇಕ ವಿಧ ಬಣ್ಣಗಳುಳ್ಳ ಚಿತ್ರವರ್ಣವುಳ್ಳ. नाना वर्णाः शुक्लादिगुणाः यस्य।

नानाविध ನಾನಾವಿಧ (वि०) 1. ಅನೇಕ ವಿಧವಾದ ಅನೇಕ ಬಗೆಯ, ಅನೇಕ ರೀತಿಯ. नाना अनेके विधा प्रकारा यस्य। "नानारत्नज्योतिषां संनिपातैश्छन्नेष्वन्तःसानु वप्रान्तरेषु" किरा० ५-३६। (अव्य० 2. ಅನೇಕ ವಿಧವಾಗಿ, ಅನೇಕ ಪ್ರಕಾರವಾಗಿ, ಅನೇಕ ಬಗೆಯಾಗಿ. "नानाविधाविष्कृतसामजस्वरः सहस्रवर्त्म चपलैर्दुरध्ययः" माघ० १२-११।

नान्तरीयक ನಾಂತರೀಯಕ (वि०) ಅವಿನಾಭೂತವಾದ ಒಂದನ್ನು ಇನ್ನೊಂದು ಬಿಟ್ಟು ಇಲ್ಲದಿರುವ. न अन्तरं विना भवः "छः" (४-२-१३८)। ततः स्वार्थे "कः"। तदभावे तदभावः अदिद्धरे अदूः ಇರುವುದು

ಆದಿಲ್ಲದೆ ಆದೂ ಇಲ್ಲ ಎಂಬ ವ್ಯಾಪ್ತಿಯುಳ್ಳದ್ದು. तत्सत्तानियतसत्ताकः। "प्रतिबन्धकाभावे नान्तरीयका अर्थोत्पत्तिः" ಇತ್ಯಾದಿ.

नान्त्र ನಾಂತ್ರ (ನ°) ಸ್ತುತಿ, ಸ್ತೋತ್ರ, ಹೊಗಳಿಕೆ. णम (प्रह्वत्वे शब्दे) "ष्ट्रन्" (उ० ४-१५९)। आदिवृद्धिश्च।

नान्दिकर ನಾಂದಿಕರ (ಪುಂ°) ನಾಟಕಗಳಲ್ಲಿ ನಾಂದಿಯನ್ನು (ಮಂಗಳವನ್ನು) ಪಠಿಸುವ ಸೂತ್ರಧಾರ. नान्दीं करोति—ड कृञ् (करणे) "टः" (३-२-२१)। षष्ठीतत्पुरुषः। पूर्वपदस्य वा ह्रस्वः (६-३-६३)। पक्षे नान्दीकरः ನಾಂದೀಕರಃ.

नान्दी ನಾಂದೀ (ಸ್ತ್ರೀ°) 1. ನಾಟಕದ ಪ್ರಾರಂಭದಲ್ಲಿ ಪಠಿಸುವ ಮಂಗಳ ಶ್ಲೋಕ, ನಾಟಕದ ಪ್ರಾರಂಭದಲ್ಲಿ ಆಶೀರ್ವಾದ ಸಮೇತವಾಗಿ ಪಠಿಸುವ ದೇವತೆಗಳು ದ್ವಿಜರು ಮತ್ತು ನೃಪರು ಮೊದಲಾದವರ ಸ್ತೋತ್ರರೂಪವಾದ ಮಂಗಳ ಪದ್ಯ. नन्दन्ति देवादयः अत्र—ड नदि (समृद्धौ) "घञ्" (३-३-१२१)।

ರಂಗಸ್ಥಳದಲ್ಲಿ ಸಂಭವಿಸಬಹುದಾದ ವಿಘ್ನಗಳ ಪರಿಹಾರಕ್ಕಾಗಿ ಮೊದಲು ಸೂತ್ರಧಾರನು ನಾಂದೀಪಠನ ಮಾಡಬೇಕು. "आशीर्वचनसंयुक्ता स्तुतिर्यस्मात् प्रयुज्यते। देवद्विजनृपादीनां तस्मान्नान्दीति संज्ञिता" सा० द० ६-२४।

ಸಭಾಪತಿ ಪ್ರೇಕ್ಷಕರು ಗಾಯಕರು ನಟನಟಿಯರು ಎಲ್ಲರೂ ಪರಸ್ಪರ ಪ್ರೀತಿ ವಿಶ್ವಾಸಗಳಿಂದ ಕಲೆತು ಸಂತೋಷ ಪಡುವುದರಿಂದ ಇದಕ್ಕೆ ರಂಗವೆಂದೂ ಇದು ನಾಟಕದ ಪ್ರಾರಂಭದಲ್ಲಿ ನಡೆಯುವುದರಿಂದ ಇದಕ್ಕೆ ಪೂರ್ವರಂಗವೆಂದೂ ಹೆಸರು. "सभापतिः सभासभ्याः गायका वादका अपि। नटी नटश्च मोदन्ते यत्रान्योन्यानुरञ्जनात्। अतो रङ्ग इति ज्ञेयः पूर्वं यत्स प्रकल्पते। तस्मादयं पूर्वरङ्गः इति विद्वद्भिरुच्यते" भावप्रका०।

ಅನಂತರ ಸಭಾಪತಿ ಮತ್ತು ಸಾಮಾಜಿಕರ ಪೂಜೆ ನಡೆದು ಕವಿ ಮತ್ತು ಕಾವ್ಯದ ಪ್ರಶಂಸೆಯಾಗಬೇಕು. ಪೂರ್ವರಂಗಾಂಗಗಳಾದ ಇವೆಲ್ಲವೂ ನಡೆದರೂ ವಿಘ್ನ ಪ್ರಶಮನಕ್ಕಾಗಿ ನಾಂದಿಯನ್ನು ಅವಶ್ಯವಾಗಿ ಪಠಿಸಬೇಕು. "प्रत्याहारादिकान्यङ्गान्यस्य भूयांसि यद्यपि। तथाप्यवश्यं कर्तव्या नान्दी विघ्नोपशान्तये" सा० द० ६-२३।

ವಿಘ್ನಶಾಂತಿಗಾಗಿ ಪ್ರಾರಂಭದಲ್ಲಿ ಮಾಡುವ ಆಶೀರ್ವಚನಗಳಿಂದ ಕೂಡಿದ ದೇವದ್ವಿಜನೃಪಾದಿಗಳ ಸ್ತುತಿಯು ಸ್ತೋತ್ರದಿಂದ ದೇವತೆಗಳನ್ನೂ ಆಶೀರ್ವಾದಗಳಿಂದ ಸಾಮಾಜಿಕರನ್ನೂ ಆನಂದಪಡಿಸುವುದರಿಂದ ಇದಕ್ಕೆ ನಾಂದಿಯೆಂದು ಹೆಸರು. नन्दयति आनन्दयति स्तवेन देवान् आशीर्वचनेन सामाजिकान् इति नान्दी। "आशीर्वचनसंयुक्ता स्तुतिर्यस्मात्प्रयुज्यते। देवद्विजनृपादीनां तस्मान्नान्दीति संज्ञिता" सा० द० ६-२४। "आशीर्नमस्क्रियावस्तुरूपः श्लोकः काव्यार्थसूचकः। नान्दीति कथ्यते" भरतः।

ಸೂತ್ರಧಾರನು ನಾಂದಿಯನ್ನು ಪಠಿಸಿ ನಿರ್ಗಮಿಸಿದ ನಂತರ ಅವನಂತೆಯೇ ಮತ್ತೊಬ್ಬನು ಪ್ರವೇಶಿಸಿ ಕವಿ ಕಾವ್ಯಗಳ ಪ್ರಶಂಸೆಮಾಡಿ ನಾಟ್ಯವಸ್ತುವನ್ನು ಸೂಚಿಸುವನು. ಇವನು ಕಾವ್ಯಾರ್ಥವನ್ನು ಸೂಚಿಸುವುದರಿಂದ ಇವನಿಗೆ ಸ್ಥಾಪಕನೆಂದು ಹೆಸರು. "नान्दीं प्रयुज्य निष्क्रामेत् सूत्रधारः सहानुगः। स्थापकः प्रविशत्पश्चात्सूत्रधारगुणाकृतिः। पूर्वरङ्गं विधायादौ सूत्रधारे विनिर्गते। प्रविश्य तद्वदपरः काव्यमास्थापयेन्नटः।

ನಾಂದಿಯನ್ನು ಪಠಿಸಿ ಸೂತ್ರಧಾರನು ನಿರ್ಗಮಿಸಿದರೂ नान्द्यन्ते सूत्रधारः ಎಂದು ಸ್ಥಾಪಕನಲ್ಲಿ ಸೂತ್ರಧಾರ ಪದ ಪ್ರಯೋಗವು ಸೂತ್ರಧಾರನ ಸಾಮ್ಯದಿಂದ. ನಾಂದೀ ಪದ್ಯದಲ್ಲಿ ಎಂಟು ಹನ್ನೆರಡು ಹದಿನೆಂಟು ಅಥವಾ ಇಪ್ಪತ್ತೆರಡು ಪದಗಳಿರಬೇಕೆಂಬ ನಿಯಮವಿದೆ. "यत्राष्टभिर्द्वादशभिरष्टादशभिरेव वा। द्वाविंशत्या पदैर्वापि सा नान्दी परिकीर्तिता"।

ನಾಂದೀಪದ್ಯದ ಅರ್ಥದ ಮೂಲಕ ಅಥವಾ ಶಬ್ದಗಳ ಮೂಲಕ ಕಾವ್ಯಾರ್ಥವು ಸೂಚಿತವಾಗಿರಬೇಕು. "अर्थतः शब्दतो वापि मनाक्काव्यार्थसूचनम्" प्र० रु०। ವೇಣೀ ಸಂಹಾರದ ನಾಂದೀಶ್ಲೋಕದಲ್ಲಿ "निषिद्धैरप्येभिः" ಇತ್ಯಾದಿ ಪದಗಳಿಂದ ಆಚಾರ್ಯರು ಮತ್ತು ಮಿತ್ರರು ಎಲ್ಲಾ ಸಮಯದಲ್ಲೂ ಎಷ್ಟೇ ತಡೆದರೂ ದುರ್ಯೋಧನಾದಿಗಳು ದರ್ಪದಿಂದ ತಮ್ಮ ಹಟವನ್ನು ಬಿಡದೆ ಯುದ್ಧದ ಸನ್ನಾಹದಲ್ಲಿ ತೊಡಗಿದರೆಂಬ ವಿಷಯ ಮತ್ತು "संभिन्नमुकुलः" ಪದದಿಂದ ಧರ್ಮರಾಜ ಮೊದಲಾದವರು ವನವಾಸದಲ್ಲಿ ಅನುಭವಿಸಿದ ಕಷ್ಟ ಅನಂತರ ಅವರು ಜಯಗಳಿಸಿ ಅನುಭವಿಸಿದ ಸುಖ ಸಂತೋಷ ಇತ್ಯಾದಿ ಕಥಾವಸ್ತು ಸೂಚಿತವಾಯಿತು.

ನಾಂದೀಶ್ಲೋಕವು ಅಷ್ಟಪದಾತ್ಮಕ ದ್ವಾದಶ ಪದಾತ್ಮಕ ಅಷ್ಟಾದಶಪದಾತ್ಮಕ ಅಥವಾ ದ್ವಾವಿಂಶತಿಪದಾತ್ಮಕವಾಗಿರಬೇಕು. "यत्राष्टभिर्द्वादशभिरष्टादशभिरेव वा। द्वाविंशत्या पदैर्वापि"।

ಕೆಲವರು ಸುಬಂತ ಮತ್ತು ತಿಙನ್ತಗಳು ಪದವೆಂದೂ ಇನ್ನು ಕೆಲವರು ಶ್ಲೋಕದ ಒಂದು ಪಾದವು ಪದವೆಂದೂ ಮತ್ತೆ ಕೆಲವರು ಅವಾಂತರವಾಕ್ಯಗಳು ಪದವೆಂದೂ ಹೇಳುವರು. "श्लोकपादः पदं केचित् सुप्तिङन्तमथापरे। परेऽवान्तरवाक्यैकस्वरूपं पदमूचिरे" नाट्यप्र०। 2. ಸಂತೋಷ. 3. ದೇವತಾ ಪ್ರಾರ್ಥನೆ. 4. ಅಭಿವೃದ್ಧಿ, ಏಳಿಗೆ. 5. ಮಂಗಳ.

नान्दीक नान्दीक (पुं०) ಮನೆಯ ಬಾಗಿಲಲ್ಲಿರುವ ಮಂಗಳ ಸೂಚಕವಾದ ತೋರಣಸ್ತಂಭ. नान्द्यै कायति—कै (शब्दे) "कः" (३-२-४)।

नान्दीकर नान्दीकर (पुं०) ನಾಟಕದ ಪ್ರಾರಂಭದಲ್ಲಿ ನಾಂದೀಶ್ಲೋಕವನ್ನು ಪಠಿಸುವ ಸೂತ್ರಧಾರ. नान्दीं करोति—डु कृञ् (करणे) "टः" (३-२-२१)। षष्ठीतत्पुरुषः।

नान्दीघोष नान्दीघोष (पुं०) ಮಂಗಳಕರವಾದ ನಗಾರಿ ಮೊದಲಾದವುಗಳ ಶಬ್ದ. नान्द्यै घोषः।

नान्दीपट नान्दीपट (पुं०) ಬಾವಿಯ ಬಾಯನ್ನು ಮುಚ್ಚುವ ಕವಾಟ. नान्द्याः वृद्धयर्थः पटः। "नान्दीमुखो नान्दीपटो वीवाहो मुखबन्धने" अभि० चि०।

नान्दीमुख नान्दीमुख (पुं०) 1. ತಾಯಿ ತಂದೆ ಮೊದಲಾದವರು. ವೃದ್ಧಿಶ್ರಾದ್ಧದಲ್ಲಿ ಉದ್ದೇಶಿಸಲ್ಪಟ್ಟ ತಂದೆ, ತಾತ, ಪ್ರಪಿತಾಮಹ ಮೊದಲಾದ ಪಿತೃಗಣ. ಮಾತೃ ಪಿತಾಮಹೀ ಪ್ರಪಿತಾಮಹಿ (ತಾಯಿ ತಂದೆಯ ತಾಯಿ ಮತ್ತು ತಂದೆಯ ಪಿತಾಮಹಿ), ಪಿತೃ ಪಿತಾಮಹ ಪ್ರಪಿತಾಮಹ (ತಂದೆ ತಾತ ತಂದೆಯ ತಾತ), ಸಪತ್ನೀಕರಾದ ಮಾತಾಮಹ ಮಾತೃಪಿತಾಮಹ ಮಾತೃಪ್ರಪಿತಾಮಹ (ಪತ್ನೀ ಸಹಿತರಾದ ತಾಯಿಯ ತಂದೆ ತಾಯಿಯ ತಂದೆಯ ತಂದೆ, ಅವರ ತಂದೆ) ಇವರೆಲ್ಲರೂ ನಾಂದೀಮುಖರಾದ ಪಿತೃಗಣ. ಜಾತಕರ್ಮ, ನಾಮಕರಣ, ಚೂಡಾಕರ್ಮ, ಉಪನಯನ, ಪುತ್ರೀ ಮತ್ತು ಪುತ್ರನ ವಿವಾಹ, ಸೀಮಂತ, ಗೃಹಪ್ರವೇಶ ಮೊದಲಾದ ಸಂದರ್ಭಗಳಲ್ಲಿ ಪಿತೃಗಣದ ಪ್ರೀತ್ಯರ್ಥವಾಗಿ ಮತ್ತು ಎಲ್ಲರ ಅಭ್ಯುದಯಕ್ಕಾಗಿ ನಾಂದೀಮುಖವನ್ನು ಆಚರಿಸಬೇಕು. "कन्यापुत्रविवाहे च प्रवेशे नववेश्मनः। नामकर्मणि बालानां चूडाकर्मादिके तथा। सीमन्तोन्नयने चैव पुत्रादिमुखदर्शने। नान्दीमुखं पितृगणं पूजयेत् प्रयतो गृही" विष्णुपु० १३। (न०) 2. ಅಭ್ಯುದಯಸಾಧನವಾದ ಒಂದು ಶ್ರಾದ್ಧ, ವೃದ್ಧಿ ಶ್ರಾದ್ಧ. नान्द्या वृद्धेर्मुखम्। (वि०) 3. ಸಂತೋಷದ ಮುಖವುಳ್ಳ, ನಗುಮುಖವುಳ್ಳ: (स्त्री०) **-मुखी -मुखी**. 4. ನಾಂದೀ ಶ್ರಾದ್ಧದಲ್ಲಿ ಭಾಗಿಯಾದ ಹೆಂಗಸು.

नान्दीवादिन् नान्दीवादिन् (पुं०) 1. ನಾಂದೀ (ಮಂಗಳ) ಶ್ಲೋಕವನ್ನು ಪಠಿಸುವವನು. नान्दीं वदति—वद (व्यक्तायां वाचि) "णिनिः" (३-१-१३४)। 2. ಭೇರಿ (ನಗಾರಿ) ಯನ್ನು ಬಾರಿಸುವವನು.

नान्दीश्राद्ध नान्दीश्राद्ध (न०) ನಾಂದಿಗಾಗಿ ಮಾಡುವ ಶ್ರಾದ್ಧ, ಅಭ್ಯುದಯ ಶ್ರಾದ್ಧ, ಪಿತೃಗಣದ ಪ್ರೀತ್ಯರ್ಥವಾಗಿ ಮತ್ತು ಎಲ್ಲರ ಅಭ್ಯುದಯಕ್ಕಾಗಿ ಮಾಡಬೇಕಾದ ಶ್ರಾದ್ಧ. नान्दीनिमित्तं श्राद्धम्।

नापित नापित (पुं०) ದಿವಾಕೀರ್ತಿ, ಕ್ಷೌರಿಕ, ನಾಯಿಂದ. न+आप्लृ (व्याप्तौ) "तन्" इडागमश्च (उ० ३-८७)। ಇವನು ಕ್ಷತ್ರಿಯನಿಂದ ಶೂದ್ರಸ್ತ್ರೀಯಲ್ಲಿ ಹುಟ್ಟಿದ ಬೆರಕೆ ಜಾತಿಯವನು. "नराणां नापितो धूर्तः पक्षिणां चैव वायसः। दंष्ट्रिणां च सृगालस्तु श्वेतभिक्षुस्तपस्विनाम्" पञ्चतं०।

नापितशाला नापितशाला (स्त्री०) ಕ್ಷೌರದ ಮನೆ.

नापितभाण्ड नापितभाण्ड (न०) ನಾಪಿತನ ಕ್ಷೌರದ ಸಾಮಾನುಗಳ ಪೆಟ್ಟಿಗೆ.

नाभ नाभ (पुं०) ಸೂರ್ಯವಂಶದ ಒಬ್ಬ ದೊರೆ. "श्रुतो भगीरथाज्जज्ञे तस्य नाभोऽपरोऽभवत्" भाग० ९-९-१६।

नाभस नाभस (पुं०) 1. ಜಾತಕದಲ್ಲಿ ಲಗ್ನದಿಂದ ಬೇರೆ ಬೇರೆ ರಾಶಿಗಳಲ್ಲಿರುವ ಗ್ರಹಗಳ ಸಂಬಂಧದಿಂದ ಉಂಟಾಗುವ ಯೋಗಗಳಲ್ಲೊಂದು. (वि०) 2. ನಭಸ್ಸಿಗೆ ಸಂಬಂಧಿಸಿದ, ಆಕಾಶಸಂಬಂಧವಾದ. नभसः इदम् "अण्" (४-३-१२०)।

नाभाग नाभाग (पुं०) 1. ವೈವಸ್ವತ ಮನುವಿನ ಒಬ್ಬ ಪುತ್ರ. 2. ಶ್ರುತನೆಂಬ ರಾಜನ ಮಗ. "भगीरथसुतो राजा श्रुत इत्यभिविश्रुतः। नाभागस्तु श्रुतस्यासीत् पुत्रः परमधार्मिकः। अम्बरीषस्तु नाभागिः सिन्धुद्वीपपिताऽभवत्" हरिवं०।

नाभि नाभि (पुंस्त्री०) 1. ಉದರಾವರ್ತ, ಹೊಕ್ಕುಳು. णह (बन्धने) "इल्" भश्चान्तादेशः (उ० ४-१२५)। "नृपं तमावर्तमनोज्ञनाभिः सा व्यत्यगादन्यवधूर्भवित्री" रघु० ६-५२। ಸುಷುಮ್ನಾನಾಡಿಯೊಳಗಿರುವ ಈ ನಾಭಿಸ್ಥಾನದಲ್ಲಿ ಮಣಿಪೂರವೆಂಬ ದಶದಳಪದ್ಮವಿರುವುದು. "तद्वच्च नाभिदेशे तु मणिपूरं महाप्रभम्। मेघाभं विद्युदाभं च बहुतेजोमयं ततः। दशभिश्च दलैर्युक्तं

ङादिफान्ताक्षरान्वितम्। शिवेनाधिष्ठिते पद्मे विश्वालोकनकारणम्" तन्त्रसा०। 2. ಬಂಡಿಯ ಚಕ್ರದ ತೂಬು, ಚಕ್ರದ ಮಧ್ಯಭಾಗ. "अरैः सन्धार्यते नाभिः नाभौ चाराः प्रतिष्ठिताः" पञ्चतं० १-८९। 3. ಒಬ್ಬ ಕ್ಷತ್ರಿಯ. 4. ಪ್ರಧಾನ, ಮುಖ್ಯ. "कृत्स्नस्य नाभिर्नृपमण्डलस्य" रघु० १८-२०। 5. ಚಕ್ರವರ್ತಿ. 6. ಸಮಾಪದ ಬಂಧುತ್ವ, ಹತ್ತಿರದ ನೆಂಟು. 7. ಆಗ್ನೀಧ್ರ ರಾಜನ ಒಂಬತ್ತು ಮಂದಿ ಮಕ್ಕಳಲ್ಲೊಬ್ಬ. "आग्नीध्रो नाभिकिम्पुरुषहरिवर्षेलावृतरम्यकहिरण्मयकुरुभद्राश्वकेतुमालसंज्ञानव पुत्रानजनयत्" भाग० ५-२-१९।

नाभिकण्टक नाभिकंटक (पुं०) ಉಬ್ಬಿರುವ ಹೊಕ್ಕುಳು, ಮುಂದಕ್ಕೆ ಚಾಚಿಕೊಂಡಿರುವ ಹೊಕ್ಕುಳು. नाभिः कण्टक इव।

नाभिकूप नाभिकूप (पुं०) ಬಾವಿಯಂತೆ ಆಳವಾಗಿರುವ ನಾಭಿ. ಕುಳಿಯಾಗಿರುವ ಹೊಕ್ಕುಳು. नाभिः कूप इव। "रोमावलीरज्जुमुरोजकुम्भौ गम्भीरमासाद्य च नाभिकूपम्" नैष० ७-८४।

नाभिगन्ध नाभिगंध (पुं०) ಕಸ್ತೂರಿ ಮೃಗದ ಮದ.

नाभिगोलक नाभिगोलक(पुं०)ಉಬ್ಬಿರುವ ಹೊಕ್ಕುಳು, ಮುಂದಕ್ಕೆ ಚೆಂಡಿನಂತೆ ಚಾಚಿಕೊಂಡಿರುವ ಹೊಕ್ಕುಳು. नाभिः गोलक इव।

नाभिज नाभिज (पुं०) 1. ನಾಭಿಯಲ್ಲಿ ಹುಟ್ಟಿದ ಚತುರ್ಮುಖ, ಬ್ರಹ್ಮ. नाभौ विष्णोर्नाभौ जायते — जनी (प्रादुर्भावे) "डः" (३-२-९७)। (वि०) 2. ನಾಭಿಯಲ್ಲಿ ಹುಟ್ಟಿದ.

नाभिजन्मन् नाभिजन्मन् (पुं०) 1. ವಿಷ್ಣುವಿನ ನಾಭಿಯಲ್ಲಿ ಹುಟ್ಟಿದ ಬ್ರಹ್ಮ. नाभौ विष्णोर्नाभौ जन्म यस्य। (वि०) 2. ಹೊಕ್ಕುಳಲ್ಲಿ ಹುಟ್ಟಿದ.

नाभिजात नाभिजात (पुं०) 1. ವಿಷ್ಣುವಿನ ನಾಭಿಯಲ್ಲಿ ಹುಟ್ಟಿದ ಬ್ರಹ್ಮ. नाभौ जातः। (वि०)2. ಹೊಕ್ಕುಳಲ್ಲಿ ಹುಟ್ಟಿದ.

नाभिदघ्न नाभिदघ्न (वि०) ಹೊಕ್ಕುಳಿನ ಪ್ರಮಾಣದ, ಹೊಕ್ಕುಳಿನವರೆಗಿನ ಆಳತೆಯ. नाभिः प्रमाणमस्य — "दघ्नच्" (५-२-३७)।

नाभिनाडी नाभिनाडी (स्त्री०) ಹೊಕ್ಕುಳು ಕುಡಿ. नाभेर्नाडी।

नाभिनाल नाभिनाल (न०) ಹೊಕ್ಕುಳು ಕುಡಿ. नाभेर्नालम्। "तदङ्कशय्याच्युतनाभिनाला कच्चिन्मृगीणामनघा प्रसूतिः" रघु० ५-७।

नाभिभू नाभिभू (पुं०) ವಿಷ್ಣುವಿನ ನಾಭಿಯಲ್ಲಿ ಹುಟ್ಟಿದ ಚತುರ್ಮುಖ, ಬ್ರಹ್ಮ. नाभौ भवति — भू (सत्तायाम्) "क्विप्" (३-२-१७९)।

नाभिमात्र नाभिमात्र (वि०) ಹೊಕ್ಕುಳಿನವರೆಗಿನ ಆಳತೆಯ, ಹೊಕ್ಕುಳಿನವರೆಗಿನ ಪ್ರಮಾಣದ. नाभिः प्रमाणमस्य "मात्रच्" (५-२-३७)।

नाभिल नाभिल (वि०) ಪ್ರಶಸ್ತವಾದ ನಾಭಿಯುಳ್ಳ, ಉದ್ದದ ಹೊಕ್ಕುಳುಳ್ಳ. प्रशस्ता नाभिरस्यास्ति "लच्" (५-२-९७)।

नाभील नाभील (न०) 1. ಹೆಂಗಸರ ತೊಡೆಗಳ ಸಂದು, ಕಿಬ್ಬೊಟ್ಟೆಯ ಕೆಳಭಾಗಕ್ಕೂ ತೊಡೆಗಳ ಮೇಲುಭಾಗಕ್ಕೂ ಮಧ್ಯೆ ಇರುವ ಗುಳಿ. 2. ಕಷ್ಟ, ತೊಂದರೆ.

नाभिवर्धन नाभिवर्धन (न०) ಹೊಕ್ಕುಳು ಕುಡಿಯನ್ನು ಕತ್ತರಿಸುವುದು. नाभेः तत्रत्यनाडयाः वर्धनम्। "प्राङ्नाभिवर्धनात् पुंसो जातकर्म विधीयते" मनु० २-२९।

नाभिवर्ष नाभिवर्ष (न०) ಜಂಬೂದ್ವೀಪದ ಒಂಬತ್ತು ವರ್ಷ (ಭೂಭಾಗ)ಗಳಲ್ಲೊಂದು. ಆಗ್ನೀಧ್ರನು ತನ್ನ ಒಂಬತ್ತು ಮಕ್ಕಳಿಗೆ ಹಂಚಿಕೊಟ್ಟ ಒಂಬತ್ತು ವರ್ಷಗಳಲ್ಲೊಂದು. नाभेः आग्नीध्रपुत्रस्य वर्षः। ಸ್ವಾಯಂಭುವ ಮನುವಿನ ಮಗನಾದ ಪ್ರಿಯವ್ರತ ರಾಜನು ತನ್ನ ರಥದ ಚಕ್ರದ ಕೊನೆಯಿಂದ ಗೆರೆಯೆಳೆದು ಸಪ್ತ ಸಮುದ್ರಗಳನ್ನೂ ಸಪ್ತದ್ವೀಪಗಳನ್ನಾಗಿ ಮಾಡಿ ತನ್ನ ಏಳು ಮಂದಿ ಮಕ್ಕಳಿಗೂ ಭಾಗಮಾಡಿಕೊಟ್ಟನು. ಹಿರಿಯ ಮಗನಾದ ಆಗ್ನೀಧ್ರನು ತನ್ನ ಪಾಲಿಗೆ ಬಂದ ಜಂಬೂದ್ವೀಪವನ್ನು ಒಂಬತ್ತು ಭಾಗಮಾಡಿ ನಾಭಿ ಮೊದಲಾದ ತನ್ನ ಒಂಬತ್ತು ಮಂದಿ ಮಕ್ಕಳಿಗೂ ಹಂಚಿದನು. ಹಿರಿಯ ಮಗನಾದ ನಾಭಿಯ ಪಾಲಿಗೆ ಬಂದ ಅಜನಾಭ ದೇಶಕ್ಕೆ "ನಾಭಿವರ್ಷ" ಎಂದು ಹೆಸರಾಯಿತು. ನಾಭಿಯ ಮಗ ಋಷಭ. ಋಷಭ ರಾಜನ ಅನಂತರ ಅವನ ಮಗನಾದ ಭರತನು ರಾಜ್ಯವಾಳಿದನು. ಇವನ ಕಾಲದಲ್ಲಿ ನಾಭಿವರ್ಷಕ್ಕೆ **"ಭಾರತವರ್ಷ"** ಎಂದು ಹೆಸರಾಯಿತು. "आग्नीध्रसुतास्ते पित्रा विभक्ताः आत्मतुल्यनामानि यथाभागं जम्बूद्वीपवर्षाणि बुभुजुः" भाग० ५-२-२१। ಸಮುದ್ರಕ್ಕೆ ಉತ್ತರದ ಮತ್ತು ಹಿಮಾಚಲದ ದಕ್ಷಿಣದ ಭೂಭಾಗವು ಭಾರತವರ್ಷವಾಯಿತು. "उत्तरं यत्समुद्रस्य हिमाद्रेश्चैव दक्षिणम्। वर्षं तद्भारतं नाम भारती यत्र सन्ततिः" विष्णुपु० २-३-१।

नाभ्य नाभ्य (पुं०) 1. ಮಹಾದೇವ, ಪರಶಿವ. "नमो नाभाय नाभ्याय नमः कटकटाय च" भा० शान्ति० २९०-९०। (वि०) 2. ನಾಭಿಗೆ ಹಿತವಾದ. नाभये हितम् "यत्" (४-३-५५)।

नाम नाम (अव्य०) 1. ಅಂಗೀಕಾರ, ಒಪ್ಪಿಗೆ. नाम्यतेऽनेन — णम (प्रह्वत्वे शब्दे) "डः" (३-२-१०१)। "एवं नामास्तु"। 2. ಕುತ್ಸನ, ನಿಂದೆ, ದೂಷಣೆ. "को नामायं सवितुरुदये स्वापमेवं विधत्ते"। 3. ಪ್ರಸಿದ್ಧಿ. "हिमालयो नाम नगाधिराजः" कुमा० १-१। 4. ಕ್ರೋಧ, ಕೋಪ. "ममापि नाम दशाननस्य परैरभिभवः"। 5. ವಿಸ್ಮಯ, ಆಶ್ಚರ್ಯ. "अन्धो नाम गिरिमारोहति"। 6. ಮಿಥ್ಯೆ, ಸುಳ್ಳು. "अहं च भीतो नामावप्लुतः"। 7. ಸ್ಮರಣೆ. 8. ವಿಕಲ್ಪ. 9. ಊಹೆ, ಸಂಭಾವನೆ. "नाम कोपेऽभ्युपगमे विस्मये स्मरणेऽपि च। संभाव्यकुत्साप्राकाश्यविकल्पेऽपि च दृश्यते" मेदि०।

नामकरण नामकरण (न०) ಶಿಶುವು ಹುಟ್ಟಿದನಂತರ ಅದಕ್ಕೆ ಹೆಸರಿಡುವುದು, ಯಾವುದಾದರೊಂದು ಹೆಸರಿಟ್ಟು ಕರೆಯುವುದು. ಇದು ಮನುಷ್ಯನಿಗೆ ನಡೆಯಬೇಕಾದ ಷೋಡಶ (ಹದಿನಾರು) ಸಂಸ್ಕಾರಗಳಲ್ಲೊಂದು. नाम्नः करणं यत्र। ಜನಿಸಿದ ಶಿಶುವಿಗೆ ಹತ್ತು ದಿನಗಳು ಕಳೆದು ಹನ್ನೊಂದನೆಯ ಅಥವಾ ಹನ್ನೆರಡನೆಯ ದಿವಸ ನಾಮ ಕರಣ ಮಾಡಬೇಕು. "एकादशे द्वादशे वा अहनि पिता नाम कुर्यात्" श्रुतिः। ಬ್ರಾಹ್ಮಣನಿಗೆ "ಶರ್ಮ" ಎಂದೂ ಕ್ಷತ್ರಿಯನಿಗೆ "ವರ್ಮ" ಎಂದೂ ವೈಶ್ಯನಿಗೆ "ಗುಪ್ತ" ಎಂದೂ ಶೂದ್ರನಿಗೆ "ದಾಸ" ಎಂದೂ ಹೆಸರಿನ ಮುಂದೆ ಸೇರಿಸಬೇಕು. "शर्मेति ब्राह्मणस्योक्तं वर्मेति क्षत्रसंश्रयम्। गुप्तदासात्मकं नाम प्रशस्तं वैश्यशूद्रयोः"। ಅರ್ಥವಿಲ್ಲದ ಅಪ್ರಶಸ್ತವಾದ ಅಪಶಬ್ದದಿಂದ ಕೂಡಿದ ಅಶುಭವಾದ ಜುಗುಪ್ಸಾವಹವಾದ ಹೆಸರುಗಳನ್ನು ಇಡಕೂಡದು. "नार्थहीनं नचाशस्तं नापशब्दयुतं तथा। नामाङ्गल्यं जुगुप्स्यं वा नाम कुर्यात् समाक्षरम्" विष्णुपु०। ಹನ್ನೊಂದನೆಯ ದಿವಸ ನಾಮಕರಣ ನಡೆಯದಿದ್ದರೆ ಶುಭ ದಿವಸ ಶುಭನಕ್ಷತ್ರದಲ್ಲಿ ನಾಮಕರಣ ನಡೆಯಬೇಕು. **ಶುಭ ನಕ್ಷತ್ರಗಳು :** ಅಶ್ವಿನಿ, ರೋಹಿಣಿ, ಮೃಗಶಿರ, ಪುನರ್ವಸು, ಉತ್ತರಫಲ್ಗುನಿ, ಸ್ವಾತಿ, ಅನೂರಾಧಾ, ಉತ್ತರಾಷಾಢಾ, ಶ್ರವಣ, ಧನಿಷ್ಠಾ, ಶತಭಿಷೆ, ಉತ್ತರಾ ಭಾದ್ರಾ ಮತ್ತು ರೇವತಿ.

नामकर्मन् नामकर्मन् (न०) ಹುಟ್ಟಿದ ಶಿಶುವಿಗೆ ಹೆಸರಿಡುವ ಒಂದು ಸಂಸ್ಕಾರ.

नामग्राहम् नामग्राहम् (अव्य०) ಹೆಸರು ಹಿಡಿದು. नाम गृहीत्वा — नाम + ग्रह (उपादाने) "णमुल्" (३-४-५८)। "नामग्राहं कपिभिरशनैः स्तूयमानः समन्तात्" भट्टि० ६-१४३।

नामचौर नामचौर (पुं०) ಇನ್ನೊಬ್ಬನ ಹೆಸರನ್ನು ಕದಿಯುವವನು. ಒಬ್ಬನು ತನ್ನ ಪ್ರಸಿದ್ಧಿಗಾಗಿ ಪ್ರಸಿದ್ಧ ಪುರುಷನೊಬ್ಬನ ಹೆಸರನ್ನು ಇಟ್ಟುಕೊಳ್ಳುವುದು ಚೌರ್ಯ ರೂಪವಾದ ಅಪರಾಧವಾಗುವುದು.

नामद्वादशी नामद्वादशी (स्त्री०) 1. ಪಾರ್ವತಿಯ ಹನ್ನೆರಡು ಹೆಸರುಗಳು. (1) गौरी, (2) काली, (3) उमा, (4) भद्रा, (5) दुर्गा, (6) कान्तिः, (7) सरस्वती, (8) मङ्गला, (9) वैष्णवी, (10) लक्ष्मीः, (11) शिवा ಮತ್ತು (12) नारायणी — ಇವು ಪಾರ್ವತಿಯ ಹನ್ನೆರಡು ಹೆಸರುಗಳು. 2. ದುರ್ಗಾದೇವಿಯ ಹನ್ನೆರಡು ಹೆಸರು ಗಳಿಂದ ನಡೆಸುವ ಪೂಜೆ.

नामधातु नामधातु (पुं०) ಸುಬಂತ ಪದಗಳ ಮುಂದೆ ಬರುವ ಪ್ರತ್ಯಯಗಳಿಂದ ಸಿದ್ಧವಾದ ಧಾತು. पुत्रमात्मनः इच्छति ಎಂಬಲ್ಲಿ ಸುಬಂತವಾದ पुत्र ಪದಕ್ಕೆ "क्यच्" (३-१-८) ಪ್ರತ್ಯಯವೂ "अ" ಕಾರಕ್ಕೆ "ई" ಕಾರವೂ ಬಂದು पुत्रीय ಎಂದಾಗುವುದು. ಇದಕ್ಕೆ "सनाद्यन्ता धातवः (३-१-३२) ಎಂಬ ಸೂತ್ರದಿಂದ ಧಾತು ಸಂಜ್ಞೆ ಬಂದು ಇದು ನಾಮಧಾತುವಾಗುವುದು. पुत्रीय ಎಂಬ ಈ ನಾಮಧಾತುವಿಗೆ तिप् ಮೊದಲಾದ ಪ್ರತ್ಯಯಗಳು ಬಂದು पुत्रीयति ಇತ್ಯಾದಿ ರೂಪಗಳಾಗುವುವು.

नामधारक नामधारक (वि०) ಅರ್ಥವಿಲ್ಲದ ಹೆಸರನ್ನು ಮಾತ್ರ ಹೊಂದಿರುವವನು. ಮನುಷ್ಯನು ತನ್ನ ಹೆಸರಿಗೆ ತಕ್ಕ ಕರ್ತವ್ಯಗಳನ್ನು ಆಚರಿಸುತ್ತಿದ್ದರೆ ಅವನ ಹೆಸರು ಅರ್ಥವತ್ತಾಗುವುದು. ಕರ್ತವ್ಯ ವಿಹೀನನಾದವನ ಹೆಸರು ಅಪ್ರಯೋಜಕವಾಗಿ ಅವನು ಅಂತಹ ಅರ್ಥವಿಲ್ಲದ ಹೆಸರನ್ನು ಮಾತ್ರ ಹೊಂದಿದಂತಾಗುವುದು. नाममात्रं धरति न तदर्थं करोति — धृञ् (धारणे) "ण्वुल्" (३-१-१३३)। ಕಾಷ್ಠಮಯವಾದ ಆನೆಯು ಯುದ್ಧಾದಿಕಾರ್ಯಗಳಿಗೆ ಉಪಯೋಗವಾಗದೆ ಕೇವಲ ಆನೆ ಎಂಬ ಹೆಸರನ್ನು ಹೊಂದಿರುವಂತೆ ವೇದಾಧ್ಯಯನ ಮಾಡದಿರುವ ಬ್ರಾಹ್ಮಣನು ಕೇವಲ ಬ್ರಾಹ್ಮಣನೆಂಬ ಸಂಜ್ಞೆಯನ್ನು ಹೊಂದಿರುವನೇ ಹೊರತು ಯಾವ ಕಾರ್ಯಕ್ಕೂ ಅರ್ಹನಲ್ಲ.

"यथा काष्ठमयो हस्ती यथा चर्ममयो मृगः। यश्च विप्रोऽनधीयानस्त्रयस्ते नाम बिभ्रति" मनु० २-१५७। ಅಂತೆಯೇ ಅರ್ಥ (ಧನ) ವಿಹೀನನಾದ ಪುರುಷನೂ ಸಮಾಜದಲ್ಲಿ ಯಾವ ಕಾರ್ಯಕ್ಕೂ ಸಮರ್ಥನಾಗುವುದಿಲ್ಲ. "दंष्ट्रा-विरहितः सर्पो मदहीनो यथा गजः। तथाऽर्थेन विहीनोऽत्र पुरुषो नामधारकः" पञ्चतं० २-११।

नामधारिन् नामधारिन् (वि०) ಹೆಸರನ್ನು ಹೊಂದಿರುವವನು, ಹೆಸರಿನಿಂದ ಕರೆಯಲ್ಪಡುವವನು. नाम धरति — धृञ् (धारणे) "णिनिः" (३-१-१३४)।

नामधेय नामधेय (न०) ಹೆಸರು, ಅಭಿಧಾನ. नामन् स्वार्थे "धेयः" (वा० ५-४-२५)। "हृष्यंगवीनमादाय घोषवृद्धानुपस्थितान्। नामधेयानि पृच्छन्तौ वन्यानां मार्गशाखिनाम्" रघु० १-४५।

नामन् नामन् (न०) 1. ಹೆಸರು, ಅಭಿಧಾನ, ಒಬ್ಬ ವ್ಯಕ್ತಿಯನ್ನು ಕರೆಯುವ ಅಥವಾ ಒಂದು ವಸ್ತುವನ್ನು ಹೇಳುವ ಸಂಜ್ಞಾಶಬ್ದ. नम्यते अभिधीयते अर्थोऽनेन— णम (प्रह्वत्वे शब्दे) "मनिन्" (उ० ४-१५१) निपा०। ನಾಮಪದಗಳು ಸತ್ತ್ವ (ದ್ರವ್ಯ) ಪ್ರಧಾನವಾದುವು. "सत्त्वप्रधानानि नामानि" नमन्त्याख्यातशब्दे गुणभावेन इति नामानि। ಯಾವ ಒಂದು ಶಬ್ದವನ್ನು ಉಚ್ಚರಿಸಿದ ಕೂಡಲೆ ಯಾವನೊಬ್ಬ ವ್ಯಕ್ತಿಯು ಅಥವಾ ಯಾವುದಾದರೊಂದು ವಸ್ತುವಿನ ಬೋಧವಾಗುವುದೋ ಆ ಶಬ್ದವು "ನಾಮ" ವಾಗುವುದು. "शब्देनोच्चरितेनेह येन द्रव्यं प्रतीयते। तदक्षरविधौ युक्तं नामेत्याहुर्मनीषिणः" निरु०। 2. ವಾಚಕಶಬ್ದ, ಒಂದು ವಸ್ತುವಿನ ಅಥವಾ ವ್ಯಕ್ತಿಯ ಅರ್ಥವನ್ನು ತಿಳಿಸುವ ಶಬ್ದ. "हरेर्नाम हरेर्नाम हरेर्नामैव केवलम्। कलौ नास्त्येव नास्त्येव नास्त्येव गतिरन्यथा"। ಇದು ಪೌರಾಣಿಕಮತ. 3. ಪ್ರಾತಿಪದಿಕರೂಪವಾದ ಒಂದು ಶಬ್ದ, ಅರ್ಥವತ್ತಾದ ಧಾತುಭಿನ್ನವಾದ ಯಾವ ಪ್ರತ್ಯಯವೂ ಸೇರದಿರುವ ಶಬ್ದರೂಪ. "धनोऽस्ति" ಎಂಬಲ್ಲಿ धन ಎಂಬ ಶಬ್ದರೂಪವು ಪ್ರಾತಿಪದಿಕ. ಇದು ಪಾಣಿನೀಯರ ಮತ. ನಾಮಪದವು (1) ರೂಢ, (2) ಲಕ್ಷಕ, (3) ಯೋಗರೂಢ ಮತ್ತು (4) ಯೌಗಿಕ ಎಂದು ನಾಲ್ಕು ವಿಧ. ಅವಯವ ಶಕ್ತಿಯಿಲ್ಲದೆ ಕೇವಲ ಸಮುದಾಯ ಶಕ್ತಿಯಿಂದ ಅರ್ಥವು ಬೋಧವಾಗುವಲ್ಲಿ ಅಂತಹ ಪದವು **ರೂಢವು.** "गौः" ಎಂಬಲ್ಲಿ "शक्तेर्डोः" (उ० २-६८) ಸೂತ್ರದಿಂದ ವಿಹಿತವಾದ ಪ್ರತ್ಯಯಕ್ಕೆ ಯಾವ ಅರ್ಥದಲ್ಲಿಯೂ ಶಕ್ತಿಯಿಲ್ಲದೆ **ಯೌಗಿಕವಾಗುವುದಿಲ್ಲವಾದುದರಿಂದ** "गो" ಪದವು ರೂಢವು. ಇದು ಪ್ರಕೃತಿ ಪ್ರತ್ಯಯ ಸಮುದಾಯದಿಂದ "ಹಸು" ಎಂಬ ಅರ್ಥವನ್ನು ಬೋಧಿಸುವುದು. ಯಾವ ಪದವು ತನ್ನ ಮುಖ್ಯಾರ್ಥಕ್ಕೆ ಬಾಧೆಯುಂಟಾಗಿ ಅನ್ವಯವಿಲ್ಲದೆ ಮುಖ್ಯಾರ್ಥದ ಸಂಬಂಧದಿಂದ ಪ್ರಕೃತವಾದ ಮತ್ತೊಂದು ಅರ್ಥವನ್ನು ಬೋಧಿಸುವುದೋ ಅದು **ಲಕ್ಷಕ.** "गङ्गायां घोषः" ಎಂಬಲ್ಲಿ ಜಲಮಯವಾದ ಗಂಗೆಯಲ್ಲಿ ವಾಸವು ಅನುಪಪನ್ನವಾದುದರಿಂದ ಮುಖ್ಯಾರ್ಥಕ್ಕೆ ಬಾಧೆಯುಂಟಾಗಿ ತನ್ನ ಸಂಬಂಧದಿಂದ ತನ್ನ ಸಮೀಪದಲ್ಲಿರುವ ತೀರರೂಪವಾದ ಅರ್ಥವನ್ನು ಲಕ್ಷಣೆಯಿಂದ ಬೋಧಿಸುವುದರಿಂದ ಇಲ್ಲಿ "गङ्गा" ಪದವು ಗಂಗಾತೀರರೂಪವಾದ ಅರ್ಥಕ್ಕೆ ಲಕ್ಷಕವಾಗುವುದು.

ಯೋಗ (ಅವಯವ ಶಕ್ತಿ) ಮತ್ತು ರೂಢ (ಸಮುದಾಯ ಶಕ್ತಿ) ಎರಡರಿಂದಲೂ ಅರ್ಥಬೋಧವಾಗುವಲ್ಲಿ ಆ ಪದವು **"ಯೋಗರೂಢ".** "पङ्कज" ಪದವು पङ्कात्जायते ಎಂಬ ಅವಯವಶಕ್ತಿಯಿಂದಲೂ ಅದು ಕಮಲದಲ್ಲಿ ಮಾತ್ರ ರೂಢವಾದುದರಿಂದ ಸಮುದಾಯ ಶಕ್ತಿಯಿಂದಲೂ ಕಮಲ ರೂಪವಾದ ಅರ್ಥವನ್ನು ಬೋಧಿಸುವುದರಿಂದ ಯೋಗರೂಢ. ಅವಯವ ಶಕ್ತಿಯಿಂದ ತನ್ನ ಮುಖ್ಯಾರ್ಥವನ್ನು ಬೋಧಿಸುವ ಪದವು **ಯೌಗಿಕ.** डुपचष् (पाके) + "ण्वुल्" ಎಂಬ ವ್ಯುತ್ಪತ್ತಿಯಿಂದ ನಿಷ್ಪನ್ನವಾದ "पाचक" ಪದವು ಅವಯವಶಕ್ತಿಯಿಂದ पाककर्ता (ಬೇಯಿಸುವವನು, ಅಡಿಗೆಯವನು) ಎಂಬ ಮುಖ್ಯಾರ್ಥವನ್ನು ಬೋಧಿಸುವುದರಿಂದ ಯೌಗಿಕ.

नामनामिक नामनामिक (पुं०) ಪರಮಾತ್ಮ, ಮಹಾವಿಷ್ಣು. नाम्नि नामो नमनं प्रह्वताऽस्य। "वैकुण्ठ अपराजित मानसिक नावमिक नामनामिक परस्वामिन्" भा० शान्ति० ३४६-४।

नामनिर्देश नामनिर्देश (पुं०) ಹೆಸರು ಹಿಡಿದು ಹೇಳುವುದು. नाम्ना निर्देशः।

नामपद नामपद (न०) ಒಬ್ಬ ಮನುಷ್ಯನ ಅಥವಾ ವಸ್ತುವಿನ ಹೆಸರನ್ನು ಹೇಳುವ ಪದ.

नाममात्र नाममात्र (वि०) 1. ಹೆಸರನ್ನು ಮಾತ್ರ ಹೊಂದಿರುವ, ಅರ್ಥವಿಲ್ಲದ ಹೆಸರನ್ನು ಹೊಂದಿರುವ, ಹೆಸರಿನ ಅರ್ಥಕ್ಕೆ ತಕ್ಕ ಕೆಲಸಮಾಡಲು ಅಸಮರ್ಥನಾದ. नाम संज्ञैव मात्रा यस्य। (न०) 2. ಹೆಸರು ಮಾತ್ರ. (अव्य०) 3. ಹೆಸರಿನಿಂದ ಮಾತ್ರ.

नाममाला नाममाला (स्त्री०) ಒಂದು ಕೋಶ, ಒಂದು ನಿಘಂಟು.

नाममुद्रा नाममुद्रा (स्त्री०) ಹೆಸರನ್ನು ಕೆತ್ತಿರುವ ಉಂಗುರ. नामाक्षरस्य मुद्रा। "भोः. इयं नाममुद्रा केनोद्घातेन तत्रभवत्या हस्ताभ्याशं प्रापिता" शाकु० ६।

नामयज्ञ नामयज्ञ (पुं०) ಹೆಸರಿಗೆ ಮಾತ್ರ ಮಾಡುವ ಯಾಗ, ದಂಭದಿಂದ ಕೀರ್ತಿಯನ್ನು ಪಡೆಯಲು ಮಾಡುವ ಯಜ್ಞ. नामसम्बन्धी यज्ञः। "आत्मसम्भाविताः स्तब्धाः धनमानमदान्विताः। यजन्ते नामयज्ञैस्ते दम्भेनाविधिपूर्वकम्" गीता १६-१७।

नामलिङ्ग नामलिंग (न०) 1. ಶಬ್ದದ ಲಿಂಗ, ಶಬ್ದದ ಪುಂಲಿಂಗ, ಸ್ತ್ರೀಲಿಂಗ ಅಥವಾ ನಪುಂಸಕಲಿಂಗ, ಪುರುಷ ಸ್ತ್ರೀ ಮತ್ತು ನಪುಂಸಕಗಳನ್ನು ಸೂಚಿಸುವ ಚಿಹ್ನೆ. नाम्नो लिङ्गम्। (न० द्विव०) 2. ಹೆಸರು ಮತ್ತು ಲಿಂಗ. नाम च लिङ्गं च। "नामलिङ्गानुशासनम्" अम०। "स्त्रीलिङ्गमपि पुंलिङ्गं क्लीबलिङ्गमिति त्रिधा। शब्दसंस्कारसिद्धयर्थं भाषया नाम भिद्यते"।

नामलिङ्गानुशासन नामलिंगानुशासन (न०) ಹೆಸರು ಮತ್ತು ಲಿಂಗಗಳನ್ನು ತಿಳಿಸುವ (ಕೋಶ) ನಿಘಂಟು. नामानि लिङ्गानि स्त्रीपुंनपुंसकानि अनुशिष्यन्ते विविच्य बोध्यन्तेऽत्र — अनु + शासु (अनुशिष्टौ) "ल्युट्" (३-३-११७)।

नामशेष नामशेष (वि०) ಹೆಸರು ಮಾತ್ರ ಉಳಿದಿರುವ, ಜೀವಿಸಿಲ್ಲದ, ಮೃತನಾದ. नाममात्रं शेषोऽस्य।

नामाख्यात नामाख्यात (वि०) ಹೆಸರು ಮತ್ತು ಆಖ್ಯಾತ ಪ್ರತ್ಯಯಗಳನ್ನು ಹೇಳುವ ಗ್ರಂಥದ ವ್ಯಾಖ್ಯಾನ. नाम च आख्यातं च नामाख्याते, नामाख्यातयोर्व्याख्यानो ग्रन्थः "ठक्" (४-३-७२)।

नामाङ्क नामांक (वि०) ಹೆಸರಿನ ಗುರುತುಳ್ಳ, ಹೆಸರಿನ ಅಕ್ಷರಗಳಿಂದ ಅಂಕಿತವಾದ. नाम नामाक्षरम् अङ्को यस्य। "नामाङ्करावणशरांकितकेतुयष्टिम्" रघु० १२-१०३।

नामादेशम् नामादेशम् (अव्य०) ಹೆಸರನ್ನು ಹಿಡಿದು ಹೇಳಿ, ಒಬ್ಬನ ಹೆಸರನ್ನು ನಿರ್ದೇಶಿಸಿ ಕರೆದು. नाम आदिश्य — नामन्+आ+दिश (अतिसर्जने) "णमुल्" (३-४-५८)।

नामानुशासन नामानुशासन (न०) ಶಬ್ದಗಳ ಅರ್ಥಗಳನ್ನು ತಿಳಿಸುವ ಕೋಶ, ನಿಘಂಟು, ನಾಮಪದಗಳ ಅರ್ಥಗಳನ್ನು ವಿವರಿಸುವ ಕೋಶ. नामानि अनुशिष्यन्तेऽत्र — अनु + शासु (अनुशिष्टौ) "ल्युट्" (३-३-११७)।

नामापराध नामापराध (पुं०) ಭಗವಂತನ ಮತ್ತು ಅವನ ಭಕ್ತರ ಹೆಸರನ್ನು ಹೇಳಿ ನಿಂದಿಸುವುದು, –ದೂಷಿಸುವುದು, ಇಲ್ಲದ ಸಲ್ಲದ ನಾನಾ ದೋಷಗಳನ್ನು ಹೇಳಿ ಅವಮಾನಗೊಳಿಸುವುದು. नाम्नि तद्विषये अपराधः। "सतां निन्दां नाम्नां परममपराधं वितनुते यतः ख्यातियातस्तमुपहसते गर्हयति च। तथा विष्णोरिष्टं य इह गुणनामादि सकलं धिया भिन्नं पश्येत् स खलु हरिनामाहितकरः" पाद्मपु०।

नामापराधिन् नामापराधिन् (वि०) ಭಗವದ್ಭಕ್ತರ ಹೆಸರನ್ನು ಹೇಳಿ ನಿಂದಿಸಿದ ಅಪರಾಧವುಳ್ಳವನು, ಅವರ ಹೆಸರಿನಲ್ಲಿ ದೋಷಗಳನ್ನು ಹೇಳಿ ಅವಮಾನಗೊಳಿಸಿದ ಅಪರಾಧವುಳ್ಳವನು.

नामिक नामिक (वि०) 1. ಹೆಸರಿನಲ್ಲಿರುವ. नाम्नि भवः "ठक्" (४-३-७२)। 2. ಹೆಸರಿಗೆ ಸಂಬಂಧಿಸಿದ.

नामित नामित (वि०) ಬಗ್ಗಿಸಲ್ಪಟ್ಟ. णम (प्रह्वत्वे शब्दे) + णिच् "क्तः" (३-२-१०२)। "फुल्लां नाम्यति वायसोऽपि हि लतां या नामिता बर्हिणा" मृच्छ० १-३२।

नाम्य नाम्य (वि०) 1. ಬಗ್ಗಿಸಲ್ಪಡುವ. 2. ಬಗ್ಗಿಸಲು ಶಕ್ಯವಾದ. 3. ಬಗ್ಗಿಸಲು ಯೋಗ್ಯವಾದ. णम (प्रह्वत्वे शब्दे) "ण्यत्" (३-१-१२४)।

नाय नाय (पुं०) 1. ಒಯ್ಯುವುದು, ಸಾಗಿಸುವುದು. णीञ् (प्रापणे) "घञ्" (३-३-१८)। 2. ಉಪಾಯ. "नायः कोऽत्र स येन स्यां बताहं विगतज्वरः" भट्टि० ६-८२। 3. ನೀತಿ. "यात यूयं यमश्रायं दिशं नायेन दक्षिणाम्" भट्टि० ७-३६। (वि०) 4. ಒಯ್ಯುವವನು, ಸಾಗಿಸುವವನು. णीञ् कर्तृ० "णः" (३-१-१४२)।

नायक नायक (पुं०) 1. ಪ್ರಧಾನ, ಮುಖ್ಯ, ಪ್ರಮುಖ, ಅಗ್ರಗಣ್ಯ. नयति—णीञ् (प्रापणे) "ण्वुल्" (३-१-१३३)। 2. ಪತಿ, ಗಂಡ. "नायकस्य शयनादहर्मुखे निर्गता मुदमुदीक्ष्य सुभ्रुवाम्" नैष० १८-६७। 3. ಹಾರದ ಮಧ್ಯದ ಮಣಿ. "तवाङ्गहारे रुचिमेति नायकः शिखामणिश्च द्विजराड्विदूषकः" नैष० ९-११८। 4. ಪ್ರಭು, ದೊರೆ. "बहुतरगुणदर्शनादभ्युपेताल्पदोषः कृती तव वरद करोतु सुप्रातमह्नामयं नायकः" माघ० ११-६७। 5. (ನಾಟಕಗಳಲ್ಲಿ) ಶೃಂಗಾರಾದಿರಸಗಳ ಸ್ಥಾಯಿಭಾವಗಳಾದ ರತ್ಯಾದಿಗಳಿಗೆ ಆಲಂಬನನಾದವನು. स्त्रीपुरुष (नायिका-नायक) रल्लि परस्पर उत्पन्नवागुव

ಪ್ರೇಮವೆಂಬ ಚಿತ್ತವೃತ್ತಿಯು ರತಿಯೆನಿಸುವುದು. ಹೀಗೆಯೇ ವೀರರಸಸ್ಥಾಯಿಭಾವವಾದ ಉತ್ಸಾಹಕ್ಕೆ ಆಲಂಬನನಾದವನು ವೀರನಾಯಕ. **ನಾಯಕನ ಲಕ್ಷಣ:** "त्यागी कृती कुलीन: सुश्रीको रूपयौवनोत्साही । दक्षोऽनुरक्तलोकस्तेजोवैदग्ध्यशीलवान्नेता" सा० द० ३-३० । ನಾಯಕನು (1) धीरोदात्त:, (2) धीरोद्धत:, (3) धीरललित: ಮತ್ತು (4) धीरशान्त: ಎಂದು ನಾಲ್ಕು ವಿಧ. "धीरोदात्तो धीरोद्धतस्तथा धीरललितश्च । धीरप्रशान्त इत्ययमुक्त: प्रथमश्चतुर्भद:" सा० द० ३-३१ । [ವಿವರಗಳಿಗೆ ಆಯಾ ಪದಗಳಲ್ಲಿ ನೋಡಿ.] ಈ ನಾಲ್ಕು ವಿಧ ನಾಯಕರೂ (1) दक्षिण:, (2) धृष्ट:, (3) अनुकूल: ಮತ್ತು (4) शठ: ಎಂಬ ನಾಲ್ಕು ಭೇದಗಳಿಂದ ಹದಿನಾರು ವಿಧವಾಗುವರು, "एभिर्दक्षिणधृष्टानुकूलशठरूपिभिस्तु षोडशधा" सा० द० ३-३५ । ಈ ಎಲ್ಲಾ ನಾಯಕರೂ (1) उत्तम:, (2) मध्यम: ಮತ್ತು (3) अधम: ಎಂಬ ಮೂರು ಭೇದಗಳಿಂದ ಒಟ್ಟು ನಲವತ್ತೆಂಟು ವಿಧವಾಗುವರು. "एषां च त्रैविध्यादुत्तममध्याधमत्वेन । उक्ता नायकभेदाश्चत्वारिंशत्तथाष्टौ च" सा० द० ३-३८ । 6. ಆದರ್ಶ, ಮಾದರಿ. "रामो हरि: करी भूभृत्कार: कर्ता च चन्द्रमा: । तस्थिवान् भगवानात्मा दशैते पुंसि नायका:" । (वि०) 7. ಒಯ್ಯುವವನು, ಮುಂದಕ್ಕೆ ಸಾಗಿಸುವವನು.

नायिका ನಾಯಿಕಾ (स्त्री०) (ನಾಟಕಗಳಲ್ಲಿ) 1. ಶೃಂಗಾರರಸದ ಸ್ಥಾಯಿಭಾವವಾದ ರತಿಗೆ ಆಲಂಬನ (ಆಶ್ರಯ)ವಾದ ಹೆಂಗಸು. णीञ् (प्रापणे) "ण्वुल्" (३-१-१३३)। "टाप्" (४-१-४) । ನಾಯಕನ ಸಾಮಾನ್ಯ ಗುಣಗಳಿಂದ ಕೂಡಿದ ಹೆಂಗಸು ನಾಯಿಕೆ. "अथ नायिका त्रिभेदा स्वान्या साधारणी स्त्रीति। नायकसामान्यगुणैर्भवति यथासंभवैर्युक्ता" सा० द० ३-४६ । ನಾಯಿಕೆಯು (1) स्वस्त्री, (2) अन्यस्त्री ಮತ್ತು (3) साधारणस्त्री ಎಂದು ಮೂರು ವಿಧ.

स्वस्त्री—ವಿನಯ ಋಜುತ್ವ ಮೊದಲಾದ ಗುಣಗಳಿಂದ ಕೂಡಿ ಗೃಹಕೃತ್ಯದಲ್ಲಿ ನಿರತಳಾದ ಪತಿವ್ರತೆಯು **ಸ್ವಸ್ತ್ರೀ.** ಇವಳು (1) मुग्धा, (2) मध्या ಮತ್ತು (3) प्रगल्भा ಎಂದು ಮೂರು ವಿಧ. "विनयार्जवादियुक्ता गृहकर्मपरा पतिव्रता। सापि कथिता त्रिभेदा मुग्धा मध्या प्रगल्भेति" सा० द० ३-४७ ।

मुग्धा—ಮೊದಲನೆಯದಾಗಿ ಹೊರಚಿಮ್ಮಿದ ಪ್ರಾಯ ಮತ್ತು ಕಾಮವಿಕಾರಗಳಿಂದ ಕೂಡಿದ ಮತ್ತು ನವಸಮಾಗಮದಲ್ಲಿ ಲಜ್ಜೆಯಿಂದ ಪ್ರತಿಕೂಲಳಾದ ತರುಣಿಯು **"ಮುಗ್ಧಾ"** ನಾಯಿಕೆ. "प्रथमावतीर्णयौवनमदन-विकारा रतौ वामा। कथिता मृदुश्च माने समधिक-लज्जावती मुग्धा" सा० द० ३-५८ ।

मध्या—ಚೆನ್ನಾಗಿ ಬೆಳೆದುಬಂದ ಪ್ರಾಯ: ಮತ್ತು ಮದನವಿಕಾರಗಳಿಂದ ಕೂಡಿ ವಿವಿಧವಾದ ಭಂಗಿಗಳಿಂದ ರತಿಕ್ರೀಡೆಯಲ್ಲಿ ಚತುರೆಯಾದವಳೂ ಸ್ವಲ್ಪ ಧೈರ್ಯದಿಂದ ಮಾತಾಡುವವಳೂ ಸಾಧಾರಣ ಲಜ್ಜೆಯಿಂದ ಕೂಡಿದವಳೂ ಆದ ಯುವತಿಯು **"ಮಧ್ಯಾ"** ನಾಯಿಕೆ. "मध्या विचित्रसुरता प्ररूढस्मरयौवना। ईषत्प्रगल्भवचना मध्यम व्रीडिता मता" सा० द० ३-५९ ।

प्रगल्भा—ಅತಿಶಯವಾದ ಕಾಮವಿಕಾರದಿಂದ ಮೈಮರೆತವಳೂ ತುಂಬಿದ ತಾರುಣ್ಯವುಳ್ಳವಳೂ ಸಕಲ ವಿಧ ರತಿಕ್ರೀಡೆಯಲ್ಲಿಯೂ ನಿಪುಣೆಯೂ ಸ್ತ್ರೀಸಹಜವಾದ ಲಜ್ಜೆಯಿಂದ ಕೂಡಿದವಳೂ ನಾಯಕನಲ್ಲಿ ಸಲಿಗೆಯುಳ್ಳವಳೂ ಆದ ಹೆಂಗಸು **"ಪ್ರಗಲ್ಭಾ"** ನಾಯಿಕೆ. "स्मरान्धा गाढतारुण्या समस्तरतकोविदा। भावोन्नता दरव्रीडा प्रगल्भाक्रान्तनायका" सा० द० ३-६० । ಮಧ್ಯಾ ಪ್ರಗಲ್ಭೆಯರಿಬ್ಬರೂ (1) धीरा, (2) अधीरा ಮತ್ತು (3) धीराधीरा ಎಂದು ಮೂರು ವಿಧ. ಇದರಿಂದ (1) मध्या धीरा, (2) मध्या अधीरा ಮತ್ತು (3) मध्या धीराधीरा, (4) प्रगल्भा धीरा, (5) प्रगल्भा अधीरा ಮತ್ತು (6) प्रगल्भा धीराधीरा ಎಂದು ಆರು ವಿಧ. "ते धीरा चाप्यधीरा च धीराधीरेति षड्विधे" सा० द० ३-६१ ।

मध्या धीरा—ಮುಗುಳುನಗೆಯಿಂದ ಕೂಡಿದ ವಕ್ರೋಕ್ತಿ (ಶ್ಲೇಷೆ ಮತ್ತು ಕಾಕುಗಳಿಂದ ಅರ್ಥಾಂತರ ತೋರುವ ಮನಬುಚ್ಚುವ ಮಾತು)ಯಿಂದ ನಾಯಕನ ಮನಸ್ಸಿಗೆ ಸಂತಾಪವುಂಟುಮಾಡುವವಳು **"ಮಧ್ಯಾ ಧೀರಾ"** ನಾಯಿಕೆ.

मध्या अधीरा—ಕೋಪಗೊಂಡು ಕಠಿನವಾದ ಮಾತುಗಳಿಂದ ಮನಸ್ಸಿಗೆ ಸಂತಾಪವುಂಟುಮಾಡುವವಳು **"ಮಧ್ಯಾ ಅಧೀರಾ"** ನಾಯಿಕೆ.

मध्या धीराधीरा—ಪ್ರಿಯನ ಅಪರಾಧವನ್ನು ಕಂಡು ಹೇಳಿ ಮೊದಲಿಸುವ ಧೈರ್ಯ ಸಾಲದೆ ಕಣ್ಣೀರಿಟ್ಟು ಅತ್ತು ತನ್ನ ಅಸಮಾಧಾನವನ್ನು ಸೂಚಿಸುವವಳು **"ಮಧ್ಯಾ ಧೀರಾಧೀರಾ"** ನಾಯಿಕೆ. "प्रियं सोत्प्रासवक्रोक्त्या मध्या धीरा दहेद्रुषा। धीराधीरा तु रुदितैरधीरा परुषोक्तिभि:" सा० द० ३-६२ । "बाले, नाथ, विमुञ्च

मानिनि रुषं, रोषान्मया किं कृतं, खेदोऽस्मासु नमेऽपराध्यति भवान्, सर्वेऽपराधा मयि। तत्किं रोदिषि गद्गदेन वचसा, कस्याग्रतो रुद्यते, नन्वेतन्मम, का तवास्मि, दयिता, नास्मीत्यतो रुद्यते"।

प्रगल्भा धीरा: — ಕೋಪವನ್ನು ಒಳಗೇ ಅಡಗಿಸಿಕೊಂಡು ಹೊರಗೆ ಮಾತ್ರ ಆದರವನ್ನು ತೋರಿಸುತ್ತಾ ಸುರತಕ್ರೀಡೆಯಲ್ಲಿ ಉದಾಸೀನಳಾಗಿರುವವಳು "**प्रगल्भा धीरा**" ನಾಯಿಕೆ. "प्रगल्भा यदि धीरा स्यात् छन्नकोपाकृतिस्तदा। उदास्ते सुरते तत्र दर्शयन्यादरान् बहिः" सा० द० ३-६३।

प्रगल्भा अधीरा: — ನಾಯಕನ ಅಪರಾಧವನ್ನು ಕಂಡು ಅವನನ್ನು ಹೆದರಿಸಿ ಹೊಡೆದು ಕೋಪವನ್ನು ತೀರಿಸಿಕೊಳ್ಳುವವಳು "**प्रगल्भा अधीरा**" ನಾಯಿಕೆ.

प्रगल्भा धीराधीरा: — ಮುಗುಳುನಗೆಯಿಂದ ಕೂಡಿದ ಮಾತುಗಳಿಂದಲೇ ನಾಯಕನ ಮನಸ್ಸನ್ನು ನೋಯಿಸುವವಳು "**प्रगल्भा धीराधीरा**" ನಾಯಿಕೆ. "धीराधीरा तु सोल्लुण्ठभाषितैः खेदयत्यमुम्। तर्जयेत्ताडयेदन्या प्रत्येकं ता अपि द्विधा। कनिष्ठज्येष्ठरूपत्वान्नायकप्रणयं प्रति" सा० द० ३-६४। ಈ ಮೇಲಿನ ಆರುವಿಧ ನಾಯಿಕೆಯರೂ (1) ಕನಿಷ್ಠಾ ಮತ್ತು (2) ಜ್ಯೇಷ್ಠಾ ಭೇದದಿಂದ ಒಟ್ಟು ಹನ್ನೆರಡು ವಿಧವಾಗುವರು. ಇವರೊಡನೆ ಮುಗ್ಧಾ ನಾಯಿಕೆಯೂ ಸೇರಿ ಸ್ವಸ್ತ್ರೀ ನಾಯಿಕೆಯು ಹದಿಮೂರು ವಿಧ. "मध्याप्रगल्भयोर्भेदास्तद्वद्द्वादश कीर्तिताः। मुग्धा त्वेकैव तेन स्युः स्वीयाभेदास्त्रयोदश" सा० द० ३-६५।

अन्यस्त्री — ಪರಕೀಯ (अन्यस्त्री) ನಾಯಿಕೆಯು (1) ಪರೋಢಾ ಮತ್ತು (2) ಕನ್ಯಕಾ ಎಂದು ಎರಡು ವಿಧ.

परोढा — ಉತ್ಸವಾದಿಗಳ ನಿಮಿತ್ತ ಪರಸ್ಥಳ ಯಾತ್ರೆ, ಮನೆಯ ಬಾಗಿಲಲ್ಲಿ ನಿಂತು ಬೀದಿಯಲ್ಲಿ ಹೋಗುತ್ತಿರುವವರನ್ನೆಲ್ಲಾ ನೋಡುತ್ತಿರುವುದು, ಬೀದಿ ಬೀದಿಗಳಲ್ಲಿ ಅಲೆಯುವುದು, ಅಕ್ಕಪಕ್ಕದ ತರುಣರ ಮನೆ ಮನೆಗಳಿಗೂ ಲಜ್ಜೆಯಿಲ್ಲದೆ ಹೋಗುವುದು ಇತ್ಯಾದಿಗಳಲ್ಲಿ ಆಸಕ್ತಿಯುಳ್ಳವಳು "**परोढा**" ನಾಯಿಕೆ. "यात्रादिनिरतान्योढा कुलटा गलितत्रपा" सा० द० ३-६६।

कन्यका — ಮದುವೆಯಾಗದ ಸ್ತ್ರೀಸಹಜವಾದ ಲಜ್ಜೆಯಿಂದ ಕೂಡಿದ ನವಯುವತಿಯು "**कन्या**" ನಾಯಿಕೆ. "कन्यात्वजातोपयमा सलज्जा नवयौवना" सा०द० ३-६७।

साधारणी — ರತಿಕ್ರೀಡೆಯಲ್ಲಿ ಅತಿನಿಪುಣೆಯೂ ಚತುಃಷಷ್ಟಿ ಕಲೆಗಳಲ್ಲೂ ಚತುರೆಯೂ ಆಗಿರುವ ವೇಶ್ಯೆಯು "**साधारणी**" ನಾಯಿಕೆ. ಇವಳು ಕೇವಲ ಧನಾರ್ಜನೆಯಲ್ಲೇ ನಿರತಳಾಗಿ ಗುಣಹೀನರನ್ನು ದ್ವೇಷಿಸುವುದೂ ಇಲ್ಲ. ಗುಣಶಾಲಿಗಳನ್ನು ಹೆಚ್ಚು ಪ್ರೀತಿಸುವುದೂ ಇಲ್ಲ. ಅವರಿಂದ ಧನವನ್ನು ಸುಲಿಯಲು ಮಾತ್ರ ಪ್ರೀತಿಸುವವಳಂತೆ ನಟಿಸುತ್ತಾಳೆ. "धीरा कलाप्रगल्भा स्याद्वेश्या सामान्यनायिका। निर्गुणानपि न द्वेष्टि न रज्यति गुणिष्वपि। वित्तमात्रं समालोक्य सा रागं दर्शयेद्बहिः" सा० द० ३-६७, ६८। ಈ ಹದಿನಾರು ವಿಧ ನಾಯಿಕೆಯರೂ (1) स्वाधीनपतिका, (2) खण्डिता, (3) अभिसारिका, (4) कलहान्तरिता, (5) विप्रलब्धा, (6) प्रोषितभर्तृका, (7) वासकसज्जा ಮತ್ತು (8) विरहोत्कण्ठिता ಎಂಬ ಎಂಟು ಅವಸ್ಥಾ ಭೇದಗಳಿಂದ ಒಟ್ಟು ನೂರ ಇಪ್ಪತ್ತೆಂಟು (128) ವಿಧವಾಗುವರು. ಇವರೆಲ್ಲರೂ (1) ಉತ್ತಮಾ, (2) ಮಧ್ಯಮಾ ಮತ್ತು (3) ಅಧಮಾ ಭೇದಗಳಿಂದ ಒಟ್ಟು ಮುನ್ನೂರ ಎಂಬತ್ತುನಾಲ್ಕು (384) ವಿಧವಾಗುವರು. "इति साष्टाविंशतिशतमुत्तममध्याधमस्वरूपेण। चतुररधिकाशीतियुतं शतत्रयं नायिकाभेदाः" सा० द० ३-८७। ಮತ್ತೆ (1) दिव्या, (2) अदिव्या ಮತ್ತು (3) दिव्यादिव्या ಎಂಬ ಮೂರು ಭೇದಗಳಿಂದಲೂ (1) उद्धता, (2) उदात्ता, (3) ललिता ಮತ್ತು (4) शान्तिका ಎಂಬ ನಾಲ್ಕು ಭೇದಗಳಿಂದಲೂ ಈ ಎಲ್ಲಾ ನಾಯಿಕೆಯರೂ (1) पद्मिनी, (2) चित्रिणी, (3) शङ्खिनी ಮತ್ತು (4) हस्तिनी ಎಂಬ ನಾಲ್ಕು ಭೇದಗಳಿಂದಲೂ ಅಸಂಖ್ಯಾತರಾಗುವರು. ಗ್ರಂಥ ವಿಸ್ತರ ಭಯದಿಂದ ಇಷ್ಟಕ್ಕೇ ನಿಲ್ಲಿಸಲಾಗಿದೆ. "इतरा अप्यसंख्यास्ता नोक्ता विस्तरशङ्कया" सा० द० ३-८८। 2. ಶ್ರೇಷ್ಠ ಹೆಂಗಸು, ಕುಲೀನ ಹೆಂಗಸು.

नायन नायन (वि०) ನಯನಸಂಬಂಧವಾದ, ಕಣ್ಣುಗಳಿಗೆ ಸಂಬಂಧಿಸಿದ. नयनस्येदम् "अण्" (४-३-१२०)।

नार नार (पुं०) 1. ಸದ್ಯಃ ಜನಿಸಿದ ಹಸುವಿನ ಕರು, ಆಗ ತಾನೆ ಹುಟ್ಟಿದ ಕರು. (पुं०ब०व०) 2. ಜಲ, ನೀರು. "आपो नारा इति प्रोक्ता आपो वै नरसूनवः" मनु० १-१०। (न०) 3. ಮನುಷ್ಯರ ಸಮೂಹ. नराणां समूहः "अण्" (४-२-३७)। (वि०) 4. ನರಸಂಬಂಧವಾದ, ಮನುಷ್ಯಸಂಬಂಧವಾದ. "घोरां नारकपालकुण्डलवतीं विद्युच्छटां दृष्टिभिर्मुञ्चन्तीम्" प्रबोध० ४-१। नरस्येदम् "अण्" (४-३-१२०)। 5. ಮನುಷ್ಯನ ಧರ್ಮಕ್ಕೆ ವಿರುದ್ಧವಲ್ಲದ. नर "अञ्" (वा० ४-४-४९)।

नारक नारक (पुं०) 1. ನರಕ. नरक एव "अण्" (५-४-३८)। "नाहं वन्दे तव चरणयोर्द्वन्द्वमद्वन्द्वहेतो

क्रुम्भीपाकं गुरुमपि हरे नारकं नापनेतुम्" मु० मा० ४। 2. ನರಕದಲ್ಲಿ ಯಾತನೆಯನ್ನು ಅನುಭವಿಸುತ್ತಿರುವ ಜೀವ. "सत्त्वास्तु नारका:" अम० । (वि०) 3. ನರಕಸಂಬಂಧವಾದ. नरकस्येदम् "अण्" (४-३-१२०)।

नारकपाल नारकपाल (न०) ತಲೆಯೆಲುಬಿನ ಚಿಪ್ಪು. नारं च तत् कपालं च। "घोरां नारकपालकुण्डलवतीं विद्युच्छटां दृष्टिभिर्मुञ्चन्तीं विकरालमूर्तिमनलज्वालापिशङ्गैः कचैः" प्रबोध० ४-१।

नारकिन् नारकिन् (वि०) ನರಕಯಾತನೆಯನ್ನು ಅನುಭವಿಸುವ. नरको भोग्यतयाऽस्त्यस्य "इनिः" (५-२-११५)।

नारङ्ग नारङ्ग (पुं०) 1. ಕಿತ್ತಳೆಯ ಗಿಡ. न (नये) "अङ्गच्" उ० बाहु० । 2. ಹಿಪ್ಪಲಿಯ ರಸ. 3. ವಿಟ, ಕಾಮುಕ, ಸ್ತ್ರೀಲೋಲ. 4. ಯಮಳ, ಅವಳಿ. 5. ಕೆಂಪು ಮೂಲಂಗಿ.

नारद नारद (पुं०) 1. ನಾರದಮುನಿ, ದೇವಋಷಿ. नारं नरसमूहं ददाति खण्डयति कलहेन — दो (अवखण्डने) "कः" (३-२-३)। नारं नरस्य धर्म्यं ददाति — डु दाञ् (दाने) "कः" (३-२-३)। नुरिदं नारम् अज्ञानम्, तत् द्यति ज्ञानोपदेशेन — दो (अवखण्डने) "कः" (३-२-३)। नारं पानीयं ददाति पितृभ्यः इति वा। "नारं पानीयमित्युक्तं तत् पितृभ्यः सदा भवान्। ददाति तेन ते नाम नारदेति भविष्यति"। "नारदाद्याः सुरर्षयः" अम०। 2. ಸ್ವಾಯಂಭುವ ಮನ್ವಂತರದಲ್ಲಿ ಬ್ರಹ್ಮನ ಹತ್ತು ಮಂದಿ ಮಾನಸ ಪುತ್ರರಲ್ಲೊಬ್ಬ. "मरीचिरत्र्यङ्गिरसौ पुलस्त्यः पुलहः क्रतुः। भृगुर्वसिष्ठो दक्षश्च दशमस्तत्र नारदः। उत्सङ्गान्नारदो जज्ञे दक्षोऽङ्गुष्ठात् स्वयम्भुवः" भाग० ३-१२। ಪುರಾಣ ಮತ್ತು ಇತಿಹಾಸಗಳಲ್ಲಿ ಪ್ರಸಿದ್ಧನಾದ ಈ ಋಷಿಯು ಪರ್ವತಋಷಿಯ ಸೋದರಮಾವ. "नारदो मातुलस्तत्र भागिनेयश्च पर्वतः। तावुभौ तपसोपेताववनीतलचारिणौ" भा० शान्ति० २९-६। ಲೋಕದಲ್ಲಿ ತೊಂದರೆಗೆ ಸಿಲುಕಿ ಕಷ್ಟಪಡುತ್ತಿರುವವರೆಲ್ಲರಿಗೂ ನಿವಾರಣೋಪಾಯವನ್ನು ತೋರಿಸಿಕೊಟ್ಟು ಉಪಕಾರ ಮಾಡುತ್ತ ಅವರಿಗೆ ಮಂಗಳವನ್ನುಂಟುಮಾಡುವುದೇ ಈ ಋಷಿಯ ಮುಖ್ಯ ಕಾರ್ಯವಾಗಿತ್ತು. ಇಂದ್ರಾದಿ ದೇವತೆಗಳ ಮತ್ತು ಬ್ರಹ್ಮ ವಿಷ್ಣು ಮಹೇಶ್ವರರ ಸಭೆಗಳಿಗೆ ಹೋಗಿ ಬರುವುದಲ್ಲದೆ ಭೂಲೋಕದಲ್ಲಿಯೂ ವಿಶೇಷವಾಗಿ ಈ ಋಷಿಯು ಸಂಚರಿಸುತ್ತಿದ್ದನು. ಸೃಷ್ಟಿ ಕಾರ್ಯದಲ್ಲಿ ನಿಯುಕ್ತರಾಗಿದ್ದ ದಕ್ಷನ ಪುತ್ರರಾದ ಹರ್ಯಶ್ವ ಶಬಲಾಶ್ವರಿಗೆ ಉಪದೇಶಮಾಡಿ ಅವರನ್ನು ಸೃಷ್ಟಿಯ ಕಾರ್ಯದಿಂದ ವಿಮುಖರನ್ನಾಗಿ ಮಾಡಿದುದರಿಂದ ನಾರದನಿಗೆ ದಕ್ಷನು ನಿಲ್ಲಲು ಎಲ್ಲಿಯೂ ನೆಲೆಯಿಲ್ಲದಿರುವಂತೆಯೂ ಕಲಹಪ್ರಿಯನಾಗಿರುವಂತೆಯೂ ಶಾಪ ಕೊಟ್ಟನು. ಇದರಿಂದ ನಾರದನು ತ್ರಿಲೋಕಸಂಚಾರಿಯಾದನು. "तांश्चापि नष्टान् विज्ञाय पुत्रान् दक्षः प्रजापतिः। क्रोधं चक्रे महाभागो नारदं तं शशाप च" विष्णुपु० १-१५-१०१। "तन्तुकृत्तन यन्नस्त्वमभद्रमचरः पुनः। तस्माल्लोकेषु ते मूढ न भवेद्भ्रमतः पदम्" भाग० ६-५-४३। ವಾಲ್ಮೀಕಿ ಮಹರ್ಷಿಗೆ ಶ್ರೀರಾಮನ ಮಹಿಮೆಯನ್ನೂ ರಾಮಾಯಣ ಕಥೆಯನ್ನೂ ಬೋಧಿಸಿ ರಾಮಾಯಣವನ್ನು ರಚಿಸುವಂತೆ ಹೇಳಿದನು. ದ್ರೌಪದೀ ಸ್ವಯಂವರವಾದನಂತರ ಪಾಂಡವರು ವಾರಣಾವತದಲ್ಲಿದ್ದಾಗ ನಾರದನು ಅಲ್ಲಿಗೆ ಹೋಗಿ ಸುಂದೋಪಸುಂದರ ಕಥೆಯನ್ನು ಹೇಳಿ ಐದು ಮಂದಿಯೂ ದ್ರೌಪದಿಯೊಡನೆ ಕ್ರಮವಾಗಿ ಒಂದೊಂದು ವರ್ಷಕಾಲ ಸಂಸಾರ ಮಾಡಿಕೊಂಡಿರುವಂತೆಯೂ ಆ ಕಟ್ಟುಪಾಡಿಗೆ ತಪ್ಪಿದರೆ ಒಂದು ವರ್ಷ ವನವಾಸಮಾಡುವಂತೆಯೂ ಪ್ರತಿಜ್ಞೆಮಾಡಿಸಿದನು. "धृतराष्ट्राभ्यनुज्ञाता इन्द्रप्रस्थं प्रविश्य तत्। रेमिरे पुरुषव्याघ्राः कृष्णया सह पाण्डवाः। प्राप्य राज्यं महातेजाः सत्यसन्धो युधिष्ठिरः। पालयामास धर्मेण पृथिवीं भ्रातृभिः सह। .....आययौ धर्मराजं तु द्रष्टुकामोऽथ नारदः। .....तमागतमृषिं दृष्ट्वा प्रत्युद्गम्याभिवाद्य च। आसनं रुचिरं तस्मै प्रददौ स युधिष्ठिरः। देवर्षेरुपविष्टस्य स्वयमर्घ्यं यथाविधि। प्रादाद्युधिष्ठिरो धीमान् राज्यं तस्मै न्यवेदयत्। प्रतिगृह्य तु तां पूजामृषिः प्रीतमनास्तदा। .....विविक्ते पाण्डवान् सर्वानुवाच भगवानृषिः। पाञ्चाली भवतामेका धर्मपत्नी यशस्विनी। यथा वो नात्र भेदः स्यात् तथा नीतिर्विधीयताम्। सुन्दोपसुन्दौ हि पुरा भ्रातरौ सहितावुभौ। आस्तामवध्यावन्येषां त्रिषु लोकेषु विश्रुतौ। तिलोत्तमायास्तौ हेतोरन्योन्यमभिजग्मतुः। रक्ष्यतां सौहृदं तस्मादन्योन्यप्रीतिभावकम्। ....एवमुक्ता महात्मानो नारदेन महर्षिणा। समयं चक्रिरे राजंस्तेऽन्योन्यवशमागताः। समक्षं तस्य देवर्षेर्नारदस्यामितौजसः। एकैकस्य गृहे कृष्णा वसेद्वर्षमकल्मषा। द्रौपद्या नः सहासीनानन्योन्यं योऽभिदर्शयेत्। स नो द्वादश मासानि ब्रह्मचारी वने वसेत्" भा० आदि० २२८-२३२। ಅಶ್ವಪತಿರಾಜನ ಮಗಳಾದ ಸಾವಿತ್ರಿಯು ಸತ್ಯವಂತನನ್ನು ಮದುವೆಯಾದ

ವಿಷಯ ತಿಳಿದು ಒಂದು ವರ್ಷಕ್ಕೆ ಸರಿಯಾಗಿ ಅವನಿಗೆ ಅವಸಾನಕಾಲ ಪ್ರಾಪ್ತವಾಗುವುದೆಂದು ತಿಳಿಯಪಡಿಸಿ ಸಾವಿತ್ರಿಯು ತಕ್ಕ ವ್ರತಾಚರಣೆಯ ಮೂಲಕ ತನ್ನ ಪತಿಯನ್ನು ಬದುಕಿಸಿಕೊಳ್ಳಲು ಸೌಕರ್ಯವನ್ನು ಕಲ್ಪಿಸಿ ಕೊಟ್ಟನು. "गणयन्त्याश्च सावित्र्या दिवसे दिवसे गते। यद्वाक्यं नारदेनोक्तं वर्तते हृदि नित्यशः। चतुर्थेऽहनि मर्तव्यमिति सञ्चिन्त्य भामिनी। व्रतं त्रिरात्रमुद्दिश्य दिवारात्रं स्थिताऽभवत्। त्रयोदश्यां चोपवासं प्रतिपत्सु च पारणाम्। आयुष्यं वर्धते भर्तुर्व्रतेनानेन भारत। .... अस्तं गते मयाऽऽदित्ये भोक्तव्यं कृतकामया। एष मे हृदि संकल्पः समयश्च कृतो मया" भा० वन० २९७। ಶ್ರೀಕೃಷ್ಣನ ಮಹಿಮೆಯನ್ನು ತಿಳಿಯಲು ನಾರದನು ದ್ವಾರಕೆಯಲ್ಲಿ ಹದಿನಾರು ಸಹಸ್ರ ಪತ್ನಿಯರೊಡನೆ ಸಂಸಾರ ಮಾಡಿಕೊಂಡಿದ್ದ ಶ್ರೀಕೃಷ್ಣನ ಪ್ರತಿಯೊಂದು ಮನೆಗೂ ಏಕಕಾಲದಲ್ಲಿ ಹೋಗಿ ನೋಡಿದಾಗ ಎಲ್ಲಾ ಕಡೆಯಲ್ಲೂ ನಾರದನಿಗೆ ದರ್ಶನ ಕೊಟ್ಟು ತನ್ನ ಮಹಿಮೆಯನ್ನು ಪ್ರದರ್ಶಿಸಿದನು. "नरकं निहतं श्रुत्वा तथोद्वाहं च योषिताम्। कृष्णेनैकेन बह्वीनां तद्दिदृक्षुः स्म नारदः। चित्रं बतैतदेकेन वपुषा युगपत् पृथक्। गृहेषु द्व्यष्टसाहस्रं स्त्रिय एक उदावहत्। इत्युत्सुको द्वारवतीं देवर्षिर्द्रष्टुमागमत्। ....तत्र षोडशभिः सद्मसहस्रैः समलंकृतम्। विवेशैकतमं शौरेः पत्नीनां भवनं महत्। ... तस्मिन् समानगुणरूपवयस्सुवेषदासीसहस्रयुतयानुसवं गृहिण्या। विप्रो ददर्श चमरव्यजनेन रुक्मदण्डेन सात्वतपतिं परिवीजयन्त्या। ततोऽन्यदाविशद्गेहं कृष्णपत्न्याः स नारदः। योगेश्वरस्याङ्ग योगमायाविवित्सया। दीव्यन्तमक्षैस्तत्रापि प्रियया चोद्धवेन च। पूजितः परया भक्त्या प्रत्युत्थानासनादिभिः। पृष्टश्चैवाविदुषेवासौ कदायातो भवानिति। .....स तु विस्मित उत्थाय तूष्णीमन्यदगात् गृहम्। तत्राप्याचष्ट गोविन्दं लालयन्तं सुतान् शिशून्। ततोऽन्यस्मिन् गृहेऽपश्यन्मज्जनाय कृतोद्यमम्। जुह्वन्तं च वितानाग्नीन् यजन्तं पञ्चभिर्मखैः। भोजयन्तं द्विजान् क्वापि भुञ्जानमवशेषितम्। क्वापि सन्ध्यामुपासीनं जपन्तं ब्रह्म वाग्यतम्" ಇತ್ಯಾದಿ. ಭಾಗ० १०-६९। 2. ವೈವಸ್ವತ ಮನ್ವಂತರದಲ್ಲಿ ಕಶ್ಯಪ ಋಷಿಯಿಂದ ಮುನಿಯೆಂಬ ಪತ್ನಿಯಲ್ಲಿ ಜನಿಸಿದ ಒಬ್ಬ ದೇವ ಗಂಧರ್ವ. "कलिः पञ्चदशस्तेषां नारदश्चैव षोडशः। इत्येते देवगन्धर्वाः मौनेयाः परिकीर्तिताः" भा० आदि० ६६-४४। 3. ವಿಶ್ವಾಮಿತ್ರ ಮಹರ್ಷಿಯ ಒಬ್ಬ ಮಗ. "तस्य पुत्रा महात्मानो ब्रह्मवंशविवर्धनाः। तपस्विनो ब्रह्मविदो गोत्रकर्तार एव च। .....लीलाढ्यो नारदश्चैव तथा कूर्चामुखः स्मृतः" भा० अनु० ७। 4. ಒಂದು ಪರ್ವತ.

नारदपञ्चरात्र नारदपंचरात्र (न०) ನಾರದಮುನಿಯಿಂದ ರಚಿತವಾದ ಒಂದು ತಂತ್ರಗ್ರಂಥ. ಈ ಗ್ರಂಥದಲ್ಲಿ (1) ಅಭಿಗಮನ, (2) ಉಪಾದಾನ, (3) ಇಜ್ಯೆ, (4) ಸ್ವಾಧ್ಯಾಯ ಮತ್ತು (5) ಯೋಗಗಳೆಂದು ಐದು ವಿಷಯಗಳು ಪ್ರತಿಪಾದಿಸಲ್ಪಟ್ಟಿವೆ. **ಅಭಿಗಮನ**—ದೇವಾಲಯದ ಮಾರ್ಗವನ್ನು ಚೆನ್ನಾಗಿ ಗುಡಿಸಿ ಸಾರಿಸಿ ಅಲಂಕರಿಸುವುದು. **ಉಪಾದಾನ**—ಗಂಧ ಪುಷ್ಪ ಮೊದಲಾದ ಪೂಜಾಸಾಮಗ್ರಿಗಳನ್ನು ಸಂಪಾದಿಸುವುದು. **ಇಜ್ಯಾ**—ದೇವರಪೂಜೆ. **ಸ್ವಾಧ್ಯಾಯ**—ಮಂತ್ರಜಪ ಸ್ತೋತ್ರಪಠನ ಭಗವನ್ನಾಮಸಂಕೀರ್ತನ ಮತ್ತು ತತ್ತ್ವಶಾಸ್ತ್ರಾವಲೋಕನ. **ಯೋಗ**—ದೇವತಾನುಸಂಧಾನ.

नारदशिक्षा नारदशिक्षा (स्त्री०) ವರ್ಣೋಚ್ಚಾರಣ ವಿಷಯವನ್ನು ತಿಳಿಸುವ ನಾರದರಚಿತವಾದ ಒಂದು ಗ್ರಂಥ.

नारदी नारदी (स्त्री०) ಸ್ತ್ರೀರೂಪವನ್ನು ಪಡೆದ ನಾರದ. ನಾರದನು ಶ್ವೇತದ್ವೀಪಕ್ಕೆ ಹೋಗಿದ್ದಾಗ ಅಲ್ಲಿ ಸೌಂದರ್ಯಭರಿತರಾದ ಅನೇಕ ತರುಣರನ್ನು ಕಂಡು ಆಶ್ಚರ್ಯಚಕಿತನಾದನು. ಮಾಯಾಸ್ವರೂಪವೆಂತಹುದೆಂದು ತಿಳಿಯಲು ಶ್ರೀವಿಷ್ಣುವನ್ನು ಕೇಳಲಾಗಿ ಶ್ರೀವಿಷ್ಣುವು ನಾರದನನ್ನು ಗರುಡನ ಮೇಲೆ ಕುಳ್ಳಿರಿಸಿಕೊಂಡು ಹೋಗಿ ಕನ್ಯಾಕುಬ್ಜದ ಸರೋವರದಲ್ಲಿ ಸ್ನಾನಮಾಡಿಸಿದ ಮೇಲೆ ನಾರದನು ಮೋಹಿನೀ ರೂಪವನ್ನು ಪಡೆದನು. ಕನ್ಯಾಕುಬ್ಜದ ದೊರೆಯಾದ ತಾಲಧ್ವಜನು ನಾರದಿಯನ್ನು ಕರೆದೊಯ್ದು ಮದುವೆಯಾದನು. ನಾರದಿಯು ಇಪ್ಪತ್ತು ಮಂದಿ ಮಕ್ಕಳನ್ನು ಪಡೆದಳು. ಶತ್ರುಗಳು ಬಂದು ತಾಲಧ್ವಜನನ್ನೂ ಅವನ ಮಕ್ಕಳನ್ನೂ ಸಂಹರಿಸಲು ನಾರದಿಯು ಶೋಕಸಂತಪ್ತಳಾದಾಗ ಶ್ರೀವಿಷ್ಣುವು ಅಲ್ಲಿಗೆ ಬಂದು ಪುಂತೀರ್ಥದಲ್ಲಿ ಸ್ನಾನಮಾಡಿಸಲಾಗಿ ನಾರದನು ತನ್ನ ಪೂರ್ವರೂಪವನ್ನು ಪಡೆದನು.

नारदीय नारदीय (वि०) 1. ನಾರದನಿಗೆ ಸಂಬಂಧಿಸಿದ. 2. ನಾರದನಿಂದ ರಚಿತವಾದ.

नारदीयपुराण नारदीयपुराण (न०) ನಾರದನಿಗೆ ಸನಕ ಸನಂದನ ಮೊದಲಾದವರು ಮಾಡಿದ ಉಪದೇಶರೂಪವಾದ ಒಂದು ಪುರಾಣ. ಇದರಲ್ಲಿ 25,000 ಗ್ರಂಥಗಳಿರುವುವು. ಈ ಪುರಾಣದಲ್ಲಿ ಪ್ರತಿಪಾದ್ಯ ವಿಷಯಗಳಿವು.

ಸೃಷ್ಟಿಯ ವರ್ಣನೆ. ನಾನಾಧರ್ಮಗಳ ವರ್ಣನೆ. ಮೋಕ್ಷ ಧರ್ಮದಲ್ಲಿ ಮೋಕ್ಷೋಪಾಯ ನಿರೂಪಣೆ, ವೇದಾಂಗಗಳು, ಶುಕೋತ್ಪತ್ತಿ, ಪುರಾಣಲಕ್ಷಣ, ಚೈತ್ರ ಮೊದಲಾದ ಮಾಸಗಳಲ್ಲಿ ಪ್ರತಿಪದಾದಿ ತಿಥಿಗಳಲ್ಲಿ ಮಾಡಬೇಕಾದ ವ್ರತಗಳು ಮುಂತಾದ ವಿಷಯಗಳು ಪ್ರತಿಪಾದಿತವಾಗಿವೆ.

नारसिंह नारसिंह (पुं०) ನರಸಿಂಹಪುರಾಣ, ನರಸಿಂಹಾವತಾರದ ಚರಿತ್ರೆಯನ್ನು ವರ್ಣಿಸುವ ಒಂದು ಉಪಪುರಾಣ. ಇದರಲ್ಲಿ ಹದಿನೆಂಟು ಸಹಸ್ರ ಶ್ಲೋಕಗಳಿರುವುವು. "पाद्मे पुराणे यत्प्रोक्तं नरसिंहोपवर्णनम्। तच्चाष्टादशसाहस्रं नारसिंहमिहोच्यते" मत्स्यपु०।

नारसिंहकल्प नारसिंहकल्प (पुं०) ಚತುರ್ಮುಖ ಬ್ರಹ್ಮನ ತಿಂಗಳಲ್ಲಿ ಹದಿನಾರನೆಯ ದಿನ. ಬ್ರಹ್ಮನ ತಿಂಗಳಲ್ಲಿ ಮೂವತ್ತು ದಿನಗಳಿಗೂ ಒಂದೊಂದು ಕಲ್ಪವೆಂದು ಹೆಸರು. ಈ ಮೂವತ್ತು ಕಲ್ಪಗಳಲ್ಲಿ ನಾರಸಿಂಹಕಲ್ಪವು ಹದಿನಾರನೆಯದು. ಈಗ ನಡೆಯುತ್ತಿರುವ (ವೈವಸ್ವತ ಮನ್ವಂತರದ) ಚತುರ್ಮುಖನ ತಿಂಗಳಿನ ಹದಿನಾರನೆಯ ದಿನ ನರಸಿಂಹಾವತಾರ ನಡೆಯಿತು.

नारा नारा (स्त्री०) ಜಲ, ನೀರು. नरस्येदम् "अण्" (४-३-१२०)। "आपो नारा इति प्रोक्ता आपो वै नरसूनवः" मनु० १-१०। ನರರೂಪಿಯಾದ ಪರಮಾತ್ಮನ ಅಪತ್ಯವೆಂದು ಪರಿಗಣಿಸಿರುವುದರಿಂದ ನೀರಿಗೆ ಈ ಹೆಸರು.

नाराच नाराच (पुं०) 1. ಲೋಹಮಯವಾದ ಬಾಣ. नारं नरसमूहमाचामति — आ + चमु (अदने) "ड:" (३-२-१०१)। "नाराचक्षेपणीयाश्मनिष्पेषोत्पतितानलम्" रघु० ४-७७। 2. ನೀರಿನ ಆನೆ. (स्त्री०) -ची -छी. 3. ಅಕ್ಕಸಾಲಿಗನ ತಕ್ಕಡಿ. "नाराचो लोहसायके। जलेभे नाराच्येषण्याम्" हेम०।

नाराचिका नाराचिका (स्त्री०) ಅಕ್ಕಸಾಲಿಗನು ಚಿನ್ನ ಬೆಳ್ಳಿ ತೂಗುವ ತಕ್ಕಡಿ. नाराचस्तदाकारोऽस्त्यस्या: "ठन्" (५-२-११५)।

नारायण नारायण (पुं०) ಮಹಾವಿಷ್ಣು, ಪರಮಾತ್ಮ, ಪರಬ್ರಹ್ಮ. नराणां समूहो नारम्, तदयनमस्य—णत्वम् (८-४-३)। नाराः ईयन्तेऽनेन "ल्युट्" (३-३-११७। नराज्जातानि तत्त्वानि अयनमस्य इति वा। ತನ್ನಿಂದ ಉಂಟಾದ ತತ್ತ್ವಗಳೆಲ್ಲಕ್ಕೂ ತಾನೇ ಆಶ್ರಯನಾದುದರಿಂದ ಪರಮಾತ್ಮನು ನಾರಾಯಣನು. ಇದರಿಂದ ನಾರಾಯಣನು ಸರ್ವವ್ಯಾಪಿಯಾಗಿರುವನು. "नराज्जातानि तत्त्वानि नाराणीति विदुर्बुधाः। तान्येवचायनं तस्य तेन नारायणः स्मृतः"। ಬ್ರಹ್ಮಸೃಷ್ಟಿಗೆ ಪೂರ್ವದಲ್ಲಿ ಮಹಾಜಲೌಘಮಧ್ಯದಲ್ಲಿ ಪರಬ್ರಹ್ಮನಿಗೆ ಆಪ್ಪ (ಜಲ) ಆಶ್ರಯವಾಗಿದ್ದುದರಿಂದ ಪರಮಾತ್ಮನು ನಾರಾಯಣನು. नरः अक्षयः निर्विकारः परमात्मा, तस्माज्जाता नारा आपः अस्य परमात्मनो अयनमिति असौ नारायणः। "आपो नारा इति प्रोक्ता आपो वै नरसूनवः। ता यदस्यायनं पूर्वं तेन नारायणः स्मृतः" विष्णुपु० १-४-६। "जह्नुर्नारायणो नरः" वि० स०। नराः स्वरूपप्रवाहनित्यवस्तूनि, तेषां समूहा नाराः, ते अयनमाश्रयोऽस्य तेषामयनमिति वा नारायणः। "नान्यः पन्था विद्यतेऽयनाय"। ನಾರಾಯಣನೇ ಪರಮಾತ್ಮನು, ನಾರಾಯಣನೇ ಪರಬ್ರಹ್ಮ. ಪರಮಾತ್ಮನು ಸರ್ವವ್ಯಾಪಿ. "नारायणपरं ब्रह्म तत्त्वं नारायणः परः। यच्च किञ्चिज्जगत्यस्मिन् दृश्यते श्रूयतेऽपि वा। अन्तर्बहिश्च तत्सर्वं व्याप्य नारायणः स्थितः"। "एको ह वै नारायण आसीत्"। "चक्षुश्च द्रष्टव्यं च नारायणः"। "अथ दिव्यो देव एको नारायणः"। ಈ ರೀತಿ ಪರಮಾತ್ಮನಿಗೆ ಸರ್ವದೇಶವ್ಯಾಪಿತ್ವ ಸರ್ವಾಂತರ್ಯಾಮಿತ್ವ ಸರ್ವಾತ್ಮಕತ್ವ ಮೊದಲಾದುವು ಪ್ರತಿಪಾದಿತವಾಗಿವೆ. ಮತ್ತು ಪ್ರತಿಶಾಖೆಯಲ್ಲೂ ಮೂರ್ತ್ಯಂತರವ್ಯಾವರ್ತಕವಾದ ಹೆಸರು ಉಕ್ತವಾಗಿದೆ.

ಸಮಸ್ತ ಜಗತ್ತಿನ ಸೃಷ್ಟಿಸ್ಥಿತಿಲಯಗಳೆಲ್ಲಕ್ಕೂ ನಾರಾಯಣನೇ ಕಾರಣನು. ತಾನೊಬ್ಬನೇ ಬ್ರಹ್ಮ ವಿಷ್ಣು ಮಹೇಶ್ವರರೆಂಬ ನಾಮರೂಪಗಳನ್ನು ಹೊಂದಿ ಈ ಕಾರ್ಯಗಳನ್ನು ನಡೆಸುವನು. "सृष्टिस्थित्यन्तकरणीं ब्रह्मविष्णुशिवात्मिकाम्। स संज्ञां याति भगवानेक एव जनार्दनः" विष्णुपु० १-२-६६।

ಬ್ರಹ್ಮಸೃಷ್ಟಿಗೆ ಪೂರ್ವದಲ್ಲಿದ್ದ ಸ್ಥೂಲ ಚೇತನಾಚೇತನ ಶರೀರಿಯಾದ ಪರಮಾತ್ಮನಿಂದ ಅಭಿವ್ಯಕ್ತನಾಮರೂಪಾತ್ಮಕವಾದ ಜಗತ್ತು ಉತ್ಪನ್ನವಾಯಿತು. "असद्वा इदमग्र आसीत्। ततो वै सदजायत। तदात्मानं स्वयमकुरुत" तै० उ०।

ಬ್ರಹ್ಮಾದಿ ಸ್ತಂಬಪರ್ಯಂತವಾದ ಈ ಜಗತ್ತು ಯಾರಿಂದ ಉತ್ಪನ್ನವಾಯಿತೋ ಯಾರಿಂದ ಜೀವಿಸಿರುವುದೋ ಮತ್ತು ಯಾರಿಂದ ಪ್ರಲಯ ಹೊಂದುವುದೋ ಅದೇ ಪರಬ್ರಹ್ಮ. "यतो वा इमानि भूतानि जायन्ते। येन जातानि जीवन्ति। यत्प्रयन्त्यभिसंविशन्ति। तद्विजिज्ञासस्व। तद्ब्रह्मेति" तै० उ०। "यस्मादिदं जगदजायत यत्र तिष्ठत्यन्ते समस्तमिदमस्तमुपैति यत्र। तस्मै

नमः सदसदादिविकल्पशून्यचैतन्यमात्रवपुषे पुरुषोत्तमाय" विष्णुपु० १-१-१।

ಜಗತ್ತಿನ ಸೃಷ್ಟಿಗೆ ಪೂರ್ವದಲ್ಲಿ ಚತುರ್ಮುಖ, ಪರಶಿವ, ಭೂಮಿ, ಅಂತರಿಕ್ಷ, ನಕ್ಷತ್ರಗಳು, ಅಗ್ನಿ, ಚಂದ್ರ ಸೂರ್ಯರು ಮೊದಲಾದವರಾರೂ ಇರಲಿಲ್ಲ. ಇವರೆಲ್ಲರ ಸೃಷ್ಟಿಗೆ ಪೂರ್ವದಲ್ಲಿ ಏಕಾಕಿಯಾಗಿ ಧ್ಯಾನಾಸಕ್ತನಾಗಿದ್ದ ನಾರಾಯಣನಿಂದ ಒಬ್ಬ ಕನ್ಯೆಯ ಮತ್ತು ದಶೇಂದ್ರಿಯಗಳ ಉತ್ಪತ್ತಿಯಾಯಿತು. ಆನಂತರ ಮತ್ತೆ ಧ್ಯಾನಮಾಡಲು ಲಲಾಟದಿಂದ ಸ್ವೇದವು ಬಿದ್ದು ಆ ನೀರು ಹಿರಣ್ಮಯವಾದ ಅಂಡವಾಯಿತು. ಅದರಿಂದ ಚತುರ್ಮುಖನು ಜನಿಸಿದನು. "एको ह वै नारायण आसीत् न ब्रह्मा नेशानो नेमे द्यावापृथिवी न नक्षत्राणि नापो नाग्निर्न सोमो न सूर्यः स एकाकी न रमेत तस्य ध्यानान्तस्थस्य एका कन्या दशेन्द्रियाणि...."। "अथ पुनरेव नारायणः सोऽन्यं कामं मनसा ध्यायत तस्य ध्यानान्तस्थस्य ललाटात् स्वेदोऽपतत् ता इमा आपः तद्धिरण्मयमण्डमभवत् तत्र चतुर्मुखोऽजायत"।

ಮತ್ತೆ ಧ್ಯಾನಾಸಕ್ತನಾದ ನಾರಾಯಣನ ಲಲಾಟದಿಂದ ಸ್ವೇದಜಲವು ಬಿದ್ದು ಅದು ನೊರೆಯಾಯಿತು. ಅದರಿಂದ ಫಾಲಾಕ್ಷನಾದ ಪರಮೇಶ್ವರನು ಜನಿಸಿದನು. "अथ पुनरेव नारायणस्सोऽन्यं कामं मनसा ध्यायत तस्य ध्यानान्तस्थस्य ललाटात् स्वेदोऽपतत् स्वेदाद्बुद्बुदमभवत् बुद्बुदात् त्र्यक्षः शूलपाणिः पुरुषोऽजायत" महोप०।

ಆನಂದಸ್ವರೂಪನಾದ ಶ್ರೀಮನ್ನಾರಾಯಣನು ಮೊದಲು ದೇವ ಮನುಷ್ಯಾದಿ ರೂಪದಿಂದ ಅನೇಕ ನಾಮ ರೂಪಗಳನ್ನು ಅಪೇಕ್ಷಿಸಿ ಜಗತ್ತಿನ ಸೃಷ್ಟಿಗಾಗಿ ಸಂಕಲ್ಪಿಸಿದನು. "सोऽकामयत। बहुस्यां प्रजायेयेति। स तपोऽतप्यत। स तपस्तप्त्वा। इदगँ सर्वमसृजत" तै० उ०।

ಚೇತನಾಚೇತನಾತ್ಮಕವಾದ ಸಕಲ ಜಗತ್ತೂ ಪರಮ ಪುರುಷನಾದ ನಾರಾಯಣನ ಶರೀರವಾಗಿದೆ. ಪರಮಾತ್ಮನಿಗೆ ಭೂಮಿಯೇ ಪಾದಗಳು. ಆಕಾಶವೇ ನಾಭಿ (ಹೊಕ್ಕುಳು). ವಾಯುವೇ ಉಸಿರು. ಚಂದ್ರ ಸೂರ್ಯರೇ ನೇತ್ರಗಳು. ದಿಕ್ಕುಗಳೇ ಕರ್ಣಗಳು. ಅಂತರಿಕ್ಷವೇ ಶಿರಸ್ಸು. ಅಗ್ನಿಯೇ ವದನ. ಸಮುದ್ರವೇ ವಾಸಸ್ಥಾನ. ಈ ರೀತಿಯಾದ ಪರಮಾತ್ಮನ ಶರೀರದೊಳಗೆ ಸಕಲ ಪ್ರಪಂಚವೂ ಅಡಗಿರುವುದು. "भूः पादौ यस्य नाभिर्वियदसुरनिलः चन्द्रसूर्यौ च नेत्रे कर्णावाशाः शिरो द्यौर्मुखमपि दहनो यस्य वास्तेयमब्धिः। अन्तस्थं यस्य विश्वं सुरनरखगगो भोगिगन्धर्वदैत्यैश्चित्रं रंरम्यते तं त्रिभुवनवपुषं विष्णुमीशं नमामि"।

ಪರಮಪುರುಷನಾದ ಶ್ರೀಮನ್ನಾರಾಯಣನು ಸಮಷ್ಟಿ ಪುರುಷನೆನಿಸಿದ ಬ್ರಹ್ಮನನ್ನು ತನಗೆ ಶರೀರವನ್ನಾಗಿ ಮಾಡಿಕೊಂಡು ಅವನಲ್ಲೇ ಅಂತರಾತ್ಮನಾಗಿ ಕಾಲಕರ್ಮ ಸ್ವಭಾವಗಳನ್ನನುಸರಿಸುತ್ತ, ಬ್ರಹ್ಮಾಂಡವನ್ನು ಪ್ರವೇಶಿಸಿ ಅದನ್ನು ಜೀವಸಹಿತವನ್ನಾಗಿ ಮಾಡಿದಾಗ ಆ ಅಂಡದಿಂದ ಸಾವಿರ ತೊಡೆಗಳು, ಸಾವಿರ ಕಾಲುಗಳು, ಸಾವಿರ ತೋಳುಗಳು ಮತ್ತು ಸಾವಿರ ಮುಖಗಳಿಂದ ಕೂಡಿದ ಒಂದು ಪುರುಷಾಕಾರವು ಹೊರಟಿತು. ಅವನೇ ಸರ್ವಾಂತರ್ಯಾಮಿಯಾದ ಪರಮಾತ್ಮನು. "वर्षपूगसहस्रान्ते तदण्डमुदकेशयम्। कालकर्मस्वभावस्थो जीवो जीवमजीवयत्॥ स एव पुरुषस्तस्मादण्डं निर्भिद्य निर्गतः। सहस्रोर्वङ्घ्रिबाह्वक्षः सहस्राननशीर्षवान्" भाग० २-५-३४, ५। "सहस्रशीर्षा पुरुषः सहस्राक्षः सहस्रपात्। स भूमिं विश्वतो वृत्वा" श्रुतिः।

ಸಕಲ ಲೋಕಗಳೂ ಶರೀರವಾಗಿರುವ ಪರಮಪುರುಷನ ಕಟಿಭಾಗದಿಂದ ಕೆಳಗಿನ ಅವಯವಗಳನ್ನು ಪಾತಾಳಾದಿ ಸಪ್ತ ಅಧೋಲೋಕಗಳನ್ನಾಗಿಯೂ ಜಘನಕ್ಕೆ ಮೇಲಿನ ಅವಯವಗಳನ್ನು ಸಪ್ತ ಊರ್ಧ್ವ ಲೋಕಗಳನ್ನಾಗಿಯೂ ಕಲ್ಪಿಸಿ ಧ್ಯಾನಮಾಡುವರು. "यस्येहावयवैर्लोकान् कल्पयन्ति मनीषिणः। कट्यादिभिरधः सप्त सप्तोर्ध्वं जघनादिभिः" भाग० २-५-३६। "भूर्लोकः कल्पितः पद्भ्यां भुवर्लोकोऽस्य नाभितः। हृदा स्वर्लोक उरसा महर्लोको महात्मनः। ग्रीवायां जनलोकश्च तपोलोकः स्तनद्वयात्। मूर्धभिः सत्यलोकस्तु ब्रह्मलोकः सनातनः। तत्कट्यां चातलं क्लृप्तमूरुभ्यां वितलं विभोः। जानुभ्यां सुतलं शुद्धं जङ्घाभ्यां तु तलातलम्। महातलं तु गुल्फाभ्यां प्रपदाभ्यां रसातलम्। पातालं पादतलतः इति लोकमयः पुमान्" भाग० २-५-३८, ३९, ४०, ४१।

ವಿರಾಟ್ ಪುರುಷನ ವಿಭೂತಿಗಳು — ವಾಗಿಂದ್ರಿಯಕ್ಕೂ ಅದರ ಅಧಿಷ್ಠಾನದೇವತೆಯಾದ ಅಗ್ನಿಗೂ ಪರಮ ಪುರುಷನ ವದನವೇ ಆಶ್ರಯ. ಹವ್ಯ ಕವ್ಯ ಮತ್ತು ಅಮೃತರೂಪವಾದ ಮೂರು ವಿಧವಾದ ಅನ್ನಗಳಲ್ಲಿರುವ ಷಡ್ರಸಗಳಿಗೂ ಮತ್ತು ರಸನೇಂದ್ರಿಯಕ್ಕೂ ಅದರ ಅಧಿದೇವತೆಯಾದ ವರುಣನಿಗೂ ಪರಮಪುರುಷನ ನಾಲಗೆಯೇ ಸ್ಥಾನ. ಸಕಲ ಜೀವರಾಶಿಗಳ ಪ್ರಾಣಗಳಿಗೂ ಅವುಗಳ ಅಧಿದೇವತೆಯಾದ ವಾಯುವಿಗೂ ಪರಮಾತ್ಮನ ನಾಸಾರಂಧ್ರ (ಮೂಗಿನ ಹೊಳ್ಳೆ)ಗಳೇ ಆಶ್ರಯ ಸ್ಥಾನ.

ಓಷಧಿಗಳಿಗೂ ಅಶ್ವಿನೀದೇವತೆಗಳಿಗೂ ಇಷ್ಟವಸ್ತುವಿನ ಪ್ರಾಪ್ತಿಯಿಂದುಂಟಾಗುವ ಸಂತೋಷಕ್ಕೂ ಪರಮಾತ್ಮನ ಘ್ರಾಣೇಂದ್ರಿಯವೇ ಆಶ್ರಯಸ್ಥಾನ. ಶುಕ್ಲ ಕೃಷ್ಣಾದಿ ವರ್ಣಗಳಿಗೂ ತೇಜಸ್ಸಿಗೂ ಅವನ ನೇತ್ರೇಂದ್ರಿಯವೂ ದ್ಯುಲೋಕಕ್ಕೂ ಸೂರ್ಯನಿಗೂ ಅವನ ನೇತ್ರಗಳೂ ಆಕಾಶ ಮತ್ತು ಶಬ್ದಗಳಿಗೆ ಅವನ ಶ್ರೋತ್ರೇಂದ್ರಿಯವೂ ಲೋಕಕ್ಷೇಮಕರರಾದ ಇಂದ್ರಾದಿಲೋಕಪಾಲಕರಿಗೆ ಬಾಹುಗಳೂ ಭೂರ್ಭುವಃ ಸ್ವರ್ಲೋಕಗಳಿಗೆ ಪರಮಾತ್ಮನ ಮೂರಡಿಗಳೂ ಸಕಲಲೋಕಕ್ಷೇಮ ಅನಿಷ್ಟನಿವಾರಣೆ ಮತ್ತು ಇಷ್ಟಪ್ರಾಪ್ತಿಗೆ ಪರಮಪುರುಷನ ಪಾದವೂ ಆಶ್ರಯಸ್ಥಾನಗಳು. ಸಮಸ್ತ ನದಿಗಳಿಗೂ ಅತನ ನಾಡಿಗಳೂ ಪರ್ವತಗಳಿಗೆ ಅವನ ಅಸ್ಥಿ ಪಂಜರವೂ ಸ್ಥಾನವಾಗಿರುವುದು. ಧರ್ಮಕ್ಕೂ ಸನಕಾದಿಗಳಿಗೂ ರುದ್ರನಿಗೂ ಮಹತ್ತತ್ತ್ವಕ್ಕೂ ಪರಮಪುರುಷನ ಮನಸ್ಸೇ ಆಶ್ರಯಸ್ಥಾನ. ಈ ರೀತಿ ಪರಮಪುರುಷನಾದ ಶ್ರೀಮನ್ನಾರಾಯಣನಿಂದ ಉತ್ಪನ್ನವಾದ ಜಗತ್ತೆಲ್ಲವೂ ಅವನ ವಿಭೂತಿಗಳಾಗಿ ಅವನಿಗೆ ಶರೀರವಾಗಿರುವದರಿಂದ ಅವನಿಗಿಂತಲೂ ಅತಿರಿಕ್ತವಾದ ವಸ್ತುವು ಬೇರೆ ಯಾವುದೂ ಇಲ್ಲ. "वाचां वह्नेर्मुखं क्षेत्रं छन्दसां सप्त धातवः। हव्यकव्यामृतान्नानां जिह्वा सर्वरसस्य च। सर्वासूनां च वायोश्च तन्नासे परमायने। अश्विनोरोषधीनां च घ्राणो मोदप्रमोदयोः। रूपाणां तेजसां चक्षुः दिवः सूर्यस्य चाक्षिणी। कर्णौ दिशां च तीर्थानां श्रोत्रमाकाशशब्दयोः। बाहवो लोकपालानां प्रायशः क्षेमकर्मणाम्। विक्रमो भूर्भुवः स्वश्च क्षेमस्य शरणस्य च। सर्वकामवरस्यापि हरेश्चरण आस्पदम्। नाड्यो नदनदीनां तु गोत्राणामस्थिसंहतिः। धर्मस्य मम तुभ्यं च कुमाराणां भवस्य च। विज्ञानस्य च सत्वस्य परस्यात्मा परायणम्। सर्वं पुरुष एवेदं भूतं भव्यं भवच्च यत्। तेनेदमावृतं विश्वं वितस्तिमधितिष्ठति" ಭಾಗ೦ ೨-೬। "पुरुष एवेदगँ सर्वम्। यद्भूतं यच्च भव्यम्"। सर्वं खल्विदं ब्रह्म। अयमात्मा ब्रह्म" श्रुतिः।

ನಾಭಿಯಿಂದ ಒಂದು ಗೇಣಳತೆಗೆ ಮೇಲೆ ನೆಲೆಸಿರುವ ನಮ್ಮ ಹೃದಯಕಮಲದಲ್ಲಿ ಸೇರಿಕೊಂಡಿರುವ ಆ ಪರಮಾತ್ಮನಿಂದಲೇ ಈ ಸಕಲ ಜಗತ್ತೂ ಆವರಿಸಲ್ಪಟ್ಟಿರುವುದು. "अधो निष्ट्या वितस्त्यां तु नाभ्यामुपरि तिष्ठति। हृदयं तद्विजानीयाद्विश्वस्यायतनं महत्" श्रुतिः।

ಜಗದ್ರಕ್ಷಣಾರ್ಥವಾಗಿ ಅನೇಕ ರೂಪಗಳನ್ನು ಕೈಗೊಂಡರೂ ಜೀವಾತ್ಮನ ವ್ಯಾಪಾರಗಳಂತೆ ಪರಮಾತ್ಮನಿಗೆ ಜಗದ್ವ್ಯಾಪಾರವು ಕರ್ಮಾಧೀನವಾದುದಲ್ಲ. ಪರಮಾತ್ಮನು ಕೇವಲ ಜ್ಞಾನಸ್ವರೂಪನು. ಜನ್ಮಜರಾದಿಗಳಿಲ್ಲದವನಾದುದರಿಂದ ನಾಶರಹಿತನು ಮತ್ತು ನಿತ್ಯನು. ಅವನು ಅವಾಪ್ತಸಮಸ್ತಕಾಮನು. ಪ್ರಕೃತಿಸಂಬಂಧವಾದ ಯಾವ ಗುಣಗಳೂ ಅವನಲ್ಲಿಲ್ಲ. ಸದಾ ಏಕಸ್ವರೂಪನು. ಪರಬ್ರಹ್ಮ ಶಬ್ದವಾಚ್ಯನು. ಕಾಮ ಕ್ರೋಧ ಮೋಹಾದಿಗಳು ಯಾವುದೂ ಇಲ್ಲದುದರಿಂದ ನಿರ್ಮಲನು. "तद्ब्रह्म परमं नित्यमजमक्षयमव्ययम्। एकस्वरूपं तु सदा हेयाभावाच्च निर्मलम्" विष्णुप्तं।

ಸಮಸ್ತ ಜಗತ್ತಿಗೂ ನಿಮಿತ್ತಕಾರಣನೂ ಉಪಾದಾನ ಕಾರಣನೂ ಆಗಿರುವದರಿಂದ ಶ್ರೀಮನ್ನಾರಾಯಣನು ಸಕಲಕ್ಕೂ ಮೂಲಕಾರಣನು. "नमो नमस्तेऽखिलकारणाय निष्कारणायाद्भुतकारणाय। सर्वागमाम्नायमहार्णवाय नमोऽपवर्गाय परायणाय" ಭಾಗ೦ ೮-೩-೧೪।

ವಾಯುವು ಸ್ಥಾವರಜಂಗಮಾತ್ಮಕವಾದ ಸಮಸ್ತ ಭೂತಗಳಲ್ಲಿಯೂ ಪ್ರವೇಶಿಸಿ ಅವುಗಳನ್ನು ಕದಲಿಸುವಂತೆ ಪರವಾಸುದೇವನಾದ ಶ್ರೀಮನ್ನಾರಾಯಣನು ಜೀವಾತ್ಮನಲ್ಲಿ ವ್ಯಾಪಿಸಿ ಅವುಗಳಿಂದ ಕೆಲಸಮಾಡಿಸುತ್ತಿರುವನು. "यथानिलः स्थावरजङ्गमानामात्मस्वरूपेण निविष्ट ईशेत्। एवं परो भगवान् वासुदेवः क्षेत्रज्ञ आत्मेदमनुप्रविष्टः" ಭಾಗ೦ ೫-೧೧।

"यमन्तः समुद्रे कवयो वयन्ति" ಎಂಬ ಶ್ರುತಿಯಿಂದ ಪರಮಾತ್ಮನಿಗೆ ಸಮುದ್ರಶಾಯಿತ್ವವೂ "यदेकमव्यक्तमनन्तरूपं विश्वं पुराणं तमसः परस्तात्" ಎಂಬ ಶ್ರುತಿವಾಕ್ಯದಿಂದ ಅಜ್ಞಾನಕ್ಕಿಂತಲೂ ದೂರವರ್ತಿತ್ವವೂ "य एनं विदुरमृतास्ते भवन्ति" ಎಂಬ ವಾಕ್ಯದಿಂದ ಮೋಕ್ಷಪ್ರಾಪ್ತಿಹೇತುತ್ವವೂ "विश्वतश्चक्षुरुत विश्वतोमुखः" ಇತ್ಯಾದಿ ವಾಕ್ಯಗಳಿಂದ ಸಹಸ್ರಾಕ್ಷತ್ವ ಸಹಸ್ರಶೀರ್ಷತ್ವ ಮೊದಲಾದುವೂ ಸಿದ್ಧವು.

ಚಿದಚಿದಾತ್ಮಕವಾದ ಸಕಲಜಗತ್ತಿಗೂ ಪರಮಪುರುಷನೇ ಕಾರಣನು. ಪರಮಪುರುಷನಿಂದಲೇ ಎಲ್ಲವೂ ಪ್ರವರ್ತಿಸುವುದು ಎಂದು ಜ್ಞಾನಿಗಳು ಪರಮಾತ್ಮನ ಸ್ವಾಭಾವಿಕವಾದ ಐಶ್ವರ್ಯ ಸೌಹಾರ್ದ ಸೌಶೀಲ್ಯ ವಾತ್ಸಲ್ಯ ಮೊದಲಾದ ಅನನ್ತಕಲ್ಯಾಣಗುಣಗಳನ್ನು ತಿಳಿದುಕೊಂಡು ಭಜಿಸುವರು. "अहं सर्वस्य प्रभवः मत्तः सर्वं प्रवर्तते। इति मत्वा भजन्ते मां बुधा भावसमन्विताः" ಗೀತಾ ೧೦-೮।

ಯೋಗಮಾಯೆಯಿಂದ ಅವೃತನಾದ ಪರಮಪುರುಷನನ್ನು ಯಾರೂ ಸಾಕ್ಷಾತ್ತಾಗಿ ಕಾಣಲಾರರು. ಮೂಢನಾದವನು ಪರಮಾತ್ಮನನ್ನು ಅಜನೆಂದೂ ಅವ್ಯಯನೆಂದೂ

ತಿಳಿಯಲಾರನು. "नाहं प्रकाशः सर्वस्य योगमायासमावृतः। मूढोऽयं नाभिजानाति लोको मामजमव्ययम्" ಗೀತಾ ೯-೨೩।

ಪರಮಪುರುಷನಾದ ಶ್ರೀಮನ್ನಾರಾಯಣನು ತನಗೆ ಶರೀರಭೂತವಾದ ಮಹಾಮಾಯಾರೂಪವಾದ ಪ್ರಕೃತಿಯಿಂದ ಆ ಪ್ರಕೃತಿಗೆ ವಶವಾದ ಸಕಲಪ್ರಾಣಿವರ್ಗವನ್ನೂ ಸೃಷ್ಟಿಸುತ್ತಿರುವನು. ಕರ್ಮಗಳಲ್ಲಿ ಅಸಕ್ತನಾದ ಅವನನ್ನು ಆ ಕರ್ಮಗಳು ಬಂಧಿಸುವುದಿಲ್ಲ. ಸಕಲ ಭೂತಗಳಿಗೂ ಈಶ್ವರನಾಗಿರುವ ಮತ್ತು ಲೋಕ ಸಂರಕ್ಷಣಾರ್ಥವಾಗಿ ಮಾನುಷದೇಹವನ್ನು ಆಶ್ರಯಿಸಿದ ಪರಮಪುರುಷನ ಪರತ್ವವನ್ನು ಅರಿಯದ ಮೂಢರು ಅವನನ್ನು ತಿರಸ್ಕಾರ ಬುದ್ಧಿಯಿಂದ ಕಾಣುತ್ತಾರೆ. "प्रकृतिं स्वामवष्टभ्य विसृजामि पुनः पुनः। भूतग्राममिमं कृत्स्नमवशं प्रकृतेर्वशात्। न च मां तानि कर्माणि निबध्नन्ति धनञ्जय। उदासीनवदासीनमसक्तं तेषु कर्मसु। मयाध्यक्षेण प्रकृतिः सूयते सचराचरम्। हेतुनानेन कौन्तेय जगद्विपरिवर्तते। अवजानन्ति मां मूढा मानुषीं तनुमाश्रितम्। परं भावमजानन्तो मम भूतमहेश्वरम्" ಗೀತಾ ೯। "अस्मान्मायी सृजते विश्वमेतत् तस्मिंश्चान्यो मायया संनिरुद्धः। मायां तु प्रकृतिं विद्यात् मायिनं तु महेश्वरम्" ಶ್ವೇತಾ॰ ಉಪ॰।

ಅನೇಕಜನ್ಮಗಳಿಂದ ಆಚರಿಸಿದ ಪುಣ್ಯಕರ್ಮಗಳಿಂದ ಮೋಕ್ಷವಿರೋಧಿಯಾದ ಪಾಪಗಳನ್ನು ಕಳೆದುಕೊಂಡವರು ಸುಖದುಃಖಾದಿ ದ್ವಂದ್ವಗಳ ಮೋಹದಿಂದ ವಿಮುಕ್ತರಾಗಿ ಮೋಕ್ಷಪ್ರಾಪ್ತಿಗಾಗಿ ಪರಮಾತ್ಮನನ್ನು ಭಜಿಸುತ್ತಾರೆ. "येषामन्तगतं पापं जनानां पुण्यकर्मणाम्। ते द्वन्द्वमोहनिर्मुक्ताः भजन्ते मां दृढव्रताः" ಗೀತಾ ೭-೨೮।

ದೇವ ತಿರ್ಯಕ್ ಮನುಷ್ಯ ಸ್ಥಾವರ ರೂಪವಾದ ಮತ್ತು ಜಾತಿ ಆಕಾರ ಸ್ವಭಾವ ಮತ್ತು ಜ್ಞಾನ ಇವುಗಳಿಂದ ಉತ್ಕೃಷ್ಟ ಮತ್ತು ಅಪಕೃಷ್ಟವಾಗಿರುವ ಸಕಲ ಭೂತಗಳ ವಿಷಯದಲ್ಲಿಯೂ ಪರಮಾತ್ಮನು ಸಮಾನನು. ಜಾತ್ಯಾಕಾರಾದಿಗಳಿಂದ ಉತ್ಕೃಷ್ಟ ಅಥವಾ ನಿಕೃಷ್ಟವೆಂಬ ಭಾವವೂ ಪರಮಾತ್ಮನಿಗಿಲ್ಲ. ಅವನಿಗೆ ದ್ವೇಷಿಯೂ ಮಿತ್ರನೂ ಯಾರೂ ಇಲ್ಲ. "समोऽहं सर्वभूतेषु न मे द्वेष्योऽस्ति न प्रियः" ಗೀತಾ ೯-೨೯।

ಲೋಕದಲ್ಲಿ ಬಹಳ ಕಷ್ಟಕಾರ್ಪಣ್ಯಗಳಿಗೆ ಸಿಲುಕಿ ನರಳುತ್ತಿರುವ ಆರ್ತನೂ ಪರತತ್ತ್ವ (ಪ್ರಕೃತಿವಿಯುಕ್ತ ಆತ್ಮ ಸ್ವರೂಪ) ವನ್ನು ತಿಳಿಯಲು ಅಪೇಕ್ಷಿಸುವವನೂ ಧನಾಪೇಕ್ಷಿಯೂ ಪರಮಾತ್ಮತತ್ತ್ವವನ್ನು ಚೆನ್ನಾಗಿ ತಿಳಿದಿರುವ ಜ್ಞಾನಿಯೂ ಆದ ಪುಣ್ಯಶಾಲಿಗಳು ಪರಮಾತ್ಮನನ್ನು ಸೇವಿಸುವರು. ಅವರಲ್ಲಿ ನಿರಂತರವಾಗಿ ಪರಮಭಕ್ತಿಯಿಂದ ಪರಮಾತ್ಮನ ಕೃಪೆಯನ್ನು ಅಪೇಕ್ಷಿಸುವ ಜ್ಞಾನಿಯೇ ಪರಮಾತ್ಮನಿಗೆ ಪ್ರಿಯನಾದವನು. "चतुर्विधा भजन्ते मां जनाः सुकृतिनोऽर्जुन। आर्तो जिज्ञासुरर्थार्थी ज्ञानी च भरतर्षभ। तेषां ज्ञानी नित्ययुक्तः एकभक्तिर्विशिष्यते" ಗೀತಾ ೭।

ವೇದಾಧ್ಯಯನ ತಪಸ್ಸು, ದಾನ ಯಾಗ ಈ ಯಾವುದರಿಂದಲೂ ಆ ವಿರಾಟ್‌ಸ್ವರೂಪನಾದ ಪರಮಾತ್ಮನ ಸ್ವರೂಪವನ್ನು ತಿಳಿಯಲೂ ಸಾಕ್ಷಾತ್ಕರಿಸಲೂ ಸಾಧ್ಯವಾಗಲಾರದು. ಮನಃಶುದ್ಧಿಹೊಂದಿ ಅನನ್ಯವಾದ ಭಕ್ತಿಯಿಂದ ಸೇವಿಸುವವರಿಗೆ ಮಾತ್ರ ಪರಮಾತ್ಮನ ಸ್ವರೂಪವನ್ನು ತಿಳಿಯಲೂ ಸಾಕ್ಷಾತ್ಕರಿಸಲೂ ಮೋಕ್ಷವನ್ನು ಹೊಂದಲೂ ಸಾಧ್ಯವು. "नाहं वेदैर्न तपसा न दानेन न चेज्यया। शक्य एवंविधो द्रष्टुं दृष्टवानसि मां यथा॥ भक्त्या त्वनन्यया शक्यः अहमेवंविधोऽर्जुन। ज्ञातुं द्रष्टुं च तत्त्वेन प्रवेष्टुं च परन्तप" ಗೀತಾ ೧೧-೫೩, ೫೪। "नायमात्मा प्रवचनेन लभ्यो न मेधया न बहुना श्रुतेन। यमेवैष वृणुते तेन लभ्यस्तस्यैष आत्मा विवृणुते तनूं स्वाम्" ಕಠ॰ ೧-೨-೨೩।

ಮನುಷ್ಯನು, ತಾನು ಪರವಾಸುದೇವನಿಗೆ ಶೇಷಭೂತನು, ತನ್ನ ಸ್ವರೂಪಸ್ಥಿತಿ ವ್ಯಾಪಾರಗಳಿಲ್ಲವೂ ಅವನ ಅಧೀನ ಮತ್ತು ಅಸಂಖ್ಯಾತ ಕಲ್ಯಾಣಗುಣಗಳಿಂದ ಅವನೇ ಪರತರನು ಎಂಬ ಜ್ಞಾನವನ್ನು ಅನೇಕ ಜನ್ಮಗಳಲ್ಲಿ ಸಂಪಾದಿಸಿ, ವಾಸುದೇವನೇ ಪರಮಪ್ರಾಪ್ಯನು ಮತ್ತು ಪ್ರಾಪಕನು ಎಂದು ತಿಳಿದು ಕೊನೆಗೆ ಪರಮಾತ್ಮನನ್ನು ಹೊಂದುತ್ತಾನೆ, ಅಂತಹವನು ವಿರಳ. "बहूनां जन्मनामन्ते ज्ञानवान् मां प्रपद्यते। वासुदेवः सर्वमिति स महात्मा सुदुर्लभः" ಗೀತಾ ೭-೧೯।

ಪರವಾಸುದೇವನಾದ ಶ್ರೀಮನ್ನಾರಾಯಣನೇ ಪರಮ ಪ್ರಾಪ್ಯನೆಂದು ತಿಳಿದು ಪ್ರಯೋಜನಾಂತರಾಪೇಕ್ಷೆಯಿಲ್ಲದೆ ಸತತವೂ ಅವನನ್ನು ಪೂಜಿಸುತ್ತಾ ಅವನ ನಿರಂತರ ಸಾಯುಜ್ಯವನ್ನು ಅಪೇಕ್ಷಿಸುವವರಿಗೆ ಅವನು ಅಪುನರಾವೃತ್ತಿರೂಪವಾದ ಮೋಕ್ಷಸಾಮ್ರಾಜ್ಯವನ್ನು ಅನುಗ್ರಹಿಸುವನು. "अनन्याश्चिन्तयन्तो मां ये जनाः पर्युपासते। तेषां नित्याभियुक्तानां योगक्षेमं वहाम्यहम्" ಗೀತಾ ೯-೨೨।

ಸಮಸ್ತಭೂತಗಳಿಗೂ ಅಂತರಾತ್ಮನಾಗಿ ಅವುಗಳನ್ನು ಆಯಾ ಕಾರ್ಯಗಳಲ್ಲಿ ನಿಯಮಿಸುವವನು ಪರಮಾತ್ಮನೇ ಹೊರತು ಬೇರೆ ಯಾರಿಗೂ ಯಾವ ವಿಧದಲ್ಲೂ ಸಾಧ್ಯವಿಲ್ಲ. ಸಮಸ್ತಭೂತಗಳಿಗೂ ಅವನು ಸುಹೃತ್ತು. ಎಲ್ಲವೂ ಅವನ ಸ್ವರೂಪವಾದುದರಿಂದ ಸಮಸ್ತಭೂತಗಳೂ

ಅವನೇ ಎಂದು ತಿಳಿಯಬೇಕು. "अहमात्मोद्धवामीषां भूतानां सुहृदीश्वरः। अहं सर्वाणि भूतानि तेषां स्थित्युद्भवाप्ययः" भाग० ११-१६।

ಮುಮುಕ್ಷುಗಳು ತಿಳಿಯಬೇಕಾಗಿರುವ ಅಕ್ಷರನೂ ಜಗತ್ತಿಗೆ ಶ್ರೇಷ್ಠನಾದ ಆಧಾರನೂ ಅವ್ಯಯನೂ ಶಾಶ್ವತವಾದ ಧರ್ಮಗಳನ್ನು ಕಾಪಾಡುವವನೂ ಸನಾತನನಾದ ಪುರುಷನೂ ಆದವನು ಶ್ರೀಮನ್ನಾರಾಯಣನು. "त्वमक्षरं परमं वेदितव्यं त्वमस्य विश्वस्य परं निधानम्। त्वमव्ययः शाश्वतधर्मगोप्ता सनातनस्त्वं पुरुषो मतो मे" गीता ११-१८।

ಪರಮಾತ್ಮನು ಅಚಿಂತ್ಯಸ್ವರೂಪನು. ಅವನ ಮಹಿಮೆಯು ಇಷ್ಟೇ ಎಂದು ಹೇಳಲು ಯಾರಿಂದಲೂ ಸಾಧ್ಯವಿಲ್ಲ. ಸರ್ವಜ್ಞನಾದ ಪರಮಾತ್ಮನಿಗೂ ತನ್ನ ಮಹಿಮೆಯನ್ನು ಲೆಕ್ಕಹಾಕಿ ಎಣಿಸಲು ಸಾಧ್ಯವಿಲ್ಲ. "यतो वाचो निवर्तन्ते। अप्राप्य मनसा सह" श्रुतिः। "संख्यानं परमाणूनां कालेन क्रियते मया। न तथा मे विभूतीनां सृजतोऽण्डानि कोटिशः" भाग० ११-१६-३९।

ಸರ್ವಲೋಕಶರಣ್ಯನೂ ಆಶ್ರಿತವಾತ್ಸಲ್ಯೈಕಜಲಧಿಯೂ ಆದ ಶ್ರೀಮನ್ನಾರಾಯಣನು ಮೋಕ್ಷಪ್ರದನು ಮಾತ್ರವಲ್ಲದೆ ಅವನೇ ಶರಣ್ಯನೆಂದು ತಿಳಿದ ಅವನ ಭಕ್ತಕೋಟಿಗೆ ಆಯುಸ್ಸು ಆರೋಗ್ಯ ಐಶ್ವರ್ಯ ಮತ್ತು ಸಕಲ ಭೋಗಗಳನ್ನೂ ಅನುಗ್ರಹಿಸುವನು. "शरीरारोग्यमर्थांश्च भोगांश्चैवानुषङ्गिकान्। ददाति ध्यायतां नित्यमपवर्गप्रदो हरिः"।

ಅನನ್ತಕಲ್ಯಾಣಗುಣಗಣಪರಿಪೂರ್ಣನೂ ಅಚಿಂತ್ಯಸ್ವರೂಪನೂ ಅಚಿಂತ್ಯಮಹಿಮನೂ ಆದ ಪರವಾಸುದೇವನಾದ ಜಗತ್ಪ್ರಭು ಶ್ರೀಮನ್ನಾರಾಯಣನಿಗೆ ಪರಮವ್ಯೋಮವೆಂಬ ಶ್ರೀವೈಕುಂಠವೇ ಆವಾಸಸ್ಥಾನ. ಅಲ್ಲಿ ಶ್ರೀಮಹಾಲಕ್ಷ್ಮೀಸಮೇತನಾಗಿ ಶೇಷಶಾಯಿಯಾಗಿ ಅನನ್ತ ಗರುಡ ವಿಷ್ವಕ್ಸೇನಾದಿ ನಿತ್ಯಮುಕ್ತರಿಂದಲೂ ಪರಮಭಕ್ತರಾದ ಭಾಗವತೋತ್ತಮರಿಂದಲೂ ಅನವರತವೂ ಸೇವಿಸಲ್ಪಡುತ್ತಿರುವನು. "वैकुण्ठे तु परे लोके श्रिया सार्धं जगत्पतिः। आस्ते विष्णुरचिन्त्यात्मा भक्तैर्भागवतैः सह"। "तया सहासीनमनन्तभोगिनि प्रकृष्टविज्ञानबलैकधामनि। फणामणिव्रातमयूखमण्डलप्रकाशमानोदरदिव्यधामनि" स्तो० र०।

ಧ್ಯಾನ ಶ್ಲೋಕ—"ध्येयः सदा सवितृमण्डलमध्यवर्ती नारायणः सरसिजासनसंनिविष्टः। केयूरवान् मकरकुण्डलवान् किरीटी हारी हिरण्मयवपुः धृतशङ्खचक्रः"। "सव्यं पादं प्रसार्यं श्रितदुरितहरं दक्षिणं कुञ्चयित्वा जानुन्याधाय सव्येतरमितरभुजं नागभोगे निधाय। पद्माद्याद्यैरुपेतैः प्रतिभटशमने धारयन् शङ्खचक्रे देवीभूषादिजुष्टो जनयतु जगतां शर्म वैकुण्ठनाथः"।

"शान्ताकारं भुजगशयनं पद्मनाभं सुरेशं विश्वाकारं गगनसदृशं मेघवर्णं शुभाङ्गम्। लक्ष्मीकान्तं कमलनयनं योगिभिर्ध्यानगम्यं वन्दे विष्णुं भवभयहरं सर्वलोकैकनाथम्"॥

"मेघश्यामं पीतकौशेयवासं श्रीवत्साङ्कं कौस्तुभोद्भासिताङ्गम्। पुण्योपेतं पुण्डरीकायताक्षं विष्णुं वन्दे सर्वलोकैकनाथम्"।

नारायणक्षेत्र **ನಾರಾಯಣಕ್ಷೇತ್ರ** (न०) ಗಂಗಾತೀರದಲ್ಲಿರುವ ಒಂದು ಕ್ಷೇತ್ರ. ಗಂಗಾಪ್ರವಾಹಕ್ಕೆ ಸಮೀಪದಲ್ಲಿ ನಾಲ್ಕು ಹಸ್ತ ಪ್ರಮಾಣದ ದೂರದವರೆಗೂ ಇರುವ ಪ್ರದೇಶವು ನಾರಾಯಣಕ್ಷೇತ್ರ. "प्रवाहमवधिं कृत्वा यावद्धस्तचतुष्टयम। तत्र नारायणःस्वामी नान्यः स्वामी कथञ्चन" ब्रह्मपु०।

नारायणी **ನಾರಾಯಣೀ** (स्त्री०) 1. ನಾರಾಯಣನ ಶಕ್ತಿ. नारायणस्येयम् "अण्" (४-३-१२०)। "यशसा तेजसा रूपेर्नारायणसमा गुणैः। शक्तिर्नारायणस्येयं तेन नारायणी स्मृता" ब्रह्मवै०। 2. ಲಕ್ಷ್ಮಿ. "नारायणार्धाङ्गभूता तेन तुल्या च तेजसा। तथा तस्य शरीरस्था तेन नारायणी स्मृता"। 3. ದುರ್ಗಾದೇವಿ. 4. ಶತಾವರೀ ಗಿಡ. "ऋष्यप्रोक्ताभीरुपत्रीनारायण्यः शतावरी" अम०।

नारायणीय **ನಾರಾಯಣೀಯ** (वि०) 1. ನಾರಾಯಣ ಸಂಬಂಧವಾದ. 2. ನಾರದ ಮತ್ತು ನಾರಾಯಣಋಷಿಗಳ ಸಂವಾದ ರೂಪವಾದ ಒಂದು ಉಪಾಖ್ಯಾನ. "नारदस्य च संवादमृषेर्नारायणस्य च। नारायणीयमाख्यानमेतत्ते कथितं तव" भा० शान्ति०। 3. ಒಂದು ಉಪನಿಷತ್ತು. ಈ ನಾರಾಯಣೋಪನಿಷತ್ತು ಕೃಷ್ಣಯಜುರ್ವೇದಾನ್ತರ್ಗತವಾದ ಮೂವತ್ತೆರಡು (32) ಉಪನಿಷತ್ತುಗಳಲ್ಲೊಂದು.

नारिकेल **ನಾರಿಕೇಲ** (पुं०) 1. ತೆಂಗಿನಮರ. किल (श्वैत्ये क्रीडने च) भावे "घञ्" (३-३-१८)। नार्याः वनितायाः केल इव केलो यस्य पृषो०। (न०) 2. ತೆಂಗಿನಕಾಯಿ.

नारिकेलक्षीरी **ನಾರಿಕೇಲಕ್ಷೀರಿ** (स्त्री०) ಕಲ್ಲುಸಕ್ಕರೆ ಮತ್ತು ಹಸುವಿನ ತುಪ್ಪ ಕಲಸಿದ ತೆಂಗಿನಕಾಯಿನ ತುರಿಯನ್ನು ಹಸುವಿನ ಹಾಲಿನಲ್ಲಿ ಪಕ್ವಮಾಡಿದ ಒಂದು

नारिकेलपाक. "नारिकेलं तनूकृत्य क्षिप्तं पयसि गोः क्षिपेत्। सितागव्याज्यसंयुक्तं तत्पचेन्मृदुनाग्निना"। **ಇದರ ಗುಣ:** ಶೀತಕರ, ಪುಷ್ಟಿಕರ, ಮಧುರವಾದುದು, ವೀರ್ಯವನ್ನು ಹೆಚ್ಚಿಸುವುದು, ರಕ್ತಪಿತ್ತವಾಯುಹರವಾದುದು. "नारिकेलोद्भवा क्षीरी स्निग्धा शीतातिपुष्टिदा। गुर्वी सुमधुरा वृष्या रक्तपित्तानिलापहा" भावप्र०। "ते नारिकेलान्तरपः पिबन्तः" माघ० ३-८१।

नारी ನಾರೀ (स्त्री०) 1. ಮನುಷ್ಯಜಾತಿಯ ಹೆಂಗಸು. नृ अथवा नर जाति० "ङीन्" (ग० ५४, ४-१-७३)। वृद्धिश्च। "नारीभिर्गुरुजघनस्थलाहतानामास्यश्रीविजितविकासिवारिजानाम्" माघ० ८-४७। (1) पद्मिनी, (2) चित्रिणी, (3) शङ्खिनी ಮತ್ತು (4) हस्तिनी ಎಂದು ನಾಲ್ಕು ಜಾತಿಯ ಹೆಂಗಸರಿರುವರು. "पद्मिनी चित्रिणी चैव शङ्खिनी हस्तिनी तथा। चतस्रो जातयो नार्या रतौ ज्ञेया विशेषतः" रसमं०। ಇವರಲ್ಲದೆ (1) साध्वी, (2) भोग्या ಮತ್ತು (3) कुलटा ಎಂದು ಹೆಂಗಸು ಮತ್ತೆ ಮೂರು ವಿಧ. "योषितस्त्रिविधा ब्रह्मन् गृहिणां मूढचेतसाम्। साध्वी भोग्या च कुलटा ताः सर्वाः स्वार्थतत्पराः" ब्रह्मवै०।

(1) ಪರಲೋಕಭಯದಿಂದಲೂ ಯಶಸ್ಸಿಗಾಗಿಯೂ ಕಾಮದ ಸ್ನೇಹದಿಂದಲೂ ನಿರಂತರವೂ ಪತಿಯ ಸೇವೆಯನ್ನು ಮಾಡುವ ಹೆಂಗಸು "**ಸಾಧ್ವಿ**".

(2) ಯಾವಾಗಲೂ ಭೋಗವನ್ನು ಅಪೇಕ್ಷಿಸುತ್ತ ಪತಿಸೇವೆಯನ್ನು ಮಾಡುವವಳೂ ಅಲಂಕಾರ ಮತ್ತು ರಸಭೋಜನ ದೊರಕುವವರೆಗೆ ಮಾತ್ರ ಪತಿಗೆ ಅಧೀನಳಾಗಿರುವವಳೂ ಆದ ಹೆಂಗಸು "**ಭೋಗ್ಯಳು**".

(3) ಕಪಟದಿಂದ ಪತಿಯ ಸೇವೆಯನ್ನು ಮಾಡುತ್ತ ಯಾವಾಗಲೂ ಕಾಮುಕಳಾಗಿ ಪರಪುರುಷನನ್ನೇ ಹುಡುಕುತ್ತ ಹೊಸ ಹೊಸ ಜಾರಪುರುಷನನ್ನು ಅಪೇಕ್ಷಿಸುತ್ತ ಈ ಕಾರ್ಯಕ್ಕಾಗಿ ಮನೆಮನೆಗೂ ಅಲೆದಾಡುತ್ತ ಇರುವ ಹೆಂಗಸು "**ಕುಲಟೆ**" (स्त्रैरिणी). 2. ಮೂರು ಗುರುವರ್ಣಗಳುಳ್ಳ ಛಂದಸ್ಸಿನ ಒಂದು ವೃತ್ತ. "मो नारी" वृ० र०।

नारीकवच ನಾರೀಕವಚ (पुं०) ಸೂರ್ಯವಂಶದ ಅಶ್ಮಕ ರಾಜನ ಮಗನಾದ ಮೂಲಕನೆಂಬ ಒಬ್ಬ ದೊರೆ. "अश्मकान्मूलको जज्ञे यः स्त्रीभिः परिरक्षितः। नारीकवच इत्युक्तो निःक्षत्रे मूलकोऽभवत्" भाग० ९-९-४०। ಕ್ಷತ್ರಿಯ ನಿರ್ಮೂಲನಕ್ಕಾಗಿ ಹೊರಟಿದ್ದ ಪರಶುರಾಮನಿಗೆ ಹೆದರಿ ಈ ರಾಜನು ಸ್ತ್ರೀವೇಷ ಧರಿಸಿ ಸ್ತ್ರೀಯರ ಮಧ್ಯೆ ಸೇರಿಕೊಂಡು ಅವರಿಂದ ರಕ್ಷಿಸಲ್ಪಟ್ಟವನಾದುದರಿಂದ ಇವನಿಗೆ ನಾರೀಕವಚನೆಂದು ಹೆಸರಾಯಿತು. ಸೂರ್ಯವಂಶದ ಮುಂದಿನ ಅಭಿವೃದ್ಧಿಗೆ ಇವನೇ ಕಾರಣನಾದುದರಿಂದ ಇವನಿಗೆ "ಮೂಲಕ" ಎಂದೂ ಹೆಸರಾಯಿತು.

नारीकेल ನಾರೀಕೇಲ (पुं०) ತೆಂಗಿನಮರ. नारिकेल—पृषो०।

नारीतरङ्गक ನಾರೀತರಂಗಕ (पुं०) ಕಾಮುಕ, ಸ್ತ್ರೀಲೋಲ, ಜಾರ. नारीं तरङ्गयति—तरङ्ग + णिच् "ण्वुल्" (३-१-१३३)। ಹೆಂಗಸರ ಮನಸ್ಸನ್ನು ಚಂಚಲಗೊಳಿಸುವುದರಿಂದ ಜಾರನಿಗೆ ಈ ಹೆಸರು.

नारीदूषण ನಾರೀದೂಷಣ (न०) ಹೆಂಗಸರ ಚಾರಿತ್ರ್ಯವನ್ನು ಕೆಡಿಸುವ ಪಾಪಕಾರ್ಯ. ಮದ್ಯಪಾನ, ದುರ್ಜನರ ಸಹವಾಸ, ಪತಿಯನ್ನು ಅಗಲಿ ದೂರದಲ್ಲಿರುವಿಕೆ, ಮನೆಯಲ್ಲಿ ನಿಲ್ಲದೆ ಹೊರಗೇ ಅಲೆಯುತ್ತಿರುವುದು, ಅಕಾಲದಲ್ಲಿ ಮಲಗಿ ನಿದ್ರಿಸುವುದು ಮತ್ತು ಪರಗೃಹವಾಸ ಇವು ಆರೂ ಹೆಂಗಸರಿಗೆ ವ್ಯಭಿಚಾರದೋಷಗಳನ್ನು ಉಂಟು ಮಾಡುವುವು. "पानं दुर्जनसंसर्गः पत्या च विरहोऽटनम्। स्वप्नोऽन्यगेहवासश्च नारीसंदूषणानि षट्" मनु० ९-१३।

नारीनाथ ನಾರೀನಾಥ (वि०) ಹೆಂಗಸೇ ಒಡೆಯಳಾಗಿಉಳ್ಳ. नारी नाथः यस्य। "क्वचिदपि गृहं नारीनाथं निरीक्ष्य विवर्जितम्" मृच्छ० ४-३।

नारीमय ನಾರೀಮಯ (वि०) ಸ್ತ್ರೀಯರಿಂದ ತುಂಬಿದ, ಕೇವಲ ಹೆಂಗಸಿನಿಂದ ಕೂಡಿದ.

नारीरत्न ನಾರೀರತ್ನ (न०) ಉತ್ತಮ ಹೆಂಗಸು, ಶ್ರೇಷ್ಠಳಾದ ಹೆಂಗಸು.

नारीष्ट ನಾರೀಷ್ಟ (वि०) 1. ಹೆಂಗಸರಿಗೆ ಪ್ರಿಯವಾದ, ಸ್ತ್ರೀಯರ ಪ್ರೀತಿಗೆ ಪಾತ್ರವಾದ. (स्त्री०) **–ष्टा –ष्टी**. 2. ಮಲ್ಲಿಗೆ ಹೂವು.

नारीष्ठ ನಾರೀಷ್ಠ (वि०) ಹೆಂಗಸರಲ್ಲೇ ಆಸಕ್ತಿ ತೋರುವ, ಸ್ತ್ರೀಲೋಲನಾದ, ಸ್ತ್ರೀಯರನ್ನೇ ಪ್ರೀತಿಸುವ.

नारेय ನಾರೇಯ (पुं०) ಸತ್ಯಾಜಿತ್ತಿನ ಮೊಮ್ಮಗ.

नार्यङ्ग ನಾರ್ಯಂಗ (पुं०) 1. ನಾಗರಂಗ ವೃಕ್ಷ, ಹೇರಳೆಗಿಡ. (न०) 2. ಹೆಂಗಸರ ಅವಯವ.

नाल ನಾಲ (न०) 1. ತಾವರೆ ಮೊದಲಾದುವುಗಳ ದಂಡ, ತಾವರೆ ಮೊದಲಾದ ಹೂವುಗಳ ಕಾವು, ವೃಂತ, ತೊಟ್ಟು. नलति—णल (बन्धे) "णः" (३-१-१०९)। "कञ्चित्

कराभ्यामुपगूढनालमालोलपत्राभिहतद्विरेफम्" रघु० ६-१३। "हेमैश्छन्ना विकचकमलैः स्निग्धवैडूर्यनालैः" मेघ० २-१३। 2. ಹರಿದಳ. (स्त्री०) -ला -ली. 3. ಕೊಳಾಯಿ, ಕೊಳವೆ, ದ್ರವವಸ್ತುವು ಪ್ರವಹಿಸಲು ಕೂಲಿಸುವಂತೆ ಒಳಗೆ ರಂಧ್ರವಿರುವ ಲೋಹ ಮೊದಲಾದುವುಗಳ ನಳಿಕೆ. "यथा तोयाग्निनस्तोयं यन्त्रनालादिभिः शनैः। आपिबेयुस्तथा वायुं पिबेद्योगी जितश्रमः"। नलति जलादिः निर्गच्छत्यनया —नल कर० "घञ्"। 4. ತಾವರೆ ಮೊದಲಾದುವುಗಳ ದಂಟು. "स्वर्गापगाहेम-मृणालिनीनां नालामृणालाग्रभुजो भवामः" नैष० ३-१७। 5. ಹೊಕ್ಕಳು ಕುಡಿ. -ली -ली. 6. ಒಳಗೆ ಪೊಳ್ಳಾಗಿರುವ ಗಿಡಗಳ ದಂಟು. 7. ತರಕಾರಿಯ ಕಾವು. 8. ಆನೆಯ ಕಿವಿಯನ್ನು ಚುಚ್ಚುವ ಒಂದು ಆಯುಧ. 9. ಒಂದು ಪಳಿಗೆ. 10. ಕಮಲ, ಪದ್ಮ. 11. ಕೊಳಾಯಿ. 12. ಕೊಳಲು ವಾದ್ಯ. "नालं काण्डे मृणाले च नाली शाककलम्बयोः" हेम०। "नाला न ना पद्मदण्डे नाली शाककलम्बके" मेदि०।

नालायनी नालायनी(स्त्री०) ಮೌದ್ಗಲ್ಯ ಮಹರ್ಷಿಯ ಪತ್ನಿ. ಇದು ದ್ರೌಪದಿಯ ಹಿಂದಿನ ಜನ್ಮದ ಹೆಸರು. ಇವಳಿಗೆ ಇಂದ್ರಸೇನೆಯೆಂದೂ ಹೆಸರು. ನಾಲಾಯನಿಯು ಮೌದ್ಗಲ್ಯ ಋಷಿಯನ್ನು ಪತಿಯನ್ನಾಗಿ ಹೊಂದಿ ಬಹಳ ಭಕ್ತಿಯಿಂದ ಅವನ ಶುಶ್ರೂಷೆ ಮಾಡುತ್ತಿದ್ದಳು. ಕುಷ್ಠ ರೋಗಿಯಾಗಿದ್ದು ದುರ್ಗಂಧ ಶರೀರವುಳ್ಳವನೂ ಕ್ರೂರನೂ ಬಹಳ ಕೋಪ ಸ್ವಭಾವದವನೂ ವಿಕಾರ ರೂಪವುಳ್ಳವನೂ ಆದ ತನ್ನನ್ನು ಪ್ರೀತಿಸಿ ಭಕ್ತಿಯಿಂದ ಮಾಡಿದ ಶುಶ್ರೂಷೆಯಿಂದ ಸುಪ್ರೀತನಾದ ಋಷಿಯು ಇವಳ ಅಪೇಕ್ಷೆಯಂತೆ ಐದು ಸುಂದರವಾದ ದೇಹಗಳನ್ನು ಧರಿಸಿ ಬಹಳಕಾಲ ಇವಳೊಡನೆ ಕ್ರೀಡಿಸುತ್ತ ಇದ್ದನು. ಕೊನೆಗೆ ಋಷಿಯು ಇದರಿಂದ ವೈರಾಗ್ಯ ಹೊಂದಿ ಇವಳನ್ನು ತ್ಯಜಿಸಿ ತಪಸ್ಸಿಗೆ ಹೊರಡಲಾಗಿ ತನ್ನನ್ನು ಬಿಟ್ಟು ಹೋಗಕೂಡದೆಂದು ಕೇಳಿ ಕೊಂಡಳು. ನನ್ನ ತಪಸ್ಸಿಗೆ ವಿಘ್ನವುಂಟುಮಾಡುತ್ತಿರುವುದರಿಂದ "ನೀನು ಭೂಲೋಕದಲ್ಲಿ ಪಾಂಚಾಲರಾಜನ ಪುತ್ರಿಯಾಗಿ ಜನಿಸಿ ಐವರು ಪತಿಗಳೊಡನೆ ಸೌಖ್ಯವನ್ನನುಭವಿಸುವೆ" ಎಂದು ಹೇಳಿದನು. ಆಗ ನಾಲಾಯನಿಯು ಮೌದ್ಗಲ್ಯನೊಡನೆ ಅನುಭವಿಸಿದ ಕಾಮಸೌಖ್ಯದಿಂದ ತೃಪ್ತಿ ಹೊಂದದೆ ಪರಮೇಶ್ವರನನ್ನು ತಪಸ್ಸಿನಿಂದ ಸಂತೋಷಗೊಳಿಸಿ "पतिं देहि पतिं देहि" ಎಂದು ಐದು ಸಲ ಪರಮೇಶ್ವರನನ್ನು ಪ್ರಾರ್ಥಿಸಲಾಗಿ ಮುಂದಿನ ಜನ್ಮದಲ್ಲಿ ಐವರು ಪತಿಗಳೊಡನೆ ಕೂಡಿ ಸುಖ ಸಂತೋಷಗಳನ್ನನುಭವಿಸುವಂತೆ ಶಿವನು ವರವನ್ನಿತ್ತನು. ಇವಳೇ ಮರುಜನ್ಮದಲ್ಲಿ ದ್ರುಪದನ ಯಾಗಕುಂಡದಲ್ಲಿ ದ್ರೌಪದಿಯಾಗಿ ಜನಿಸಿದಳು. ["पञ्चेन्द्रोपाख्यान" ಪದದಲ್ಲಿ ನೋಡಿ] "इन्द्रसेनेति विख्याता पुरा नालायनी शुभा। मौद्गल्यं पतिमासाद्य चचार विगतज्वरा। मौद्गल्यस्य महर्षेश्च रममाणस्य वै तया। संवत्सरगणा राजन् व्यतीयुः क्षणवत्तदा। ततः कदाचिद्धर्मात्मा तृप्तः कामैर्व्यरज्यत। उत्ससर्ज स तां विप्रः सा तदा चापतद्भुवि।

नालायन्युवाच —प्रसीद भगवन्मह्यं न मामुत्स्रष्टुमर्हसि। अवितृप्तास्मि ब्रह्मर्षे कामानां कामसेवनात्।

मौद्गल्यः —"यस्मात्त्वं मामनिःशङ्का ह्यवक्तव्यं प्रभाषसे। आचरन्ती तपोविघ्नं तस्माच्छृणु वचो मम। भविष्यसि नृलोके त्वं राजपुत्री यशस्विनी। पञ्चालराजस्य सुता द्रुपदस्य महात्मनः। भवितारस्तत्र तव पतयः पञ्च विश्रुताः। तैः सार्धं मधुराकारैश्चिरं रतिमवाप्स्यसि। सैवं शप्ता तु विमना वनं प्रागाद्यशस्विनी। भोगैरतृप्ता देवेशं तपसाराधयत्तदा। तीव्रेण तपसा तस्यास्तुष्टः पशुपतिः स्वयम्। वरं प्रादात्तदा रुद्रः सर्वलोकेश्वरः प्रभुः। भविष्यति परं जन्म भविष्यसि वराङ्गना। भविष्यन्ति परं भद्रे पतयः पञ्च विश्रुताः। पञ्चकृत्वस्त्वया चोक्तः पतिं देहीत्यहं पुनः। पञ्च ते पतयो भद्रे भविष्यन्ति सुखावहाः" भा० आदि० २१३।

नालि नालि (स्त्री०) ನಾಡಿ, ಸಿರೆ, ಧಮನಿ. नालयति—णल (बन्धे) + णिच् "इन्" (उ० ४-११७)।

नालिक नालिक (पुं०) 1. ಪದ್ಮ, ಕಮಲ, ತಾವರೆ. नाल-मस्त्यस्य "ठन्" (५-२-११५)। 2. ಮಹಿಷ, ಎಮ್ಮೆ. नल एव नालः तृणविशेषः, स भोक्तव्यत्वेनास्त्यस्य "ठन्" (५-२-११५)। (न०) 3. ಒಂದು ವಿಧ ಅಸ್ತ್ರ, ಬಂದೂಕ. नालः साधनत्वेनास्त्यस्य "ठन्" (५-२-११५)। ಅಸ್ತ್ರವು मान्त्रिकम् (ಮಾಂತ್ರಿಕ) ಮತ್ತು नालिकम् (ನಾಲಿಕ) ಎಂದು ಎರಡು ವಿಧ. "अस्त्रं तु द्विविधं ज्ञेयं नालिकं मान्त्रिकं तथा। यदा तु मान्त्रिकं नास्ति नालिकं तत्र धारयेत्" शुक्रनी०। ಮಂತ್ರದಿಂದ ಪ್ರಯೋಜ್ಯವಾದ ಅಸ್ತ್ರವು ಮಾಂತ್ರಿಕ. ನಾಲಗಳಲ್ಲಿ ಮದ್ದು ಹೂಡಿ ಪ್ರಯೋಗಿಸುವ ಅಸ್ತ್ರವು ನಾಲಿಕ. ನಾಲಿಕಾಸ್ತ್ರವು ಬೃಹನ್ನಾಲಿಕ ಕ್ಷುದ್ರ ನಾಲಿಕಗಳೆಂದು ಎರಡು ವಿಧ. ಫಿರಂಗಿಯು ಬೃಹನ್ನಾಲಿಕ ವೆನಿಸುವುದು. ಬಂದೂಕ ಮೊದಲಾದುವು ಕ್ಷುದ್ರನಾಲಿಕ ವೆನಿಸುವುವು. "नालिकं द्विविधं ज्ञेयं बृहत्क्षुद्रप्रभेदतः"।

नालिका नालिका (स्त्री०) 1. ಆನೆಯ ಕಿವಿಯನ್ನು ಚುಚ್ಚುವ ಒಂದು ಆಯುಧ. "गजाः सक्तात्करतललोल-नालिकाहताः" माघ० १७-३५। 2. ಕೊಳಲು ವಾದ್ಯ. 3. ತಾವರೆ ಹೂವಿನ ಕಾವು. 4. ಒಂದು ಘಳಿಗೆ.

नालिकेर नालिकेर (पुं०) 1. ತೆಂಗಿನಮರ. नारिकेलः रलयोरभेदः। 2. ಒಂದು ದೇಶ. ಈ ದೇಶವು ಮಧ್ಯ ದೇಶಕ್ಕೆ ಆಗ್ನೇಯ ದಿಕ್ಕಿನಲ್ಲಿರುವುದು.

नालिकेल नालिकेल (पुं०) ತೆಂಗಿನಮರ. नालिकेर—पृषो० रस्य लः।

नालिजङ्घ नालिजंघ (पुं०) ಒಂದು ಬಕಪಕ್ಷಿ.

नाली नाली (स्त्री०) 1. ತರಕಾರಿಯ ಕಾವು, ತಿನ್ನಲು ಯೋಗ್ಯವಾದ ತರಕಾರಿಯ ತೊಟ್ಟು. 2. ಆನೆಯ ಕಿವಿಯನ್ನು ಚುಚ್ಚುವ ಒಂದು ಆಯುಧ. 3. ಪದ್ಮ, ಕಮಲ. 4. ತಾವರೆಯ ದಂಟು. 5. ಕೊಳವೆ, ಕೊಳಾಯಿ. 6. ಕಹಳೆ ವಾದ್ಯ. 7. ಒಂದು ಘಳಿಗೆ. 8. ನಾಡಿ, ಸಿರೆ.

नालीक नालीक (पुं०) 1. ಹಗುರವಾಗಿ ಎಸೆಯುವಂತಹ ಈಟಿ. 2. ಬಾಣ. 3. ಪದ್ಮ, ಕಮಲ. 4. ಎಳೆಯ ತಂತುಗಳಿಂದ ಕೂಡಿದ ತಾವರೆ ಹೂವಿನ ಕಾವು,—ವ್ಯಂತ, (न०) 5. ಕಮಲಗಳ ಸಮೂಹ. (वि०) 6. ಸತ್ಯವಾದ, ನಿಜವಾದ. "तन्नालीकनले चलेतरमनाः साम्यान्मना-गप्यभूत्" नैष० १२-१११।

नालीकिनी नालीकिनी (स्त्री०) ಕಮಲಗಳಿಂದ ಕೂಡಿದ ಪ್ರದೇಶ, ಸರೋವರ. नालीक "इनिः" (५-२-१३५)।

नाविमिक नाविमिक (वि०) ಒಂಬತ್ತನೆಯ.

नाविक नाविक (पुं०) 1. ಕರ್ಣಧಾರ, ಹಡಗನ್ನು ನಡೆಯಿಸುವವನು. नावा तरति—नौ "ठन्" (४-४-७)। "महावातसमुद्धूतामपरीक्षितनाविकाम्। अन्यनौप्रतिबद्धां वा नोपेयान्नावमातुराम्" कामन्द०। 2. ಸಮುದ್ರದಲ್ಲಿ ಸಂಚಾರ ಮಾಡುವವನು.

नावोपजीवन नावोपजीवन (पुं०) ಹಡಗನ್ನು ನಡೆಯಿಸಿ ಜೀವನಮಾಡುವವನು. नावा उपजीवनमस्य। "निषादो मद्गुरं सूते दासं नावोपजीवनम्" भा० अनु० ८३-२१।

नाव्य नाव्य (वि०) 1. ಹಡಗಿನಿಂದ ಹೋಗಿ ಸೇರಬೇಕಾದ ದೇಶ. नावा तार्यम् "यत्" (४-४-९१)। 2. ಹಡಗಿನಿಂದ ದಾಟಬಹುದಾದ ನದಿ. "मरुपृष्ठान्युदम्भांसि नाव्याः सुप्रतरा नदीः" रघु० ४-३१। (न०) 3. ಹೊಸದಾಗಿರುವಿಕೆ. नवस्य भावः "ष्यञ्" (५-१-१२४)।

नाश नाश (पुं०) 1. ಅದರ್ಶನ, ಮರೆಯಾಗುವುದು, ಕಾಣಿಸದಿರುವುದು. णश (अदर्शने) भावे "घञ्" (३-३-१८)। "गता नाशं तारा उपकृतमसाधाविव जने वियुक्ताः कान्तेन स्त्रिय इव न राजन्ति ककुभः" मृच्छ० ५-२५। 2. ನಿಧನ, ಮರಣ. "अविदित्वाऽऽत्मनः शक्तिं परस्य च समुत्सुकः। गच्छन्नभिमुखो नाशं याति वह्नौ पतङ्गवत्" पञ्चतं० १-३५४। 3. ಧ್ವಂಸ, ಅಳಿವು. "कृत्रिमं नाशमभ्येति वैरं द्राक् कृत्रिमैर्गुणैः" पञ्चतं० २-३३। "क्रोधाद्भवति संमोहः संमोहात्स्मृतिविभ्रमः। स्मृतिभ्रंशाद्बुद्धिनाशः बुद्धिनाशात्प्रणश्यति" गीता २-६३। "दानं भोगो नाशस्तिस्रो गतयो भवन्ति वित्तस्य"। 4. ಪಲಾಯನ, ಓಡಿಹೋಗುವುದು. 5. ಅನುಪಲಂಭ, ಇಂದ್ರಿಯಗಳಿಂದ ತಿಳಿಯಲ್ಪಡದಿರುವುದು. "नाशः पलायनेऽपि स्यान्निधनानुपलम्भयोः" मेदि०। 6. (ಗಣಿತದಲ್ಲಿ) ಸಮಾಂಕಗಳನ್ನು ತೆಗೆದುಬಿಡುವುದು, ಪರಿಗಣಿಸದಿರುವುದು.

नाशक नाशक (वि०) ಧ್ವಂಸಮಾಡುವ, ಹಾಳುಮಾಡುವ, ನಾಶಪಡಿಸುವ. णश (अदर्शने) + णिच् "ण्वुल्" (३-१-१३३)। "ये परस्वापहर्तारः परस्वानां च नाशकाः" भा० अनु०।

नाशन नाशन (वि०) 1. ನಾಶಪಡಿಸುವ, ಧ್ವಂಸಮಾಡುವ, ಹಾಳುಮಾಡುವ. णश (अदर्शने) + णिच् "ल्युः" (३-१-१३४)। "त्रिविधं नरकस्येदं द्वारं नाशनमात्मनः" गीता १६-२१। (न०) 2. ನಾಶಪಡಿಸುವುದು, ಧ್ವಂಸಮಾಡುವುದು. णश + णिच् "ल्युट्" (३-३-११५)।

नाशनीय नाशनीय (वि०) 1. ನಾಶಪಡಿಸಲು ಅರ್ಹವಾದ. 2. ನಾಶಪಡಿಸಬೇಕಾದ. 3. ನಾಶಪಡಿಸಲು ಶಕ್ಯವಾದ. 4. ನಾಶಪಡಿಸಲ್ಪಡುವ. णश (अदर्शने) + णिच् "अनीयर्" (३-१-९६)। "तव्यः" (३-१-९६)। **–यितव्यः –यितव्यः.**

नाशयत् नाशयत् (वि०) ನಾಶಪಡಿಸುತ್ತಿರುವ, ಹಾಳುಮಾಡುತ್ತಿರುವ. णश (अदर्शने) + णिच् "शतृ" (३-२-१२४)। स्त्रियां "ङीप्" (४-१-६)। **–यन्ती –यन्ती.**

नाशयितृ नाशयितृ (वि०) ನಾಶಪಡಿಸುವ. णश (अदर्शने) + णिच् "तृच्" (३-१-१३३)। स्त्रियां "ङीप्" (४-१-५)। **–यित्री –यित्री.**

नाशित ನಾಶಿತ (वि०) 1. ನಾಶಪಡಿಸಲ್ಪಟ್ಟ, ಅಳಿಸಲ್ಪಟ್ಟ, ಇಲ್ಲದಂತೆ ಮಾಡಲ್ಪಟ್ಟ. णश (अदर्शने) + णिच् "क्तः" (३-२-१०२)। (न०) 2. ನಾಶ, ಧ್ವಂಸ, ಅಳಿವು. णश भावे "क्तः" (३-३-११४)।

नाशितवत् ನಾಶಿತವತ್ (वि०) ನಾಶಪಡಿಸಿದವನು. णश (अदर्शने) + णिच् "क्तवतुः" (३-२-१०२)।

नाशिन् ನಾಶಿನ್ (वि०) ನಾಶಹೊಂದುವ, ಅಳಿದು ಹೋಗುವ. णश (अदर्शने) "णिनिः" (३-१-१३४)। "अनाशिनोऽप्रमेयस्य तस्माद्युद्धयस्व भारत" गीता २-१८।

नाश्य ನಾಶ್ಯ (वि०) 1. ನಾಶಪಡಿಸಲ್ಪಡುವ. णश (अदर्शने) "ण्यत्" (३-१-१२४)। 2. ನಾಶಪಡಿಸಲು ಅರ್ಹವಾದ.

नाष्टिक ನಾಷ್ಟಿಕ (वि०) ನಷ್ಟವಾದ ವಸ್ತುವಿನ ಯಜಮಾನ, ಕಳೆದುಹೋದ ಪದಾರ್ಥದ ಒಡೆಯ, ನಷ್ಟವಾದ ವಸ್ತುವನ್ನು ಹೊಂದಲು ಅರ್ಹನಾದ ಒಡೆಯ. नष्टं द्रव्यमर्हति — "ठञ्" (५-१-६३)। "अथ मूलमनाहार्यं प्रकाशक्रयशोधितः। अदण्ड्यो मुच्यते राज्ञा नाष्टिको लभते धनम्" मनु० ८-२०२।

नासत्य ನಾಸತ್ಯ (द्वि०) ಅಶ್ವಿನೀ ಕುಮಾರರು. न सत्यं ययोः असत्यौ, न असत्यौ नासत्यौ। नञः प्रकृतिभावः (६-३-७५)। ಹರಿವಂಶದಲ್ಲಿ नासत्यः, दस्रः ಎಂದು ಪ್ರತ್ಯೇಕವಾಗಿ ಇಬ್ಬರನ್ನು ಹೇಳಿರುವುದರಿಂದ ಏಕವಚನ ಪ್ರಯೋಗವೂ ಉಂಟು. ಇಬ್ಬರೂ ಸೇರಿ ಆಶ್ವಿನೇಯರಾದರು. "देवौ तस्यामजायेतामश्विनौ भिषजां वरौ। नासत्यश्चैव दस्रश्च स्मृतौ तावश्विनावुभौ" हरिवं०। "नोभाविलाभूः किमु दर्पकश्च भवन्ति नासत्ययुतौ भवन्तः" नैष० १०-४५। ಇಂದ್ರನು ಅಶ್ವಿನೀಕುಮಾರರ ಅದ್ಭುತ ಕಾರ್ಯಗಳನ್ನು ನೋಡಿ ಅವರಲ್ಲಿ ಆಯುರ್ವೇದವನ್ನು ಬೇಡಿದನು. ಇವರು ತಾವು ಅಧ್ಯಯನ ಮಾಡಿದ ಆಯುರ್ವೇದವನ್ನು ಇಂದ್ರನಿಗೆ ಹೇಳಿಕೊಟ್ಟರು. ಇಂದ್ರನು ಆತ್ರೇಯ ಮೊದಲಾದವರಿಗೆ ಆಯುರ್ವೇದವನ್ನು ಬೋಧಿಸಿದನು. "नासत्यौ सत्यसन्धेन शक्रेण किल याचितौ। आयुर्वेदं यथाधीतं ददतुः शतमन्यवे॥ नासत्याभ्यामधीत्येषः आयुर्वेदं शतक्रतुः। अध्यापयामास बहूनात्रेयप्रमुखान् मुनीन्" भावप्र०।

नासन्धि ನಾಸಂಧಿ (स्त्री०) ಸ್ತ್ರೀಯರ ಜನನೇಂದ್ರಿಯ, ಭಗ, ಯೋನಿ. "नासन्धिरधरोऽवाच्यदेशः" त्रिकाण्ड०।

नासा ನಾಸಾ (स्त्री०) 1. ನಾಸಿಕ, ಮೂಗು. नासतेऽनया—णासृ (शब्दे) "घञ्" (३-३-१२१)। "नासादसीया तिलपुष्पतूणं जगत्त्रयव्यस्तशरत्रयस्य" नैष० ७-३६। 2. ದ್ವಾರದ ಮೇಲುಗಡೆಯ ಮರ. "नासा तु नासिकायां च द्वारोर्ध्वदारुणि स्त्रियाम्" मेदि०।

नासाग्र ನಾಸಾಗ್ರ (न०) ಮೂಗಿನ ತುದಿ. नासाया अग्रम्। ಘ್ರಾಣೇಂದ್ರಿಯವಿರುವ ಜಾಗ. "इन्द्रियं गन्धग्राहकं घ्राणम्। तच्च नासाग्रवर्ति" त० सं०।

नासाच्छिद्र ನಾಸಾಚ್ಛಿದ್ರ (न०) ಮೂಗಿನ ಹೊಳ್ಳೆ.

नासादारु ನಾಸಾದಾರು (न०) ದ್ವಾರದ ಮೇಲುಗಡೆ ಮುಂದಕ್ಕೆ ಚಾಚಿಕೊಂಡಿರುವ ಮರ. नासार्थं दारु।

नासानाह ನಾಸಾನಾಹ (पुं०) ಒಂದು ವಿಧ ಮೂಗಿನ ರೋಗ.

नासापुट ನಾಸಾಪುಟ (पुं०) ಮೂಗಿನ ಹೊಳ್ಳೆ.

नासारन्ध्र ನಾಸಾರಂಧ್ರ (न०) ಮೂಗಿನ ಹೊಳ್ಳೆ.

नासावंश ನಾಸಾವಂಶ (पुं०) ಮೂಗಿನ ದಿಂಡು, ಮೂಗಿನ ಮೇಲುಭಾಗದ ಅಸ್ಥಿ, ದೋಣಿಯಂತಿರುವ ಮೂಗಿನ ಮಧ್ಯಭಾಗ. नासा वंश इव।

नासाविरोक ನಾಸಾವಿರೋಕ (पुं०) ಮೂಗಿನ ರಂಧ್ರ, ಮೂಗಿನ ಹೊಳ್ಳೆ. नासाया विरोकः। "नासाविरोकपवनोल्लसितं तनीयो रोमाञ्चतामिव जगाम रजः पृथिव्याः" माघ० ५-५४।

नासाविवर ನಾಸಾವಿವರ (पुं०) ಮೂಗಿನ ಹೊಳ್ಳೆ, ಮೂಗಿನ ರಂಧ್ರ. नासाया विवरः।

नासावेध ನಾಸಾವೇಧ (पुं०) ಮೂಗು ಚುಚ್ಚಿ ರಂಧ್ರ ಮಾಡುವುದು, ಹೆಂಗಸರು ಮೂಗುತಿಯನ್ನು ಧರಿಸಲೂ ಎತ್ತುಗಳಿಗೆ ಮೂಗುದಾರ ಹಾಕುವುದಕ್ಕೂ ಮೂಗನ್ನು ಚುಚ್ಚುವುದು. नासाया वेधः।

नासिकन्धम ನಾಸಿಕಂಧಮ (वि०) ಮೂಗಿನಿಂದ ಊದುವವನು, ಮೂಗಿನಿಂದ ಊದಿ ಶಬ್ದವನ್ನು ಮಾಡುವವನು. नासिकां धमति — धमा (शब्दाग्निसंयोगयोः) "खश्" (३-२-२९)। ह्रस्वः (६-३-६६)। मुम् (६-३-६७)।

नासिकन्धय ನಾಸಿಕಂಧಯ (वि०) ಮೂಗಿನಿಂದ ಕುಡಿಯುವವನು. नासिकां धयति तत्स्थजलं पिबति — धेट् (पाने) "खश्" (३-२-२९)। ह्रस्वः (६-३-६६)। मुम् (६-३-६७)।

नासिका ನಾಸಿಕಾ (स्त्री०) 1. ಮೂಗು. 2. ಘ್ರಾಣೇಂದ್ರಿಯ. नासते शब्दायते — णासृ (शब्दे) "ण्वुल्" (३-१-१३३)। "श्रोत्रं त्वक् चक्षुषी जिह्वा नासिका चैव पञ्चमी। पायूपस्थं हस्तापादं वाक् चैव दशमी

स्मृता" मनु० २-९०। 3. ಅನಯ ಸೊಂಡಿಲು. 4. ದ್ವಾರದ ಮೇಲುಭಾಗದ ಮರ. 5. ಅಶ್ವಿನೀ ದೇವತೆ.

नासिकामल नासिकामल (न०) ಮೂಗಿನಿಂದ ಹೊರ ಡುವ ದೇಹದೊಳಗಿನ ಕಶ್ಮಲ, ಸಿಂಬಳ. नासिकाया मलम्।

नासिक्य नासिक्य (न०) 1. ಮೂಗು. नासिका स्वार्थे "ष्यञ्" (वा० ५-१-१२४)। (वि०) 2. ಮೂಗಿನ ಸಮೀಪದಲ್ಲಿರುವ. 3. ಮೂಗಿನಿಂದ ಉಂಟಾದ. नासिकाया अदूरभवम् नासिकया निर्वृत्तं वा "ण्यः" (४-२-८०)। 4. ಮೂಗಿನಲ್ಲಿರುವ. नासिकायां भवम् "यत्" (५-२-५५)। (पुं० द्विव०) 5. ಅಶ್ವಿನೀಕುಮಾರರು, ದೇವವೈದ್ಯರು. "नासिक्यौ युजौ दस्रौ गदागदौ" त्रिकाण्ड०।

नासीर नासीर (न०) 1. ಮುಂಭಾಗದಲ್ಲಿ ನಿಂತು ಹೋರಾಡುವ ಸೈನ್ಯ, ಸೇನಾಮುಖ. नासा शब्देन ईर्ते गच्छति — नास् + ईर (गतौ) "कः" (३-२-४)। "एतन्नासीर-वाजिव्रजखुरजरजोराजिराजिस्थलीषु" नैष० १२-७३। 2. ಅಗ್ರೇಸರ, ಮುಂದಾಳು. "नलस्य नासीरसृजां महीभुजां किरीटरत्नैः पुनरुक्तदीपया" नैष० १६-४।

नास्ति नास्ति (अव्य०) ಅಭಾವ, ಇಲ್ಲದಿರುವಿಕೆ. न अस्ति। नशब्देन समासः। अस्ति ಎಂಬುದು ಒಂದು ವಿಭಕ್ತಿ ಪ್ರತಿರೂಪಕ ಅವ್ಯಯ. न ಶಬ್ದದೊಡನೆ ಸಮಾಸ ಬಂದು "नास्ति" ರೂಪವಾಗಿರುವುದು. नास्तिक्षीरा। "अस्ति नास्ति न जानाति देहि देहि पुनः पुनः"।

नास्तिक नास्तिक (वि०) ಈಶ್ವರನೂ ಪರಲೋಕವೂ ಇಲ್ಲ ವೆಂಬ ಬುದ್ಧಿಯುಳ್ಳವನು. नास्ति परलोकः इति मतिर्यस्य "ठक्" (४-४-६०)। "योऽवमन्येत ते मूले हेतुशास्त्रा-श्रयाद्द्विजः। स साधुभिर्बहिष्कार्यो नास्तिको वेदनिन्दकः" मनु० २-११। ವೇದ ಅದೃಷ್ಟ ಈಶ್ವರ ಯಾವುದನ್ನೂ ನಂಬದಿರುವವರು ನಾಸ್ತಿಕರು. ಚಾರ್ವಾಕ ಮಾಧ್ಯಮಿಕ ಯೋಗಾಚಾರ ಸೌತ್ರಾಂತಿಕ ವೈಭಾಷಿಕ ದಿಗಂಬರ ಇವರು ನಾಸ್ತಿಕರು.

नास्तिकता नास्तिकता, -त्व -त्व. (स्त्री० न०) ಮಿಥ್ಯಾ ದೃಷ್ಟಿ, ವೇದ ಪರಲೋಕ ಈಶ್ವರ ಅದೃಷ್ಟ ಯಾವು ದನ್ನೂ ನಂಬದಿರುವುದು. नास्तिकस्य भावः "त्वतलौ" (५-१-११९)। ಪರಲೋಕವೂ ಈಶ್ವರನೂ ಇಲ್ಲವೆಂಬ ಜ್ಞಾನವು ಮಿಥ್ಯೆಯಾದುದರಿಂದ ನಾಸ್ತಿಕತೆಯು ಮಿಥ್ಯಾ ದೃಷ್ಟಿಯಾಯಿತು. ಕಾಮಕ್ರೋಧಗಳಿಂದ ಮನುಷ್ಯನ ಬುದ್ಧಿಯು ನಾಶವಾಗಿ ವಿವೇಕಶೂನ್ಯನಾಗುವನು. ಇದೇ ಮೋಹವು. ಇದರಿಂದ ಧರ್ಮಾರ್ಥಗಳ ನಾಶವಾಗುವುದು. ಇದರಿಂದ ನಾಸ್ತಿಕತೆಯುಂಟಾಗುವುದು. ಮನುಷ್ಯನಲ್ಲಿ ದುರಾಚಾರವೂ ಉಂಟಾಗುವುದು. "प्रज्ञानाशात्मको मोहः तथा धर्मार्थनाशकः। तस्मान्नास्तिकता चैव दुराचारश्च जायते" भा० शान्ति० १२३-१६।

नास्तिक्य नास्तिक्य (न०) ಈಶ್ವರ ಮತ್ತು ಪರಲೋಕ ಗಳನ್ನು ನಂಬದಿರುವುದು. नास्तिकस्य भावः "ष्यञ्" (५-१-१२४)। "नास्तिक्यं वेदनिन्दां च देवतानां च कुत्सनम्" मनु० ४-१६३।

नास्तिमूर्ति नास्तिमूर्ति (वि०) ಶರೀರವಿಲ್ಲದ, ದೇಹ ವಿಲ್ಲದ, ರೂಪವಿಲ್ಲದ. नास्ति मूर्तिर्यस्य। नास्तीत्यव्ययम् अभावेऽर्थे। "न मन्मथस्त्वं स हि नास्तिमूर्तिः न चाश्विनेयः स हि नाद्वितीयः" नैष० ८-२९।

नास्तिवाद नास्तिवाद (पुं०) ಇಲ್ಲವೆಂದು ಹೇಳುವುದು. ಪರಲೋಕ ಈಶ್ವರ ಯಾವುದೂ ಇಲ್ಲವೆಂದು ವಾದಿಸು ವುದು. नास्ति इति वादः।

नास्य नास्य (न०) 1. ಎತ್ತುಗಳಿಗೆ ಹಾಕುವ ಮೂಗು ದಾರ. नासायां भवम् "यत्" (५-३-५५)। "छिन्ननास्ये भग्नयुगे तिर्यक् प्रतिमुखागते। अक्षभङ्गे च यानस्य चक्रभङ्गे तथैव च" मनु० ८-२९१। 2. ಮೂಗಿಗೆ ಸಮೀಪದಲ್ಲಿರುವ. नासा चत्वर्थ्यां "ण्यः" (४-२-८०)।

नाह नाह (पुं०) 1. ಬಂಧನ, ಕಟ್ಟುವುದು. णह (बन्धने) भावे "घञ्" (३-३-१८)। 2. ಹಕ್ಕಿ ಮತ್ತು ಮೃಗ ಗಳನ್ನು ಹಿಡಿಯುವ ಬಲೆ ಅಥವಾ ಬೋನು. 3. ಮೂಲ ಬದ್ಧತೆ, ಹೊಟ್ಟೆ ಕಟ್ಟುವುದು. "नाहस्तु बन्धने कूटे" मेदि०।

नाहल नाहल (पुं०) ಪ್ಲೀಹ ಜನಾಂಗದವನು.

नाहुष नाहुष (पुं०) ನಹುಷರಾಜನ ಮಗ ಯಯಾತಿ. नहुषस्यायं "अण्" (४-३-१२०)। "ययातिर्नाहुषः सम्राडासीत् सत्यपराक्रमः" भा० आदि० ६९-३५।

नाहुषि नाहुषि (पुं०) ನಹುಷರಾಜನ ಮಗ ಯಯಾತಿ. नहुषस्यापत्यम् "इञ्" (४-१-९५)।

नि नि (अव्य०) ಇದೊಂದು ಉಪಸರ್ಗ. ಇದು ಈ ಕೆಳಗಿನ ಅರ್ಥಗಳಿಗೆ ದ್ಯೋತಕವಾಗುವುದು. 1. ಸಮೂಹ, ಗುಂಪು, ರಾಶಿ. "ज्वालाकणारुणरुचा निकरेण रेणोः" माघ० ५-५५। 2. ಅಧೋಭಾವ, ಕೆಳಮುಖವಾಗುವುದು. "निपतिताः परितः पथिकव्रजानुपरि ते परितेपुरतो भृशम्" माघ० ६-६। 3. ಅತಿಶಯ, ಆಧಿಕ್ಯ. निकामः।

"निकामतप्ता विविधेन वह्निना नभश्चरेणेन्धनसंभृतेन सा" कुमा० ५-२३। 4. ಆದೇಶ. ಅಪ್ಪಣೆ, ಆಜ್ಞೆ. "यावद्भवत्याहितसायकस्य मत्कार्मुकस्यास्य निदेशवर्ती" कुमा० ३-४। 5. ಕುಶಲತೆ, ಜಾಣತನ. "वयस्य, निसर्ग-निपुणाः स्त्रियः" माल० ३। 6. ಬಂಧನ, ತಡೆ, ಅಂಕೆ, ಅಡ್ಡಿ. 7. ಸಮೀಪ. "हिरण्यकः निकटवर्तिनं शरस्तम्बं प्रविष्टः" पञ्चतं० २। 8. ನಿತ್ಯ, ಶಾಶ್ವತ, ಸ್ಥಿರ. 9. ದರ್ಶನ, ತೋರಿಸುವುದು. निदर्शनम्। 10. ನಿವೃತ್ತಿ, ವಿಶ್ರಾಂತಿ, ನಿಲುಗಡೆ, ಬಿಡುವು. "निर्वर्तितं वैरिजनोपमर्दात् न्यस्तं रथे चक्रमुपाददानः" याद० २३-४०। 11. ಆಶ್ರಯ, ರಕ್ಷಣಾಸ್ಥಾನ. निलयः। 12. ಅಂತರ್ಭಾವ, ಒಳಗೆ ಸೇರಿಕೊಳ್ಳುವುದು. 13. ಸಂಶಯ, ಸಂದೇಹ. 14. ವಿನ್ಯಾಸ. 15. ಎಸೆಯುವುದು. 16. ಮೋಕ್ಷ. 17. ದಾನ, ಕೊಡುಗೆ. "नि स्यात्क्षेपे भृशार्थे च नित्यार्थे दानकर्मणि। संनिधानोपरमयोः संशयाश्रयराशिषु। मोक्षेऽन्तर्भावेऽधोभावे बन्धने कौशलेऽपि च" हेम०। 18. ನಿಷೇಧ.

निःक्षत्रिय ನಿಃಕ್ಷತ್ರಿಯ (वि०) ಕ್ಷತ್ರಿಯರಿಲ್ಲದ, ಕ್ಷತ್ರಿಯ ಶೂನ್ಯವಾದ. निर्गताः क्षत्रिया यस्मात्।

निःशङ्क ನಿಃಶಂಕ (वि०) 1. ಸಂದೇಹವಿಲ್ಲದ. 2. ಭಯವಿಲ್ಲದ. निर्गता शङ्का संशयो भयं वा यस्मात्। "भो भगवन् इदानीं स्वपिहि निःशङ्कः। अस्योष्मणा मूषकस्ते जागरणं संपादयति" पञ्चतं० २। (क्रि० वि०) 3. ಸಂದೇಹವಿಲ್ಲದೆ. "मां घ्नता भवताऽकारि निःशङ्कं पापदृश्वना" भट्टि० ६-१२९। 4. ಭಯವಿಲ್ಲದೆ. "निःशङ्कमङ्कुरिततां रतिवल्लभस्य देवः स्वचन्द्रकिरणामृतसेचनेन" नैष० ११-९१।

निःशब्द ನಿಃಶಬ್ದ (वि०) 1. ಶಬ್ದವಿಲ್ಲದ. ಸದ್ದಿಲ್ಲದ. निर्गतः शब्दो यस्मात्। "निःशब्दं कारयित्वा तत् सदः प्राह महामुने" मार्क०। (क्रि० वि०) 2. ಶಬ್ದವಿಲ್ಲದೆ. ಸದ್ದಿಲ್ಲದೆ.

निःशरण्य ನಿಃಶರಣ್ಯ (वि०) ರಕ್ಷಕನಿಲ್ಲದ, ಕಾಪಾಡುವವನಿಲ್ಲದ. निर्गतः शरण्यो यस्मात्। "भवद्वियोगाच्छिदुरार्ति-धारायमस्वसुर्मज्जति निःशरण्यः" नैष० ३-११३।

निःशलाक ನಿಃಶಲಾಕ (वि०) ರಹಸ್ಯವಾದ. ನಿರ್ಜನವಾದ. निर्गतः शलाकायाः। "गिरिपृष्ठं समारुह्य प्रासादं वा रहोगतः। अरण्ये निःशलाके वा मन्त्रयेदविभावितः" मनु० ७-१४७।

निःशल्क ನಿಃಶಲ್ಕ (वि०) 1. ತೊಗಟೆಯಿಲ್ಲದ. 2. ಮೈಮೇಲಿನ ಪೊರೆಯಿಲ್ಲದ ಮೀನು.

निःशल्य ನಿಃಶಲ್ಯ (वि०) 1. ಬಾಣವಿಲ್ಲದ. 2. ಮುಳ್ಳುಗಳಿಲ್ಲದ. 3. ಅಡ್ಡಿ ಆತಂಕಗಳಿಲ್ಲದ. निर्गतं शल्यं यस्मात्। (क्रि० वि०) 4. ಬಾಣವಿಲ್ಲದೆ. 5. ಅಡ್ಡಿಯಿಲ್ಲದೆ, ತಡೆಯಿಲ್ಲದೆ. 6. ಮುಳ್ಳುಗಳಿಲ್ಲದೆ.

निःशस्त्र ನಿಃಶಸ್ತ್ರ (वि०) 1. ಶಸ್ತ್ರಗಳಿಲ್ಲದ. 2. ಆಯುಧಗಳಿಲ್ಲದ, ಮದ್ದು ಗುಂಡುಗಳಿಲ್ಲದ, ಬಂದೂಕ ಫಿರಂಗಿ ಮೊದಲಾದುವುಗಳಿಲ್ಲದ. निर्गतं शस्त्रं यस्मात्।

निःशस्त्रीकरण ನಿಃಶಸ್ತ್ರೀಕರಣ (न०) ಆಯುಧ ಮದ್ದು ಗುಂಡು ಫಿರಂಗಿಗಳಿಲ್ಲದೆ ಮಾಡುವುದು.

निःशस्त्रीकृत ನಿಃಶಸ್ತ್ರೀಕೃತ (वि०) ಆಯುಧ ಗುಂಡು ಮೊದಲಾದುವುಗಳಿಲ್ಲದೆ ಮಾಡಲ್ಪಟ್ಟ.

निःशूक ನಿಃಶೂಕ (पुं०) ಊಬಿಲ್ಲದ ಧಾನ್ಯ, ತೀಕ್ಷ್ಣವಾದ (ಚೂಪಾದ) ಅಗ್ರಭಾಗವಿಲ್ಲದ ಧಾನ್ಯ. ಮುಂಡಧಾನ್ಯ. निर्गतः शूकोऽस्मात्।

निःशेष ನಿಃಶೇಷ (वि०) 1. ಶೇಷವಿಲ್ಲದ, ಸಮಗ್ರವಾದ, ಸಂಪೂರ್ಣವಾದ. निर्गतः शेषो यस्मात्। निष्क्रान्तं शेषात् वा। "पारेपरार्धं गणितं यदि स्यात् गणेयनिःशेष-गुणोऽपि स स्यात्" नैष० ३-४०। (क्रि० वि०) 2. ಸಂಪೂರ್ಣವಾಗಿ, ಸಮಗ್ರವಾಗಿ, ಉಳಿಕೆಯಿಲ್ಲದೆ. "निःशेष-च्युतचन्दनं स्तनतटं निर्मृष्टरागोऽधरः" काव्यप्र०। "तमध्वरे विश्वजिति क्षितीशं निःशेषविश्राणितकोश-जातम्" रघु० ५-१।

निःशेषता ನಿಃಶೇಷತಾ (स्त्री०) ಶೇಷವಿಲ್ಲದಿರುವಿಕೆ, ಉಳಿಕೆಯಿಲ್ಲದಿರುವಿಕೆ. निःशेषस्य भावः "तल्" (५-१-११९)। "एवं शत्रून्निःशेषतां नीत्वा भूयोऽपि मेघवर्णः तदेव पादपदुर्गं जगाम" पञ्चतं० ३।

निःशेषयत् ನಿಃಶೇಷಯತ್ (वि०) ಶೇಷವಿಲ್ಲದೆ ಮಾಡುತ್ತಿರುವ. निस् + शिष (असर्वोपयोगे) + णिच् "शतृ" (३-२-१२४)। स्त्रियां "ङीप्" (४-१-६)। "नैशं तमिस्रमरुणेन विलुप्ततारं निःशषयन्नयमुदेति मयूखमाली" याद० २९-४७। **-यन्ती** -ಯಂತೀ.

निःशेषयित् ನಿಃಶೇಷಯಿತೃ (वि०) ಶೇಷವಿಲ್ಲದೆ ಮಾಡುವವನು, ಶೂನ್ಯವಾಗಿ ಮಾಡುವವನು. निस् + शिष (असर्वोपयोगे) + णिच् "तृच्" (३-१-१३३)। स्त्रियां "ङीप्" (४-१-५)। **-यित्री** -ಯಿತ್ರೀ.

निःशेषित निःशेषित (वि०) 1. शेषವಿಲ್ಲದೆ ಮಾಡಲ್ಪಟ್ಟ. ಶೂನ್ಯವಾಗಿ ಮಾಡಲ್ಪಟ್ಟ. निस्+शिष (असर्वोपयोगे)+णिच् "क्तः" (३-२-१०२)। "नूनं सद्यःफलानि नीतिशास्त्राणि, यत्त्वयाऽनुकूल्येनानुप्रविश्यारिमर्दनः सपरिवारो निःशेषितः" पञ्चतं० ३। "भद्र, निःशेषितास्ते रिपवः" पञ्चतं० ४। 2. ಸಂಪೂರ್ಣವಾಗಿ ಮಾಡಲ್ಪಟ್ಟ. ಉಳಿಕೆಯಿಲ್ಲದೆ ಮಾಡಲ್ಪಟ್ಟ.

निःशोध्य निःशोध्य (वि०) ಚೆನ್ನಾಗಿ ಶೋಧಿಸಲ್ಪಟ್ಟ. ನಿರ್ಮಲವಾಗಿ ಮಾಡಲ್ಪಟ್ಟ. ಕಶ್ಮಲವಿಲ್ಲದಂತೆ ಮಾಡಲ್ಪಟ್ಟ. निष्क्रान्तं शोध्यमस्मात्। निष्क्रान्तं शोध्यात् इति वा। "निःशोध्यमनवस्करम्" अम०।

निःश्रयणी निःश्रयणी (स्त्री०) ಮನೆ ಮೊದಲಾದುವು ಗಳನ್ನು ಹತ್ತಲು ಸಾಧನವಾದ ಏಣಿ, ನಿಚ್ಚಣಿಗೆ. निश्चितं श्रीयते आश्रीयतेऽनया—श्रिञ् (सेवायाम्) कर० "ल्युट्" (३-३-११७)।

निःश्रयिणी निःश्रयिणी (स्त्री०) ಏಣಿ, ನಿಚ್ಚಣಿಗೆ. निःश्रयति—श्रिञ् (सेवायाम्) "णिनिः" (३-१-१३४)। "ङीप्" (४-१-५)।

निःश्रेणि निःश्रेणि (स्त्री०) 1. ಮನೆ ಮೊದಲಾದುವುಗಳ ಮೇಲೆ ಹತ್ತಲು ಸಾಧನವಾದ ಏಣಿ, ನಿಚ್ಚಣಿಗೆ. निश्चिता श्रेणिरत्र। "निःश्रेणिस्त्वधिरोहिणी" अम०। 2. ಖರ್ಜೂರದ ಮರ. "निःश्रेणिस्त्वधिरोहिण्यां खर्जूरीपादपे स्त्रियाम्" मेदि०। "चक्रे त्रिदिवनिःश्रेणिः सरयूरनुयायिनाम्" रघु० १५-१००।

निःश्रेयस् निश्रेयस (वि०) ಬಹಳ ಶ್ರೇಷ್ಠನಾದ ಮನುಷ್ಯ, ಉತ್ತಮ ಗುಣಗಳಿಂದ ಕೂಡಿದ ಮನುಷ್ಯ. निश्चितं श्रेयो यस्य।

निःश्रेयस निःश्रेयस (पुं०) 1. ಶಂಕರ, ಪರಮೇಶ್ವರ, ಪರಶಿವ. "निःश्रेयसन्तु कल्याणमोक्षयोः शङ्करे पुमान्" मेदि०। (न०) 2. ಮೋಕ್ಷ, ಆತ್ಯಂತಿಕ ಸುಖ, ಶಾಶ್ವತವಾದ ಸುಖ. निश्चितं श्रेयः, अजन्तो निपातितः (५-४-७७)। "निःश्रेयसप्रतिपदेन निजेन धाम्ना" याद० १९-५१। 3. ಕಲ್ಯಾಣ, ಮಂಗಳ, ಶುಭ. "इदं भागवतं नाम पुराणं ब्रह्मसम्मितम्। उत्तमश्लोकचरितं चकार भगवान् ऋषिः। निःश्रेयसाय लोकस्य धन्यं स्वस्त्ययनं महत्" भाग० १-३-४०, १।

निःश्वसत् निःश्वसत् (वि०) ನಿಟ್ಟುಸಿರು ಬಿಡುತ್ತಿರುವ. निस् + श्वस (प्राणने) "शतृ" (३-२-१२४)। "गुरु निःश्वसन्नथ विलोलसदवधुवपुर्वचोविषम्" माघ० १५-६२।

निःश्वसित निःश्वसित (न०) ನಿಟ್ಟುಸಿರು, ಮೇಲಿನ ಉಸಿರು. निस् + श्वस (प्राणने) भावे "क्तः" (३-३-११४)। "स्तनकम्पक्रियालक्ष्येर्न्यस्तं निश्वसितैरिव" विक्र० २-१८।

नियत ನಿಯತ (वि०) 1. ನಿಶ್ಚಿತವಾದ, ಅವಶ್ಯವಾಗಿ ಆಗುವ. नि + यम (उपरमे) "क्तः" (३-४-७२)। "नियता स्वर्गसौधस्य निश्श्रेणिरिव शाश्वती" याद० २२-१९। 2. ನಿಯಮದಿಂದ ಕೂಡಿದ, ವ್ರತವನ್ನು ಕೈಗೊಂಡಿರುವ. "वशिनं क्षितेरयनयाविवेश्वरं नियमो यमश्च नियतं यतिं तथा" माघ० १३-२३। 3. ಸಂಬಂಧ ಹೊಂದಿರುವ, ಆಶ್ರಯ ಹೊಂದಿರುವ. "वाच्यर्था नियताः सर्वे वाङ्मूला वाग्विनिःसृताः" मनु० ४-२५६।

4. ವಾಡಿಕೆಯಾಗಿ ಬಂದಿರುವ, ಸಂಪ್ರದಾಯವಾಗಿ ಬಂದಿರುವ. 5. ಸ್ಥಿರವಾಗಿರುವ, ಸತತವಾಗಿರುವ. "चन्द्रे लक्ष्मीः प्रभा सूर्ये गतिर्वायौ भुवि क्षमा। एतत्तु नियतं सर्वं त्वयि चानुत्तमं यशः"। 6. ಹತೋಟಿಯಲ್ಲಿರುವ, ಅಧೀನದಲ್ಲಿರುವ. 7. ಒಂದು ಮಿತಿಯುಳ್ಳ, ಪರಿಮಿತವಾಗಿರುವ. "बाणाः पञ्च मनोभवस्य नियतास्तेषाम-संख्यो जनः प्रायोऽस्मद्विध एव लक्ष्य इति यल्लोके प्रसिद्धिगतम्" रत्ना० ३-३। 8. ಆಸಕ್ತನಾದ. "प्रतिज्ञामात्मनो रक्षन् सत्ये च नियतः सदा" भा० आदि० १४२-६७। 9. ಅಂಕೆಯಲ್ಲಿಡಲ್ಪಟ್ಟ. 10. ಕಟ್ಟಲ್ಪಟ್ಟ. (अव्य०) 11. ಸ್ಥಿರವಾಗಿ, ಎಂದೆಂದಿಗೂ. "भीमजाद्ददि जितः स्त्रिया ह्रिया मन्मथोऽपि नियतं स लज्जितः" नैष० १८-३६। 12. ನಿಶ್ಚಯವಾಗಿ. "मुखेन्दुसंबन्धवशात्सुधाजुषः स्थिरत्वमूहे नियतं तदायुषः" नैष० १५-३२।

नियतभोजन ನಿಯತಭೋಜನ (वि०) ಆಹಾರದ ವಿಷಯದಲ್ಲಿ ನಿಯಮದಿಂದಿರುವ, ಮಿತವಾದ ಆಹಾರವನ್ನು ಸೇವಿಸುವ. नियतं परिमितं भोजनं यस्य।

नियतविभक्तिक ನಿಯತವಿಭಕ್ತಿಕ (वि०) ಯಾವಾಗಲೂ ಒಂದೇ ವಿಭಕ್ತಿಯಲ್ಲಿರುವ, ವಿಗ್ರಹವಾಕ್ಯದಲ್ಲಿ ವಿಭಕ್ತಿಯ ಬದಲಾವಣೆ ಹೊಂದದಿರುವ (ಶಬ್ದ). नियता विभक्तिर्यस्य "कप्" (५-४-१५४)। "एकविभक्तिचापूर्वनिपाते" (१-२-४४)। कौशाम्ब्याः निष्क्रान्तः निष्क्रान्तं निष्क्रान्तेन निष्क्रान्ताय निष्क्रान्तात् ಈ ರೀತಿಯಾದ ವಿಗ್ರಹವಾಕ್ಯಗಳಲ್ಲಿ ಕ್ರಾಂತಾದ್ಯರ್ಥಗಳಲ್ಲಿ ಪಂಚಮೀಸಮಾಸ ಬಂದು निष्कौशाम्बिः निष्कौशाम्बि निष्कौशाम्बिना ಇತ್ಯಾದಿಗಳಾಗುವುವು. ಇಲ್ಲಿ ಕೌಶಾಂಬೀ ಶಬ್ದವೇ ವಿಗ್ರಹದಲ್ಲಿ ಪಂಚಮೀವಿಭಕ್ತಿ ಬದಲಾವಣೆ ಹೊಂದದೆ ನಿಯತ ವಿಭಕ್ತಿಕವಾಯಿತು.

नियतव्रत ನಿಯತವ್ರತ (वि०) ಸ್ಥಿರವಾದ ವ್ರತವನ್ನು ಕೈಗೊಂಡಿರುವ, ನಿಯಮಪೂರ್ವಕ ವ್ರತವನ್ನು ಹಿಡಿದಿರುವ. नियतं व्रतमस्य।

नियतात्मन् ನಿಯತಾತ್ಮನ್ (वि०) ಮನಸ್ಸನ್ನು ಅಧೀನದಲ್ಲಿಟ್ಟುಕೊಂಡಿರುವ. नियतः आत्मा यस्य।

नियताप्ति ನಿಯತಾಪ್ತಿ (स्त्री०) (ಫಲಪ್ರಾಪ್ತಿಗೆ) ಒದಗಿದ್ದ ಪ್ರತಿಬಂಧಕದ ಪರಿಹಾರವಾಗಿ ಫಲವು ಕೈಗೂಡುವ ಭರವಸೆ, ಒಂದು ಫಲವನ್ನು ಅಪೇಕ್ಷಿಸಿ ಕೈಗೊಂಡ ಕಾರ್ಯದ (ಫಲಪ್ರಾಪ್ತಿಪರ್ಯಂತ ಸಂಭವಿಸುವ) ಪಂಚ ಅವಸ್ಥೆಗಳಲ್ಲೊಂದು. नियता निश्चिता आप्तिः। "अवस्थाः पञ्च कार्यस्य प्रारब्धस्य फलार्थिभिः" सा० द० ६-७०। (1) आरम्भः, (2) यत्नः, (3) प्राप्त्याशा, (4) नियताप्तिः ಮತ್ತು (5) फलागमः ಇವು ಕಾರ್ಯದ ಐದು ಅವಸ್ಥೆಗಳು. ಇವು ನಾಟ್ಯಕ್ಕೆ ಸಂಬಂಧಿಸಿದುವು.

(1) "भवेदारम्भ औत्सुक्यं यन्मुख्यफलसिद्धये" सा० द० ६-७१। ಮುಖ್ಯಫಲಪ್ರಾಪ್ತಿಗಾಗಿ ಉಂಟಾಗುವ ಔತ್ಸುಕ್ಯ (ಉತ್ಸಾಹ)ವು "ಆರಂಭ" ಎಂಬ ಮೊದಲನೆಯ ಅವಸ್ಥೆ.

(2) "प्रयत्नस्तु फलावाप्तौ व्यापारोऽतित्वरान्वितः" सा० द० ६-७२। ಫಲಪ್ರಾಪ್ತಿಗಾಗಿ ನಡೆಯಿಸುವ ತ್ವರಿತವಾದ ವ್ಯಾಪಾರ; "ಪ್ರಯತ್ನ" ಎಂಬ ಎರಡನೆಯ ಅವಸ್ಥೆ.

(3) "उपायापायशङ्काभ्यां प्राप्त्याशा प्राप्तिसंभवः" सा० द० ६-७२। ಉಪಾಯ ಮತ್ತು ಅಪಾಯದ ಶಂಕೆ ಇವುಗಳಿಂದ ಫಲಪ್ರಾಪ್ತಿಯ ವಿಷಯದಲ್ಲಿ ಉಂಟಾಗುವ ಸಂಶಯವು "ಪ್ರಾಪ್ತ್ಯಾಶಾ" ಎಂಬ ಮೂರನೆಯ ಅವಸ್ಥೆ.

(4) "अपायाभावतः प्राप्तिर्नियताप्तिस्तु निश्चिता" सा० द० ६-७३। ಸಂಭವಿಸಿದ ಅಪಾಯದ (ಪ್ರತಿಬಂಧಕದ) ಪರಿಹಾರಪೂರ್ವಕ ಫಲಪ್ರಾಪ್ತಿಯು ನಿಶ್ಚಯವಾಗಿರುವ ನಾಲ್ಕನೆಯ "ನಿಯತಾಪ್ತಿ" ಎಂಬ ಅವಸ್ಥೆ.

(5) "सावस्था फलयोगः स्याद्यः समग्रफलोदयः" सा० द० ६-७३। ನಿರೀಕ್ಷಿಸಲ್ಪಟ್ಟ ಸಂಪೂರ್ಣ ಫಲಪ್ರಾಪ್ತಿಯು "ಫಲಾಗಮ" ಎಂಬ ಐದನೆಯ ಅವಸ್ಥೆ.

नियताशिन् ನಿಯತಾಶಿನ್ (वि०) ಮಿತವಾಗಿ ಊಟಮಾಡುವವನು, ಪರಿಮಿತವಾದ ಆಹಾರವನ್ನು ಸೇವಿಸುವವನು. नियतमश्नाति — अश (भोजने) "णिनिः" (३-२-७८)।

नियति ನಿಯತಿ (स्त्री०) 1. ಭಾಗ್ಯ, ಅದೃಷ್ಟ. नियम्यतेऽनया — नि + यम (उपरमे) "क्तिन्" (३-३-९४)। "नित्यं नियत्या परवत्यशेषे कः संविदानोऽप्यनुयोगयोग्यः" नैष० ६-१०३। 2. ನಿಯಮ, ವ್ರತ. "नियतिर्नियमे दैवे" मेदि०। 3. ನಿರ್ಬಂಧ, ಕಟ್ಟುಪಾಡು. 4. ವಿಧಿ, ದೈವ. "नियतिः केन लङ्घ्येत निजच्छायानुकारिणी" याद० १६-१२२।

नियतेन्द्रिय ನಿಯತೇಂದ್ರಿಯ (वि०) ಇಂದ್ರಿಯಗಳನ್ನು ಹತೋಟಿಯಲ್ಲಿಟ್ಟುಕೊಂಡಿರುವ, ಜಿತೇಂದ್ರಿಯನಾದ. नियतानि इन्द्रियाणि यस्य। "अवभृथप्रयतो नियतेन्द्रियः सुरसमाजसमाक्रमणोचितः" रघु० ९-२२।

नियन्तव्य ನಿಯನ್ತವ್ಯ (वि०) 1. ಅಂಕೆಯಲ್ಲಿಡಬೇಕಾದ, ಹತೋಟಿಯಲ್ಲಿಡಬೇಕಾದ. नि+यम (उपरमे) "तव्यः" (३-१-९६)। 2. ದಮನಮಾಡಬೇಕಾದ, ಅಡಗಿಸಬೇಕಾದ. "नियन्तव्याः सदा राज्ञा पापा ये स्युर्नराधिप" भा० शान्ति० ८८-१९।

नियन्तृ ನಿಯಂತೃ (पुं०) 1. ಪರಮಾತ್ಮ. तत्तद्रुचीन् प्ररोचयन् नियच्छति। "दैवतेषु च सर्वेषु तत्तदिच्छां प्ररोचयन्। मन्दाधिकारिणो योऽसौ नियन्ता स्यान्नियच्छति" इति निरुक्तिः। "अपराजितः सर्वसहो नियन्ता नियमो यमः" वि० स०। (वि०) 2. ಪ್ರಭು, ಯಜಮಾನ, ದೊರೆ. नि + यम (उपरमे) "तृच्" (३-१-१३३)। "रेखामात्रमपि क्षुण्णादामनोर्वर्त्मनः परम्। न व्यतीयुः प्रजास्तस्य नियन्तुर्नेमिवृत्तयः" रघु० १-१७। 3. ಸಾರಥಿ, ರಥವನ್ನು ನಡೆಸುವವನು. "त्रस्तौ समासन्नकरेणुसूक्तान्नियन्तरि व्याकुलमुक्तरज्जुके" माघ० १२-२४। 4. ಶಿಕ್ಷಿಸುವವನು, ಅಂಕೆಯಲ್ಲಿಡುವವನು, ಅಧೀನದಲ್ಲಿಟ್ಟುಕೊಳ್ಳುವವನು.

नियन्त्रक ನಿಯಂತ್ರಕ (वि०) 1. ನಿರೋಧಿಸುವವನು, ತಡೆಯುವವನು. 2. ಹತೋಟಿಯಲ್ಲಿಡುವವನು, ಅಂಕೆಯಲ್ಲಿಡುವವನು, ಹಿಡಿತದಲ್ಲಿಡುವವನು. नि + यत्रि (संकोचे) + णिच् "ण्वुल्" (३-१-१३३)।

नियन्त्रण ನಿಯಂತ್ರಣ (न०) 1. ತಡೆ, ಬಿಗಿಹಿಡಿಯುವುದು, ನಿರೋಧಿಸುವುದು. नि+यत्रि (संकोचे) + णिच् "ल्युट्" (३-३-११५)। 2. ಅಂಕೆಯಲ್ಲಿಡುವುದು, ಹತೋಟಿಯಲ್ಲಿಡುವುದು, ನಿರ್ಬಂಧದಲ್ಲಿಡುವುದು, ಹಿಡಿತದಲ್ಲಿಡುವುದು. "अनियन्त्रणानुयोगो नाम तपस्विजनः" शाकु० १। "स्वराः काक्वादयः उदात्तादयो वा व्यङ्ग्यरूपमेव विशेषं प्रत्याययन्ति, न खलु प्रकृतोक्तमनेकार्थशब्दस्यैकार्थनियन्त्रणरूपं विशेषम्" सा० द०। "युच्" (३-३-१०७)। **–यन्त्रणा –यंत्रण.**

नियन्त्रित ನಿಯಂತ್ರಿತ (वि०) 1. ತಡೆಯಲ್ಪಟ್ಟ, ನಿರೋಧಿಸಲ್ಪಟ್ಟ. नि + यत्रि (संकोचे) "क्तः" (३-२-१०२)। 2. ಹತೋಟಿಯಲ್ಲಿಡಲ್ಪಟ್ಟ, ನಿರ್ಬಂಧದಲ್ಲಿಡಲ್ಪಟ್ಟ. "एवमेकस्मिन्नर्थेऽभिधया नियन्त्रिते या शब्दार्थस्यान्यार्थबुद्धिहेतुः शक्तिः साभिधामूला व्यञ्जना" सा० द०। "अनेकार्थस्य शब्दस्य संयोगाद्यैर्नियन्त्रिते" सा० द०। 3. ಕಟ್ಟಲ್ಪಟ್ಟ. "मौर्व्या मेखलया नियन्त्रितमधोवासश्च माञ्जिष्ठकम्" उ० रा० ४-१९।

नियम ನಿಯಮ (पुं०) 1. ವ್ರತ, ಶಾಸ್ತ್ರೋಕ್ತವಾದ ಕರ್ಮದ ಆಚರಣೆ, ಉಪವಾಸ ಮೊದಲಾದುದು. नि+यम (उपरमे) "अप्" (३-३-६३)। "छायेदृगस्य च न कुत्रचिदध्यगायि तप्तं यमेन नियमेन तपोऽमुनैव" नैष० १३-१७। 2. ನಿಯಂತ್ರಣ, ತಡೆ, ನಿರೋಧ, ಪ್ರತಿಬಂಧಿಸುವುದು. "प्रियप्राया वृत्तिर्विनयमधुरो वाचि नियमः प्रकृत्या कल्याणी मतिरनवगीतः परिचयः" उ० रा० २-२। 3. ಆವಶ್ಯಕತೆ, ನಿರ್ಬಂಧ, ಅಗತ್ಯವಾಗಿರುವಿಕೆ. "साधने हि नियमोऽन्यजनानां योगिनां तु तपसाखिलसिद्धिः" नैष० ५-३। 4. ವ್ಯವಹಾರದ ನಿಬಂಧನೆ, ಕಟ್ಟಳೆ, ಕಾನೂನು. 5. ಪ್ರತಿಜ್ಞೆ. 6. ಅಂಗೀಕಾರ, ಒಪ್ಪಿಗೆ. "संविदागूः प्रतिज्ञानं नियमाश्रवसंश्रवाः" अम०। 7. ನಿಶ್ಚಯ, ನಿರ್ಧಾರ. 8. ಪರ್ಯಾಲೋಚನೆ, ಸಲಹೆ ಕೇಳುವುದು, ಕೂಡಿ ಮಾತಾಡುವುದು. "नियमो मन्त्रणायाञ्च प्रतिज्ञानिश्चये व्रते" मेदि०। 9. ಪಳಗಿಸುವುದು. 10. ತಗ್ಗಿಸುವುದು, ಕಡಮೆಮಾಡುವುದು. 11. ಅಷ್ಟಾಂಗ ಯೋಗದ ಒಂದು ಭೇದ. "यमनियमासनप्राणायामप्रत्याहारधारणाध्यानसमाधयोऽष्टावङ्गानि" पा० यो० सू० २-२९। ಶೌಚ, ಸಂತೋಷ, ತಪಸ್ಸು, ಸ್ವಾಧ್ಯಾಯ ಮತ್ತು ಈಶ್ವರಪ್ರಣಿಧಾನ ಇವು ಐದೂ ನಿಯಮಗಳು. "शौचसंतोषतपःस्वाध्यायेश्वरप्रणिधानानि नियमाः" पा० यो० सू० २-३२। ತಪಸ್ಸು, ಸಂತೋಷ, ಆಸ್ತಿಕ್ಯ, ದಾನ, ಈಶ್ವರಪೂಜೆ, ಸಿದ್ಧಾನ್ತವಾಕ್ಯಶ್ರವಣ, ಹ್ರೀ, ಮತಿ, ಜಪ, ಮತ್ತು ಹೋಮ ಈ ಹತ್ತೂ ನಿಯಮಗಳು. "तपः सन्तोष आस्तिक्यं दानमीश्वरपूजनम्। सिद्धान्तवाक्यश्रवणं ह्रीमती च जपो हुतम्। नियमा दश संप्रोक्ता योगशास्त्रविशारदैः" हठ०। 12. (व्याकरण शास्त्रदल्लि) सामान्यशास्त्रदिंद विहितवाद कार्यवन्नु संकोचपडिसि विशेष शास्त्रदिंद विवक्षित विषयदल्लि मात्र ई कार्यवन्नु विधिसुवुदु. "नस्तद्धिते" (६-४-१४४) सूत्रदिंद "न"कारान्त पदगळ सामान्यक्कॆ प्राप्तवाद "टि" लोपवु "अह्न्" शब्दक्कॆ ट मत्तु ख प्रत्ययगळः परवादरॆ मात्र बरुवुदॆंदु "अह्नष्टखोरेव" (६-४-१४५) सूत्रदिंद नियमिसि विहितवागिदॆ. 13. विष्णु. प्रतिबला नियम्यन्तेऽनेन — नि + यम कर० "अप्" (३-३-६३)। "नियम्यते जगद्येन नियमः स उदीरितः" इति निरुक्तिः। "अतीन्द्रः सङ्ग्रहः सर्गो धृतात्मा नियमो यमः" वि० स०।

नियमयति — नि+यम+णिच् "अच्" (३-१-१३४)। स्वेषु स्वेष्वधिकारेषु प्रजा नियमयति इति वा। 14. ಎರಡು ಕಡೆ ಸಂಭವಿಸುವ ಒಂದು ಕಾರ್ಯವನ್ನು ಒಂದು ಕಡೆ ನಿಷೇಧಿಸಿ ಇನ್ನೊಂದರಲ್ಲಿ ಮಾತ್ರ ಹೇಳುವುದು. ಇದಕ್ಕೆ ಪರಿಸಂಖ್ಯೆಯೆಂದು ಹೆಸರು. "स्नेहक्षयः प्रदीपेषु न स्वान्तेषु नतभ्रुवाम्" ಎಂಬಲ್ಲಿ ಶ್ಲೇಷಮೂಲವಾದ ಅಭೇದಾಧ್ಯವಸಾಯದಿಂದ "स्नेह" (ಪದಕ್ಕೆ ತೈಲ ಮತ್ತು ಪ್ರೇಮ ಎಂಬ ಎರಡು ಅರ್ಥಗಳು) ಕ್ಷಯವನ್ನು ಸ್ತ್ರೀಯರ ಹೃದಯದಲ್ಲಿ ನಿಷೇಧಿಸಿ ದೀಪದಲ್ಲಿ ಮಾತ್ರ ಹೇಳಿರುವುದರಿಂದ ಪರಿಸಂಖ್ಯಾರೂಪವಾದ ನಿಯಮವು ಹೇಳಲ್ಪಟ್ಟಿದೆ.

नियमन ನಿಯಮನ (ನ॰) 1. ದಮನ ಮಾಡುವುದು, ಅಂಕೆಯಲ್ಲಿಡುವುದು. ಅಡಗಿಸುವುದು. नि+यम (उपरमे) भावे "ल्युट्" (३-३-११५)। "समतया वसुवृष्टि-विसर्जनैर्नियमनादसतां च नराधिपः" रघु॰ ९-६। 2. ನಿರ್ಬಂಧದಲ್ಲಿಡುವುದು, ಹತೋಟಿಯಲ್ಲಿಡುವುದು. 3. ಆಜ್ಞೆ, ಅಪ್ಪಣೆ. 4. ಬಂಧನ, ಕಟ್ಟುವುದು. 5. ಬಲಾತ್ಕಾರ, ಬಲಪ್ರಯೋಗ, ನಿರ್ಬಂಧ. 6. ಒಂದು ಕಾರ್ಯವನ್ನು ಒಂದು ಕಡೆ ನಿಷೇಧಿಸಿ ಇನ್ನೊಂದು ಕಡೆ ಹೇಳುವುದು. 7. ನಿರೋಧಿಸುವುದು, ತಡೆಯುವುದು. 8. ತಗ್ಗಿಸುವುದು, ಕಡಮೆಮಾಡುವುದು.

नियमनिष्ठ ನಿಯಮನಿಷ್ಠ (ವಿ॰) 1. ವ್ರತವನ್ನು ಆಚರಿಸುವುದರಲ್ಲಿ ಕಟ್ಟುನಿಟ್ಟಾದ. 2. ಆಜ್ಞೆಯನ್ನು ಪಾಲಿಸುವುದರಲ್ಲಿ ನಿರತನಾದ. नियमे निष्ठः। (स्त्री॰) **-निष्ठा -ನಿಷ್ಠಾ॰**. ವ್ರತಾಚರಣೆ ಮತ್ತು ಆಜ್ಞಾಪಾಲನೆಯಲ್ಲಿ ಆಸಕ್ತಿ.

नियमपत्र ನಿಯಮಪತ್ರ (ನ॰) 1. ಆಜ್ಞಾಪತ್ರ. 2. ಕರಾರು ಪತ್ರ, ಒಪ್ಪಂದದ ಪತ್ರ. नियमोपेतं पत्रम्।

नियमयत् ನಿಯಮಯತ್ (ವಿ॰) 1. ದಮನಮಾಡುತ್ತಿರುವ, ಅಡಗಿಸುತ್ತಿರುವ. 2. ನಿರ್ಬಂಧದಲ್ಲಿಡುತ್ತಿರುವ. ಹತೋಟಿಯಲ್ಲಿಟ್ಟುಕೊಳ್ಳುತ್ತಿರುವ. नि+यम (उपरमे)+णिच् "शतृ" (३-२-१२४)। "अनुपहित-वधूजनस्य रक्षां नियमयतो निजलीलया जगन्ति" याद॰ २४-७३। 3. ಬಲಾತ್ಕಾರಪಡಿಸುತ್ತಿರುವ. 4. ಬಂಧಿಸುತ್ತಿರುವ, ಕಟ್ಟುತ್ತಿರುವ. 5. ಆಜ್ಞೆಮಾಡುತ್ತಿರುವ. 6. ತಡೆಯುತ್ತಿರುವ, ನಿರೋಧಿಸುತ್ತಿರುವ. स्त्रियां "ङीप्" (४-१-६)। **-यन्ती -ಯನ್ತೀ॰**.

नियमलङ्घन ನಿಯಮಲಂಘನ (ನ॰) 1. ಆಜ್ಞೆಯನ್ನು ಮೀರಿ ನಡೆಯುವುದು. 2. ಒಪ್ಪಂದವನ್ನು ಮುರಿದು ನಡೆಯುವುದು. नियमस्य लङ्घनम्।

नियमवत् ನಿಯಮವತ್ (ವಿ॰) ಜಪ ಉಪವಾಸ ಮೊದಲಾದ ವ್ರತವನ್ನು ಹಿಡಿದಿರುವ. नियमोऽस्यास्ति "मतुप्" (५-२-९४)। स्त्रियां "ङीप्" (४-१-६)। **-वती -ವತೀ॰**.

नियमविधि ನಿಯಮವಿಧಿ (ಪುಂ॰) 1. ನಿತ್ಯಕರ್ಮಾನುಷ್ಠಾನ, ಪ್ರತಿದಿನದ ಕರ್ತವ್ಯದ ಆಚರಣೆ. "नियमविधि-जलानां बर्हिषां चोपनेत्री" कुमा॰ १-६०। 2. ಅನೇಕ ಉಪಾಯಗಳಿಂದ ಒಂದು ಕಾರ್ಯವು ಸಾಧನೆಯಾಗುವಲ್ಲಿ ವಿಶೇಷ ಪ್ರಯೋಜನದ ದೃಷ್ಟಿಯಿಂದ ಒಂದು ರೀತಿಯಿಂದ ಮಾತ್ರ ಅದನ್ನು ವಿಧಿಸುವುದು. ಬತ್ತವನ್ನು ಅಕ್ಕಿಯನ್ನಾಗಿ ಮಾಡಲು ನಖಗಳಿಂದ ಹೊಟ್ಟನ್ನು ಬಿಡಿಸಬಹುದು. ಮತ್ತು ಒನಕೆಯಿಂದಲೂ ಕುಟ್ಟಿ ಅಕ್ಕಿಯನ್ನು ಮಾಡಬಹುದು. "व्रीहीनवहन्ति" ಎಂಬ ವಾಕ್ಯದಿಂದ ಯಾಗದ ಪುರೋಡಾಶಕ್ಕಾಗಿ ಬತ್ತವನ್ನು ಒನಕೆಯಿಂದಲೇ ಕುಟ್ಟಬೇಕೆಂದು ನಿಯಮಮಾಡಿ ವಿಧಿಸಲ್ಪಟ್ಟಿದೆ. ಅದೃಷ್ಟೋಪ್ಪತ್ತಿಯು ಇಲ್ಲಿ ಪ್ರಯೋಜನ.

नियमित ನಿಯಮಿತ (ವಿ॰) 1. ತಗ್ಗಿಸಲ್ಪಟ್ಟ, ಕಡಮೆ ಮಾಡಲ್ಪಟ್ಟ. नि+यम (उपरमे)+णिच् "क्तः" (३-२-१०२)। "गिरिशमुपचचार प्रत्यहं सा सुकेशी नियमितपरिखेदा तच्छिरश्चन्द्रपादैः" कुमा॰ १-६०। 2. ಬಗ್ಗಿಸಲ್ಪಟ್ಟ. "श्रीमद्भिर्नियमितकन्धरापरान्तैः संसक्तैरगुरुवनेषु साङ्गहारम्" किरा॰ ७-३७। 3. ಕಟ್ಟಲ್ಪಟ್ಟ, ಬಂಧಿಸಲ್ಪಟ್ಟ. "द्विगुणबाहुदण्डावेष्टननिश्चेष्ट-नियमिताम्" मालती॰ ७। "किञ्चिद्भ्रूभङ्गलीला-नियमितजलधि राममन्वेषयामि" हनु॰ ना॰। 4. ತಡೆಯಲ್ಪಟ್ಟ, ನಿರೋಧಿಸಲ್ಪಟ್ಟ. 5. ನಿರ್ಧರಿಸಲ್ಪಟ್ಟ, ನಿಶ್ಚಯಿಸಲ್ಪಟ್ಟ. 6. ಮಿತಿಗೊಳಿಸಲ್ಪಟ್ಟ, ಸಂಕೋಚಗೊಳಿಸಲ್ಪಟ್ಟ. "कृच्छ्रेणामेध्यमध्ये नियमिततनुभिः स्थीयते" भर्तृ॰ ३-३७।

नियमोल्लङ्घन ನಿಯಮೋಲ್ಲಂಘನ (ನ॰) "नियम-लङ्घन" ಪದದ ಅರ್ಥ.

नियम्य ನಿಯಮ್ಯ (ವಿ॰) 1. ತಡೆಯಲ್ಪಡುವ, ನಿರೋಧಿಸಲ್ಪಡುವ. नि+यम (उपरमे) "यत्" (३-१-९८)। 2. ಆಜ್ಞೆಗೆ ಒಳಪಟ್ಟಿರುವವನು. 3. ಒಬ್ಬನ ಅಧೀನದಲ್ಲಿರುವವನು. 4. ಶಿಕ್ಷಿಸಲ್ಪಡುವ, ನಿಗ್ರಹಿಸಲ್ಪಡುವ.

"त्रिलोकनाथेन सदा मखद्विषस्त्वया नियम्या ननु दिव्यचक्षुषा" रघु० ३-४५। 5. ಮಿತಿಗೊಳಿಸಲ್ಪಡುವ. 6. ಕಟ್ಟಲ್ಪಡುವ. ಬಂಧಿಸಲ್ಪಡುವ.

नियातन ನಿಯಾತನ (ನ०) 1. ಕೆಳಕ್ಕೆ ತಳ್ಳುವುದು, ಕೆಡವುವುದು. नि + यत (निकारोपस्कारयोः) + णिच् "ल्युट्" (३-३-११५)। (वि०) 2. ಭಯಂಗ್ರಸ್ತನಾದ. नितरां यातना यत्र।

नियाम ನಿಯಾಮ (पुं०) ನಿಯಮ. नि + यम (उपरमे) पक्षे "घञ्" (३-३-६३)।

नियामक ನಿಯಾಮಕ (पुं०) 1. ಹಡಗು ನಡೆಸುವುದನ್ನು ಕಲಿಸುವವನು. नि + यम (उपरमे) + णिच् "ण्वुल्" (३-१-१३३)। (वि०) 2. ಆಜ್ಞೆಮಾಡುವವನು. 3. ಅಂಕೆಯಲ್ಲಿಟ್ಟುಕೊಳ್ಳುವವನು. 4 ನಿಗ್ರಹಿಸುವವನು. ಶಿಕ್ಷಿಸುವವನು. 5. ನಿರೋಧಿಸುವವನು, ತಡೆಯುವವನು. 6. ಮಿತಿಗೊಳಿಸುವವನು. 7. ಸಾರಥಿ, ರಥ ನಡೆಸುವವನು. 8. ಗುರು. 9. ಸಭ್ಯ, ಯೋಗ್ಯ.

नियुक्त ನಿಯುಕ್ತ (वि०) 1. ಆಜ್ಞೆಮಾಡಲ್ಪಟ್ಟ, ಆದೇಶ ಪಡೆದ. नि + युजिर् (योगे) "क्तः" (३-२-१०२)। "स्वकेतुकल्पनात् पूर्वं नियुक्तं हरिणा स्वयम्। तमेव तादृशाकारं तममन्यन्त यादवाः" याद० २२-५७। 2. ಪ್ರೇರಿಸಲ್ಪಟ್ಟ, ಒಂದು ಕಾರ್ಯದಲ್ಲಿ ನಿಯೋಜಿಸಲ್ಪಟ್ಟ, ಒಂದು ಕಾರ್ಯವನ್ನು ನಡೆಸುವಂತೆ ಹೇಳಲ್ಪಟ್ಟ. "नियुक्तो यो विधिं हित्वा वर्तेयातां तु कामतः। तावुभौ पतितौ स्यातां स्नुषागगुरुतल्पगौ" मनु० ९-६३। 3. ಅಧಿಕಾರದಲ್ಲಿ ನಿಯಮಿಸಲ್ಪಟ್ಟ. "अश्वसधर्माणो हि मनुष्याः नियुक्ताः कर्मसु विकुर्वते" अर्थशा० २७-९। 4. ಒಂದು ಕಚೇರಿಯ ನೌಕರ. 5. ನಿಶ್ಚಯಿಸಲ್ಪಟ್ಟ. 6. ಕಟ್ಟಲ್ಪಟ್ಟ. "प्रीत्या नियुक्तोल्लिहती स्तनन्धयान्" माघ० १२-४०।

नियुक्तवत् ನಿಯುಕ್ತವತ್ (वि०) 1. ಆಪ್ತಣೆಮಾಡಿದವನು. 2. ಅಧಿಕಾರದಲ್ಲಿ ನಿಯಮಿಸಿದವನು. 3. ಒಂದು ಕಾರ್ಯದಲ್ಲಿ ಪ್ರೇರಿಸಿದವನು. नि + युजिर् (योगे) "क्तवतुः" (३-२-१०२)। स्त्रियां "ङीप्" (४-१-६)। **-वती** -ವತೀ.

नियुक्ति ನಿಯುಕ್ತಿ (स्त्री०) 1. ಆಜ್ಞೆ, ಆದೇಶ. 2. ಅಧಿಕಾರದಲ್ಲಿ ನಿಯಮಿಸುವುದು. 3. ಒಂದು ಕಾರ್ಯದಲ್ಲಿ ಪ್ರೇರಿಸುವುದು, ಒಂದು ಕೆಲಸ ಮಾಡಲು ಹೇಳುವುದು. नि + युजिर् (योगे) "क्तिन्" (३-३-९४)।

नियुज्यमान ನಿಯುಜ್ಯಮಾನ (वि०) 1. ಆಪ್ತಣೆಮಾಡುತ್ತಿರುವ, ಆಜ್ಞೆಮಾಡುತ್ತಿರುವ. 2. ಒಂದು ಕಾರ್ಯದಲ್ಲಿ ಪ್ರೇರಿಸುತ್ತಿರುವ, ಒಂದು ಕೆಲಸ ಮಾಡಲು ಹೇಳುತ್ತಿರುವ. नि + युज (समाधौ) "शानच्" (३-२-१२४)। "नियुज्यमानेन पुरः कर्मण्यतिगरीयसि। आरोप्यमाणोरुगुणं भर्त्रा कार्मुकमानमत्" माघ० ११-९१। 3. ಒಂದು ಅಧಿಕಾರದಲ್ಲಿ ನೇಮಿಸುತ್ತಿರುವ.

नियुञ्जत् ನಿಯುಂಜತ್ (वि०) 1. ಆಜ್ಞೆ ಮಾಡುತ್ತಿರುವ. 2. ಅಧಿಕಾರದಲ್ಲಿ ನಿಯಮಿಸುತ್ತಿರುವ. 3. ಒಂದು ಕೆಲಸದಲ್ಲಿ ಪ್ರೇರಿಸುತ್ತಿರುವ. नि + युजिर् (योगे) "शतृ" (३-२-१२४)। "शानच्" (३-२-१२४)। **नियुञ्जानः** ನಿಯುಂಜಾನಃ. "अन्यस्मिन् हि नियुञ्जाना धर्मं हन्युः सनातनम्" मनु० ९-६४।

नियुत ನಿಯುತ (न०) 1. ಒಂದು ಲಕ್ಷ, 1,00,000 ಸಂಖ್ಯೆ. नियूयते बहुसंख्या प्राप्यतेऽनेन—नि + यु (मिश्रणे) "क्तः" (३-२-१०२)। "शतं सहस्रमयुतं नियुतं प्रयुतं मतम्। स्त्रीकोटिरर्बुदमिति क्रमाद्दशगुणोत्तरम्" रत्न०। 2. ಹತ್ತು ಲಕ್ಷ, 10,00,000 ಸಂಖ್ಯೆ. "एकं दश शतं चैव सहस्रमयुतं तथा। लक्षं च नियुतं चैव कोटिरर्बुद एव च। वृन्दः खर्वो निखर्वश्च शङ्खपद्मौ च सागरः। अन्त्यं मध्यं परार्धं च दशवृद्धया यथोत्तरम्"।

नियुद्ध ನಿಯುದ್ಧ (न०) ದ್ವಂದ್ವಯುದ್ಧ, ಬಾಹುಯುದ್ಧ, ಕೈಕಾಳಗ. नि + युध (संप्रहारे) भावे "क्तः" (३-३-११४)। "नियुद्धं बाहुयुद्धे" अम०। "नियुद्धचर्यानिपुणौ निजघ्नतुः" याद० १४-१५।

नियोक्तव्य ನಿಯೋಕ್ತವ್ಯ (वि०) 1. ನೇಮಿಸಲ್ಪಡುವಮನು, ಒಂದು ಕಾರ್ಯಕ್ಕಾಗಿ ಗೊತ್ತುಮಾಡಲ್ಪಡುವಮನು. नि + युजिर् (योगे) "तव्यः" (३-१-९६)। 2. ಇಡಲ್ಪಡುವ, ಇರಿಸಲ್ಪಡುವ. "स्थानेष्वेव नियोक्तव्या भृत्याश्चाभरणानि च" पञ्चतं० १-७८। 3. ಆಕ್ಷೇಪಿಸಲ್ಪಡುವಮನು, ಅಪರಾಧಕ್ಕೆ ಗುರಿಮಾಡಲ್ಪಡುವಮನು. "न स राज्ञा नियोक्तव्यो न निक्षेप्तुश्च बन्धुभिः" मनु० ८-१८६। 4. ಒಂದು ಅಧಿಕಾರದಲ್ಲಿ ನೇಮಿಸಲ್ಪಡುವಮನು. 5. ಸಹೋದರನ ಪತ್ನಿಯಲ್ಲಿ ಪುತ್ರೋತ್ಪಾದನಕ್ಕಾಗಿ ನೇಮಿಸಲ್ಪಡುವ, ಪತಿಯು ಸಹೋದರನಿಂದ ಪುತ್ರೋತ್ಪಾದನೆಗಾಗಿ ನೇಮಿಸಲ್ಪಡುವ. "नान्यस्मिन् विधवा नारी नियोक्तव्या द्विजातिभिः" मनु० ९-६४। "अनीयर्" (३-१-९६)। **-योजनीयः** -ಯೋಜನೀಯಃ.

नियोक्तृ ನಿಯೋಕ್ತೃ (ವಿ೦) 1. ಆಜ್ಞೆಮಾಡುವವನು. नि+युजिर् (योगे) "तृच्" (३-१-१३३)। 2. ಪ್ರೇರಿಸುವವನು. 3. ಪ್ರಯೋಗಿಸುವವನು. "उत्क्रान्तिदा कमनु न प्रतिभाति शक्तिः कृष्णत्वमस्य च परेषु गदान्नियोक्तुः" नैष० १३-१८। 4. ನೇಮಿಸುವವನು. 5. ಪ್ರಭು, ಯಜಮಾನ. "स्थातुं नियोक्तुर्न हि शक्यमग्रे विनाश्य रक्ष्यं स्वयमक्षतेन" रघु० २-५६। 6. ಒಂದು ಕಾರ್ಯದಲ್ಲಿ ಗೊತ್ತುಮಾಡುವವನು. 7. ಒಂದು ಅಧಿಕಾರದಲ್ಲಿ ನೇಮಿಸುವವನು. स्त्रियां "ङीप्" (४-१-५)। **-क्त्री -क्ट्री०**

नियोग ನಿಯೋಗ (ಪುಂ೦) 1. ಒಂದು ಕಾರ್ಯದಲ್ಲಿ ಒಬ್ಬನನ್ನು ಗೊತ್ತುಮಾಡುವುದು, ಒಂದು ಕೆಲಸ ನಿರ್ವಹಣೆಗಾಗಿ ಒಬ್ಬನನ್ನು ನೇಮಿಸುವುದು. नि + युजिर् (योगे) "घञ्" (३-३-१८)। "अलघुनि बहु मेनिरे च ताः स्वं कुलिशभृता विहितं पदे नियोगम्" किरा० १०-१६। 2. ಆಜ್ಞೆ, ಅಪ್ಪಣೆ. "धातुर्नियोगादिह नैषधीयं लीलासरः सेवितुमागतेषु" नैष० ३-१८। 3. ನಿಜ, ನಿಶ್ಚಯ. "तत्सिषेवे नियोगेन स विकल्पपराङ्मुखः" रघु० १७-४९। 4. ಕಟ್ಟುವುದು. 5. ಪತಿಯಿಲ್ಲದ ಹೆಂಗಸಿನಲ್ಲಿ ಪುತ್ರೋತ್ಪಾದನೆಗಾಗಿ ಪತಿಯ ಸಹೋದರನನ್ನು ಗೊತ್ತುಮಾಡುವುದು. "अनिर्वृत्तं नियोगार्थं पश्यन्तो धर्मतस्तयोः" मनु० ९-६१। 6. ಅಧಿಕಾರ. 7. ದೈವ, ಅದೃಷ್ಟ.

नियोग्य ನಿಯೋಗ್ಯ (ವಿ೦) ಪ್ರಭು, ಯಜಮಾನ. नि + युजिर् (योगे) "ण्यत्" (३-१-१२४)। नियोगाय प्रभवति "क्यप्" (३-१-१२१) वा। "एते वयं नियोज्या नियोजयतु नियोग्यः" प्रद्यु० वि० ५।

नियोजक ನಿಯೋಜಕ (ವಿ೦) 1. ಪ್ರೇರಿಸುವವನು, ಒಂದು ಕೆಲಸ ಮಾಡೆಂದು ಹೇಳುವವನು. नि + युजिर् (योगे) "ण्वुल्" (३-१-१३३)। 2. ಆಜ್ಞೆಮಾಡುವವನು. 3. ಒಂದು ಅಧಿಕಾರದಲ್ಲಿ ನೇಮಿಸುವವನು. 4. ಒಂದು ಕಾರ್ಯದ ನಿರ್ವಹಣೆಗಾಗಿ ಗೊತ್ತುಮಾಡುವವನು.

नियोजन ನಿಯೋಜನ (ನ೦) 1. ಒಂದು ಅಧಿಕಾರದಲ್ಲಿ ನೇಮಿಸುವುದು. नि + युजिर् (योगे) "ल्युट्" (३-३-११५)। 2. ಒಂದು ಕಾರ್ಯದ ನಿರ್ವಹಣೆಗಾಗಿ ಗೊತ್ತುಮಾಡುವುದು. 3. ಒಂದು ಕಾರ್ಯದಲ್ಲಿ ತೊಡಗುವಂತೆ ಮಾಡುವುದು. 4. ಕಟ್ಟುವುದು. 5. ಆಜ್ಞೆಮಾಡುವುದು. 6. ಸೇರಿಸುವುದು.

नियोजयत् ನಿಯೋಜಯತ್ (ವಿ೦) 1. ಆಜ್ಞೆಮಾಡುವ. 2. ಒಂದು ಕಾರ್ಯದಲ್ಲಿ ತೊಡಗುವಂತೆ ಮಾಡುವ. 3. ಅಧಿಕಾರದಲ್ಲಿ ನೇಮಿಸುವ. 4. ಒಂದು ಕಾರ್ಯ ನಿರ್ವಹಣೆಗಾಗಿ ನೇಮಿಸುವ. नि+युज (संयमने)+णिच् "शतृ" (३-२-१२४)।

नियोजयितव्य ನಿಯೋಜಯಿತವ್ಯ (ವಿ೦) 1. ಆಜ್ಞಾಪಿಸಲ್ಪಡುವ. 2. ನೇಮಿಸಲ್ಪಡುವ. 3. ಒಂದು ಕಾರ್ಯದಲ್ಲಿ ತೊಡಗುವಂತೆ ಮಾಡಲ್ಪಡುವ. 4. ಒಂದು ಕಾರ್ಯ ನಿರ್ವಹಣೆಗಾಗಿ ನೇಮಿಸಲ್ಪಡುವ. नि+युज (संयमने)+णिच् "तव्यः" (३-१-९६)। "एनां तस्मै दत्वा देशत्यागेन सः नियोजयितव्यः" पञ्चतं० ५।

नियोजित ನಿಯೋಜಿತ (ವಿ೦) 1. ಆಜ್ಞಾಪಿಸಲ್ಪಟ್ಟ, ಆಜ್ಞೆಮಾಡಲ್ಪಟ್ಟ. नि + युजिर् (योगे)+णिच् "क्तः" (३-२-१०२)। "तदभिकेन चिकित्सितुमाशु तां मखभुजामधिपेन नियोजितौ" नैष० ४-५। 2. ಪ್ರಯೋಗಿಸಲ್ಪಟ್ಟ, ಪ್ರೇರಿಸಲ್ಪಟ್ಟ. "वज्रं च भूषामणिमूर्तिधारि नियोजितं तद्द्युतिकार्मुकं च" नैष० ७-११। 3. ಪ್ರೇರಿಸಲ್ಪಟ್ಟ, ಒಂದು ಕಾರ್ಯಕ್ಕಾಗಿ ಗೊತ್ತುಮಾಡಿ ಕಳುಹಿಸಲ್ಪಟ್ಟ. "मरुत्वतैव प्रहितोऽसि निश्चितं नियोजितश्चोर्ध्वमुखेन तेजसा" नैष० ९-२३। 4. ನಿಶ್ಚಿತವಾದ. 5. ಸೇರಿಸಲ್ಪಟ್ಟ. 6. ಜೋಡಿಸಲ್ಪಟ್ಟ.

नियोज्य ನಿಯೋಜ್ಯ (ಪುಂ೦) 1. ಸೇವಕ, ಆಳು. नियोक्तुं शक्यः – नि + युजिर् (योगे) "ण्यः" (७-३-६८)। कुत्वाभावो निपात्यते। "सिध्यन्ति कर्मसु महत्स्वपि यन्नियोज्याः संभावनागुणमवेहि तमीश्वराणाम्" शाकु० ७-४। (वि०) 2. ಅಧಿಕಾರದಲ್ಲಿ ನೇಮಿಸಲ್ಪಡುವವನು. 3. ಒಂದು ಕಾರ್ಯನಿರ್ವಹಣೆಗಾಗಿ ನೇಮಿಸಲ್ಪಡುವವನು. 4. ಸೇರಿಸಲ್ಪಡುವವನು. "हिते नियोज्यः खलु भूतिमिच्छता सहार्थनाशेन नृपोञ्छजीविना" किरा० १४-८। 5. ಜೋಡಿಸಲ್ಪಡುವ.

नियोद्ध ನಿಯೋದ್ಧೃ (ಪುಂ೦) 1. ಕುಕ್ಕುಟ, ಕೋಳಿ. नि+युध (संप्रहारे) "तृच्" (३-१-१३३)। (वि०) 2. ಬಾಹುಯುದ್ಧ ಮಾಡುವವನು, ಕೈಕಾಳಗ ಮಾಡುವವನು.

निर् ನಿರ್ (ಅವ್ಯ೦) ಇದೊಂದು ಉಪಸರ್ಗ. ಇದು ಈ ಕೆಳಗಿನ ಅರ್ಥಗಳಿಗೆ ದ್ಯೋತಕವಾಗುವುದು. 1. ನಿಶ್ಚಯ. नॄ (नये) "क्विप्" (३-२-१७८)। इत्त्वम् (७-३-५०)। "निश्चितम्"। 2. ದಾಟುವುದು, ಅತಿಕ್ರಮಿಸುವುದು "निष्कौशाम्बिः"। 3. ವಿಯೋಗ, ಬೇರ್ಪಡುವುದು.

ಆಗಲುವುದು, ಸಂಬಂಧವಿಲ್ಲದಿರುವುದು. "निःसङ्गः"। 4. ಅಭಾವ, ಶೂನ್ಯ. "मनुजपशुभिर्निर्मर्यादैर्भवद्भिरुदायुधैः" वेणी० ३-२४। 5. ನಿಃಶೇಷ. 6. ನಿಷೇಧ. "निर्निश्चये क्रान्ताद्यर्थे निःशेषप्रतिषेधयोः" हेम०। 7. ಆದೇಶ, ಆಜ್ಞೆ, ಆಜ್ಞೆ. "निर्दिश्य बन्धूनित इत्युदीरितं दमेन गत्वार्धपथे कृतार्हणम्" नैष० १६-१०। ಇತ್ಯಾದಿ.

निरंश ನಿರಂಶ (वि०) 1. ಭಾಗವಿಲ್ಲದ, ಭಾಗಕ್ಕೆ ಅಧಿಕಾರವಿಲ್ಲದ. निर्गतः अंशात्। "निरंशौ क्लीबपतितौ जात्यन्धबधिरौ तथा" मनु० ९-२०१। 2. ಭಾಗವಿಲ್ಲದ, ಸಂಪೂರ್ಣವಾದ. ಸೂರ್ಯನು ಸಂಚರಿಸುತ್ತಿರುವ ರಾಶಿಯಲ್ಲಿ ಮೂವತ್ತನೆಯ ಒಂದು ಭಾಗವಾದ ಮೊದಲನೆಯ ಭಾಗವು ಅಂಶಶೂನ್ಯವಾದುದರಿಂದ ನಿರಂಶವಾಯಿತು. "राशेः प्रथमभागस्थः निरंशः सूर्य उच्यते"।

निरंशुक ನಿರಂಶುಕ (वि०) 1. ಅಂಶುಗಳಿಲ್ಲದ, ಕಿರಣಗಳಿಲ್ಲದ. निर्गता अंशवो यस्मात्। 2. ವಸ್ತ್ರವಿಲ್ಲದ. निर्गतानि अंशुकानि यस्मात्। "वरुणगृहिणीमाशामासादयन्तममुं रुचीनिचयसिचयांशांशभ्रंशक्रमेण निरंशुकम्" नैष० १९-३।

निरक्ष ನಿರಕ್ಷ (वि०) ಅಕ್ಷಾಂಶವಿಲ್ಲದ ದೇಶ, ಅಕ್ಷದ ಉನ್ನತಿಯಿಲ್ಲದ ದೇಶ, ವಿಷುವಚ್ಛಾಯೆಯಿಲ್ಲದ ದೇಶ. निर्गतः अक्षः तदुन्नतिर्यस्मात्। "मेरोरुभयतो मध्ये ध्रुवतारे नभःस्थिते। निरक्षदेशसंस्थानामुभये क्षितिजाश्रये" सू० सि० १२-४३।

निरग्नि ನಿರಗ್ನಿ (पुं०) ಶ್ರೌತ ಸ್ಮಾರ್ತ ಅಗ್ನಿಕಾರ್ಯವಿಲ್ಲದ ವಿಪ್ರ. निर्गतोऽग्निर्यस्मात्।

निरङ्क ನಿರಂಕ (वि०) 1. ಲಾಂಛನವಿಲ್ಲದ, ಗುರುತಿಲ್ಲದ. 2. ಕಳಂಕವಿಲ್ಲದ. निर्गतोऽङ्को यस्य। "शशभृद्भिश्चित्तनिरङ्कभित्तयः" नैष० २-७४।

निरङ्कुश ನಿರಂಕುಶ (वि०) 1. ಪ್ರತಿಬಂಧಕವಿಲ್ಲದ, ಅಡ್ಡಿ ಆತಂಕಗಳಿಲ್ಲದ. निर्गतः अङ्कुश इव प्रतिबन्धको यस्य। "विनयरुचयस्तस्मात् सन्तः सदैव निरङ्कुशाः" मुद्रा० ३-६। 2. ತಡೆಯಲಶಕ್ಯವಾದ, ಭಯವಿಲ್ಲದ. "जगत्सनातनगुरौ वसिष्ठेऽपि निरङ्कुशः। व्यालद्विप इवास्माभिरुपकृष्यैव दम्यसे" म० वी० ३-३९।

निरङ्कुशता ನಿರಂಕುಶತಾ (स्त्री०) ಅಡ್ಡಿ ಆತಂಕಗಳಿಲ್ಲದಿರುವಿಕೆ, ತಡೆಯಿಲ್ಲದಿರುವಿಕೆ. निरङ्कुशस्य भावः "तल्" (५-१-११९)। "त्वः" (५-१-११९)। **-अङ्कुशत्वम्** **-ಅಂಕುಶತ್ವಮ್**.

निरङ्ग ನಿರಂಗ (न०) 1. ರೂಪಕಾಲಂಕಾರದ ಒಂದು ಭೇದ, ನಿರವಯವ ರೂಪಕ. निर्गतमङ्गं यस्य। ರೂಪಕಾಲಂಕಾರವು ಪರಂಪರಿತಮ್, ಸಾಙ್ಗಮ್ ಮತ್ತು ನಿರಙ್ಗಮ್ ಎಂದು ಮೂರು ವಿಧ. "तत्परम्परितं साङ्गं निरङ्गमिति च त्रिधा" सा० द० १०-२८। ಕೇವಲ ಉಪಮೇಯದಲ್ಲಿ ಉಪಮಾನತಾದಾತ್ಮ್ಯರೋಪವು ನಿರವಯವರೂಪಕ. ಇದು ಮಾಲಾರೂಪ ಮತ್ತು ಕೇವಲಗಳೆಂದು ಎರಡು ವಿಧ. "निरङ्गं केवलस्यैव रूपणं तदपि द्विधा। मालाकेवलरूपत्वात्" सा० द० १०-३२।

निरञ्जन ನಿರಂಜನ (पुं०) 1. ಶಿವ, ಪರಮೇಶ್ವರ. 2. ಅಜ್ಞಾನಶೂನ್ಯನಾದ ಪರಮಾತ್ಮ. "दीर्घरोमा दीर्घभुजो दीर्घबाहुर्निरञ्जनः" हरिव०। "तदा विद्वान् पुण्यपापे विधूय निरञ्जनं परमं साम्यमुपैति" मुण्डक०। 3. ದೋಷರಹಿತವಾದ. 4. ಕಾಡಿಗೆ (ಕಜ್ಜಲ) ಯಿಲ್ಲದ. निर्गतमञ्जनं कज्जलं तदिव समलमज्ञानं वा यस्य। 5. ಅಜ್ಞಾನವಿಲ್ಲದವನು. (स्त्री०) **-ना -नी**. 6. ಪೂರ್ಣಿಮೆ, ಹುಣ್ಣಿಮೆ. निर्गतम् अञ्जनमिवान्धकारो यत्र। 7. ದುರ್ಗಾದೇವಿ. "निरञ्जने साचिविलोकितं दृशावयावकं वेपथुरोष्ठपल्लवम्" किरा० ८-५२।

निरत ನಿರತ (वि०) 1. ಆಸಕ್ತನಾದ, ತತ್ಪರನಾದ, ಶ್ರದ್ಧೆಯುಳ್ಳ. नि + रमु (क्रीडायाम्) "क्तः" (३-४-७२)। "शिवमस्तु सर्वजगतां परहितनिरता भवन्तु भूतगणाः" मालती० १०-२५। 2. ಹವ್ಯಾಸವುಳ್ಳ. 3. ಪ್ರೀತಿಗೊಂಡ, ಸಂತೋಷಗೊಂಡ.

निरति ನಿರತಿ (स्त्री०) ಬಹಳ ಪ್ರೀತಿ, ಅತ್ಯಂತ ಪ್ರೇಮ. नितरां रतिः।

निरतिशय ನಿರತಿಶಯ (वि०) 1. ಬಹಳ ಹೆಚ್ಚಾದ. निर्गतोऽतिशयो यस्मात्। 2. ತನಗಿಂತಲೂ ಮಿಗಿಲಾದವನಿಲ್ಲದ. 3. ಮೀರದಿರುವ, ಮೇಲಾಗಿರದ. "निरतिशयं गरिमाणं तेन जनन्याः स्मरन्ति विद्वांसः। यत्किमपि वहति गर्भं महतामपि यो गुरुर्भवति" पञ्चतं० १-३१।

निरत्यय ನಿರತ್ಯಯ (वि०) ಅಪಾಯವಿಲ್ಲದ, ನಾಶವಿಲ್ಲದ. निर्गतः अत्ययो यस्य। "निरत्ययं साम न दानवर्जितं न भूरि दानं विरहय्य सत्क्रियाम्" किरा० १-१२।

निरध्व ನಿರಧ್ವ (वि०) ದಾರಿತಪ್ಪಿದ, ದಾರಿಯಿಂದ ಸರಿದುರುವ, ದಾರಿ ಬಿಟ್ಟು ಹೋಗಿರುವ. निष्क्रान्तोऽध्वनः "अच्" (५-४-८५)।

निरनुक्रोश ನಿರನುಕ್ರೋಶ (वि०) ದಯೆಯಿಲ್ಲದವನು, ಕಲ್ಲೆದೆಯವನು. निर्गतः अनुक्रोशो यस्मात्। "मया

पुनरलज्जया निरनुक्रोशया यूयं परित्यक्ताः" मालती० १०।

निरनुक्रोशता ನಿರನುಕ್ರೋಶತಾ (स्त्री०) ದಯೆಯಿಲ್ಲದಿರುವಿಕೆ, ಕ್ರೌರ್ಯ. निरनुक्रोशस्य भावः "तल्" (५-१-११९)।

निरनुयोज्य ನಿರನುಯೋಜ್ಯ (वि०) 1. ಸೇವಕನಿಲ್ಲದ. निर्गतोऽनुयोज्यः सेवको यस्मात्। 2. ಪ್ರಶ್ನಿಸಲು ಯೋಗ್ಯನಲ್ಲದ, ಯಾವ ಅಪರಾಧವೂ ಇಲ್ಲದ.

निरनुरोध ನಿರನುರೋಧ (वि०) ಅನುಕೂಲವಾಗಿಲ್ಲದ, ಹೊಂದಿಕೊಂಡು ನಡೆಯದಿರುವ. निर्गतोऽनुरोधो यस्मात्। "प्रियो मन्युर्जातस्तव निरनुरोधे न तु वयम्" अमरु० ८१।

निरन्तर ನಿರಂತರ (वि०) 1. ಸಾಂದ್ರವಾದ, ದಟ್ಟವಾದ, ಎಡೆಬಿಡದ. निर्गतमन्तरं यस्मात्। "हृदयं निरन्तरबृहत्कठिनस्तनमण्डलावरणमप्यभिदन्" माघ० ९-६६। 2. ಸಂತತವಾದ, ಎಡೆಬಿಡದ, ವಿರಾಮವಿಲ್ಲದ. "शिलाशयां तामनिकेतवासिनीं निरन्तरास्वन्तरवातवृष्टिषु" कुमा० ५-२५। 3. ವ್ಯತ್ಯಾಸವಿಲ್ಲದ, ಸಮಾನವಾದ, ಒಂದೇ ವಿಧವಾದ. 4. ವ್ಯವಧಾನವಿಲ್ಲದ, ಮಧ್ಯೆ ಅವಕಾಶವಿಲ್ಲದ, ಬಿಡುವಿಲ್ಲದ. "परितो रुद्धनिरन्तराम्बराः" माघ० ७६। (अव्य०) **-रम्** -ರಮ್. 5. ವ್ಯವಧಾನವಿಲ್ಲದೆ, ಬಿಡುವಿಲ್ಲದೆ. "कृतापराधानपि योषितः प्रियान् परिष्वजन्ते शयने निरन्तरम्" ऋतुसं०। 6. ಸಾಂದ್ರವಾಗಿ, ದಟ್ಟವಾಗಿ, ನಿಬಿಡವಾಗಿ. "तस्य च यदृच्छया निरन्तरनिपतितानि विकसितानि कुसुमान्यादाय" मालती० १। 7. ಸಂತತವಾಗಿ, ಎಡೆಬಿಡದೆ, ವಿಚ್ಛಿತ್ತಿಯಿಲ್ಲದೆ. "आगर्भनिर्गमनिरन्तरोपारूढविस्रम्भसदृशम्" मालती० ६। 8. ವ್ಯತ್ಯಾಸವಿಲ್ಲದೆ, ಒಂದೇ ವಿಧವಾಗಿ.

निरन्ताराभ्यास ನಿರಂತರಾಭ್ಯಾಸ (पुं०) ಎಡೆಬಿಡದೆ ಆವೃತ್ತಿಮಾಡುವುದು, ವಿಚ್ಛಿತ್ತಿಯಿಲ್ಲದೆ ಓದುವುದು. निरन्तरोऽभ्यासः। "निरन्ताराभ्यासदृढीकृतस्य सस्नेहसूत्रग्रथितस्य जन्तोः" प्रबोध० ५-२६।

निरन्तराल ನಿರಂತರಾಲ (वि०) ಮಧ್ಯೆ ಅವಕಾಶವಿಲ್ಲದ, ಸ್ವಲ್ಪವೂ ಸ್ಥಳಾವಕಾಶವಿಲ್ಲದ. निर्गतमन्तरालं यस्मात्। "एककश्चिरमरोधि बालया तल्पयन्त्रणनिरन्तरालया" नैष० १८-४३।

निरन्वय ನಿರನ್ವಯ (वि०) 1. ಸಂಬಂಧವಿಲ್ಲದ. निर्गतः अन्वयः सम्बन्धो यस्मात्। "निरन्वयोऽनपसरः प्राप्तः स्याच्चौरकिल्बिषम्" मनु० ८-१९८। 2. ಸಂತತಿಯಿಲ್ಲದ, ಮಕ್ಕಳಿಲ್ಲದ. 3. ಹಿಂಬಾಲಕನಿಲ್ಲದ, ಪರಿವಾರವಿಲ್ಲದ, ಅನುಚರರಿಲ್ಲದ. "का त्वमेकाकिनी भीरु निरन्वयजने वने" भट्टि० ५-६६। 4. ಕಟ್ಟುಪಾಡಿಗೆ ಒಳಗಾಗದಿರುವ, ಪ್ರತ್ಯಕ್ಷವಾಗಿ ಕಟ್ಟುಬೀಳದಿರುವ, ಯಜಮಾನನ ಸಮಕ್ಷದಲ್ಲಿ ನಡೆಯದಿರುವ. "स्यात्साहसं त्वन्वयवत् प्रसभं कर्म यत्कृतम्। निरन्वयं भवेत्स्तेयं हृत्वापव्ययते च यत्" मनु० ८-३३२। 5. ಯಜಮಾನನ ಸಂಬಂಧವಿಲ್ಲದ (ಚೌರ್ಯ). "परिपूतेषु धान्येषु शाकमूलफलेषु च। निरन्वये शतं दण्डः सान्वयेऽर्धशतं दमः" मनु० ८-३३१।

निरपत्य ನಿರಪತ್ಯ (वि०) ಸಂತಾನವಿಲ್ಲದ, ಮಕ್ಕಳಿಲ್ಲದ. निर्गतमपत्यं यस्मात्।

निरपत्यता ನಿರಪತ್ಯತಾ (स्त्री०) ಮಕ್ಕಳಿಲ್ಲದಿರುವಿಕೆ. निरपत्यस्य भावः "तल्" (५-१-११९)। "त्वः" (५-१-११९)। **-अपत्यत्वम्** -ಅಪತ್ಯತ್ವಮ್.

निरपत्रप ನಿರಪತ್ರಪ (वि०) ಲಜ್ಜೆಯಿಲ್ಲದ, ನಾಚಿಕೆಯಿಲ್ಲದ. निष्क्रान्तः अपत्रपायाः। "ततो हसन् स भगवानसुरैर्निरपत्रपैः। अन्वीयमानस्तरसा क्रुद्धो भीतः परापतत्" भाग० ३-२०-२४।

निरपराध ನಿರಪರಾಧ (वि०) ದೋಷವಿಲ್ಲದ, ತಪ್ಪಿಲ್ಲದ, ಯಾವ ಕಳಂಕವೂ ಇಲ್ಲದ. निर्गतोऽपराधात्।

निरपह्नव ನಿರಪಹ್ನವ (वि०) ಮರೆಮಾಚದಿರುವ, ಮುಚ್ಚಿಡದಿರುವ.

निरपाय ನಿರಪಾಯ (वि०) 1. ಅಪಾಯವಿಲ್ಲದ, ನಾಶರಹಿತವಾದ, ಸ್ಥಿರವಾದ. निर्गतोऽपायात्। "तं समेत्य निरपायतेजसं सप्तसप्तिमिव तारकाग्रहैः" याद० १७-६८। 2. ತೊಂದರೆಯಿಲ್ಲದ, ವಿಪತ್ತಿಲ್ಲದ. "निखिलानुमतां नृपो विधत्ते निरपायप्रियपथ्यभावभव्याम्" याद० १५-३८। 3. ತಪ್ಪುಮಾಡದಿರುವ, ಋಜುಮಾರ್ಗದಲ್ಲಿರುವ. (अव्य०) 4. ಅಪಾಯವಿಲ್ಲದೆ, ನಾಶವಿಲ್ಲದೆ. 5. ತೊಂದರೆಯಿಲ್ಲದೆ, ವಿಪತ್ತಿಲ್ಲದೆ. "भद्रमस्तु भवते दिवस्पते निर्जराश्च निरपायमासताम्" याद० १७-१२४।

निरपेक्ष ನಿರಪೇಕ್ಷ (वि०) 1. ಆಸಕ್ತಿಯಿಲ್ಲದ, ಅಪೇಕ್ಷೆಯಿಲ್ಲದ, ಆಸೆಯಿಲ್ಲದ. निर्गता अपेक्षा यस्य। "अध्यात्मरतिरासीनो निरपेक्षो निरामिषः" मनु० ६-४९। 2. ಆಸೆಯನ್ನು ತೊರೆದಿರುವ, ಆಸೆಯನ್ನು ಇಟ್ಟುಕೊಳ್ಳದಿರುವ. "तादृशस्यात्मनिरपेक्षव्यवसायिनः कृतान्त-

कवलीक्रियमाणजीवितबलात्कारप्रत्यानयनगुरूपकारिणः" मालती० ७। 3. परಾधीनವಲ್ಲದ, ಸ್ವತಂತ್ರವಾದ. 4. ಇತರರ ಆಶ್ರಯವನ್ನು ಅಪೇಕ್ಷಿಸದಿರುವ. "न्याय-निर्णीतसारत्वात् निरपेक्षमिवागमे" किरा० ११-३९। 5. ಗಮನಕೊಡದಿರುವ, ಅನಾದರದಿಂದ ಕೂಡಿದ, ಅಲಕ್ಷ್ಯದಿಂದ ಕೂಡಿದ. 6. ಉದಾಸೀನ, ತಟಸ್ಥ. (अव्य०) 7. ಆಸಕ್ತಿಯಿಲ್ಲದೆ. 8. ಆಸೆಯನ್ನು ಇಟ್ಟುಕೊಳ್ಳದೆ. 9. ಪರಾಧೀನತೆಯಿಲ್ಲದೆ. 10. ಇತರರ ಆಶ್ರಯವನ್ನು ಅಪೇಕ್ಷಿಸದೆ. 11. ಗಮನಕೊಡದೆ, ಅಲಕ್ಷ್ಯದಿಂದ ಕೂಡಿ. 12. ತಟಸ್ಥನಾಗಿ, ಉದಾಸೀನನಾಗಿ.

निरपेक्षा निरपेक्षा (स्त्री०) ಅನಾದರ, ತಾತ್ಸಾರ, ಅಲಕ್ಷ್ಯ, ಅಸಡ್ಡೆ.

निरपेक्षित निरपेक्षित (वि०) 1. ಅಪೇಕ್ಷಿಸಲ್ಪಡದ. 2. ಉಪೇಕ್ಷಿಸಲ್ಪಟ್ಟ.

निरभिभव निरभिभव (वि०) ಅವಮಾನಕ್ಕೆ ಒಳಗಾಗದ, ತಿರಸ್ಕಾರಕ್ಕೆ ಗುರಿಯಾಗದ. निर्गतः अभिभवः यस्मात्। "अनुत्सेको लक्ष्म्या निरभिभवसाराः परकथाः" भर्तृ० १-५७।

निरभिमान निरभिमान (वि०) ಅಪಂಕಾರವಿಲ್ಲದ. निर्गतोऽभिमानो यस्मात्।

निरभिलाष निरभिलाष (वि०) ಇಚ್ಛೆಯಿಲ್ಲದ, ಆಸೆಯಿಲ್ಲದ. निर्गतोऽभिलाषो यस्य। "स्वसुखनिरभिलाषः खिद्यसे लोकहेतोः प्रतिदिनमथवा ते वृत्तिरेवंविधैव" शाकु० ५-७।

निरमित्र निरमित्र (पुं०) 1. ಪಾಂಡುಪುತ್ರನಾದ ನಕುಲನ ಒಬ್ಬ ಮಗ. "नकुलस्तु चैद्यां रेणुमतीं नाम भार्यामुदवहत्। तस्यां पुत्रं निरमित्रं नामाजनयत्" भा० आदि० ६३-७८। (वि०) 2. ಶತ್ರುವಿಲ್ಲದ. निर्गतोऽमित्रो यस्य।

निरय निरय (पुं०) ನರಕ. निर्गतोऽयात्। "अवेक्षेत गतीर्नृणां कर्मदोषसमुद्भवाः। निरये चैव पतनं यातनाश्च यमक्षये" मनु० ६-६१।

निरर्गल निरर्गल (वि०) 1. ಪ್ರತಿಬಂಧಕವಿಲ್ಲದ, ಅಡ್ಡಿ ಆತಂಕಗಳಿಲ್ಲದ. निर्गतमर्गलमिव प्रतिबन्धो यस्य। "मरण-समये त्यक्ताशङ्कं प्रलापनिरर्गलप्रकटितनिजस्नेहः सोऽयं सखा पुर एव ते" मालती० ५-२६। (अव्य०) 2. ತಡೆಯಿಲ್ಲದೆ, ಅಡ್ಡಿಯಿಲ್ಲದೆ.

निरर्थ निरर्थ (वि०) 1. ಅರ್ಥವಿಲ್ಲದ. निर्गतोऽर्थो यस्य। 2. ಪ್ರಯೋಜನವಿಲ್ಲದ, ಫಲವಿಲ್ಲದ. 3. ಧನವಿಲ್ಲದ, ಬಡವನಾದ. "निरर्था साप्यमूर्तत्वात् पुरुषस्य महीपते"।

निरर्थक निरर्थक (वि०) 1. ಫಲವಿಲ್ಲದ, ಪ್ರಯೋಜನವಿಲ್ಲದ. निर्गतोऽर्थो यस्य—वा "कप्"। "प्रसादो निष्फलो यस्य क्रोधश्चापि निरर्थकः" भा० उद्योग० ३४-२२। 2. ಅರ್ಥವಿಲ್ಲದ. 3. ಪಾದ ಅಥವಾ ವಾಕ್ಯಪೂರ್ತಿಗಾಗಿ ಪ್ರಯೋಗಿಸುವ च वै तु हि ಇತ್ಯಾದಿ ವರ್ಣಗಳು. "निरर्थकं तु हीत्यादि पूरणैक-प्रयोजनम्"।

निरवकाश निरवकाश (वि०) 1. ವಿರಾಮವಿಲ್ಲದ, ಬಿಡುವಿಲ್ಲದ. निर्गतोऽवकाशो यस्य। 2. ಸ್ಥಳಾವಕಾಶವಿಲ್ಲದ, ಜಾಗವಿಲ್ಲದ, ಸ್ಥಾನವಿಲ್ಲದ. "न दोषं विद्वेषादपि निरवकाशं गुणमये" नैष० १४-९६।

निरवग्रह निरवग्रह (वि०) 1. ಅಡ್ಡಿ ಆತಂಕಗಳಿಲ್ಲದ, ನಿರ್ಬಂಧವಿಲ್ಲದ. निर्गतः अवग्रहो यस्य। "केचित् क्रोधसमाविष्टा मदान्धा निरवग्रहाः" भा० भीष्म० ९३-३९। 2. ಬರವಿಲ್ಲದ, ದುರ್ಭಿಕ್ಷವಿಲ್ಲದ, ಅನಾವೃಷ್ಟಿಯ ತೊಂದರೆಯಿಲ್ಲದ. (अव्य०) 3. ತಡೆಯಿಲ್ಲದೆ, ಅಡ್ಡಿ ಆತಂಕಗಳಿಲ್ಲದೆ. "निरवग्रहं दहति दैवमिव दारुणो विवस्वान्" मालती० ९।

निरवद्य निरवद्य (वि०) 1. ದೋಷರಹಿತವಾದ, ಉತ್ಕೃಷ್ಟವಾದ. निर्गतमवद्यं दोषो यस्य। "लक्ष्मीनिवास निरवद्य-गुणैकसिन्धो संसारसागरसमुत्तरणैकपोत"। 2. ರಾಗ ದ್ವೇಷಾದಿಗಳಿಲ್ಲದ. 3. ಅಜ್ಞಾನಶೂನ್ಯನಾದ ಪರಮಾತ್ಮ. "निष्कलं निष्क्रियं शान्तं निरवद्यं निरञ्जनम्। अमृतस्य परं सेतुं दग्धेन्धनमिवानलम्" श्वेता० उप०। 4. ಕರ್ಮ ಸಂಬಂಧವಿಲ್ಲದ. 5. ಹೇಯಗುಣವಿಲ್ಲದ.

निरवधि निरवधि (वि०) 1. ಅಂತ್ಯವಿಲ್ಲದ, ಕೊನೆಯಿಲ್ಲದ. निर्गतः अवधिः यस्य। "कटुस्तूष्णीं सह्यो निरवधिरयं तु प्रविलयः" उ० रा० ३-४४। 2. ಎಲ್ಲೆಯಿಲ್ಲದ, ಮೇರೆಯಿಲ್ಲದ. 3. ಕಾಲದ ಮಿತಿಯಿಲ್ಲದ, ಸತತವಾದ, ಅವಿಚ್ಛಿನ್ನವಾದ. "महानाधिर्व्याधिर्निरवधिरिदानीं प्रसरतु" मालती० ४-३। "कप्"। **-अवधिकः -ಅವಧಿಕಃ.**

निरवयव निरवयव (वि०) 1. ಅಂಗಗಳಿಲ್ಲದ, ಅವಯವಗಳಿಲ್ಲದ. (ಪರಮಾಣು, ಆಕಾಶ ಮೊದಲಾದುವು). 2. ನಿರಾಕಾರನಾದ (ಬ್ರಹ್ಮ). निर्गतोऽवयवो यस्मात्।

निरवलम्ब ನಿರವಲಂಬ(ವಿ೦) 1. ಆಶ್ರಯವಿಲ್ಲದ, ಆಧಾರವಿಲ್ಲದ, ಆಸರೆಯಿಲ್ಲದ. निर्गतोऽवलम्बो यस्मात्। 2. ಸಾಹಾಯ್ಯವಿಲ್ಲದ. ಇದೇ ಅರ್ಥದಲ್ಲಿ **–अवलम्बनः –ಅವಲಂಬನಃ.** (ಅವ್ಯ೦) 3. ಆಶ್ರಯವಿಲ್ಲದೆ, ಆಧಾರವಿಲ್ಲದೆ. "उपरि निरवलम्बनं प्रियस्य न्यपतदथोच्चतरोच्चिचीषया." माघ० ७-४८।

निरवशेष ನಿರವಶೇಷ (ವಿ೦) 1. ಶೇಷವಿಲ್ಲದ, ಸಂಪೂರ್ಣವಾದ. निर्गतोऽवशेषो यस्मात्। "तत्प्रियसखि, यथैष भर्तुरुपेक्षाभिनिवेशो निरवशेषो हृदयादुद्ध्रियते तथा कुरु" मालती० ७। (ಅವ್ಯ೦) 2. ಸಂಪೂರ್ಣವಾಗಿ, ಸಮಗ್ರವಾಗಿ. "साम्प्रतं निरवशेषं पूरिताः श्रीमाधवस्य मनोरथाः" मालती० १०।

निरवसाद ನಿರವಸಾದ (ವಿ೦) 1. ನಾಶವಿಲ್ಲದ, ಅಳಿವಿಲ್ಲದ. निर्गतोऽवसादो यस्मात्। 2. ದಣಿವಿಲ್ಲದ, ಆಯಾಸವಿಲ್ಲದ. 3. ಪರಾಜಯವಿಲ್ಲದ, ಸೋಲಿಲ್ಲದ. 4. ಹರ್ಷಚಿತ್ತನಾದ, ನಗುಮುಖವುಳ್ಳ.

निरवहालिका ನಿರವಹಾಲಿಕಾ (ಸ್ತ್ರೀ೦) ಬೇಲಿ, ಹೊರಾವರಣ. निर् + अव + हल (विलेखने) "ण्वुल्" (३-१-१३३)। "टाप्"। इत्त्वम्।

निरव्यय ನಿರವ್ಯಯ (ವಿ೦) ನಾಶವಿಲ್ಲದ, ಶಾಶ್ವತವಾದ, ನಿತ್ಯವಾದ, ವ್ಯತ್ಯಾಸವನ್ನು ಹೊಂದದಿರುವ.

निरशन ನಿರಶನ (ವಿ೦) 1. ಭೋಜನವಿಲ್ಲದ, ಊಟವಿಲ್ಲದ. निर्गतमशनं यस्मात्। "अश्मकुट्टा निरशना दशपञ्चतपाश्च ये" हरिवं०। (ಅವ್ಯ೦) 2. ಉಪವಾಸ, ಊಟಮಾಡದಿರುವಿಕೆ. अशनस्याभावः अव्ययी०(२-१-६)।

निरसन ನಿರಸನ (ನ೦) 1. ಹೊರದೂಡುವುದು, ಆಟ್ಟುವುದು, ಓಡಿಸುವುದು. निर् + असु (क्षेपणे) "ल्युट्" (३-३-११५)। "स पितुर्विक्रियां दृष्ट्वा राज्यान्निरसनं तथा" भा० आश्व० ४-१०। 2. ಪ್ರತ್ಯಾಖ್ಯಾನ, ತಿರಸ್ಕಾರ. 3. ವಧೆ, ಕೊಲ್ಲುವುದು. 4. ಉಗುಳುವುದು. "निरसनं वधे प्रतिक्षेपे। निष्ठीवने" मेदि०। 5. ತ್ಯಜಿಸುವುದು. 6. ಎಸೆಯುವುದು. 7. ತೆಗೆದುಹಾಕುವುದು, ತಳ್ಳಿಹಾಕುವುದು. 8. (ಬಾಣ) ಪ್ರಯೋಗಿಸುವುದು. (ವಿ೦) 9. ಓಡಿಸುವ, ಆಟ್ಟುವ, ಹೊರದೂಡುವ. निर्+असु कर्तृ० "ल्युः" (३-१-१३४)। "प्रियविमानितमानवतीरुषां निरसनैरसनैरवृथार्थता" माघ० ६-४७। 10. ತಿರಸ್ಕರಿಸುವ. 11. ತ್ಯಜಿಸುವ. 12. ಎಸೆಯುವ. 13. ಪ್ರಯೋಗಿಸುವ.

निरस्त ನಿರಸ್ತ (ವಿ೦) 1. ಪರಿತ್ಯಜಿಸಲ್ಪಟ್ಟ, ನಿರಾಕರಿಸಲ್ಪಟ್ಟ. निर् + असु (क्षेपणे) "क्तः" (३-२-१०२)। "निरीक्ष्य संरम्भनिरस्तधैर्यं राधेयमाराधितजामदग्न्यम्" किरा० ३-२१। 2. ಆಟ್ಟಲ್ಪಟ್ಟ, ಹೊರದೂಡಲ್ಪಟ್ಟ, ಓಡಿಸಲ್ಪಟ್ಟ. "कौलीनभीतेन गृहान्निरस्ता न तेन वैदेहसुता मनस्तः" रघु० १४-८४। 3. ಶೂನ್ಯವಾಗಿ ಮಾಡಲ್ಪಟ್ಟ, ಬರಿದಾಗಿ ಮಾಡಲ್ಪಟ್ಟ. "निरस्तपादपे देशे एरण्डोऽपि द्रुमायते" हितो०। 4. ಪ್ರಯೋಗಿಸಲ್ಪಟ್ಟ (ಬಾಣ). 5. ಎಸೆಯಲ್ಪಟ್ಟ. 6. ತಿರಸ್ಕರಿಸಲ್ಪಟ್ಟ. "अमर्षिणा कृत्यमिव क्षमाश्रयं मदोद्धतेनेव हितं प्रियं वचः। बलीयसा तद्विधिनेव पौरुषं बलं निरस्तं न रराज जिष्णुना" किरा० १४-६३। 7. ತಳ್ಳಲ್ಪಟ್ಟ, ಕೆಡವಲ್ಪಟ್ಟ. "दुर्दान्तमुत्कृत्य निरस्तसादिनम्" माघ० १२-२२। 8. ನಾಶಪಡಿಸಲ್ಪಟ್ಟ, ಹೋಗಲಾಡಿಸಲ್ಪಟ್ಟ. "दीपितारं दिनारम्भे निरस्तध्वान्तसञ्चयम्" भट्टि० ७-१७। 9. ಉಗಿಯಲ್ಪಟ್ಟ. 10. ಪ್ರಶಿಹತವಾದ. 11. ತ್ವರೆಯಿಂದ ಹೇಳಲ್ಪಟ್ಟ, ವೇಗವಾಗಿ ಹೇಳಲ್ಪಟ್ಟ (ಮಾತು).

निरस्तवत् ನಿರಸ್ತವತ್ (ವಿ೦) 1. ಪರಿತ್ಯಜಿಸಿದವನು. निर् + असु (क्षेपणे) "क्तवतुः" (३-२-१०२)। 2. ತಿರಸ್ಕರಿಸಿದವನು. "राक्षसान् वट्टयज्ञेषु पिण्डीशूरान् निरस्तवान्" भट्टि० ५-८५। 3. ಹೊರದೂಡಿದವನು, ಓಡಿಸಿದವನು. 4. (ಬಾಣ) ಪ್ರಯೋಗಿಸಿದವನು. 5. ಎಸೆದವನು. 6. ಹೋಗಲಾಡಿಸಿದವನು, ನಿವಾರಿಸಿದವನು. 7. ತಳ್ಳಿದವನು, ಕಡವಿದವನು. 8. ನಾಶಪಡಿಸಿದವನು. स्त्रियां "ङीप्" (४-१-६)। **–वती –ವತೀ.**

निरस्यत् ನಿರಸ್ಯತ್ (ವಿ೦) 1. ತೆಗೆದುಹಾಕುತ್ತಿರುವ, ತಳ್ಳಿಹಾಕುತ್ತಿರುವ. निर् + असु (क्षेपणे) "शतृ" (३-२-१२४)। "ह्रीतया गलितनीवि निरस्यन्नन्तरीयमवलम्बितकाञ्चि" किरा० ९-४८। 2. ಬಿಡುತ್ತಿರುವ, ಪರಿತ್ಯಜಿಸುತ್ತಿರುವ. "कारणद्वयमिदं निरस्यतः प्रार्थनाधिकबले विपत्फला" किरा० १३-६१। 3. ತ್ಯಜಿಸುತ್ತಿರುವ, ತಳ್ಳಿಹಾಕುತ್ತಿರುವ. 4. ನಾಶಪಡಿಸುತ್ತಿರುವ. 5. ಹೊರದೂಡುತ್ತಿರುವ, ಹೊರಕ್ಕೆ ಆಟ್ಟುತ್ತಿರುವ. 6. ಎಸೆಯುತ್ತಿರುವ. 7. (ಬಾಣ) ಪ್ರಯೋಗಿಸುತ್ತಿರುವ. 8. ತಿರಸ್ಕರಿಸುತ್ತಿರುವ. स्त्रियां "ङीप्" (४-१-६)। **–अस्यन्ती –ಅಸ್ಯನ್ತೀ.**

निरस्थि ನಿರಸ್ಥಿ (ನ೦) ಎಲುಬುಗಳಿಲ್ಲದ ಮಾಂಸ. निर्गतमस्थि यस्मात्। "मांसं निरस्थि सुस्विन्नं पुनर्दृषदि चूर्णितम्" सुश्रुत०।

निरस्यमान ನಿರಸ್ಯಮಾನ (वि०) ಹೋಗಲಾಡಿಸಲ್ಪಡುತ್ತಿರುವ, ಇಲ್ಲದಂತೆ ಮಾಡಲ್ಪಡುತ್ತಿರುವ. निर्+असु (क्षेपणे) कर्म० "शानच्" (३-२-१२४)। "मन्ये तस्य निरस्यमानकिरणस्यैषा मुखेनोद्गता श्वासायाससमाकुलालिसरणिव्याजेन धूमावली" अमरु० ९६।

निरहङ्कार ನಿರಹಂಕಾರ (वि०) 1. ಅಹಂಕಾರವಿಲ್ಲದ. 2. ಅಭಿಮಾನವಿಲ್ಲದ, ಗರ್ವವಿಲ್ಲದ. निर्गतोऽहंकारो यस्मात्। "निर्वैरा निरहङ्कारा विगतक्रोधमत्सराः" भा० आश्रम० ३४-१५।

निराकरण ನಿರಾಕರಣ (न०) 1. ತಿರಸ್ಕರಿಸುವುದು. 2. ನಿವಾರಿಸುವುದು, ಹೋಗಲಾಡಿಸುವುದು. निर्+आ+डु कृञ् (करणे) "ल्युट्" (३-३-११५)। 3. ಬಿಡುವುದು, ತ್ಯಜಿಸುವುದು. "आपात्यसैनिकनिराकरणाकुलेन" माघ० ५-१५।

निराकरणीय ನಿರಾಕರಣೀಯ (वि०) 1. ತಿರಸ್ಕರಿಸಲ್ಪಡುವ. 2. ತಿರಸ್ಕರಿಸಬೇಕಾದ. 3. ತಿರಸ್ಕರಿಸಲು ಅರ್ಹವಾದ. 4. ನಿವಾರಿಸಲ್ಪಡುವ. 5. ನಿವಾರಿಸಬೇಕಾದ. 6. ನಿವಾರಿಸಲು ಅರ್ಹವಾದ. निर् + आ + डु कृञ् (करणे) "अनीयर्" (३-१-९६)। "तव्यः" (३-१-९६)। **-कर्तव्यः -ಕರ್ತವ್ಯಃ.**

निराकरिष्णु ನಿರಾಕರಿಷ್ಣು (वि०) 1. ತಿರಸ್ಕರಿಸುವ ಸ್ವಭಾವದ. 2. ನಿವಾರಣೆಮಾಡುವ ಸ್ವಭಾವದ. निर्+आ + डु कृञ् (करणे) "इष्णुच्" (३-२-१३६)। "न चावदद्भर्तुरवर्णमार्या निराकरिष्णोर्वृजिनादृतेऽपि" रघु० १४-५७।

निराकर्तृ ನಿರಾಕರ್ತೃ (वि०) 1. ತಿರಸ್ಕರಿಸುವ, ತಳ್ಳಿಹಾಕುವ. निर् + आ + डु कृञ् (करणे) "तृच्" (३-१-१३३)। 2. ನಿವಾರಿಸುವ, ಪರಿಹರಿಸುವ. स्त्रियां "ङीप्" (४-१-५)। **-कर्त्री -ಕರ್ತ್ರೀ.**

निराकाङ्क्ष ನಿರಾಕಾಂಕ್ಷ (वि०) 1. ಅಪೇಕ್ಷೆಯಿಲ್ಲದಿರುವ, ಆಸೆಯಿಲ್ಲದಿರುವ. निर्गता आकाङ्क्षा अपेक्षा यस्मात्। 2. ಶಾಬ್ದಬೋಧವುಂಟಾಗಲು ಇತರ ಪದಗಳ ಅವಶ್ಯಕತೆಯಿಲ್ಲದ. "तेषां वाक्यं निराकाङ्क्षम्" कात्या०। यावत् पदवृन्दं निराकाङ्क्षं पूर्वापरपठितपदान्तराकाङ्क्षारहितम् इति व्याख्या।

निराकार ನಿರಾಕಾರ (पुं०) 1. ರೂಪವಿಲ್ಲದ ಪರಮಾತ್ಮ, ದೇಹರೂಪವಾದ ಆಕಾರವಿಲ್ಲದ ಬ್ರಹ್ಮ. "तेजःस्वरूपो भगवान् निराकारो निराश्रयः" ब्रह्मवै०। "साकारं च निराकारं सगुणं निर्गुणं प्रभुम्। सर्वाधारं च सर्वं च स्वेच्छारूपं नमाम्यहम्" ब्रह्मवै०। (वि०) 2. ಆಕಾರವಿಲ್ಲದ, ಅವಯವಗಳಿಲ್ಲದ. निर्गतः आकारः अवयवो यस्मात्।

निराकुल ನಿರಾಕುಲ (वि०) 1. ನಿಮ್ಮದಿಯಿಂದ ಕೂಡಿದ, ಚಿಂತೆಯಿಲ್ಲದ, ಗಾಬರಿಯಿಲ್ಲದ. "महारम्भाः कृतधियः तिष्ठन्ति च निराकुलाः" माघ० २-७९। 2. ಸ್ಥಿರವಾದ, ನಿಶ್ಚಲವಾದ, ತತ್ಪರಿಸದಿರುವ. (अव्य०) 3. ನಿಮ್ಮದಿಯಿಂದ, ಚಿಂತೆಯಿಲ್ಲದೆ. 4. ಸ್ಥಿರವಾಗಿ, ನಿಶ್ಚಲವಾಗಿ.

निराकृत ನಿರಾಕೃತ (वि०) 1. ತಿರಸ್ಕರಿಸಲ್ಪಟ್ಟ, ಕಡೆಗಣಿಸಲ್ಪಟ್ಟ, ಉಪೇಕ್ಷಿಸಲ್ಪಟ್ಟ. "निराकृते यद्भिरिति प्रकोपिभिः स्पशे शनैर्गतवति तत्र विद्विषाम्" माघ० १७-२०। 2. ಹೊರದೂಡಲ್ಪಟ್ಟ, ಬಹಿಷ್ಕರಿಸಲ್ಪಟ್ಟ. निर् + आ + डु कृञ् (करणे) "क्तः" (३-२-१०२)। "उग्रम्पश्येन सुग्रीवस्तेन भ्राता निराकृतः" भट्टि० ६-१००। 3. ತಳ್ಳಿಹಾಕಲ್ಪಟ್ಟ. 4. ನಿವಾರಿಸಲ್ಪಟ್ಟ, ಪರಿಹರಿಸಲ್ಪಟ್ಟ.

निराकृति ನಿರಾಕೃತಿ (पुं०) 1. ಪಂಚಮಹಾಯಜ್ಞಗಳನ್ನು ಮಾಡದವನು. "यक्ष्मी च पशुपालश्च परिवेत्ता निराकृतिः" मनु० ३-१५४। (स्त्री०) 2. ತಿರಸ್ಕರಿಸುವುದು, ಉಪೇಕ್ಷಿಸುವುದು. निर् + आ + डु कृञ् (करणे) "क्तिन्" (३-३-९४)। 3. ತಳ್ಳಿಹಾಕುವುದು, ತ್ಯಜಿಸುವುದು. 4. ನಿವಾರಿಸುವುದು, ಪರಿಹರಿಸುವುದು. (वि०) 5. ವೇದಾಧ್ಯಯನ ಮಾಡದವನು. आकृतेरध्ययनचेष्टाया निर्गतः। 6. ಆಕಾರವಿಲ್ಲದ, ರೂಪವಿಲ್ಲದ. निर्गता आकृतिर्यस्मात्।

निरागस् ನಿರಾಗಸ್ (वि०) ಅಪರಾಧವಿಲ್ಲದ, ತಪ್ಪಿಲ್ಲದ. निर्गतः आगसः। "कथमेकपदे निरागसं जनमाभाष्यमिमं न मन्यसे" रघु० ८-४८। "मयि निरागसि का वद विप्रता" नैष० ४-७१।

निरातङ्क ನಿರಾತಂಕ (वि०) 1. ಆತಂಕವಿಲ್ಲದ, ಭಯವಿಲ್ಲದ. निर्गतः आतङ्को यस्मात्। "पुरुषायुषजीविन्यो निरातङ्का निरीतयः" रघु० १-६३। 2. ವ್ಯಾಧಿಯಿಲ್ಲದ, ರೋಗವಿಲ್ಲದ. 3. ತಡೆಯಿಲ್ಲದ, ಅಡ್ಡಿಯಿಲ್ಲದ. "निरातङ्कः पङ्क्तिष्विव पिशितखण्डेषु निपतन्नसिर्गात्रिंगात्रं सपदि लवशस्ते विकिरतु" मालती० ५-३४।

निरातप ನಿರಾತಪ (वि०) 1. ಬಿಸಿಲಿಲ್ಲದ, ಸೂರ್ಯನ ತಾಪವಿಲ್ಲದ, ನೆರಳಿನಿಂದ ಕೂಡಿದ. निर्गतः आतपो यस्मात्। (स्त्री०) **-आतपा -ಆತಪಾ.** 2. ರಾತ್ರಿ.

निरादर ನಿರಾದರ (वि०) ಆದರವಿಲ್ಲದ, ಪ್ರೀತಿಯಿಲ್ಲದ, ವಿಶ್ವಾಸವಿಲ್ಲದ. निर्गतः आदरो यस्मात्।

निरादिष्ट ನಿರಾದಿಷ್ಟ (वि०) ಪೂರ್ತಿಯಾಗಿ ಸಂದಾಯ ಮಾಡಿದ, ಸಂಪೂರ್ಣವಾಗಿ ಪಾವತಿಮಾಡಿದ. निर् + आ + दिश (अतिसर्जने) "क्तः" (३-४-७२)। "निरादिष्टधनश्चेत्तु प्रतिभूः स्यादलंधनः। स्वधनादेव तद्द्यान्निरादिष्ट इति स्थितिः" मनु० ८-१६२।

निरादेश ನಿರಾದೇಶ (पुं०) (ಸಾಲವನ್ನು) ಪೂರ್ತಿಯಾಗಿ ಪಾವತಿಮಾಡುವುದು, ಸಂಪೂರ್ಣವಾಗಿ ಸಾಲವನ್ನು ತೀರಿಸುವುದು. निर् + आ + दिश (अतिसर्जने) "घञ्" (३-३-१८)।

निराधार ನಿರಾಧಾರ (वि०) ಆಧಾರವಿಲ್ಲದ, ಒತ್ತಾಸೆಯಿಲ್ಲದ, ಅವಲಂಬನವಿಲ್ಲದ, ಆಸರೆಯಿಲ್ಲದ. निर्गतः आधारो यस्मात्। "निराधारो हा रोदिमि कथय केषामिह पुरः" गङ्गाल०।

निराधि ನಿರಾಧಿ (वि०) 1. ಮನೋವ್ಯಥೆಯಿಲ್ಲದ. 2. ಕಳವಳವಿಲ್ಲದ, ಕಾತರವಿಲ್ಲದ, ಆತಂಕವಿಲ್ಲದ.

निरानन्द ನಿರಾನಂದ (वि०) ಸಂತೋಷವಿಲ್ಲದ, ಉಲ್ಲಾಸವಿಲ್ಲದ. निर्गतः आनन्दो यस्मात्। "निरुत्साहं निरानन्दं निर्वीर्यमरिनन्दनम्" हितो० २-७।

निराबाध ನಿರಾಬಾಧ (वि०) 1. ಪ್ರತಿಬಂಧಕವಿಲ್ಲದ, ಅಡ್ಡಿ ಆತಂಕಗಳಿಲ್ಲದ. निर्गता आबाधा यस्मात्। 2. ತೊಂದರೆಯಿಲ್ಲದ, ಬಿಂಕೆಯಿಲ್ಲದ. 3. ವ್ಯಥೆಯಿಲ್ಲದ, ದುಃಖವಿಲ್ಲದ. (अव्य०) 4. ಅಡ್ಡಿಯಿಲ್ಲದೆ, ತಡೆಯಿಲ್ಲದೆ. 5. ತೊಂದರೆಯಿಲ್ಲದೆ. "नाथे त्वयि निराबाधं त्रिलोकीं त्रातुमागते" याद० १६-२६।

निरामय ನಿರಾಮಯ (पुं०) 1. ಕಾಡುಮೇಕೆ. 2. ಸೂಕರ, ಪರಾಹ, ಹಂದಿ. (वि०) 3. ರೋಗವಿಲ್ಲದ, ಆರೋಗ್ಯದಿಂದ ಕೂಡಿದ. निर्गतः आमयो यस्मात्। "निरामयानां चित्रं तु भुक्तमध्ये प्रकीर्तितम्" सुश्रुत० सूत्र० ४६-४२९। 4. ತೊಂದರೆಯಿಲ್ಲದ, ಉಪದ್ರವವಿಲ್ಲದ.

निरामिष ನಿರಾಮಿಷ (वि०) 1. ಆಸೆಯಿಲ್ಲದ, ಅಪೇಕ್ಷೆಯಿಲ್ಲದ. "अध्यात्मरतिरासीनो निरपेक्षो निरामिषः" मनु० ६-४९। 2. ಮಾಂಸವಿಲ್ಲದ. "यथामिषे जगमुरनामिषभ्रमं निरामिषे चामिषमोहमूहिरे" नैष० १६-८१। 3. ಸುಖಸಾಮಗ್ರಿಯಿಲ್ಲದ. 4. ಲಂಚದ ಆಸೆಯಿಲ್ಲದ. निर्गतमामिषं मांसाद्यामिषमभिलाषो वा यस्मात्।

निराय ನಿರಾಯ (वि०) ಆದಾಯವಿಲ್ಲದ, ಸಂಪಾದನೆಯಿಲ್ಲದ.

निरायत ನಿರಾಯತ (वि०) 1. ಬಹಳ ಉದ್ದವಾದ, ದೀರ್ಘವಾದ. नितरामायतः। "मुक्तेषु रज्जुषु निरायतपूर्वकायाः निष्कम्पचामरशिखा निभृतोर्ध्वकर्णाः" शाकु० १-८। 2. ಸಂಕುಚಿತವಾದ, ಅಡಕವಾಗಿರುವ.

निरायतत्व ನಿರಾಯತತ್ವ (न०) ಅಡಕವಾಗಿರುವಿಕೆ, ಸಂಕುಚಿತವಾಗಿರುವಿಕೆ. निरायतस्य भावः "त्वः" (५-१-११९)। "वलिव्यपायस्फुटरोमराजिना निरायतत्वादुदरेण ताम्यता" किरा० ८-१७।

निरायति ನಿರಾಯತಿ (वि०) ಒಳ್ಳೆಯ ಭವಿಷ್ಯವಿಲ್ಲದ, ಕ್ಷಯಕಾಲವು ಸಮೀಪಿಸಿರುವ. निर् नास्ति आयतिः फलकालो यस्य। "नियता लघुता निरायतेरगरीयान्न पदं नृपश्रियः" किरा० २-१४।

निरायास ನಿರಾಯಾಸ (वि०) ಆಯಾಸವಿಲ್ಲದ, ದಣಿವಿಲ್ಲದ.

निरायुध ನಿರಾಯುಧ (वि०) ಆಯುಧವಿಲ್ಲದ, ಆಯುಧವನ್ನು ಹಿಡಿಯದಿರುವ.

निरालम्ब ನಿರಾಲಂಬ (वि०) 1. ಅವಲಂಬನವಿಲ್ಲದ, ಆಧಾರವಿಲ್ಲದ, ಆಸರೆಯಿಲ್ಲದ. निर्गतः आलम्बः यस्मात्। "एवं मयि निरालम्बे शापात् शिथिलतां गते" हरिवं०। 2. ಸ್ವತಂತ್ರನಾದ, ಒಬ್ಬನ ಆಶ್ರಯದಲ್ಲಿಲ್ಲದ. (न०) 3. ಬ್ರಹ್ಮ. (अव्य०) 4. ಆಶ್ರಯವಿಲ್ಲದೆ, ಆಸರೆಯಿಲ್ಲದೆ.

निरालय ನಿರಾಲಯ (वि०) ವಸತಿಯಿಲ್ಲದ, ಆಶ್ರಯವಿಲ್ಲದ. "रुचयोऽस्तमितस्य भास्वतः स्खलिता यत्र निरालयाः किल" नैष० २-९०।

निरालोक ನಿರಾಲೋಕ (वि०) 1. ಬೆಳಕಿಲ್ಲದ, ಅಂಧಕಾರಮಯವಾದ. निर्गतः आलोकः यस्मात्। "असारं संसारं परिमुषितरत्नं त्रिभुवनं निरालोकं लोकं मरणशरणं बान्धवजनम्" मालती० ५-३०। 2. ನೋಡದಿರುವ.

निरावरण ನಿರಾವರಣ (वि०) 1. ಆವರಣವಿಲ್ಲದ, ಮೇಲುಹೊದಿಕೆಯಿಲ್ಲದ. निर् नास्ति आवरणं यस्य। 2. ಮೇಲುಹೊದಿಕೆಯಿಲ್ಲದ, ಆಚ್ಛಾದನವಿಲ್ಲದ.

निरावृति ನಿರಾವೃತಿ (वि०) 1. ಆವರಣವಿಲ್ಲದ, ಮೇಲುಹೊದಿಕೆಯಿಲ್ಲದ. निर् नास्ति आवृतिः आवरणं यस्य। 2. ಮೇಲುಹೊದಿಕೆಯಿಲ್ಲದ, ಆಚ್ಛಾದನವಿಲ್ಲದ. "आववार तदथाम्बराञ्चलैः सा निरावृतिरिव त्रपावृता" नैष० १८-४७।

निराश ನಿರಾಶ (वि०) 1. ಆಸೆಯಿಲ್ಲದ, ಅಪೇಕ್ಷೆಯಿಲ್ಲದ. निर्गता आशा यस्मात्। 2. ಆಸೆಯನ್ನು ಬಿಟ್ಟಿರುವ, ಆಸೆಯನ್ನು ತೊರೆದಿರುವ. "ततो निराशः परिभावयन् परामये तयातोषि सरोषयैव सः" नैष० १६-१०६। "मनो बभूवेन्दुमतीनिराशम्" रघु० ६-२।

निराशता ನಿರಾಶತಾ (स्त्री०) ಆಸೆಯಿಲ್ಲದಿರುವಿಕೆ, ಆಸೆಯನ್ನು ತೊರೆದಿರುವಿಕೆ. निराशस्य भावः "तल्" (५-१-११९)। "गतो विरुत्योडुयने निराशतां करौ निरोद्धुर्दशति स्म केवलम्" नैष० १-१२५।

निराशिस् ನಿರಾಶಿಸ್ (वि०) 1. ಆಸೆ–ಅಭಿಲಾಷೆ–ಅಪೇಕ್ಷೆಯಿಲ್ಲದ. निर्गता आशीः अपेक्षा यस्मात्। "जगच्छरण्यस्य निराशिषः सतः किमेभिराशोपहतात्मवृत्तिभिः" कुमा० ५-७६। 2. ಆಸೆಯನ್ನು ತೊರೆದಿರುವ.

निराश्रय ನಿರಾಶ್ರಯ (वि०) 1. ಆಶ್ರಯವಿಲ್ಲದ, ವಸತಿಯಿಲ್ಲದ, ಆಧಾರವಿಲ್ಲದ. निर्गतः आश्रयो यस्मात्। "भवादृशाश्चेदधिकुर्वते रतिं निराश्रया हन्त हता मनस्विता" किरा० १-४३। 2. ಆಸರೆಯಿಲ್ಲದ, ಒತ್ತಾಸೆಯಿಲ್ಲದ, ಆವಲಂಬನವಿಲ್ಲದ.

निरास ನಿರಾಸ (पुं०) 1. ಓಡಿಸುವುದು, ಅಟ್ಟುವುದು, ಹೊರದೂಡುವುದು. निर् + असु (क्षेपणे) "घञ्" (३-३-१८)। "सभेव भीमा विदधे गणानां निद्रा निरासं प्रतिभागुणस्य" किरा० १६-२७। (वि०) 2. ಹೊರದೂಡುವ, ಅಟ್ಟುವ, ಓಡಿಸುವ. निर्+असु (क्षेपणे) "अच्" (३-१-१३४)।

निरासक ನಿರಾಸಕ (वि०) ಅಟ್ಟುವವನು, ಹೊರದೂಡುವವನು. निर्+असु (क्षेपणे) "ण्वुल्" (३-१-१३३)। "निरासकस्यापि न तावदुत्सहे महेश हातुं तव पादपङ्कजम्" स्तो० र० २६।

निरासित ನಿರಾಸಿತ (वि०) ಅಟ್ಟಲ್ಪಟ್ಟ, ಹೊರದೂಡಲ್ಪಟ್ಟ, ಓಡಿಸಲ್ಪಟ್ಟ. निर् + असु (क्षेपणे) "क्तः" (३-२-१०२)। "एतावता कालेन त्वया जगतामुपद्रवो निरासितः" म० वी० ७।

निरास्थ ನಿರಾಸ್ಥ (वि०) 1. ಆಸಕ್ತಿಯಿಲ್ಲದ. 2. ಆಸೆಯಿಲ್ಲದ, ಅಪೇಕ್ಷೆಯಿಲ್ಲದ. निर्गता आस्था यस्मात्।

निरास्पद ನಿರಾಸ್ಪದ (वि०) ಅವಕಾಶವಿಲ್ಲದ, ಎಡೆಯಿಲ್ಲದ, ಸ್ಥಾನವಿಲ್ಲದ. निर्गतमास्पदं यस्मात्। "निरास्पदं प्रश्नकृतूहलित्वमस्मास्वधीनं किमु निःस्पृहाणाम्" किरा० ३-९।

निराहार ನಿರಾಹಾರ (पुं०) 1. ಉಪವಾಸ, ಊಟವಿಲ್ಲದಿರುವುದು. निवृत्तः आहारः। "पश्चात्तापो निराहारः सर्वेऽमी शुद्धिहेतवः" याज्ञ० ३-३१। (न०) 2. ಆಹಾರದ ಅಭಾವ. (वि०) 3. ಆಹಾರವಿಲ್ಲದ, ಊಟವಿಲ್ಲದ. निर्गतः आहारः यस्य। "निराहाराः सख्यः सततरुदितोच्छूननयनाः" अमरु० ७।

निरित्वर ನಿರಿತ್ವರ (वि०) ನಿರ್ಗಮನದ ಸ್ವಭಾವದ, ಹೊರಡುವ ಸ್ವಭಾವದ. निर् + इण् (गतौ) "क्वरप्" (३-२-१६३)। "प्रसभमलयः पाथोजास्ये निविश्य निरित्वराः" नैष० ११-२७।

निर् + ईक्ष (दर्शने) 1. ಚೆನ್ನಾಗಿ ನೋಡು, ಎವೆಯಿಕ್ಕದೆ ನೋಡು. "यावदेतान्निरीक्षेऽहं योद्धुकामानवस्थितान्" गीता १-२२। 2. ದಿಟ್ಟಿಸಿ ನೋಡು, ಸರಿಯಾಗಿ ನೋಡು, ಗಮನಿಸು, ಜಾಗರೂಕತೆಯಿಂದ ನೋಡು. 3. ಎದುರು ನೋಡು. 4. ಹುಡುಕನೋಡು.

निरीक्षक ನಿರೀಕ್ಷಕ (वि०) 1. ಚೆನ್ನಾಗಿ ನೋಡುವವನು. 2. ಜಾಗರೂಕತೆಯಿಂದ ನೋಡುವವನು. 3. ಎದುರು ನೋಡುವವನು. निर्+ईक्ष (दर्शने) "ण्वुल्" (३-१-१३३)। 4. ಹುಡುಕಿ ನೋಡುವವನು.

निरीक्षण ನಿರೀಕ್ಷಣ (न०) 1. ಚೆನ್ನಾಗಿ ನೋಡುವುದು, ಎವೆಯಿಕ್ಕದೆ ನೋಡುವುದು. निर्+ईक्ष (दर्शने) "ल्युट्" (३-३-११५)। 2. ಜಾಗರೂಕತೆಯಿಂದ ನೋಡುವುದು, ದಿಟ್ಟಿಸಿ ನೋಡುವುದು. 3. ಬರುವವರನ್ನು ಎದುರು ನೋಡುವುದು. 4. ಹುಡುಕಿ ನೋಡುವುದು, ತಡಕುವುದು. (वि०) 5. ಚೆನ್ನಾಗಿ ನೋಡುವ. निरीक्षते—निर्+ईक्ष (दर्शने) "ल्युः" (३-१-१३४)। "प्राणापानौ सन्निरुन्ध्यात् पूरकुम्भकरेचकैः। यावन्मनस्त्यजेत् कामान् स्वनासाग्रनिरीक्षणः" भाग० ७-१५-३२।

निरीक्षमाण ನಿರೀಕ್ಷಮಾಣ (वि०) 1. ಚೆನ್ನಾಗಿ ನೋಡುತ್ತಿರುವ. निर्+ईक्ष (दर्शने) "शानच्" (३-२-१२४)। "सखीजनं प्रेमगुरूकृतादरं निरीक्षमाणा इव नम्रमूर्तयः" किरा० ८-११। 2. ಗಮನಿಸಿ ನೋಡುತ್ತಿರುವ. 3. ಎದುರುನೋಡುತ್ತಿರುವ. 4. ದಿಟ್ಟಿಸಿ ನೋಡುತ್ತಿರುವ.

निरीक्षा ನಿರೀಕ್ಷಾ (स्त्री०) 1. ಚೆನ್ನಾಗಿ ನೋಡುವುದು. निर्+ईक्ष (दर्शने) "अः" (३-३-१०३)। 2. ಗಮನಿಸಿ ನೋಡುವುದು. 3. ದಿಟ್ಟಿಸಿ ನೋಡುವುದು. 4. ಎದುರು ನೋಡುವುದು.

निरीक्षित ನಿರೀಕ್ಷಿತ (ವಿ॰) 1. ಚೆನ್ನಾಗಿ ನೋಡಲ್ಪಟ್ಟ. निर्+ईक्ष (दर्शने) "क्तः" (३-२-१०२)। "निरीक्षितं चाङ्गमवीक्षितं च दृशा पिबन्ती रभसेन तस्य" नैष॰ ८-१२। 2. ದಿಟ್ಟಿಸಿ ನೋಡಲ್ಪಟ್ಟ. "निरीय भूपेन निरीक्षिताननना शशंस मौहूर्तिकसंसदंशकम्" नैष॰ १५-८। 3. ಹುಡುಕಲ್ಪಟ್ಟ. 4. ಎದುರುನೋಡಲ್ಪಟ್ಟ. "निरीक्षितौ मया भद्रे दश वर्षाणि पञ्च च" पञ्चतं॰ २-१५२।

निरीक्षितव्य ನಿರೀಕ್ಷಿತವ್ಯ (ವಿ॰) ಅವಶ್ಯವಾಗಿ ನೋಡ ಬೇಕಾದ. निर्+ईक्ष (दर्शने) "तव्यः" (३-१-९६)।

निरीक्ष्यमाण ನಿರೀಕ್ಷ್ಯಮಾಣ (ವಿ॰) 1. ನೋಡಲ್ಪಡು ತ್ತಿರುವ. निर्+ईक्ष (दर्शने) कर्म॰ "शानच्" (३-२-१२४)। "निरीक्ष्यमाणा इव विस्मयाकुलैः पयोभिरुन्मीलितपद्मलोचनैः" किरा॰ ४-३। 2. ಎದುರು ನೋಡಲ್ಪಡುತ್ತಿರುವ, ಪ್ರತೀಕ್ಷಿಸಲ್ಪಡುತ್ತಿರುವ.

निरीति ನಿರೀತಿ (ಸ್ತ್ರೀ॰) ಈತಿಬಾಧೆಯಿಲ್ಲದ, ಅತಿವೃಷ್ಟಿ ಅನಾವೃಷ್ಟಿ ಮೊದಲಾದ ಉಪದ್ರವವಿಲ್ಲದ. निर्गता ईतिर्यत्र। "पुरुषायुषजीविन्यो निरातङ्का निरीतयः" रघु॰ २-६३।

निरीश्वर ನಿರೀಶ್ವರ (ವಿ॰) 1. ಈಶ್ವರನನ್ನು ಅಂಗೀಕರಿಸದಿರುವ (ಒಪ್ಪದಿರುವ) ಸಾಂಖ್ಯಮತಾನುಯಾಯಿ.

ಸಾಂಖ್ಯರಲ್ಲಿ ಸೇಶ್ವರಸಾಂಖ್ಯರು ನಿರೀಶ್ವರಸಾಂಖ್ಯರು ಎಂದು ಎರಡು ಭೇದ. ಏಕೇಶ್ವರವಾದಿಗಳು ಸೇಶ್ವರ ಸಾಂಖ್ಯರು. ಪ್ರವಾಹೇಶ್ವರವಾದಿಗಳು ನಿರೀಶ್ವರಸಾಂಖ್ಯರು. ಅಣಿಮಾದಿ ಸಿದ್ಧಿಯುಳ್ಳ ಕಪಿಲಮಹರ್ಷಿಯು ಕಲ್ಪಾದಿಯಲ್ಲಿ ವೇದಾದಿ ಆಗಮಗಳನ್ನು ಪ್ರಕಾಶಪಡಿಸಿದುದರಿಂದ ಅವನು ಈಶ್ವರಸ್ಥಾನದಲ್ಲಿರುವನು. ಇಂತಹ ಸಿದ್ಧಪುರುಷರು ಪ್ರತಿಕಲ್ಪದಲ್ಲೂ ಒಬ್ಬರು ಬರುವ ಕಾರಣ ಶಾಶ್ವತವಾದ ಒಬ್ಬ ಈಶ್ವರನಿಲ್ಲವೆಂದು ಸಿದ್ಧಾಂತವಾದುದರಿಂದ ಇವರು ನಿರೀಶ್ವರವಾದಿಗಳು ಮತ್ತು ಪ್ರವಾಹೇಶ್ವರವಾದಿಗಳು. ಶಾಶ್ವತವಾದ ಒಬ್ಬ ಈಶ್ವರನನ್ನು ಅಂಗೀಕರಿಸಿರುವ ಪಾತಂಜಲಯೋಗಸಿದ್ಧಾಂತದವರು ಸೇಶ್ವರಸಾಂಖ್ಯರು. ಯೋಗದರ್ಶನದಲ್ಲಿ ಶ್ರೌತಸ್ಮಾರ್ತಕರ್ಮಗಳಿಂದ ಪರಮೇಶ್ವರ ಪ್ರೀತಿಯನ್ನೂ ಅನುಗ್ರಹವನ್ನೂ ಸಂಪಾದಿಸಬೇಕೆಂದು ಉಕ್ತವಾಗಿರುವುದರಿಂದ ಈಶ್ವರಭಕ್ತಿಗೆ ಪ್ರಾಧಾನ್ಯವುಂಟು. ಸಾಂಖ್ಯಶಾಸ್ತ್ರದಿಂದ ತತ್ತ್ವಜ್ಞಾನವನ್ನು ಸಂಪಾದಿಸಿ ಯೋಗ ಶಾಸ್ತ್ರದಿಂದ ಭಕ್ತಿಪೂರ್ವಕ ಕರ್ಮಾನುಷ್ಠಾನ ಮಾಡಿ ಮೋಕ್ಷವನ್ನು ಪಡೆಯಬೇಕೆಂಬ ಅಭಿಪ್ರಾಯದಿಂದ ಸಾಂಖ್ಯಯೋಗಗಳನ್ನು ಕೂಡಿಸಿ ವ್ಯವಹರಿಸುತ್ತಾರೆ. 2. ಈಶ್ವರನಿಲ್ಲವೆಂಬ ವಾದ.

निरीष ನಿರೀಷ (ನ॰) ಈಚಿಲ್ಲದ ನೇಗಿಲು, ದಂಡವಿಲ್ಲದ ನೇಗಿಲು. निर्गतः ईषायाः।

निरीह ನಿರೀಹ (ವಿ॰) 1. ಅಪೇಕ್ಷೆಯಿಲ್ಲದ, ಇಚ್ಛೆಯಿಲ್ಲದ, ಅಭಿಲಾಷೆಯಿಲ್ಲದ. निर्गता ईहा यस्य। 2. ಯಾವ ವ್ಯಾಪಾರವೂ ಇಲ್ಲದ, ಯಾವ ಕಾರ್ಯವೂ ಇಲ್ಲದ, "अजस्य गृह्णतो जन्म निरीहस्य हतद्विषः" रघु॰ १०-२४।

निरीहा ನಿರೀಹಾ (ಸ್ತ್ರೀ॰) ಆಸೆಯಿಲ್ಲದಿರುವುದು, ಅಪೇಕ್ಷೆಯಿಲ್ಲದಿರುವುದು. निर्गता ईहा।

निरुक्त ನಿರುಕ್ತ (ನ॰) 1. ಪದಗಳ ಅವಯವಾರ್ಥಗಳನ್ನು ಹೇಳುವುದು. निर्+वच (परिभाषणे) भावे "क्तः" (३-३-११४)। 2. ವೈದಿಕ ಪದಗಳ ಅರ್ಥಗಳನ್ನು ನಿಶ್ಚಯಿಸಿ ಹೇಳುವ ಒಂದು ಗ್ರಂಥ. निः निश्चयेन उक्तम्, निरुच्यते अनेनेति वा। ನಿರುಕ್ತವು ಆರು ವೇದಾಂಗಗಳಲ್ಲೊಂದು. ಇದು ವೇದಪುರುಷನ ಶ್ರೋತ್ರರೂಪವಾದುದು. "छन्दः पादौ तु वेदस्य हस्तौ कल्पोऽथ पठ्यते। ज्योतिषामयनं चक्षुर्निरुक्तं श्रोत्रमुच्यते। शिक्षा घ्राणं तु वेदस्य मुखं व्याकरणं स्मृतम्। तस्मात्साङ्गमधीत्यैव ब्रह्मलोके महीयते" पा॰ शि॰ ४१-४२। ನಿರುಕ್ತವು ಯಾಸ್ಕಮುನಿ ಪ್ರಣೀತವಾದುದು. ಇದು ವೈದಿಕ ಪದಗಳ ಅರ್ಥನಿರ್ವಚನಕ್ಕಾಗಿಯೇ ಹೊರಟಿರುವುದರಿಂದ ಇದರ ಅಧ್ಯಯನವು ಅತ್ಯವಶ್ಯವಾದುದು. ನಿರುಕ್ತವು ನಿಘಂಟು ಗ್ರಂಥಕ್ಕೆ ಭಾಷ್ಯರೂಪವಾಗಿರುವುದು. ಕ್ಲಿಷ್ಟವಾದ ಅನೇಕ ವೈದಿಕ ಶಬ್ದಗಳನ್ನೆಲ್ಲಾ ಪೃಥಕ್ಕಾಗಿ ಸಂಗ್ರಹಿಸಿ ರಚಿಸಿರುವ ಗ್ರಂಥವು ನಿಘಂಟುವೆಂಬ ಹೆಸರಿನಿಂದ ಪ್ರಸಿದ್ಧವಾಗಿದೆ. ಈ ಶಬ್ದಗಳ ಅರ್ಥನಿರ್ವಚನವು ನಿರುಕ್ತದಲ್ಲಿ ಮಾಡಲಾಗಿರುವುದರಿಂದ ಇದು ವೇದಾಂಗವಾಯಿತು. ನಿಘಂಟುವಿನಲ್ಲಿ ಐದು ಅಧ್ಯಾಯಗಳೂ ಮೂರು ಕಾಂಡಗಳೂ ಇವೆ. (1) नैघण्टुककाण्डः, (2) नैगमकाण्डः, (3) दैवतकाण्डः। "तमिमं समाम्नायं निघण्टवः इत्याचक्षते" निरु॰ १-१-२। ಋಗ್ವೇದಭಾಷ್ಯದ ಪ್ರಾರಂಭದಲ್ಲಿ "पञ्चाध्याय-रूपकाण्डत्रयात्मके एतस्मिन् ग्रन्थे परनिरपेक्षितया पदार्थ-स्योक्तत्वात् तस्य ग्रन्थस्य निरुक्तत्वम्"। तद्व्याख्यानं च "समाम्नायः समाम्नातः स व्याख्यातव्यः" ಎಂದು ಉಕ್ತವಾಗಿದೆ. "वर्णागमो वर्णविपर्ययश्च द्वौ चापरौ वर्णविकार-नाशौ। धातोस्तदर्थातिशयेन योगस्तदुच्यते पञ्चविधं निरुक्तम्" ಎಂದು ನಿರುಕ್ತವು ಐದು ವಿಧವಾಗಿ ಉಕ್ತ

ವಾಗಿದೆ. ಯಾಸ್ಕಮುನಿಯು ಶಬ್ದರಾಶಿಯನ್ನು (1) नाम-पदानि, (2) क्रियापदानि, (3) उपसर्गाः ಮತ್ತು (4) निपाताः ಎಂದು ನಾಲ್ಕು ವಿಧವಾಗಿ ಹೇಳಿರುತ್ತಾರೆ. "तद्यान्येतानि चत्वारि पदजातानि नामाख्याते चोपसर्ग-निपाताश्च तानीमानि भवन्ति" निरु० १-१-८। **ನಿರುಕ್ತದಲ್ಲಿ ಬರುವ ವಿಚಾರಗಳು:** ನಾಮಪದ ಕ್ರಿಯಾಪದ ಉಪಸರ್ಗ ಮತ್ತು ನಿಪಾತಗಳ ಲಕ್ಷಣ, ಭಾವ ವಿಕಾರಲಕ್ಷಣ, ನಾಮಪದಗಳು ಧಾತುಜಗಳು ಎಂಬ ನಿರ್ಣಯ, ಮಂತ್ರಗಳ ಅರ್ಥವತ್ತ್ವ ಸ್ಥಾಪನೆ, ಮಂತ್ರಗಳ ದೇವತಾಪರಿಜ್ಞಾನ, ಅರ್ಥಜ್ಞಪ್ರಶಂಸೆ ಮತ್ತು ಅನರ್ಥಜ್ಞನಿಂದೆ, ನೈಘಂಟುಕ, ನೈಗಮ ಮತ್ತು ದೈವತಾಕಾಂಡಗಳ ವಿಭಾಗ, ನಿರ್ವಚನಕ್ರಮದ ಪ್ರತಿಪಾದನೆ ಇತ್ಯಾದಿ. ಎಲ್ಲಾ ನಾಮಪದಗಳೂ ಆಖ್ಯಾತಜಗಳಿಂದು ಇವರ ಸಿದ್ಧಾನ್ತ. "आख्यातजानीति शाकटायनः नैरुक्तसमयश्च" निरु० १-१२-२। ನೈಘಂಟುಕಕಾಂಡದಲ್ಲಿ ಏಕಾರ್ಥವಾಚಿಯಾದ ಅನೇಕ ಶಬ್ದಗಳ ಗಣಗಳು 69. ಒಟ್ಟು 1339 ಪದಗಳು. ನೈಗಮಕಾಂಡದಲ್ಲಿ ಏಕಪದಿಗಳು 278 ಪದಗಳು. ದೈವತ ಕಾಂಡದಲ್ಲಿ 6 ಗಣಗಳು — ಒಟ್ಟು 151 ಪದಗಳು ಈ ರೀತಿ ವಿಂಗಡಿಸಿರುತ್ತಾರೆ. ಇವುಗಳಲ್ಲಿ ನೈಘಂಟುಕಕಾಂಡದ ಗಣಗಳಲ್ಲಿ ಮುಖ್ಯವಾದ ಪದಗಳಿಗೂ ನೈಗಮ ಮತ್ತು ದೈವತ ಕಾಂಡಗಳ ಪ್ರತಿಯೊಂದು ಪದಕ್ಕೂ ನಿರ್ವಚನಮಾಡಿ ಮಂತ್ರಗಳ ಉದಾಹರಣೆಗಳನ್ನು ಕೊಡುವುದರ ಮೂಲಕ ನಿರುಕ್ತದಲ್ಲಿ ಅರ್ಥವಿವರಣೆ ಮಾಡಿರುತ್ತಾರೆ. ಯಾಸ್ಕ ಮುನಿಗಿಂತ ಪೂರ್ವದಲ್ಲಿ ಅನೇಕ ನಿರುಕ್ತಕಾರರು ಇದ್ದರೆಂದು ಯಾಸ್ಕರು ಹೇಳಿರುವ ऐतिहासिकाः, वैयाकरणाः, पूर्वे याज्ञिकाः, नैरुक्ताः ಎಂಬ ಮಾತುಗಳಿಂದ ತಿಳಿಯಬಹುದಾಗಿದೆ. आग्रायणः औदुम्बरायणः औपमन्यवः काथक्यः कौत्सः गार्ग्यः गालवः कैटकिः शालक्यः शाकपूणिः ಇತ್ಯಾದಿ ನಿರುಕ್ತಕಾರರ ಹೆಸರನ್ನು ನಾಮತಃ ನಿರ್ದೇಶಿಸಿರುತ್ತಾರೆ. ವೇದಮಂತ್ರಗಳಿಗೆ ಅನುಪೂರ್ವಿಯೇ ಪ್ರಧಾನವಾದುದು, ಅರ್ಥವಲ್ಲ ಎಂಬ ವಾದವನ್ನು ನಿರಾಕರಿಸಿ ಯಾಸ್ಕರು ಲೋಕದಲ್ಲಿ ವ್ಯವಹಾರದಲ್ಲಿರುವ ಸಾಮಾನ್ಯ ಶಬ್ದಗಳನ್ನೇ ವೇದಮಂತ್ರಗಳಲ್ಲಿಯೂ ಉಪಯೋಗಿಸಿರುವುದರಿಂದ ವೇದಮಂತ್ರಗಳು ಅರ್ಥವತ್ತಾದುವು ಎಂದು ಸಿದ್ಧಾನ್ತ ಮಾಡಿದ್ದಾರೆ. "अर्थवन्तः शब्दसामान्यात्" निरु० १-१५-१०। ಆಯಾ ಪ್ರಕರಣಕ್ಕನುಗುಣವಾಗಿ ನಿರ್ದಿಷ್ಟವಾದ ಮಂತ್ರಗಳನ್ನು ಉಪಯೋಗಿಸಬೇಕೆಂದು ತೋರಿಸುವ ಬ್ರಾಹ್ಮಣಮಂತ್ರಗಳೂ ಅರ್ಥವತ್ತಾದುವು. ವಿವಾಹದಲ್ಲಿ ವಿನಿಯೋಗಿಸುವ ಒಂದು ಮಂತ್ರದಲ್ಲಿ "ನೀವು (ದಂಪತಿಗಳು) ಇಬ್ಬರೂ ಈ ಮನೆಯಲ್ಲೇ ಸಂತೋಷದಿಂದಿರಿ. ನಿಮಗೆ ಯಾವಾಗಲೂ ವಿಯೋಗ ವಿಲ್ಲದಿರಲಿ. ಪೂರ್ಣಾಯುಸ್ಸನ್ನು ಹೊಂದಿ ಪುತ್ರ ಪೌತ್ರಾದಿಗಳೊಡನೆ ಕ್ರೀಡಿಸುತ್ತಿರಿ ಎಂಬ ಆಶೀರ್ವಚನ ಮಂತ್ರಕ್ಕೆ ಅರ್ಥವಿರುವುದು" ಎಂದು ಸಮಾಧಾನ ಹೇಳಿರುವರು. ಯಾಸ್ಕರು ಉಪಮಾಲಂಕಾರದ ಲಕ್ಷಣವನ್ನು ಹೇಳಿ "इति कर्मोपमा", "इति भूतोपमा", "इति रूपोपमा", "इति सिद्धोपमा" ಇತ್ಯಾದಿ ಉಪಮಾಲಂಕಾರದ ಕೆಲವು ಪ್ರಭೇದಗಳನ್ನೂ ಹೇಳಿರುವುದರಿಂದ ವೇದಗಳಲ್ಲಿಯೂ ಅಲಂಕಾರಶಾಸ್ತ್ರವು ಪ್ರಾರಂಭಾವಸ್ಥೆಯಲ್ಲಿತ್ತೆಂದು ತಿಳಿಯಬಹುದಾಗಿದೆ. ಯಾಸ್ಕರ ಕಾಲದಲ್ಲಿ ಸಮಾಜವು ವೇದದಲ್ಲಿ ಸಂಪೂರ್ಣ ನಂಬಿಕೆಯನ್ನು ಹೊಂದಿತ್ತೆಂದೂ ವೇದವಿರುದ್ಧವಾದ ಜೈನ ಬೌದ್ಧ ಧರ್ಮಗಳ ಪ್ರಭಾವವಿರಲಿಲ್ಲವೆಂದೂ ನಿರುಕ್ತದಿಂದ ತಿಳಿಯಬಹುದಾಗಿದೆ. ಆದರೆ ವೇದವಾಙ್ಮಯವು ಸರ್ವರಿಗೂ ಅರ್ಥವಾಗುತ್ತಿರಲಿಲ್ಲವೆಂದೂ ತಿಳಿಯಬೇಕಾಗುವುದು. ಮಂತ್ರಬ್ರಾಹ್ಮಣಾತ್ಮಕವಾದ ಸಮಗ್ರ ವೇದರಾಶಿಯನ್ನು ಯಾಸ್ಕಮುನಿಯು ವಿಮರ್ಶಾತ್ಮಕ ದೃಷ್ಟಿಯಿಂದ ನೋಡಿ ಅಂದಿನ ಕಾಲದ ಅಭಿಪ್ರಾಯಗಳನ್ನು ತಮ್ಮ ದೈವತಕಾಂಡದ ಟೀಕೆಯಲ್ಲಿ ನಿರೂಪಿಸಿರುತ್ತಾರಾದುದರಿಂದ ಪ್ರಾಚೀನವಾದ ವೈದಿಕ ಸಾಹಿತ್ಯದ ಇತಿಹಾಸದ ಅರಿವು ಭಾರತೀಯರಲ್ಲಿ ಆಗಿನಿಂದಲೂ ಇತ್ತೆಂದು ನಾವು ತಿಳಿಯಬಹುದಾಗಿದೆ.

निरुक्तकृत् निरुक्तकृत् (पुं०) ನಿರುಕ್ತ ಗ್ರಂಥವನ್ನು ಬರೆದ ಯಾಸ್ಕಮುನಿ.

निरुक्तज निरुक्तज (पुं०) ಕ್ಷೇತ್ರಜ ಪುತ್ರ, ನಿಯೋಗವನ್ನು ಪಡೆದವನಿಂದ ಜನಿಸಿದ ಪುತ್ರ. निरुक्तात् नियुक्तात् जातः जनी (प्रादुर्भावे) "डः" (३-२-९८)।

निरुक्ति निरुक्ति (स्त्री०) 1. ನಿರ್ವಚನ, ಪದಗಳ ಅವಯವಾರ್ಥಗಳನ್ನು ಹೇಳುವುದು. निर् + वच (परिभाषणे) "क्तिन्" (३-३-९४)। "तदङ्गभोगावलिगायनीनां मध्ये निरुक्तिक्रमकुण्ठितानाम्" नैष० १०-१०६। 2. ಅವಯವ ಶಕ್ತಿಯಿಂದ ನಾಮಪದಗಳಿಗೆ ಬೇರೊಂದು ಅರ್ಥವನ್ನು ಕಲ್ಪಿಸುವುದು. ಇದು ಅರ್ಥಾಲಂಕಾರದ ಒಂದು ಭೇದ. "निरुक्तियोगतो नाम्नामन्यार्थत्वप्रकल्पनम्" चन्द्रा०। उदा०—"ईदृशैश्चरितैर्जाने सत्यं दोषाकरो भवान्"।

निरुच्छ्वास निरुच्छ्वास (पुं०) 1. ಉಸಿರಾಡದಿರುವಿಕೆ, ಶ್ವಾಸವನ್ನು ತಡೆದಿರುವಿಕೆ. निर्गतः उच्छ्वासः। (वि०) 2. ಉಸಿರಾಡದಿರುವ, ಉಸಿರು ಕಟ್ಟಿರುವ, "गर्भेरविच्छेद-

निरुद्धमाबभौ वनं निरुच्छ्वासमिवाकुलाकुलम्" किरा० १४-३२। 3. ಉಸಿರಾಡಲೂ ಅವಕಾಶವಿಲ್ಲದಷ್ಟು ಇಕ್ಕಟ್ಟಾದ. "उपेयुषो वर्त्म निरन्तराभिरसौ निरुच्छ्वास-मनीकिनीभिः" माघ० ३-३२।

निरुच्यमान ನಿರುಚ್ಯಮಾನ (वि०) ಚೆನ್ನಾಗಿ ಹೇಳಲ್ಪಡುತ್ತಿರುವ, ಸ್ಪಷ್ಟವಾಗಿ ವಿವರಿಸಿ ಹೇಳಲ್ಪಡುತ್ತಿರುವ. निर्+वच (परिभाषणे) कर्म० "शानच्" (३-२-१२४)। "निरुच्यमानं प्रश्नं च नेच्छेद्यश्चापि निष्पतेत्" मनु० ८-५५।

निरुच्छ्वास ನಿರುಚ್ಛ್ವಾಸ (न०) ಪರಸ್ಪರ ಮಸ್ತ್ರಗಳನ್ನು ಬದಲಾಯಿಸಿಕೊಳ್ಳುವುದು. निर् + उच्छि (उच्छे) "घञ्" (३-३-११५)। "सान्द्रप्रमोदात् पुलकोपगूढः सर्वाङ्ग-संफुल्लसहस्रनेत्रः। तस्योत्तरीयेण निजाम्बरेण निरुच्छ्वासं चारु चकार शक्रः" कुमा० १३-१८।

निरुत्तर ನಿರುತ್ತರ (वि०) 1. ಉತ್ತರವಿಲ್ಲದ, ಪ್ರತಿವಚನವಿಲ್ಲದ, ಬದಲು ಹೇಳದಿರುವ. निर्गतमुत्तरं प्रतिवचनं यस्य। 2. ಶ್ರೇಷ್ಠನಿಲ್ಲದ. निर्गतः उत्तरः श्रेष्ठो यत्र।

निरुत्सव ನಿರುತ್ಸವ (वि०) ಉತ್ಸವವಿಲ್ಲದ, ಹಬ್ಬಗಳಿಲ್ಲದ. निर्गतः उत्सवः यस्मात्। "धृतिरस्तमिता रतिश्च्युता विरतं गेयमृतुर्निरुत्सवः" रघु० ८-६६।

निरुत्साह ನಿರುತ್ಸಾಹ (पुं०) 1. ಉತ್ಸಾಹವಿಲ್ಲದಿರುವಿಕೆ, ಯಾವ ವಿಷಯದಲ್ಲೂ ಇಚ್ಛೆಯಿಲ್ಲದಿರುವಿಕೆ. निर्गतः उत्साहः। (वि०) 2. ಉತ್ಸಾಹವಿಲ್ಲದ. 3. ಸೋಮಾರಿಯಾದ, ಮೈಗಳ್ಳನಾದ. "निरुत्साहं निरानन्दं निर्वीर्य-मरिनन्दनम्" हितो० २-७।

निरुत्सुक ನಿರುತ್ಸುಕ (वि०) ಬಹಳ ಉತ್ಸುಕನಾದ, ಇಷ್ಟವಾದುದನ್ನು ಪಡೆಯಲು ತವಕಪಡುವ. नितरामत्सुकः। "निरुत्सुकानामभियोगभाजां समुत्सुकेवाङ्कमुपैति सिद्धिः" किरा० ३-४०।

निरुत्सेक ನಿರುತ್ಸೇಕ (वि०) ಗರ್ವವಿಲ್ಲದ, ಅಹಂಕಾರವಿಲ್ಲದ.

निरुद्ध ನಿರುದ್ಧ (वि०) 1. ತಡೆಯಲ್ಪಟ್ಟ, ಬಿಗಿಹಿಡಿಯಲ್ಪಟ್ಟ. नि+रुधिर् (आवरणे) "क्तः" (३-२-१०२)। "अवेक्षितानायतवल्गमग्रे तुरङ्गिभिर्यत्ननिरुद्धवाहैः" माघ० ३-३०। 2. ತಡೆಯಲ್ಪಟ್ಟ, ಅಡ್ಡಿಮಾಡಲ್ಪಟ್ಟ. "निरुद्धवीवधासारप्रसारा गा इव व्रजम्। उपरुन्धन्तु दाशार्हाः पुरीं माहिष्मतीं द्विषः" माघ० २-६४। 3. ತಡೆದುಕೊಳ್ಳಲ್ಪಟ್ಟ, ಒಳಗೇ ಅಡಗಿಸಿಕೊಳ್ಳಲ್ಪಟ್ಟ. "निरुद्धबाष्पोदयसन्नकण्ठमुवाच कृच्छ्रादिति राजपुत्री" किरा० ३-३८। 4. ಆಕ್ರಮಿಸಲ್ಪಟ್ಟ, ಸುತ್ತುವರೆಯಲ್ಪಟ್ಟ. "गणैरविच्छेदनिरुद्धमाबभौ वनं निरुच्छ्वासमिवाकुलाकुलम्" किरा० १४-३२।

निरुद्धवत् ನಿರುದ್ಧವತ್ (वि०) 1. ಬಿಗಿಹಿಡಿದವನು. 2. ತಡೆದವನು. 3. ಅಡಗಿಸಿಕೊಂಡವನು. 4. ಆಕ್ರಮಿಸಿದವನು. नि + रुधिर् (आवरणे) "क्तवतुः" (३-२-१०२)।

निरुद्यम ನಿರುದ್ಯಮ (पुं०) 1. ಪ್ರಯತ್ನವಿಲ್ಲದಿರುವಿಕೆ. 2. ಯಾವ ಕಾರ್ಯವೂ ಇಲ್ಲದಿರುವಿಕೆ. (वि०) 3. ಪ್ರಯತ್ನವಿಲ್ಲದ. 4. ಸೋಮಾರಿಯಾದ, ಯಾವ ಚಟುವಟಿಕೆಯೂ ಇಲ್ಲದ.

निरुद्योग ನಿರುದ್ಯೋಗ (वि०) "निरुद्यम" ನೋಡಿ.

निरुद्योगिन् ನಿರುದ್ಯೋಗಿನ್ (वि०) ಯಾವ ಕೆಲಸವೂ ಇಲ್ಲದ, ಯಾವ ಕಾರ್ಯಕಲಾಪವೂ ಇಲ್ಲದ. निरुद्योग "इनिः" (५-२-११५)।

निरुद्वेग ನಿರುದ್ವೇಗ (पुं०) 1. ಗಾಬರಿಯಿಲ್ಲದಿರುವಿಕೆ, ಕಳವಳವಿಲ್ಲದಿರುವಿಕೆ. 2. ಭಯವಿಲ್ಲದಿರುವಿಕೆ, ಹೆದರಿಕೆಯಿಲ್ಲದಿರುವಿಕೆ. 3. ಅಸಮಾಧಾನವಿಲ್ಲದಿರುವಿಕೆ, ಶಾಂತವಾಗಿರುವಿಕೆ. निर्गतः उद्वेगः।

निरुध्यमान ನಿರುಧ್ಯಮಾನ (वि०) 1. ತಡೆಯಲ್ಪಟ್ಟ, ಅಡ್ಡಿಮಾಡಲ್ಪಟ್ಟ. नि + रुधिर् (आवरणे) कर्म० "शानच्" (३-२-१२४)। 2. ತಡೆಯಲ್ಪಟ್ಟ, ಬಿಗಿಒಡಿಯಲ್ಪಟ್ಟ. "निरुध्यमाना यदुभिः कथंचिन्मुहुर्यदु-च्चिक्षिपुरग्रपादान्" माघ० ३-२९। 3. ಆಕ್ರಮಿಸಲ್ಪಟ್ಟ. "निरुध्यमानं निकरेण भासाम्" किरा० १६-४५। 4. ಒಳಗೇ ಅಡಗಿಸಿಕೊಳ್ಳಲ್ಪಟ್ಟ, ತಡೆದುಕೊಳ್ಳಲ್ಪಟ್ಟ.

निरुन्धत् ನಿರುಂಧತ್ (वि०) 1. ತಡೆಯುತ್ತಿರುವ, ಅಡ್ಡಿಮಾಡುತ್ತಿರುವ. नि + रुधिर् (आवरणे) "शतृ" (३-२-१२४)। 2. ಆಕ್ರಮಿಸುತ್ತಿರುವ, ಆವರಿಸುತ್ತಿರುವ. "द्यां निरुन्धदतिनीलघनाभं ध्वान्तमुद्यतकरेण पुरस्तात्" किरा० ९-२०। 3. ತಡೆದುಕೊಳ್ಳುತ್ತಿರುವ, ಒಳಗೇ ಅಡಗಿಸಿಕೊಳ್ಳುತ್ತಿರುವ. 4. ತಡೆಯುತ್ತಿರುವ, ಬಿಗಿಹಿಡಿಯುತ್ತಿರುವ. स्त्रियां "ङीप्" (४-१-६)। **-रुन्धती -ರುಂಧತೀ.** "विपाण्डु संव्यानमिवानिलोद्धतं निरुन्धतीः सप्तपलाशजं रजः" किरा० ४-२८। "प्रसक्त-दावानलधूमधूम्रा निरुन्धती धाम सहस्ररश्मेः" किरा० ९-२६।

निरुन्धान ನಿರುಂಧಾನ (ವಿ೦) 1. ತಡೆಗಟ್ಟುತ್ತಿರುವ, ಅಡ್ಡಿಪಡಿಸುತ್ತಿರುವ. नि+रुधिर् (आवरणे) "शानच्" (३-२-१२४)। "निरुन्धानाः सतां मार्गं भक्षयन्ति महीपतिम्" कामन्द० ४-१२। 2. ಆಕ್ರಮಿಸುತ್ತಿರುವ, ಆವರಿಸುತ್ತಿರುವ. 3. ಬಿಗಿಹಿಡಿಯುತ್ತಿರುವ. 4. ಒಳಗೆ ಅಡಗಿಸಿಕೊಳ್ಳುತ್ತಿರುವ.

निरुपकारिन् ನಿರುಪಕಾರಿನ್ (ವಿ೦) ಉಪಕಾರಮಾಡದಿರುವ. "तुल्यरूपमसितोत्पलमक्ष्णोः कर्णगं निरुपकारि विदित्वा" किरा० ९-६१।

निरुपक्रम ನಿರುಪಕ್ರಮ (ವಿ೦) 1. ಚಿಕಿತ್ಸೆಯನ್ನು ಪ್ರಾರಂಭಿಸಲು ಯೋಗ್ಯವಲ್ಲದ, (ರೋಗ) ವಾಸಿಮಾಡಲಾಗದ 2. ಪ್ರಾರಂಭಿಸದಿರುವ, ಕಾರ್ಯಕ್ಕೆ ಮೊದಲು ಮಾಡದಿರುವ.

निरुपद्रव ನಿರುಪದ್ರವ (ವಿ೦) 1. ತೊಂದರೆಯಿಲ್ಲದ, ಹಿಂಸೆಯಿಲ್ಲದ. 2. ಅಪಾಯವಿಲ್ಲದ, ಹಿಂಸೆಯಿಲ್ಲದ. 3. ಅಪಾಯವಿಲ್ಲದ, ಯಾವ ವಿಧವಾದ ಕೆಡಕೂ ಇಲ್ಲದ. निर्गतः उपद्रवः यस्मात्।

निरुपधि ನಿರುಪಧಿ (ವಿ೦) 1. ಕಪಟವಿಲ್ಲದ, ಮೋಸವಿಲ್ಲದ, ವಂಚನೆಯಿಲ್ಲದ. निर्गतः उपधिः यस्मात्। 2. ಆತಂಕವಿಲ್ಲದ, ನೆಮ್ಮದಿಯಿಂದಿರುವ. "निरुपधिनिजावस्थालक्ष्मीविलक्षणमीक्ष्यते" नैष० १९-१३। वा "कप्" (५-४-१५४)। **–उपधिकः –ಉಪಧಿಕಃ**. "निरुपधिकनिजप्रभावगर्भं परिषदि विश्वपतिः प्रियासहायः" याद० २४-४१।

निरुपपद ನಿರುಪಪದ (ವಿ೦) ಉಪಪದವಿಲ್ಲದ, ಹಿಂದೆ ಯಾವ ಪದವೂ ಇಲ್ಲದ (ಪದ). निर् नास्ति उपपदं यस्य। "कथं निरुपपद एव चाणक्यो न आर्यचाणक्य इति" मुद्रा० ३।

निरुपप्लव ನಿರುಪಪ್ಲವ (ವಿ೦) ತೊಂದರೆಯಿಲ್ಲದಿರುವ, ಬಾಧೆಯಿಲ್ಲದಿರುವ. निर्गतः उपप्लवो यस्मात्। "प्रतिघातिनीं विषयसङ्गरतिं निरुपप्लवः शमसुखानुभवः" किरा० ६-२१।

निरुपम ನಿರುಪಮ (ವಿ೦) ಅನ್ಯಾದೃಶವಾದ, ಹೋಲಿಕೆಯಿಲ್ಲದ, ಸಾಟಿಯಿಲ್ಲದ. निर्गता उपमा यस्मात्।

निरुपसर्ग ನಿರುಪಸರ್ಗ (ವಿ೦) 1. प्र परा ಮೊದಲಾದ ಉಪಸರ್ಗದೊಡನೆ ಸೇರಿರದ. 2. ಯಾವ ಪೀಡೆಯೂ ಇಲ್ಲದ, ಯಾವ ಉಪದ್ರವವೂ ಇಲ್ಲದ. 3. ಉತ್ಪಾತ ಮೊದಲಾದ ಯಾವ ಅಶುಭ ಸೂಚನೆಯೂ ಇಲ್ಲದ. निर्गतः उपसर्गः यस्मात्।

निरुपाख्य ನಿರುಪಾಖ್ಯ (ವಿ೦) 1. ವರ್ಣಿಸಲು ಅಶಕ್ತವಾದ, ಹೊಗಳಲು ಸಾಧ್ಯವಲ್ಲದ. निर्गता उपाख्या यस्मात्। "प्रापुस्तमेकं निरुपाख्यरूपं ब्रह्मेव चेतांसि यतव्रतानाम्" नैष० ३-३। 2. ವಾಸ್ತವವಾಗಿಲ್ಲದ, ಕಾಲ್ಪನಿಕ, ಸುಳ್ಳಾಗಿರುವ. (ನ೦) 3. ಅನಿರ್ವಚನೀಯವಾದ ಬ್ರಹ್ಮ.

निरुपाधिक ನಿರುಪಾಧಿಕ (ಅವ್ಯ೦) ಯಾವ ವಿಧವಾದ ಕಾರಣವೂ ಇಲ್ಲದೆ, ಯಾವ ನಿಮಿತ್ತವೂ ಇಲ್ಲದೆ. निर्गतः उपाधिः यस्मिन् कर्मणि। "निरुपाधिकसबंबन्धुमेनं द्विषताऽनेन न भाषणप्रसङ्गः" याद० १५-७१।

निरुपाय ನಿರುಪಾಯ (ವಿ೦) ಉಪಾಯವಿಲ್ಲದ, ಯಾವ ವಿಧವಾದ ಯುಕ್ತಿಯೂ ಇಲ್ಲದ. निर्गतः उपायः यस्मात्। "उच्छिद्यमानो बलिना निरुपायप्रतिक्रियः" कामन्द०।

निरूढ ನಿರೂಢ (ವಿ೦) ಚೆನ್ನಾಗಿ ಬೆಳೆದುಬಂದಿರುವ, ಅಭಿವೃದ್ಧಿಹೊಂದಿರುವ. नि + रुह (बीजजन्मनि प्रादुर्भवि च) "क्तः" (३-४-७२)। "बाल्यात् प्रभृत्येव निरूढसख्यं सुग्रीवमेष ध्रुवमाश्रयेत" म० वी० ४-९।

ಅಮರಸಿಂಹನು ರಚಿಸಿರುವ ನಾಮಲಿಂಗಾನುಶಾಸನವು ಮೂರು ಕಾಂಡಗಳಾಗಿ ವಿಂಗಡಿಸಲ್ಪಟ್ಟಿದೆ. ಪ್ರತಿಯೊಂದು ಕಾಂಡದಲ್ಲಿಯೂ ಶಬ್ದಗಳು ವರ್ಗೀಕೃತವಾಗಿ ಅನೇಕ ವರ್ಗಗಳಾಗಿರುವುವು. ಇದರಲ್ಲಿ ಪರ್ಯಾಯ ಪದಗಳೂ ನಾನಾರ್ಥ ಶಬ್ದಗಳೂ ಸೇರಿವೆ.

ಪ್ರಥಮ ಕಾಂಡದಲ್ಲಿ : ಸ್ವರ್ಗವರ್ಗ ವ್ಯೋಮವರ್ಗ ದಿಗ್ವರ್ಗ ಕಾಲವರ್ಗ ಧೀವರ್ಗ ವಾಗ್ವರ್ಗ ಶಬ್ದಾದಿವರ್ಗ ನಾಟ್ಯವರ್ಗ ಪಾತಾಳವರ್ಗ ಭೋಗಿವರ್ಗ ನರಕವರ್ಗ ಮತ್ತು ವಾರಿವರ್ಗಗಳೂ

ದ್ವಿತೀಯ ಕಾಂಡದಲ್ಲಿ : ಭೂವರ್ಗ ಪುರವರ್ಗ ಶೈಲ ವರ್ಗ ವನೌಷಧಿವರ್ಗ ಸಿಂಹಾದಿವರ್ಗ ಮನುಷ್ಯವರ್ಗ ಬ್ರಹ್ಮ ವರ್ಗ ಕ್ಷತ್ರಿಯವರ್ಗ ವೈಶ್ಯವರ್ಗ ಮತ್ತು ಶೂದ್ರವರ್ಗಗಳೂ

ತೃತೀಯ ಕಾಂಡದಲ್ಲಿ : ವಿಶೇಷ್ಯನಿಘ್ನವರ್ಗ ಸಂಕೀರ್ಣ ವರ್ಗ ನಾನಾರ್ಥವರ್ಗ ನಾನಾರ್ಥಾವ್ಯಯವರ್ಗ ಅವ್ಯಯವರ್ಗ ಲಿಂಗಾದಿಸಂಗ್ರಹವರ್ಗಗಳೂ ಇರುವುವು.

ನಾಮಲಿಂಗಾನುಶಾಸನಕ್ಕೆ ಅನೇಕ ಪಂಡಿತರು ಮಾಡಿರುವ ವ್ಯಾಖ್ಯಾನ ಮತ್ತು ಟೀಕೆಗಳು :

(1) अमरपञ्जिका
(2) रङ्गाचार्यकृतः अमरपदमुकुरः
(3) अमरविवेकः
(4) बृहद्वृत्तिः
(5) अच्युतोपाध्यायकृतः व्याख्याप्रदीपः
(6) अप्पयदीक्षितकृता टीका
(7) आशाधरकृतः क्रियाकलापः
(8) काशीनाथस्य काशिका
(9) क्षीरस्वामिकृतम् अमरकोशोद्घाटनम्
(10) गोस्वामिकृता बालबोधिनी
(11) कौमुदी
(12) नारायणकृता अमरकोशपञ्जिका
(13) नारायणविद्याविनोदस्य शब्दार्थसन्दीपिका
(14) नीलकण्ठस्य सुबोधिनी
(15) अमरकोषमाला पद्मानन्दकृता
(16) बृहस्पतिकृता अमरकोशमालापञ्जिका
(17) भरतसेनस्य मुग्धबोधिनी
(18) भानुजीदीक्षितरामाश्रमस्य व्याख्यासुधा
(19) गुरुबालप्रबोधिका
(20) गुरुबालप्रबोधिनी
(21) मधुरेशविद्यालङ्कारकृता सारसुन्दरी
(22) मल्लिनाथस्य अमरपारिजातः
(23) महादेवतीर्थस्य विद्वन्मनोहरा
(24) अमरकोशविवेको महेश्वरकृतः
(25) त्रिकाण्डचिन्तामणिः रघुनाथचक्रवर्तिनः
(26) रामनाथकृतः त्रिकाण्डविवेकः
(27) रामप्रसादकृता वैषम्यकौमुदी
(28) रामशर्मकृता टीका
(29) रामस्वामिकृता टीका
(30) रामेश्वरस्य प्रदीपमञ्जरी
(31) रायमुकुटबृहस्पतेः पदचन्द्रिका
(32) लिङ्गभट्टकृता टीका
(33) लिङ्गमसूरिकृता टीका
(34) अमरकोशपदविवृतिः
(35) लोकनाथकृता पदमञ्जरी
(36) श्रीकराचार्यस्य व्याख्यामृतम्
(37) श्रीधरकृता टीका
(38) सर्वानन्दस्य टीकासर्वस्वम्

ಈ ವ್ಯಾಖ್ಯಾನ ಮತ್ತು ಟೀಕೆಗಳಲ್ಲಿ ಕೆಲವು ಮಂಡನಾತ್ಮಕವಾಗಿಯೂ ಕೆಲವು ಖಂಡನಾತ್ಮಕವಾಗಿಯೂ ಇರುವುವು.

ವರರುಚಿ ಭಾಗುರಿ ಮೊದಲ್ಗಾದವರ ಕೋಶಗಳು ಬಹಳ ದೊಡ್ಡದಾಗಿಯೂ ಬಹಳ ಗಹನವಾಗಿಯೂ ಇದ್ದುದರಿಂದ ಅವುಗಳನ್ನು ಸಂಗ್ರಹಿಸಿ ವರ್ಗೀಕರಿಸಿ ಈ ನಾಮಲಿಂಗಾನುಶಾಸನವು ರಚಿತವಾಗಿದೆ ಎಂದು ಅಮರಸಿಂಹನು ಹೇಳಿರುತ್ತಾನೆ. "समाहृत्यान्यतन्त्राणि संक्षिप्तैः प्रतिसंस्कृतैः। सम्पूर्णमुच्यते वर्गैर्नामलिङ्गानुशासनम्" ಅಮ०।

ಧನ್ವಂತರಿ ಮೊದಲಾದವರು ರಚಿಸಿರುವ ವೈದ್ಯಕೀಯ ಮತ್ತು ಸಸ್ಯವಿಜ್ಞಾನ ನಿಘಂಟುಗಳ ಸಾಹಾಯ್ಯದಿಂದ ನಾಮಲಿಂಗಾನುಶಾಸನವು ರಚಿತವಾಗಿದೆ. ನಾಮಲಿಂಗಾನುಶಾಸನದಲ್ಲಿ ಪುಂಸ್ತ್ರೀನಪುಂಸಕಲಿಂಗಗಳನ್ನು ಪ್ರಾಯಶಃ ವಿಸರ್ಗ ದೀರ್ಘ ಮತ್ತು ಅನುಸ್ವಾರಗಳಿಂದ ಕೂಡಿದ ಶಬ್ದಗಳ ರೂಪಭೇದಗಳಿಂದಲೂ ಕೆಲವು ಕಡೆ ಲಿಂಗವ್ಯವಸ್ಥೆಯುಳ್ಳ ಮತ್ತೊಂದು ಪದದ ಸಾಹಚರ್ಯದಿಂದಲೂ ಮತ್ತು ಇಂತಹ ಲಿಂಗವೆಂದು ಸ್ಪಷ್ಟವಾಗಿ ಹೇಳುವುದರಿಂದಲೂ ತಿಳಿಯಬಹುದು

ದಾಗಿದೆ. "ಪ್ರಾಯಶೋ ರೂಪಭೇದೇನ ಸಾಹಚರ್ಯಾಚ್ಚ ಕುತ್ರಚಿತ್। ಸ್ತ್ರೀನಪುಂಸಕಂ ಜ್ಞೇಯಂ ತದ್ವಿಶೇಷವಿಧೇಃ ಕ್ವಚಿತ್" ಅಮ०।

ಈ ಕೋಶದಲ್ಲಿ ಲಿಂಗನಿರ್ಣಯಕ್ಕಾಗಿ ದ್ವಂದ್ವಸಮಾಸ ವನ್ನಾಗಲಿ ಏಕಶೇಷವನ್ನಾಗಲಿ ಪ್ರಕೃತವಿಷಯಕ್ಕೆ ಸಂಬಂಧಿಸಿದ. ಪದಗಳ ಹೊರತು ಅಪ್ರಕೃತವಾದ ಪದಗಳ ಸಾಂಕರ್ಯ ವನ್ನಾಗಲಿ ಮಾಡಿರುವುದಿಲ್ಲ. "ಭೇದಾಖ್ಯಾನಾಯ ನ ದ್ವಂದ್ವೋ ನೈಕಶೇಷೋ ನ ಸಂಕರಃ। ಕೃತೋಽತ್ರ ಭಿನ್ನಲಿಂಗ್ಯಾನಾಮನುಕ್ತಾನಾಂ ಕ್ರಮಾದೃತೇ" ಅಮ०।

ತ್ರಿಲಿಂಗಗಳಲ್ಲಿಯೂ ಎಂದು ಹೇಳಲು ತ್ರಿಷ್ವ ಎಂಬ ಪದ ವನ್ನೂ ಪುಂಸ್ತ್ರೀಲಿಂಗಗಳಿರಡರಲ್ಲೂ ಎಂದು ಹೇಳಲು ದ್ವಯೋಃ ಎಂಬ ಪದವನ್ನೂ ಕೊಡಲಾಗಿದೆ. "ತ್ರಿಲಿಂಗ್ಯಾಂ ತ್ರಿಷ್ವಿತಿ ಪದಂ ಮಿಥುನೇ ತ್ವ ದ್ವಯೋರಿತಿ"। ತ್ರಿಷ್ವಿತಿ ಎಂದು ನಿಷೇಧಿಸ ಲ್ಪಟ್ಟ ಲಿಂಗವು ಉಳಿದ ಲಿಂಗಗಳಿಗಾಗಿ ಉಕ್ತವಾಗಿದೆ. "ನಿಷಿದ್ಧಲಿಂಗಂ ಶೇಷಾರ್ಥಮ್"। ತ್ವ ಎಂಬ ಅವ್ಯಯವು ಕೊನೆಯಲ್ಲಿ ರುವ ಪದಗಳೂ ಅಥ ಎಂಬ ಅವ್ಯಯವು ಆದಿಯಲ್ಲಿರುವ ಪದ ಗಳೂ ಹಿಂದಿನ ಪರ್ಯಾಯಪದಗಳಿಗೆ ಸಂಬಂಧಿಸುವುದಿಲ್ಲ. "ತ್ವನ್ತಾಥಾದಿ ನ ಪೂರ್ವಭಾಕ್" ಅಮ०। ಈ ರೀತಿ ನಿಯಮ ಬದ್ಧವಾಗಿ ನಾಮಲಿಂಗಾನುಶಾಸನವು ರಚಿತವಾಗಿದೆ.

ನಾಮಲಿಂಗಾನುಶಾಸನಕ್ಕೆ ನಲವತ್ತಕ್ಕೂ ಹೆಚ್ಚುಮಂದಿ ವಿದ್ವಾಂಸರು ವ್ಯಾಖ್ಯಾನ ಬರೆದಿರುವುದರಿಂದ ಬಹು ಜನಪ್ರಿಯ ವಾಗಿರುವುದೆಂದೂ ವಿದ್ಯಾಭ್ಯಾಸಿಗಳಿಗೆ ಇದು ಹೆಚ್ಚು ಉಪಕಾರಕ ವಾಗಿರುವುದೆಂದೂ ತಿಳಿಯಬಹುದಾಗಿದೆ. ಸಂಸ್ಕೃತ ವಿದ್ಯಾರ್ಥಿ ಗಳು ವಿದ್ಯಾಭ್ಯಾಸದ ಪ್ರಾರಂಭದಲ್ಲಿ ಅವಶ್ಯವಾಗಿ ಕೋಶಗಳ ಕಂಠಪಾಠಮಾಡುವ ಪದ್ಧತಿಯು ಪ್ರಾಚೀನಕಾಲದಿಂದಲೂ ಇತ್ತೆಂದೂ ಇನ್ನೂ ಅನೇಕ ಕೋಶಗಳು ರಚಿತವಾಗಿದ್ದರೂ ಅಮರಸಿಂಹನ ನಾಮಲಿಂಗಾನುಶಾಸನವನ್ನೇ ಮುಖ್ಯವಾಗಿ ಕಂಠಪಾಠಮಾಡಿ ಶಬ್ದಾರ್ಥಜ್ಞಾನ ಸಂಪಾದಿಸುವ ಕ್ರಮವನ್ನು ಈಗಲೂ ಅನುಸರಿಸುತ್ತಿರುವುದರಿಂದ ಈ ಕೋಶದ ವೈಶಿಷ್ಟ್ಯ ಮತ್ತು ಸರ್ವೋತ್ತಮತ್ವದ ವಿಷಯದಲ್ಲಿ ಹೆಚ್ಚು ಹೇಳ ಬೇಕಾಗಿಲ್ಲ.

ಅಮರಸಿಂಹನು ಗ್ರಂಥದ ಪ್ರಾರಂಭದಲ್ಲಿ ದೇವತಾ ಸಾಮಾನ್ಯವಾಚಕಪದಗಳನ್ನು ಹೇಳಿ ದೇವತೆಗಳ ವಿಶೇಷ ನಾಮಗಳನ್ನು ಹೇಳುವಾಗ "ಸರ್ವಜ್ಞಃ ಸುಗತೋ ಬುದ್ಧಃ ಧರ್ಮರಾಜ-ಸ್ತಥಾಗತಃ" ಎಂದು ಬುದ್ಧನ ಹೆಸರುಗಳನ್ನು ಹೇಳಿರುವುದ ರಿಂದ ಈತನು ಬೌದ್ಧಮತಾನುಯಾಯಿಯೆಂದು ತಿಳಿಯಬಹು ದಾಗಿದೆ.

ಅಮರಸಿಂಹನು ವಿಕ್ರಮಾದಿತ್ಯನ ಆಸ್ಥಾನದಲ್ಲಿದ್ದ ನವಮಣಿ ಗಳಲ್ಲೊಬ್ಬ ಮಹಾಪಂಡಿತನಾಗಿದ್ದನು ಎಂದೂ ವಿಕ್ರಮಾದಿತ್ಯನ ಸಮಕಾಲಿಕನೆಂದೂ ತಿಳಿಯಬಹುದು. "ಧನ್ವನ್ತರಿಕ್ಷಪಣಕಾ-ಮರಸಿಂಹಶಙ್ಕುವೇತಾಲಭಟ್ಟಘಟಕರ್ಪರಕಾಲಿದಾಸಾಃ। ಖ್ಯಾತೋ ವರಾಹ-ಮಿಹಿರೋ ನೃಪತೇಃ ಸಭಾಯಾಂ ರತ್ನಾನಿ ವೈ ವರರುಚಿರ್ನವ ವಿಕ್ರಮಸ್ಯ"।।

ಈ ಪಂಡಿತನು ಮಹಾವ್ಯಾಕರಣನೆಂದು "ಇನ್ದ್ರಶ್ಚನ್ದ್ರಃ ಕಾಶಕೃತ್ಸ್ನಾಪಿಶಲಿಃಶಾಕಟಾಯನಃ। ಪಾಣಿನ್ಯಮರಜೈನೇನ್ದ್ರಾಃ ಜಯನ್ತ್ಯಷ್ಟಾದಿಶಾಬ್ದಿಕಾಃ" ಎಂಬ ಶ್ಲೋಕದಿಂದ ತಿಳಿದುಬರು ವುದು. "ಅಮರಸಿಂಹೋ ಹಿ ಪಾಪೀಯಾನ್ ಸರ್ವಂ ಭಾಷ್ಯಮಚೂಚುರತ್" ಎಂಬ ಶ್ಲೋಕದಿಂದ ಈತನ ವೈಯಾಕರಣತ್ವವು ಪ್ರತೀತ ವಾಗುವುದು.

ನಾಮಲಿಂಗಾನುಶಾಸನದ ವ್ಯಾಖ್ಯಾನಗಳಲ್ಲಿ ಕ್ಷೀರಸ್ವಾಮಿ ಕೃತ ಅಮರಕೋಶೋದ್ಘಾಟನ ಭಟ್ಟೋಜಿದೀಕ್ಷಿತಕೃತ ವ್ಯಾಖ್ಯಾಸುಧಾ ಗುರುಬಾಲಪ್ರಬೋಧಿಕಾ ಮುಂತಾದ ಕೆಲವು ಮಾತ್ರ ಪ್ರಸಿದ್ಧವಾಗಿವೆ. ನಾಮಲಿಂಗಾನುಶಾಸನವು ಎಲ್ಲಾ ವಿಷಯಗಳಲ್ಲೂ ಸರ್ವೋಪಕಾರಕವಾಗಿ ಒಂದು ವಿಶಿಷ್ಟವಾದ ಸ್ಥಾನವನ್ನು ಪಡೆದಿರುವುದು ಎಂದು ಹೇಳಬಹುದು.

ತ್ರಿಕಾಣ್ಡಕೋಶಃ—ಭಾಗುರಿಃ—ಸರ್ವಾನಂದ ರಾಯಮುಕುಟ ಮತ್ತು ಇತರರು ಉದ್ಧರಿಸಿರುವ ವಾಕ್ಯಗಳ ಆಧಾರದಿಂದ ತ್ರಿಕಾಂಡಕೋಶವು ಭಾಗುರಿಯಿಂದ ರಚಿತವಾದುದೆಂದು ತಿಳಿಯಬಹುದಾಗಿದೆ. ಭಾಗುರಿಯು ಉದ್ಧರಿಸಿರುವ ಕೆಲವು ವಿಷಯಗಳಿಗೂ ತ್ರಿಕಾಂಡಕೋಶಕ್ಕೂ ಇರುವ ಹಲವಾರು ಸಂವಾದಗಳಿಂದ ತ್ರಿಕಾಂಡಕೋಶವು ರಚಿತವಾದುದೆಂಬುದನ್ನು ತಳ್ಳಿಹಾಕುವಂತಿಲ್ಲ. ಸರ್ವಾನಂದನು ತ್ರಿಕಾಂಡಕೋಶದಲ್ಲಿ ಲಿಂಗನಿರ್ದೇಶನವಿಲ್ಲವೆಂದು ಹೇಳಿರುತ್ತಾನೆ. "ಅನ್ಯತನ್ತ್ರಾಣಿ ವ್ಯಾಡಿವರರುಚಿಪ್ರಭೃತೀನಾಂ ತನ್ತ್ರಾಣಿ ಸಮಾಹೃತ್ಯ ಏಕೀಕೃತ್ಯ। ಅತ ಏವ ಸಮ್ಪೂರ್ಣಮಿದಮ್, ಯತಸ್ತ್ರಿಕಾಣ್ಡೋತ್ಪಲಿನ್ಯಾದಿನಾಮಮಾತ್ರತನ್ತ್ರಾಣಿ ವ್ಯಾಡಿವರರುಚಿಪ್ರಭೃತಿಭಿಃ ಪ್ರಣೀತಾನಿ ತ್ವ ಲಿಙ್ಗಮಾತ್ರತನ್ತ್ರಾಣಿ' ಇತಿ ಸರ್ವಾನನ್ದಃ। ಭಾಗುರಿಯು ಹೇಳಿರುವ ವಾಕ್ಯಗಳಲ್ಲಿಯೂ ಲಿಂಗವನ್ನು ನಿರ್ದೇಶಿಸುವ ಪದಗಳೂ ಕಂಡುಬರುವುದಿಲ್ಲ. ಭಾಗುರಿಯು ಪರ್ಯಾಯಪದಗಳನ್ನು ಮಾತ್ರ ಸಂಗ್ರಹಿಸಿ ಅನುಷ್ಟುಪ್ ವೃತ್ತದಲ್ಲಿ ತ್ರಿಕಾಂಡಕೋಶವನ್ನು ರಚಿಸಿರುತ್ತಾನೆ.

"महीरुहः क्रुजो वृक्षः वनस्पतिरनोकहः। अगो नगोऽगमश्चैव शाखी द्रुश्च तरुः स्मृतः" ಇತ್ಯಾದಿ. ಆದುದರಿಂದ ಪರ್ಯಾಯಪದಗಳೂ ಆನೇಕಾರ್ಥಪದಗಳೂ ಲಿಂಗ ನಿರ್ದೇಶನವೂ ಇರುವ ಆಮರಸಿಂಹನ ನಾಮಲಿಂಗಾನುಶಾಸನಕ್ಕಿಂತಲೂ ಕೇವಲ ಪರ್ಯಾಯಪದಗಳ ಸಂಕಲನವಿರುವ ತ್ರಿಕಾಂಡಕೋಶವು ಭಿನ್ನವಾದುದೆಂದು ಸ್ಪಷ್ಟವಾಗಿ ತಿಳಿಯಬಹುದು.

ಶಬ್ದಾರ್ಣವಃ — ವಾಚಸ್ಪತಿಃ — ಶಬ್ದಾರ್ಣವವು ವಾಚಸ್ಪತಿ ಪಂಡಿತ ವಿರಚಿತವಾದುದು. ಪುರುಷೋತ್ತಮದೇವನ "ಶಬ್ದಾರ್ಣವಃ ಉತ್ಪಲಿನೀ ಸಂಸಾರಾವರ್ತಃ ಇತ್ಯಾದಿಕೋಶಾಃ **ವಾಚಸ್ಪತಿವ್ಯಾಡಿ**ವಿಕ್ರಮಾದಿತ್ಯನಿರ್ಮಿತಾಃ" ಎಂಬ ವಾಕ್ಯದಿಂದ ಶಬ್ದಾರ್ಣವವು ಈ ಕವಿರಚಿತವಾದುದೆಂದು ತಿಳಿಯಬಹುದಾಗಿದೆ. ಶಬ್ದಾರ್ಣವ ವೆಂಬ ಕೋಶದ ಹೆಸರಿಗೆ ತಕ್ಕಂತೆ ಕವಿಯು ಸಾಧ್ಯವಾದಷ್ಟು ಆನೇಕ ಪರ್ಯಾಯಪದಗಳನ್ನು ಸಂಗ್ರಹಿಸಿ ಅಲ್ಲಲ್ಲಿ ಕೆಲವು ಪದಗಳಿಗೆ ರೂಪಾಂತರಗಳನ್ನು ಕೊಟ್ಟು ಕೋಶವನ್ನು ರಚಿಸಿರುತ್ತಾನೆ. "ಅಪಿ ಗನ್ಧರ್ವಗಾನ್ಧರ್ವದಿವ್ಯಗಾಯನಗಾತವಃ"। "ಕೃಷ್ಣಪಾಕಫಲಃ ಕೃಷ್ಣಫಲಪಾಕೋ ವನಾಲಕಃ। ಕೃಷ್ಣಪಾಕಃ ಪಾಕಕೃಷ್ಣಃ ಫಲಕೃಷ್ಣೋ ವನಾಲಯಃ॥ ಪಾಕಕೃಷ್ಣಫಲಃ ಪಾಕಫಲಕೃಷ್ಣಕರಾಮ್ಲಕಃ। ಫಲಪಾಕಃ ಪಾಕಫಲೋ ಬೋಲಃ ಕೃಷ್ಣಫಲೋ ರಸಃ" ॥ ಇತ್ಯಾದಿ. ವಾಚಸ್ಪತಿಯ ಕೋಶದಿಂದ ಉದ್ಧರಿಸಿದ ವಾಕ್ಯಗಳಲ್ಲಿಯೂ ಇದೇ ರೀತಿಯ ವೈಲಕ್ಷಣ್ಯವು ಕಂಡುಬರುವುದು.

ನಾಮಮಾಲಾ—ಕಾತ್ಯಃ—ಪುರುಷೋತ್ತಮದೇವನ ತ್ರಿಕಾಂಡ ಶೇಷದಲ್ಲಿ "ಅಥ ಮೇಧಾಜಿತ್ ಕಾತ್ಯಃ ಕಾತ್ಯಾಯನಶ್ಚ ಸಃ। ಪುನರ್ವಸುರ್ವರರುಚಿಃ" ಎಂದು ಕಾತ್ಯ ಕಾತ್ಯಾಯನ ಮತ್ತು ವರರುಚಿ ಈ ಮೂರೂ ಪರ್ಯಾಯಪದಗಳಿಂದೂ ಒಬ್ಬರೇ ಮಹರ್ಷಿಯ ಹೆಸರೆಂದೂ ಉಕ್ತವಾಗಿದೆ. ವ್ಯಾಕರಣವಾರ್ತಿಕಕಾರರೇ ಈ ವರರುಚಿಯೆಂದೂ ಪ್ರಸಿದ್ಧಿಯಿದೆ. ಸಿದ್ಧಾಂತ ಕೌಮುದಿಯ ಬಾಲಮನೋರಮಾವ್ಯಾಖ್ಯಾನಕಾರರು ವ್ಯಾಖ್ಯಾನದ ಮಂಗಳಶ್ಲೋಕದಲ್ಲಿ ವರರುಚಿಗೆ ನಮಸ್ಕಾರ ಎಂದು ಹೇಳಿ ವಾರ್ತಿಕಕಾರರಾದ ವರರುಚಿಯನ್ನೇ ನಿರ್ದೇಶಿಸಿರುತ್ತಾರೆ. "ವಾಕ್ಯಕಾರಂ ವರರುಚಿಂ ಭಾಷ್ಯಕಾರಂ ಪತಞ್ಜಲಿಮ್"। ವ್ಯಾಕರಣಶಾಸ್ತ್ರಾಧ್ಯಯನದ ಪ್ರಾರಂಭದಲ್ಲಿ "ಓಂ ನಮಃ ಪಾಣಿನಿಕಾತ್ಯಾಯನಪತಞ್ಜಲಿಭ್ಯೋ ಮುನಿಭ್ಯೋ ಮಹದ್ಭ್ಯೋ ಗುರುಭ್ಯಃ" ಎಂದು ಆಚಾರ್ಯರುಗಳಿಗೆ ಸಾಂಪ್ರದಾಯಿಕ ನಮಸ್ಕಾರ ಮಾಡಿ ಅಧ್ಯಯನ ಪ್ರಾರಂಭಿಸುವ ಪದ್ಧತಿಯು ಈಗಲೂ ಇದೆ. ವೈಜಯಂತೀಕೋಶದಲ್ಲೂ "ಕಾತ್ಯಾಯನೋ ವರರುಚಿಃ ಮೇಧಜಿಚ್ಚ ಪುನರ್ವಸುಃ" ಎಂದು ಎರಡನ್ನೂ ಪರ್ಯಾಯಪದಗಳಾಗಿ ಹೇಳಿರುತ್ತಾರೆ. ಕಲ್ಪದ್ರುಕೋಶದಲ್ಲೂ "ಕಾತ್ಯಾಯನೋ ವರರುಚಿಃ ಕಾಯೋಽಪಿ ಚ ಪುನರ್ವಸುಃ" ಎಂದು ಪರ್ಯಾಯಪದಗಳಾಗಿ ಉಕ್ತವಾಗಿದೆ. ಈ ಕಾರಣಗಳಿಂದ ಕಾತ್ಯ ಕಾತ್ಯಾಯನ ಮತ್ತು ವರರುಚಿ ಈ ಮೂರು ಪದಗಳೂ ಒಬ್ಬ ಮಹರ್ಷಿಯ ಹೆಸರೆಂದೇ ಸ್ಪಷ್ಟವಾಗುವುದು.

ಆದರೆ ಕ್ಷೀರಸ್ವಾಮಿ ಮತ್ತು ಹೇಮಚಂದ್ರರು ಕಾತ್ಯರ ಕೋಶದಿಂದಲೇ ಆಗಾಗ್ಗೆ ಉದ್ಧರಿಸಿರುವುದರಿಂದ ಇಬ್ಬರೂ ಕವಿಗಳು ಬೇರೆ ಬೇರೆಯೆಂದು ಹೇಳಬೇಕಾಗುವುದು. ಕಾತ್ಯರ ಕೋಶದಲ್ಲಿ ಅಮರಸಿಂಹನ ನಾಮಲಿಂಗಾನುಶಾಸನದಂತೆ ಪರ್ಯಾಯಪದಗಳನ್ನು ಸೇರಿಸುತ್ತೆ ಹೇಳದೆ ಅಲ್ಲಲ್ಲಿ ಪದಗಳ ಅರ್ಥ ವಿವರಣಪೂರ್ವಕ ಪರ್ಯಾಯಪದಗಳನ್ನೂ ನಾನಾರ್ಥ ಪದಗಳನ್ನೂ ಸಂಗ್ರಹಿಸಿ ಕೋಶವನ್ನು ರಚಿಸಲಾಗಿದೆ. "ಭೃಙ್ಗಿಕ್ಷಿದ್ರಸಮೋಪೇತಂ ಚಾಲನಂ ತಿತಉಃ ಪುಮಾನ್"।

"ನಾಮಮಾಲಾ" ಕೋಶವು ಕಾತ್ಯಾಯನಪ್ರಣೀತವಾದುದು. ವಾಮನನು ತನ್ನ ಕಾವ್ಯಾಲಂಕಾರಸೂತ್ರವೃತ್ತಿಯಲ್ಲಿ ನಾಮಮಾಲಾಕೋಶದ ಒಂದು ಭಾಗವಾದ "ನೀವೀಸಂಗ್ರಥನಂ ನಾರ್ಯಾ ಜಘನಸ್ಥಸ್ಯ ವಾಸಸಃ" ಎಂಬುದನ್ನು ಉದ್ಧರಿಸಿ "ನಾಮಮಾಲಾಪ್ರತೀಕಮಪಶ್ಯತಃ" ಎಂದು ಹೇಳಿರುವುದರಿಂದ ನಾಮಮಾಲಾ ಕೋಶವು ಕಾತ್ಯಾಯನಪ್ರಣೀತವೆಂದು ತಿಳಿದುಬರುವುದು.

ಪುರುಷೋತ್ತಮದೇವಃ-ತಸ್ಯ ಕೋಶಾಃ—ಪುರುಷೋತ್ತಮದೇವನು ಪಾಣಿನಿಯ ಆಷ್ಟಾಧ್ಯಾಯಿಗೆ ಭಾಷಾವೃತ್ತಿಯೆಂಬ ವ್ಯಾಖ್ಯಾನವನ್ನು ಬರೆದಿರುತ್ತಾನೆ ಮತ್ತು ಹಾರಾವಲಿಃ ತ್ರಿಕಾಣ್ಡಶೇಷಃ ವರ್ಣದೇಶನಾ ಏಕಾಕ್ಷರಕೋಶಃ ಮತ್ತು ದ್ವಿರೂಪಕೋಶಃ ಇವನ್ನು ರಚಿಸಿರುತ್ತಾನೆ. ದೊರೆಯಾದ ಲಕ್ಷ್ಮಣಸೇನನ ಆಜ್ಞೆಯ ಮೇರೆಗೆ ಪುರುಷೋತ್ತಮದೇವನು ಭಾಷಾವೃತ್ತಿಯನ್ನು ಬರೆದುದಾಗಿ ಸೃಷ್ಟಿಧರಾಚಾರ್ಯನು ಭಾಷಾವೃತ್ತಿಯ ಮೊದಲನೆಯ ಶ್ಲೋಕದ ವ್ಯಾಖ್ಯಾನದಲ್ಲಿ ತಿಳಿಸಿರುತ್ತಾನೆ. 1179 ರಿಂದ 1200 ರವರೆಗೆ ರಾಜ್ಯವಾಳಿದ ಲಕ್ಷ್ಮಣಸೇನನು 1169ರ ನಂತರ ಸಿಂಹಾಸನಾರೋಹಣಮಾಡಿ ರಾಜನಾದುದರಿಂದ ಅನಂತರ ಪುರುಷೋತ್ತಮದೇವನು ಭಾಷಾವೃತ್ತಿಯನ್ನು ರಚಿಸಿರಬಹುದೆಂದು ತಿಳಿದುಬರುವುದು. "ವೈದಿಕಪ್ರಯೋಗಾನ್ವಿನೋ ರಾಜ್ಞೋ ಲಕ್ಷ್ಮಣಸೇನಸ್ಯ ಆಜ್ಞಯಾ ಪ್ರಕ್ರಾಂತೇ ಕರ್ಮಣಿ ಪ್ರಸಜ್ಜನ್ ವೃತ್ತೇರ್ಲಘುತಾಯಾಂ ಹೇತುಮಾಹ ಭಾಷಾಯಾಮಿತಿ" ಭಾಷಾವೃತ್ತಿಃ।

ತ್ರಿಕಾಣ್ಡಶೇಷಃ — ಇದು ಪುರುಷೋತ್ತಮದೇವರಚಿತವಾದುದು. ವಿವರಕ್ಕೆ "ನಿಘಣ್ಟು" ಪದದಲ್ಲಿ ನೋಡಿ.

ಹಾರಾವಲಿಃ—ಹಾರಾವಳೀಕೋಶವು ಪುರುಷೋತ್ತಮದೇವ ವಿರಚಿತವಾದುದು. ಅನೇಕ ಪಂಡಿತರು ಕೋಶಗಳನ್ನು ರಚಿಸಿದ್ದರೂ ಅವೆಲ್ಲವೂ ಪ್ರಸಿದ್ಧವಿಷಯಗಳ ವ್ಯವಹಾರಕ್ಕೆ ಸಂಬಂಧಿಸಿದುದರಿಂದ ಸಭೆಯಲ್ಲಿ ಎಲ್ಲರಿಗೂ ವಿಸ್ಮಯವುಂಟು ಮಾಡುವ ಪದಗಳನ್ನೊಳಗೊಂಡ ಕೋಶವನ್ನು ರಚಿಸುವುದಾಗಿ ಗ್ರಂಥಾರಂಭದಲ್ಲಿ ಕವಿಯು ಹೇಳಿರುತ್ತಾನೆ. "ಕಿಂ ನೈವ ಸನ್ತಿ

सुधियामभिधानकोशाः किन्तु प्रसिद्धविषयव्यवहारभाजः। गोष्ठीषु वादपरमोहफलासु केषां हारावली न विदधाति विदग्धिमानम्" हारा०। ಹಾರಾವಳಿಯಲ್ಲಿ 270 ಶ್ಲೋಕಗಳಿರುವುವು. ಈ ಕೋಶವು ಎರಡು ಭಾಗಗಳಾಗಿ ವಿಂಗಡಿಸಲ್ಪಟ್ಟು ರಚಿತವಾಗಿದೆ. ಮೊದಲನೆಯ ಭಾಗವನ್ನು ಮೂರಾಗಿ ವಿಂಗಡಿಸಿ 1ನೆಯ ಭಾಗದಲ್ಲಿ ಸಂಪೂರ್ಣ ಶ್ಲೋಕಗಳಿಂದಲೂ 2ನೆಯ ಭಾಗದಲ್ಲಿ ಅರ್ಧಶ್ಲೋಕಗಳಿಂದಲೂ 3ನೆಯ ಭಾಗದಲ್ಲಿ ಪಾದ (ನಾಲ್ಕನೆಯ ಒಂದು ಭಾಗ) ಶ್ಲೋಕಗಳಿಂದಲೂ ಪರ್ಯಾಯಪದಗಳನ್ನು ಸಂಗ್ರಹಿಸಿ ರಚಿಸಿರುತ್ತಾನೆ. "आद्याक्षशब्दतः श्लोकैरर्धैरातलिनात्ततः। शब्दाः पादैर्विबोद्धव्याः प्रागनेकार्थतस्ततः" हारा०। ಎರಡನೆಯ ಭಾಗವನ್ನು ಮೂರಾಗಿ ವಿಂಗಡಿಸಿ ಪ್ರತಿಯೊಂದು ಪದದ ಅನೇಕಾರ್ಥಗಳನ್ನು 1ನೆಯ ಭಾಗದಲ್ಲಿ ಅರ್ಧಶ್ಲೋಕಗಳಿಂದಲೂ 2ನೆಯ ಭಾಗದಲ್ಲಿ ಪಾದಶ್ಲೋಕಗಳಿಂದಲೂ 3ನೆಯ ಭಾಗದಲ್ಲಿ ಪ್ರತ್ಯೇಕಪದಗಳಿಂದಲೂ ತಿಳಿಸಲಾಗಿದೆ.

(1) ಪೂರ್ಣಶ್ಲೋಕಗಳಲ್ಲಿ ಪರ್ಯಾಯಪದಗಳು — "यद्दीयते तु देवेभ्यः मनोराज्यस्य सिद्धये। उपयाचितकं दिव्यदोहदं तद्विदुर्बुधाः"।

(2) ಅರ್ಧಶ್ಲೋಕಗಳಿಂದ ಪರ್ಯಾಯಪದಗಳು — "कूष्माण्डकः पुष्पफलो घनवासश्च वेष्टकः"।

(3) ಪಾದಶ್ಲೋಕಗಳಿಂದ ಪರ್ಯಾಯಪದಗಳು — "मेण्ठो हस्तिपकः स्मृतः"। ಇತ್ಯಾದಿ. ಕವಿಗೆ ಹಾರಾವಳಿಯನ್ನು ರಚಿಸಲು 12 ತಿಂಗಳ ಕಾಲ ಬೇಕಾಯಿತು.

ವರ್ಣವೇಚನಾ — ಇದು ಗದ್ಯರೂಪದಲ್ಲಿರುವುದು. ಶಬ್ದ ಪ್ರಯೋಗದ ಪರಿಚಯವಿಲ್ಲದೆ ಅನುಭವಪಡೆಯದವರ ಭ್ರಾಂತಿನಿವಾರಣೆಗಾಗಿ ಸಂಪ್ರದಾಯಬದ್ಧವಾದ ವರ್ಣ (ಅಕ್ಷರ)ಗಳನ್ನು ಮಾರ್ಪಡಿಸಿ ಪದಗಳನ್ನು ಪ್ರಯೋಗಿಸುವ ವಿಷಯ ಇದರಲ್ಲಿ ನಿರೂಪಿಸಲ್ಪಟ್ಟಿದೆ. "अत्र हि प्रयोगेऽबहुदृश्यनां श्रुतिसाधारण्यमात्रेण गृह्णतां खुरक्षुरप्रादौ खकारक्षकारयोः शिहाशिङ्घाणकादौ हकारघकारयोः तथा गोडादिलिपिसाधारण्यात् हिण्डीरगुडाकेशादौ हकारडकारयोः भ्रान्तय उत्पद्यन्ते। अतः तद्विवेचनाय क्वचित् धातुपारायणे धातुवृत्तिपूजादिषु प्रव्यक्तलिखनेन प्रसिद्धोपदेशेन धातुप्रत्ययोणादिव्याख्यालिखनेन क्वचिदाप्तवचनेन वर्णदेशनेयमारभ्यते" ಎಂದು ಗ್ರಂಥಾರಂಭದಲ್ಲಿ ಗ್ರಂಥಕಾರನು ತಿಳಿಸಿರುತ್ತಾನೆ.

अभिधानरत्नमाला – हलायुधः — ಅಭಿಧಾನರತ್ನಮಾಲೆಯು ಹಲಾಯುಧಭಟ್ಟಕವಿಯಿಂದ ರಚಿತವಾದುದು. ಈ ಕೋಶವು ಐದು ಕಾಂಡಗಳಾಗಿ ವಿಂಗಡಿಸಲ್ಪಟ್ಟು ಮೊದಲನೆಯ ನಾಲ್ಕು ಕಾಂಡಗಳಲ್ಲಿ (1) ಸ್ವರ್ಗ (2) ಭೂಮಿ (3) ಪಾತಾಳ ಮತ್ತು (4) ಸಾಮಾನ್ಯ ವಿಷಯಗಳಿಗೆ ಸಂಬಂಧಿಸಿದ ಪರ್ಯಾಯಪದಗಳೂ 5ನೆಯ ಕಾಂಡದಲ್ಲಿ ಅನೇಕಾರ್ಥಪದಗಳೂ ಮತ್ತು ಅವ್ಯಯಗಳೂ ಸೇರಿಸಲ್ಪಟ್ಟವೆ.

ಕವಿಯು ಲಿಂಗನಿರ್ದೇಶನಕ್ಕಾಗಿ ಪದಗಳ ರೂಪಭೇದಗಳನ್ನು ಉಪಾಯವಾಗಿ ಇಟ್ಟು ಕೊಂಡಿರುತ್ತಾನೆ. ಉಳಿದ ವಿಷಯಗಳಲ್ಲಿ ಅಮರಸಿಂಹನ ನಾಮಲಿಂಗಾನುಶಾಸನದ ಪದ್ಧತಿಯನ್ನೇ ಅನುಸರಿಸಿರುತ್ತಾನೆ. ಅಭಿಧಾನರತ್ನಮಾಲೆಯಲ್ಲಿ ಸುಮಾರು 900 ಶ್ಲೋಕಗಳಿರುವುವು. ಇವು ವಿವಿಧ ವೃತ್ತಗಳಲ್ಲಿ ರಚಿತವಾಗಿವೆ.

ಹಲಾಯುಧನ ಅಭಿಧಾನರತ್ನಮಾಲೆಯು ಅಮರದತ್ತ, ವರರುಚಿ ಭಾಗುರಿ ಬೋಪಾಲಿತ ಇವರ ಗ್ರಂಥಗಳನ್ನು ಪ್ರಮಾಣವಾಗಿಟ್ಟುಕೊಂಡು ರಚಿತವಾಗಿರುವುದೆಂದು ತಿಳಿಸಿರುತ್ತಾನೆ. "इयममरदत्तवररुचिभागुरिबोपालितादिशास्त्रेभ्यः। अभिधानरत्नमाला कविकण्ठविभूषणार्थमुद्ध्रियते"।

ಹಲಾಯುಧಭಟ್ಟಕವಿಯು ತನ್ನ ಗ್ರಂಥರಚನಾಕೌಶಲ್ಯದಿಂದ 10ನೆಯ ಶತಮಾನದ ಮಧ್ಯಭಾಗದಲ್ಲಿ ಒಳ್ಳೆಯ ಖ್ಯಾತಿಯನ್ನು ಪಡೆದಿದ್ದನು. ಈ ಕವಿಯು ಅಭಿಧಾನರತ್ನಮಾಲೆಯಲ್ಲದೆ ಮಾನ್ಯಖೇತದ ದೊರೆಯಾಗಿದ್ದ ಕೃಷ್ಣರಾಜನ ಗೌರವಾರ್ಥ "कविरहस्यम्" ಎಂಬ ಗ್ರಂಥವನ್ನೂ ಧಾರಾನಗರದ ಮುಂಜವಾಕ್ಪತಿರಾಜನ ಗೌರವಾರ್ಥ "मृतसञ्जीविनीवृत्तिः" ಎಂಬ ಗ್ರಂಥವನ್ನೂ ರಚಿಸಿದನು.

वैजयन्ती – यादवप्रकाशः – ವೈಜಯಂತೀಕೋಶವು ಯಾದವ ಪ್ರಕಾಶಾಚಾರ್ಯರಿಂದ ರಚಿತವಾದುದು. ಇದರಲ್ಲಿ ಪರ್ಯಾಯಪದಗಳು ಮತ್ತು ಅನೇಕಾರ್ಥಪದಗಳು ಎಂದು ಎರಡು ಭಾಗಗಳಿರುವುವು. ಪರ್ಯಾಯಪದಗಳು स्वर्गः अन्तरिक्षम् भूमिः पातालम् ಮತ್ತು सामान्यम् ಎಂಬ ಐದು ಕಾಂಡಗಳಲ್ಲಿಯೂ ನಾನಾರ್ಥಪದಗಳು द्व्यक्षरम् त्र्यक्षरम् ಮತ್ತು शेषः ಎಂದು ಮೂರು ಕಾಂಡಗಳಲ್ಲಿಯೂ ವಿವರಿಸಲ್ಪಟ್ಟಿವೆ. ಪ್ರತಿಯೊಂದು ಕಾಂಡದಲ್ಲಿಯೂ ಅನೇಕ ಅಧ್ಯಾಯಗಳಿರುವುವು.

ವೈಜಯಂತೀಕೋಶವು ಅಮರಸಿಂಹನ ನಾಮಲಿಂಗಾನುಶಾಸನಕ್ಕಿಂತಲೂ ಪರ್ಯಾಯಪದಗಳ ಮತ್ತು ನಾನಾರ್ಥಪದಗಳ ವಿಷಯದಲ್ಲಿ ಪರಿಪೂರ್ಣತೆಯನ್ನು ಪಡೆದಿರುವುದು.

ನಾನಾರ್ಥಗಳನ್ನು ವಿವರಿಸುವಾಗ ಕವಿಯು ಹಕಾರಾದಿ ಕ್ರಮದಲ್ಲಿ ಪದಗಳನ್ನು ಸೇರಿಸಿ ನೂತನಮಾರ್ಗವೊಂದನು ಅನುಸರಿಸಿರುತ್ತಾನೆ. ನಾನಾರ್ಥಪದಗಳು द्व्यक्षर त्र्यक्षर

ಮತ್ತು ಇನ್ನೂ ಅಧಿಕ ವರ್ಣಗಳ ಪದಗಳಲ್ಲಿ ಮೂರು ಕಾಂಡ ಗಳಾಗಿ ವಿಂಗಡಿಸಲ್ಪಟ್ಟಿವೆ. ಈ ಮೂರು ಕಾಂಡಗಳೂ ಮತ್ತೆ ಲಿಂಗಗಳಿಗನುಸಾರವಾಗಿ ಪುಲ್ಲಿಙ್ಗಾಖ್ಯಾಯ: ಸ್ತ್ರೀಲಿಙ್ಗಾಖ್ಯಾಯ: ಮತ್ತು ನಪುಂಸಕಲಿಙ್ಗಾಖ್ಯಾಯ: ಎಂದು ಪ್ರತ್ಯೇಕವಾಗಿ ವರ್ಗೀ ಕರಿಸಲ್ಪಟ್ಟಿವೆ. ಕೊನೆಯದಾದ ಐದನೆಯ ಕಾಂಡಕ್ಕೆ ಮತ್ತೆ ನಾಲ್ಕು ಅಧ್ಯಾಯಗಳನ್ನು ಸೇರಿಸಿ ಒಂದನೆಯ ಅಧ್ಯಾಯದಲ್ಲಿ ಸಂಬಂಧಿಸಿದ ಕೆಲವು ಪರ್ಯಾಯಪದಗಳನ್ನೂ ಎರಡನೆಯ ಅಧ್ಯಾಯದಲ್ಲಿ ನಾನಾರ್ಥಾವ್ಯಯಪದಗಳನ್ನೂ ಮೂರನೆಯ ಅಧ್ಯಾಯದಲ್ಲಿ ಅವ್ಯಯಪರ್ಯಾಯಪದಗಳನ್ನೂ ನಾಲ್ಕನೆಯ ಅಧ್ಯಾಯದಲ್ಲಿ ಲಿಂಗಗಳಿಗೆ ಸಂಬಂಧಿಸಿದ ಸಾಮಾನ್ಯ ನಿಯಮಗಳನ್ನೂ ಸೇರಿಸಲಾಗಿದೆ. ವೈಜಯಂತೀಕೋಶದಲ್ಲಿ ಪಾರಿಭಾಷಿಕಪದಗಳು ಅಮರಕೋಶದಂತೆಯೇ ಇದ್ದರೂ ನಪುಂಸಕಲಿಂಗವನ್ನು ಸೂಚಿಸಲು ಷಣ್ಢ ಕ್ಲೀ ಕ್ಲೀಬ ಎಂಬ ಕೆಲವು ಸಂಕೇತ ಪದಗಳು ಉಪಯೋಗಿಸಲ್ಪಟ್ಟಿವೆ.

ವೈಜಯಂತೀಕೋಶಕಾರರಾದ ಯಾದವಪ್ರಕಾಶಾ ಚಾರ್ಯರು ಮೊದಲು ಅದ್ವೈತಿಗಳಾಗಿದ್ದು ಅನಂತರ ವಿಶಿಷ್ಟಾ ದ್ವೈತಮತವನ್ನು ಅವಲಂಬಿಸಿದರು. ಕಾಂಚೀಪುರದ ಸಮೀಪ ದಲ್ಲಿರುವ ಗೃಧ್ರಸರಸ್ಸು ಇವರ ಜನ್ಮಸ್ಥಳ. 11ನೆಯ ಶತಮಾನದ ಮಧ್ಯಭಾಗದಲ್ಲಿ ಇವರು ವೈಜಯಂತೀಕೋಶ ವನ್ನು ರಚಿಸಿದರು.

ಹೇಮಚಂದ್ರ:—ಜೈನಕವಿಯಾದ ಹೇಮಚಂದ್ರನು (1) ಅಭಿ-ಧಾನಚಿನ್ತಾಮಣಿ: (2) ಅನೇಕಾರ್ಥಸಂಗ್ರಹ: (3) ನಿಘಣ್ಟುಶೇಷ: ಮತ್ತು (4) ದೇಶೀನಾಮಮಾಲಾ ಎಂಬ ನಾಲ್ಕು ಕೋಶಗಳನ್ನು ರಚಿಸಿರುತ್ತಾನೆ. ಈ ಕೋಶಗಳಲ್ಲಿ ಮೊದಲನೆಯದು ಪರ್ಯಾಯಪದಗಳ ಕೋಶ. ಎರಡನೆಯದಾದ ಅನೇಕಾರ್ಥ ಸಂಗ್ರಹವು ನಾನಾರ್ಥಪದಗಳ ಕೋಶ. ಮೂರನೆಯದು ಸಸ್ಯವಿಜ್ಞಾನ ಕೋಶ. ನಾಲ್ಕನೆಯದು ಪ್ರಾಕೃತಶಬ್ದಗಳ ಕೋಶ.

(1) **ಅಭಿಧಾನಚಿನ್ತಾಮಣಿ:**—ಅಭಿಧಾನಚಿಂತಾಮಣಿಯು ದೇವಾಧಿದೇವಕಾಣ್ಡ: ದೇವಕಾಣ್ಡ: ಮರ್ತ್ಯಕಾಣ್ಡ: ಭೂಮಿಕಾಣ್ಡ: ನರಕ-ಕಾಣ್ಡ: ಮತ್ತು ಸಾಮಾನ್ಯಕಾಣ್ಡ: ಎಂದು ಆರು ಕಾಂಡಗಳಾಗಿ ವಿಭಾಗಿಸಲ್ಪಟ್ಟಿದೆ.

ಮೊದಲನೆಯ ಕಾಂಡದಲ್ಲಿ	ಜೈನದೇವತೆಗಳು ಮತ್ತು ಜೈನ ಮತ ಸಂಬಂಧವಾದ ವಿಷಯ ಗಳೂ
ಎರಡನೆಯ ಕಾಂಡದಲ್ಲಿ	ಬ್ರಾಹ್ಮಣ ಮತ್ತು ಬೌದ್ಧ ದೇವತೆಗಳೂ
ಮೂರನೆಯ ಕಾಂಡದಲ್ಲಿ	ಮನುಷ್ಯರಿಗೆ ಸಂಬಂಧಿಸಿದ ವಿಷಯಗಳೂ
ನಾಲ್ಕನೆಯ ಕಾಂಡದಲ್ಲಿ	ತಿರ್ಯಕ್‌ಪ್ರಾಣಿಗಳೂ
ಐದನೆಯ ಕಾಂಡದಲ್ಲಿ	ಪಾತಾಳಲೋಕಕ್ಕೆ ಸಂಬಂಧಿಸಿದ ವಿಷಯಗಳೂ
ಆರನೆಯ ಕಾಂಡದಲ್ಲಿ	ಸಾಮಾನ್ಯ ವಿಷಯಗಳು ಮತ್ತು ಅವ್ಯಯಗಳೂ

ವಿವರಿಸಲ್ಪಟ್ಟಿವೆ. ಶಬ್ದಗಳ ಲಿಂಗಾದಿ ವಿವರಗಳಿಗೆ ಈ ಕವಿಯ ಲಿಂಗಾನುಶಾಸನವು ಪ್ರಮಾಣವಾಗಿದೆ. ಈ ಕೋಶಕಾರನಾದ ಹೇಮಚಂದ್ರನು ಈ ಕೋಶದ ವ್ಯಾಖ್ಯಾನದಲ್ಲಿ ಸುಮಾರು 80ಕ್ಕಿಂತಲೂ ಹೆಚ್ಚು ಪ್ರಮಾಣವಚನಗಳನ್ನು ಉದ್ಧರಿಸಿ ಹೇಳಿರುತ್ತಾನೆ. ಆವುಗಳಲ್ಲಿ ಮೂವತ್ತು ಕೋಶಗಳು ಪ್ರಮಾಣ ಗ್ರಂಥಗಳು. ಇವುಗಳಲ್ಲಿ ಮುಖ್ಯವಾದುವು ವಾಸುಕಿ ವ್ಯಾಡಿ ಧನಪಾಲ ಮತ್ತು ವಾಚಸ್ಪತಿ ಇವರ ಕೋಶಗಳು. ಈ ಕೋಶದ ರಚನೆಯಲ್ಲಿ ಅಮರಸಿಂಹ ಕಾತ್ಯ ದುರ್ಗ ಧನ್ವಂತರಿ ಭಾಗುರಿ ಭೋಜ ಶಾಶ್ವತ ಹಲಾಯುಧ ಮಹಾಲಾಕಾರ ಮತ್ತು ಯಾದವ ಇವರ ಕೃತಿಗಳನ್ನು ಉಪಯೋಗಿಸಿಕೊಂಡು ಅಭಿಧಾನಚಿಂತಾಮಣಿಯ ವ್ಯಾಖ್ಯಾನವನ್ನು ರಚಿಸಿರುತ್ತಾನೆ. ಈ ಕೋಶದ ವ್ಯಾಖ್ಯಾನಕ್ಕೆ ಈ ಕವಿಯೇ ಶೇಷಸಂಗ್ರಹದ ಶ್ಲೋಕಗಳು ಅನುಬಂಧ (ಪೂರಕ) ವಾಗಿರುವುವು. ಅಭಿಧಾನ ಚಿಂತಾಮಣಿಗೆ ಸೂರ್ಯಸಿಂಹರಾಜನ ಆಶ್ರಯದಲ್ಲಿದ್ದ ವಾಚನಾಚಾರ್ಯವಾದಿಶ್ರೀವಲ್ಲಭನ ಸಾರೋದ್ಧಾರ ದೇವ ಸಾಗರಗಣಿಯ ವ್ಯುತ್ಪತ್ತಿರತ್ನಾಕರಗಳೆಂಬ ಎರಡು ವ್ಯಾಖ್ಯಾನ ಗಳಿವೆ.

ಅಭಿಧಾನಚಿಂತಾಮಣಿಯ ಆಧಾರದಿಂದ ಶುಭಶೀಲಗಣಿಯ ಪಞ್ಚವರ್ಗನಾಮಸಂಗ್ರಹ: ಭಾನುಚಂದ್ರಗಣಿಯ ವಿವಿಕ್ತನಾಮಸಂಗ್ರಹ: ಮತ್ತು ಜಿನದೇವಮುನೀಶ್ವರನ ಅಭಿಧಾನಚಿನ್ತಾಮಣಿಶಿಲೋ-ಞ್ಛನಮ್ ಎಂಬ ಈ ಮೂರೂ ಗ್ರಂಥಗಳು ರಚಿತವಾಗಿವೆ.

(2) **ಅನೇಕಾರ್ಥಸಙ್ಗ್ರಹ:**—ಹೇಮಚಂದ್ರನ ಅನೇಕಾರ್ಥ ಸಂಗ್ರಹಕೋಶದಲ್ಲಿ ಸುಮಾರು 2000 ಶ್ಲೋಕಗಳಿವೆ. ಇದು ಏಕಸ್ವರಾದ್ವಿಸ್ವರಾತ್ರಿಸ್ವರಾಚತುಸ್ಸ್ವರಾಪಞ್ಚಸ್ವರಾಷಟ್ಸ್ವರ ಗಳೆಂಬ ಪದಗಳಿಂದ ಕೂಡಿ ಆರು ಕಾಂಡಗಳಾಗಿ ವಿಂಗಡಿಸಲ್ಪಟ್ಟಿದೆ. ಕೊನೆಯಲ್ಲಿ ಅವ್ಯಯವರ್ಗವೂ ಸೇರಿಸಲ್ಪಟ್ಟಿದೆ. ಕೊನೆ ಯಲ್ಲಿ ಅಕಾರಾದಿಪದಗಳ ಸೂಚಿಯೂ ಇರುವುದು. ಅನೇಕಾರ್ಥಸಂಗ್ರಹದ ರಚನೆಯ ಪೂರ್ವದಲ್ಲೇ ಈ ಕವಿಯು "ಏಕಾರ್ಥಶಬ್ದಸಂಗ್ರಹ:" ಎಂಬ ಕೋಶವನ್ನು ರಚಿಸಿದ್ದನೆಂದು ಈ ಗ್ರಂಥದ ಪ್ರಾರಂಭದಲ್ಲಿ "ಖ್ಯಾತ್ವಾರ್ಹತ: ಕೃತೈಕಾರ್ಥಶಬ್ದ-ಸನ್ದೋಹಸಂಗ್ರಹ:। ಏಕಸ್ವರಾದಿಷಟ್ಕಾಣ್ಡಯಾ ಕೃತೈನೇಕಾರ್ಥಸಂಗ್ರಹಮ್" ಎಂಬ ಶ್ಲೋಕದಿಂದ ತಿಳಿದುಬರುವುದು. ಕಲಿಕಾಲಸರ್ವಜ್ಞ ನೆಂದು ಪ್ರಸಿದ್ಧನಾಗಿದ್ದ ಹೇಮಚಂದ್ರಕವಿಯು ಈ ಮೇಲೆ ಹೇಳಿದ ಕೋಶಗಳಲ್ಲದೆ ಕಾವ್ಯಾನುಶಾಸನಮ್ ಲಿಙ್ಗಾನುಶಾಸನಮ್

शब्दानुशासनम् छन्दोऽनुशासनम् वादानुशासनम् योगशास्त्रम् ಇವೇ ಮೊದಲಾದ ಅನೇಕ ಗ್ರಂಥಗಳನ್ನು ರಚಿಸಿದ್ದನೆಂದೂ ಅನೇಕಾರ್ಥಸಂಗ್ರಹದ ಉಪೋದ್ಘಾತದಲ್ಲಿ ತಿಳಿಸಿರುತ್ತಾನೆ. ಮೂರೂವರೆ ಕೋಟಿ ಶ್ಲೋಕಗಳಿಂದ ಕೂಡಿ ಅನೇಕ ಗ್ರಂಥ ಗಳನ್ನು ರಚಿಸಿರುವುದಾಗಿಯೂ ಅನೇಕಾರ್ಥಸಂಗ್ರಹದ ಉಪೋದ್ಘಾತದಲ್ಲಿ ತಿಳಿಸಿರುತ್ತಾನೆ.

ಹೇಮಚಂದ್ರನ ಅನೇಕಾರ್ಥಸಂಗ್ರಹಕೋಶಕ್ಕೆ ಈತನ ಶಿಷ್ಯನಾದ ಮಹೇಂದ್ರಸೂರಿ ರಚಿತವಾದ "अनेकार्थकैरवाकर-कौमुदी" ಎಂಬ ವ್ಯಾಖ್ಯಾನವೊಂದಿರುವುದು. ಈ ವ್ಯಾಖ್ಯಾ ಕಾರನು ವ್ಯಾಖ್ಯಾನವನ್ನು ತನ್ನ ಗುರುವಿನ ಹೆಸರಿನಲ್ಲೇ ಮಾಡಿದುದಾಗಿ "श्रीहेमसूरिशिष्येण श्रीमहेन्द्रसूरिणा। भक्तिनिष्ठेन टीकेयं तन्नाम्नैव प्रतिष्ठिता" ಎಂಬ ಶ್ಲೋಕದಲ್ಲಿ ಹೇಳಿರುತ್ತಾನೆ. ಈ ವ್ಯಾಖ್ಯಾನಕ್ಕೆ ವಿಶ್ವಪ್ರಕಾಶ ಶಾಶ್ವತ ರಭಸ ಅಮರಸಿಂಹ ಮಂಖಿ ಹುಗ್ಗ ವ್ಯಾಡಿ ಧನಪಾಲ ಭಾಗುರಿ ವಾಚಸ್ಪತಿ ಯಾದವ ಮತ್ತು ಧನ್ವಂತರಿ ಇವರ ಗ್ರಂಥ ಗಳು ಮತ್ತು ಕೋಶಗಳನ್ನು ಪ್ರಮಾಣವಾಗಿಟ್ಟುಕೊಂಡು ವ್ಯಾಖ್ಯಾನ ರಚಿಸಿದುದಾಗಿ ಪ್ರಸ್ತಾವನೆಯ ಶ್ಲೋಕಗಳಲ್ಲಿ ತಿಳಿಸಿರುತ್ತಾನೆ.

(3) **निघण्टुशेषः** — ಹೇಮಚಂದ್ರರಚಿತವಾದ ಈ ನಿಘಂಟುಶೇಷವು ಸಸ್ಯವಿಜ್ಞಾನದ ಒಂದು ಕೋಶವಾಗಿರುವುದು. ಇದು ಅಭಿಧಾನಚಿಂತಾಮಣಿಗೆ ಒಂದು ಅನುಬಂಧ ರೂಪವಾಗಿರುವುದು. ಇದರಲ್ಲಿ 396 ಶ್ಲೋಕಗಳಿವೆ. ಈ ಕೋಶವು वृक्षकाण्डः गुल्मकाण्डः लताकाण्डः शाककाण्डः तृणकाण्डः ಮತ್ತು धान्यकाण्डः ಎಂದು ಆರು ಕಾಂಡಗಳಾಗಿ ವಿಭಾಗಿಸಲ್ಪಟ್ಟಿದೆ.

(4) **देशीनाममाला**—ಈ ಕೋಶವು ದೇಶಭೇದದಿಂದ ಉಂಟಾಗುವ ಪ್ರಾಕೃತಭಾಷೆಗಳ ಭೇದವನ್ನು ತತ್ಸಮ ಮತ್ತು ತದ್ಭವ ಪದಗಳಿಂದ ತಿಳಿಸುವುದು.

विश्वप्रकाशः — महेश्वरः — ವಿಶ್ವಪ್ರಕಾಶಕೋಶವು ಮಹೇಶ್ವರಪಂಡಿತ ವಿರಚಿತವಾದುದು. ಇದೊಂದು ನಾನಾರ್ಥ ಕೋಶ. ಇದು ಮೇದಿನೀಕೋಶದಂತೆ ಅಕಾರಾದಿ ಕ್ರಮ ದಲ್ಲಿ ಪದಗಳನ್ನು ಸಂಗ್ರಹಿಸಿ ರಚಿತವಾಗಿಲ್ಲ. ಈ ನಾನಾರ್ಥ ಸಂಗ್ರಹರೂಪವಾದ ಕೋಶವನ್ನು ರಚಿಸಿ ವಿದ್ವಾಂಸರಿಗೆ ಅನೇಕ ಪುಸ್ತಕಗಳ ಸಂಗ್ರಹದ ಭಾರವನ್ನು ತಪ್ಪಿಸಿದುದಾಗಿ ಕೋಶಕಾರನು ಗ್ರಂಥದಲ್ಲಿ ಹೇಳಿರುತ್ತಾನೆ. "सतां पुस्तक-सम्भारभारमोक्षः कृतो मया। नामानुशासनमिदं सम्पूर्णं तत्कृतादद्भुतम्" ವಿಶ್ವಂ।

ಕಕಾರಾಂತಾದಿ ವರ್ಗಗಳಿಂದ ಕೂಡಿರುವ ನಾನಾರ್ಥ ಸಂಗ್ರಹರೂಪವಾದ ಈ ಕೋಶವು एकद्वित्रिचतुःपञ्चषड् ವರ್ಣಗಳ ಅನುಕ್ರಮದಿಂದ ರಚಿತವಾಗಿದೆ. "एकद्वित्रिचतुः-पञ्चषड्वर्णानुक्रमोज्ज्वलैः। कान्तादिवर्गनानार्थसङ्ग्रहोऽयं वितन्यते" ವಿಶ್ವಂ। ಯಾವುದೊಂದು ಕ್ರಮವನ್ನೂ ಅನು ಸರಿಸದೆ ಪದಗಳನ್ನು ಒಂದರ ಹಿಂದೆ ಒಂದರಂತೆ ಜೋಡಿಸ ಲಾಗಿದೆ. ಕೋಶದ ಕೊನೆಯಲ್ಲಿ ಅವ್ಯಯಪದಗಳೂ ಇದೇ ಕ್ರಮದಲ್ಲಿ ಸಂಗ್ರಹಿಸಲ್ಪಟ್ಟಿವೆ. ಪದಗಳ ಲಿಂಗನಿರ್ದೇಶನ ಕ್ಕಾಗಿ ಅವಶ್ಯವಾದ ಕೆಲವು ಕಡೆ ಅವುಗಳ ಲಿಂಗಭೇದವನ್ನು ತೋರಿಸಲು ಪದಗಳನ್ನು ಪುನರಾವರ್ತನ ಮಾಡಲಾಗಿದೆ. "सुरतं स्यान्निधुवने देवत्वे सुरता मता"। गर्जितो मत्त-मातङ्गे गर्जितं जलदध्वनौ"। "त्रिगर्तः स्याज्जनपदे त्रिगर्तो गणितान्तरे। भवेद् घर्घरिकायां तु त्रिगर्ता कामुकस्त्रियाम्"। "शोभनो ग्रहयोगे स्यात् शोभनं सुन्दरेऽन्यवत्" ಇತ್ಯಾದಿ. "स्पष्टाय लिङ्गभेदस्य क्वाप्यत्र पुनरुक्तता" ವಿಶ್ವಂ। ಈ ಕೋಶದ ರಚನೆಗೆ ಭೋಗೀಂದ್ರ ಕಾತ್ಯಾಯನ ಸಾಹಸಾಂಕ ವಾಚಸ್ಪತಿ ವ್ಯಾಡಿ ವಿಶ್ವರೂಪ ಅಮರ ಮಂಗಳ ಬೋಪಾಲಿತ ಇವರ ಗ್ರಂಥಗಳಿಂದ ಪ್ರಭಾವಿತನಾಗಿ ಇವರನ್ನು ಪ್ರಮಾಣವಾಗಿಟ್ಟುಕೊಂಡು ಕೋಶವನ್ನು ರಚಿಸಿದುದಾಗಿ ವಿಶ್ವಪ್ರಕಾಶದ ಟೀಕಾಪ್ರಕರಣ ದಲ್ಲಿ ಹೇಳಿಕೊಂಡಿರುತ್ತಾನೆ. "भोगीन्द्रकात्यायनसाहसाङ्क-वाचस्पतिव्याडिपुरःसराणाम्। सविश्वरूपामरमङ्गलानां शुभाङ्कबोपालितभागुरीणाम्। कोशावकाशात् प्रकटप्रभाव-सम्भावितोऽनर्घगुणः स एषः" ವಿಶ್ವಂ।

ವಿಶ್ವಪ್ರಕಾಶಕೋಶಕ್ಕೆ ಅನುಬಂಧವಾಗಿ ಇದೇ ಕೋಶಕಾರ ನಿಂದ "शब्दभेदप्रकाशः" ಎಂಬ ಒಂದು ಗ್ರಂಥ ರಚಿತ ವಾಗಿದೆ. ಇದರಲ್ಲಿ शब्दभेदः वकारभेदः ऊष्मभेदः ಮತ್ತು लिङ्गभेदः ಎಂಬ ನಾಲ್ಕು ಭಾಗಗಳಿವೆ. ಇದಕ್ಕೆ ಜ್ಞಾನವಿಮಲ ಗಣಿಯಿಂದ ಒಂದು ವ್ಯಾಖ್ಯಾನ ರಚಿತವಾಗಿದೆ.

नानार्थशब्दकोशः — मेदिनीकरः — ನಾನಾರ್ಥಶಬ್ದ ಕೋಶವು ಮೇದಿನೀಕರ ಪಂಡಿತನಿಂದ ವಿರಚಿತವಾಗಿ ಈ ಪಂಡಿ ತನ ಹೆಸರಿನಿಂದಲೇ "मेदिनीकोशः" ಎಂದು ಪ್ರಸಿದ್ಧವಾಗಿದೆ. ಅನೇಕ ಪ್ರಾಚೀನಾಚಾರ್ಯರ ಗ್ರಂಥಗಳನ್ನೂ ಶಬ್ದಶಾಸ್ತ್ರ ವನ್ನೂ ಪರಿಶೀಲಿಸಿ ಈ ಕೋಶವನ್ನು ರಚಿಸಿದುದಾಗಿ ಗ್ರಂಥದ ಟೀಕೆಯಲ್ಲಿ ಕವಿಯು ಹೇಳಿರುತ್ತಾನೆ. "पूर्वाचार्यकृतीर्वीक्ष्य शब्दशास्त्रं निरूप्य च। नानार्थशब्दकोशोऽयं लिङ्गभेदेन कथ्यते" ಮೇದಿಂ। ಈ ಮೇದಿನೀಕೋಶವು ಯಾವುದೊಂದು ರೀತಿ ನಿಯಮಗಳಿಲ್ಲದೆ ಕೇವಲ ಶಬ್ದಸಂಗ್ರಹ ಮಾಡಿರುವ ವಿಶ್ವಪ್ರಕಾಶಕೋಶದ ಒಂದು ಪರಿಷ್ಕೃತ ಸುಂದರವಾದ ರೂಪದಂತಿರುವುದು. ವಿಶ್ವಪ್ರಕಾಶಕೋಶದಲ್ಲಿ ನಾನಾರ್ಥ ಶಬ್ದಗಳು ಎಲ್ಲಾ ಪ್ರಥಮಾಂತಗಳಾಗಿವೆ. ಲಿಂಗಭೇದವನ್ನು

ತಿಳಿಸಲು ಪದಗಳ ಪುನರಾವರ್ತನವಾಗಿರುವುದು. "स्पष्टाय लिङ्गभेदाय क्वाप्यत्र पुनरुक्तता" विश्व०। ಮೇದಿನೀ ಕೋಶದಲ್ಲಿ स्त्री पुमान् द्वयोः क्लीबे नपुंसके ಇತ್ಯಾದಿ ಪದಗಳಿಂದ ಲಿಂಗನಿರ್ದೇಶನ ಮಾಡಲಾಗಿದೆ. "क्लीबे नपुंसके पुंसि स्त्रियां योषिति च द्वयोः। त्रिषु चेत्यादि यद्रूपं तल्लिङ्गस्यैव वाचकम्। नानार्थः प्रथमान्तोऽत्र सर्वत्रादौ प्रदर्शितः" मेदि०। ವಿಶ್ವಪ್ರಕಾಶ–ಮೇದಿನೀಕೋಶಗಳೆರಡರಲ್ಲೂ कैकम् कद्विकम् कत्रिकम् कचतुष्कम् ಮುಂತಾದ ಕ್ರಮವು ಸಮಾನವಾಗಿದೆ. "कान्तादिवर्गैर्नानार्थसङ्ग्रहोऽयं वितन्यते" विश्व०। "स्वरकाद्यादिकाद्यान्तवर्गैर्नानार्थ-सङ्ग्रहः" मेदि०।

ನಾನಾರ್ಥಗಳ ಅನೇಕ ಕೋಶಗಳ ಸಂಗ್ರಹದ ಭಾರವನ್ನು ತಪ್ಪಿಸಲು ಈ ಕೋಶವನ್ನು ರಚಿಸಿದುದಾಗಿ ೨ಬ್ಬರೂ ಕವಿಗಳು ಹೇಳಿರುತ್ತಾರೆ. "सतां पुस्तकसम्भारभारमोक्षः कृतो मया। नामानुशासनमिदं सम्पूर्णं तन्वताऽद्भुतम्" विश्व०। "नानार्थकोशपुस्तकभारार्जनदुःखहानये कृतिनः। मेदिनी-करकृतकोशो विशुद्धलिङ्गोऽभिलिख्यतामेकः" मेदि०। ಮೇದಿನೀಕರಪಂಡಿತನು उत्पलिनी शब्दार्णवः संसारावर्तः; ನಾಮಮಾಲಾ ಮತ್ತು ಭಾಗುರಿ ವರರುಚಿ ಶಾಶ್ವತ ಬೋಪಾಲಿತ ಮೊದಲಾದ ಕವಿಗಳ ಕೋಶಗಳನ್ನೂ ಶಾತ್ಯಾಯನ ವಾಮನ ಚಂದ್ರಗೋಮಿ ಮುಂತಾದವರಿಂದ ರಚಿತವಾದ ಲಿಂಗಶಾಸ್ತ್ರ ಗಳನ್ನೂ ಚೆನ್ನಾಗಿ ಪರಿಶೀಲಿಸಿ ಮೇದಿನೀಕೋಶವನ್ನು ರಚಿಸಿದು ದಾಗಿಯೂ, 600 ಗಾದೆಗಳ ಕೋಶವೊಂದನ್ನು ರಚಿಸಿರುವು ದಾಗಿಯೂ ಮೇದಿನೀಕೋಶದ ಉಪಸಂಹಾರ ಶ್ಲೋಕದಿಂದ ತಿಳಿದುಬರುವುದು. "उत्पलिनीशब्दार्णवसंसारावर्तनाम-मालाख्यान्। भागुरिवररुचिशाश्वतबोपालितरन्तिदेवहर-कोशान्। हारावल्यभिधानं त्रिकाण्डशेषं च रत्नमालां च। अपि बहुदोषं विश्वप्रकाशकोशं च सुविचार्य। पाणिनिपदानुशासनपुराणकाव्यादिकं च सुनिरूप्य। षट्शत-गाथाप्रणयनविख्यातकोशलेनाऽयम्। मेदिनीकरेण कोशः प्राणकरसूनुना रचितः" मेदि०। ಈ ಕಾರಣದಿಂದ ರಾಯ ಮುಕುಟನು ಮೇದಿನೀಕರನ ಕಾಲವು 1431 ಎಂದು ಹೇಳಿರು ತ್ತಾನೆ. ೨ಬ್ಬರೂ ಕವಿಗಳು ವಿಶ್ವಪ್ರಕಾಶ ಮತ್ತು ಮೇದಿನೀ ಕೋಶಗಳಲ್ಲಿ ನಾನಾರ್ಥಶಬ್ದಗಳ ನಿರೂಪಣಾನಂತರ ಕೊನೆ ಯಲ್ಲಿ ಅವ್ಯಯಪದಗಳನ್ನು ಸಂಗ್ರಹಿಸಿ ಅವ್ಯಯಕೋಶಗಳನ್ನು ರಚಿಸಿರುತ್ತಾರೆ.

नानार्थरत्नमाला–इरुगपदण्डनाथः–ಇದು ಇರುಂಗಪ ದಂಡನಾಥಪಂಡಿತನಿಂದ ರಚಿತವಾದುದು. ಈ ಕವಿಯು 14 ನೆಯ ಶತಮಾನದ ಉತ್ತರಾರ್ಧದಲ್ಲಿ ವಿಜಯನಗರದ ಎರಡನೆಯ ಹರಿಹರರಾಜನ ಆಶ್ರಯದಲ್ಲಿದ್ದನೆಂದು ತಿಳಿದು ಬರುವುದು. ನಾನಾರ್ಥರತ್ನಮಾಲೆಯಲ್ಲಿ ನಾನಾರ್ಥಶಬ್ದಗಳು ಸಲಿಂಗ ಮತ್ತು ನಿರ್ಲಿಂಗಗಳೆಂದು ಎರಡು ಭಾಗಗಳಾಗಿವೆ. "कथिताःकेऽपि नानार्थशब्दाः तत्रान्तराख्यना। अमी सलिङ्गनिर्लिङ्गभेदात् द्वेधा भवन्ति हि"॥ ಪುಂಲಿಂಗ ಸ್ತ್ರೀಲಿಂಗ ನಪುಂಸಕಲಿಂಗಗಳಲ್ಲಿ स्त्रियां पुंसि पुंनपुंसके स्त्रीपुंसयोः क्लीबपुंसोः स्त्रीनपुंसकयोः त्रिषु ಎಂದೂ ಏಳು ವಿಧ ಸಲಿಂಗಶಬ್ದಗಳನ್ನೂ ಅಲಿಂಗ (ನಿಯತಲಿಂಗ) ಶಬ್ದ ಗಳನ್ನೂ ಏಕಾಕ್ಷರಕಾಂಡ ಮತ್ತು ಕಕಾರಾಂತಾದಿ ದ್ವ್ಯಕ್ಷರ ಕಾಂಡ ತ್ರ್ಯಕ್ಷರಕಾಂಡ ಚತುರಕ್ಷರಕಾಂಡ ಸಂಕೀರ್ಣ ಮತ್ತು ಅವ್ಯಯಕಾಂಡಗಳೆಂಬ ಆರು ಕಾಂಡಗಳಲ್ಲಿ ವಿವರಿಸಿರುತ್ತಾನೆ. "सलिङ्गान् सप्तधा कृत्वा स्त्रियां पुंसि नपुंसके। स्त्री-पुंसयोः क्लीबपुंसोः स्त्रीनपुंसकयोस्त्रिषु। शब्दान् पुंसः स्त्रियः क्लीबान् नानालिङ्गानलिङ्गकान्। प्रायः क्रमात् प्रवक्ष्यामि कान्तादीन् द्व्यक्षरादिषु" नानार्थर०। ಲಿಂಗ ಗಳನ್ನು ರೂಪಭೇದಗಳಿಂದಲೂ ಪದಗಳ ಸಾಹಚರ್ಯ ದಿಂದಲೂ ಸ್ಪಷ್ಟವಾಗಿ ಮಾಡಿರುವ ಲಿಂಗನಿರ್ದೇಶನದಿಂದಲೂ ತಿಳಿಯಬೇಕು. ಅಥಾದಿ ಮತ್ತು ತ್ವಂತ ಪದಗಳು ಹಿಂದಿನ ಪದಗಳೊಡನೆ ಸೇರುವುದಿಲ್ಲ. "रूपभेदात् साहचर्यात् कण्ठोक्त्या वा विभावयेत्। लिङ्गान्यथादित्वन्तं वा पदं पूर्वेण नान्वयि" नानार्थर०। त्रिषु ಎಂದಿರುವಲ್ಲಿ ಮೂರು ಲಿಂಗಗಳಲ್ಲಿಯೂ ಎಂದೂ द्वन्द्व ಎಂದಿರುವಲ್ಲಿ ಸ್ತ್ರೀಲಿಂಗ ಮತ್ತು ಪುಂಲಿಂಗಗಳೆರಡರಲ್ಲೂ ಎಂದೂ ಬೇರೆ ಲಿಂಗನಿಷೇಧ ವಿರುವಲ್ಲಿ ಉಳಿದ ಲಿಂಗಗಳಲ್ಲೆಂದೂ ತಿಳಿಯಬೇಕು. "त्रिष्विति त्रिषु लिङ्गेषु ज्ञेयं द्वन्द्वे द्वयोरिति। लिङ्गान्तरनिषेधोऽत्र शेषलिङ्गविधायकः" नानार्थर०।

अनेकार्थकोशः–मङ्खकविः–ಅನೇಕಾರ್ಥಕೋಶವು ಮಂಖಕವಿ ರಚಿತವಾದುದು. ಈ ಕೋಶವು ಭಾಗುರಿ ಕಾತ್ಯ ಹಲಾಯುಧ ಹುಗ್ಗ ಅಮರಸಿಂಹ ಶಾಶ್ವತ ಮತ್ತು ಧನ್ವಂತರಿ ೨ವರ ಕೋಶಗಳನ್ನು ಚೆನ್ನಾಗಿ ಪರಿಶೀಲಿಸಿ ರಚಿಸಲ್ಪಟ್ಟಿದೆ. "भागुरिकात्यहलायुधहुग्गामरसिंहशाश्वतादिकृतान्। कोशा-न्निरीक्ष्य निपुणं धन्वन्तरिनिर्मितं निघण्टुं च"। ಈ ಕೋಶವು ಆಕಾರಾದಿವರ್ಣಕ್ರಮದಲ್ಲಿ ಪದಗಳನ್ನು ಸಂಗ್ರಹಿಸಿ ರಚಿತವಾಗಿದೆ. ಈ ಕೋಶಕ್ಕೆ ಮಂಖಕವಿ ಅಥವಾ ಆವನ ಶಿಷ್ಯನೊಬ್ಬನಿಂದ मङ्खटीका ಎಂಬ ವ್ಯಾಖ್ಯಾನ ವೊಂದು ರಚಿತವಾಗಿದೆಯೆಂದೂ ಮಹೇಂದ್ರಸೂರಿಯು ಹೇಮಚಂದ್ರನ ಅನೇಕಾರ್ಥಸಂಗ್ರಹದ ವ್ಯಾಖ್ಯಾನದಲ್ಲಿ ತಿಳಿಸಿರುತ್ತಾನೆ.

ಮುಂಖಕವಿಯು (1129–1149) ಕಾಶ್ಮೀರದ ದೊರೆ ಜಯಸಿಂಹನ ಆಶ್ರಯದಲ್ಲಿದ್ದ ಶ್ರೀಕಂಠಚರಿತಗ್ರಂಥಕಾರನ ಸಮಕಾಲಿಕನೆಂದು ತಿಳಿದುಬರುವುದು.

ನಾನಾರ್ಥಾರ್ಣವಸಂಕ್ಷೇಪ:–ಕೇಶವಸ್ವಾಮಿ – ಕೇಶವಸ್ವಾಮಿಯ ನಾನಾರ್ಥಾರ್ಣವಸಂಕ್ಷೇಪವು ಒಂದು ಅನೇಕಾರ್ಥಶಬ್ದಗಳ ಕೋಶವಾಗಿದೆ. ಇದರಲ್ಲಿ ಸುಮಾರು 5800 ಶ್ಲೋಕಗಳಿವೆ. ಈ ಕೋಶವು ಅಕ್ಷರಸಂಖ್ಯೆಗೆ ಅನುಗುಣವಾಗಿ ಆರು ಕಾಂಡಗಳಾಗಿ ವಿಭಾಗಿಸಲ್ಪಟ್ಟಿದೆ. ಪ್ರತಿಯೊಂದು ಕಾಂಡದಲ್ಲಿಯೂ ಸ್ತ್ರೀಲಿಂಗ ಪುಂಲಿಂಗ ನಪುಂಸಕಲಿಂಗ ವಾಚ್ಯಲಿಂಗ ಮತ್ತು ನಾನಾಲಿಂಗಗಳಿಂದು ಐದು ಅಧ್ಯಾಯಗಳಿವೆ. ಈ ಕ್ರಮವನ್ನು ನಾವು ವೈಜಯಂತೀಕೋಶದಲ್ಲಿಯೂ ಕಾಣಬಹುದು. ಸಂಸ್ಕೃತ ಸಾಹಿತ್ಯಕಾರರು ಕೋಶಕಾರರು ವ್ಯಾಕರಣರು ಕವಿಗಳು ವೈದಿಕವಿದ್ವಾಂಸರು ಛಂದಃಶಾಸ್ತ್ರಕಾರರು ವೇದಗಳು ಮತ್ತು ಸಮಾಮ್ನಾಯ ಮೊದಲಾದ ಎಲ್ಲಾ ವಿಷಯಗಳಿಗೆ ಸಂಬಂಧಿಸಿದ ಸುಮಾರು ಮೂವತ್ತು ಮಂದಿ ವಿದ್ವಾಂಸರನ್ನು ಪ್ರಮಾಣವನ್ನಾಗಿಟ್ಟುಕೊಂಡು ತನ್ನ ಗ್ರಂಥದಲ್ಲಿ ಹೆಸರಿಸಿರುವುದು ಈ ಕೋಶದ ಒಂದು ವೈಶಿಷ್ಟ್ಯ. ಇಲ್ಲಿಯವರೆಗೂ ನಮಗೆ ತಿಳಿದುಬಂದಿರುವ ಅನೇಕ ಕೋಶಗಳಲ್ಲಿ ಇದೊಂದು ಅತಿಬೃಹತ್ತಾದ ನಾನಾರ್ಥಕೋಶವಾಗಿದೆ.

ಕೇಶವಸ್ವಾಮಿಯು ಕುಲೋತ್ತುಂಗಕೋಲರಾಜನ ಪುತ್ರನಾದ ರಾಜರಾಜಕೋಲನ ಆಶ್ರಯದಲ್ಲಿದ್ದನೆಂದು ತಿಳಿದುಬರುವುದು. ಈ ಕವಿಯು 12 ನೆಯ ಮತ್ತು 13 ನೆಯ ಶತಮಾನಗಳಲ್ಲಿದ್ದ ಈ ಇಬ್ಬರು ರಾಜರ ಕಾಲದಲ್ಲಿದ್ದಿರಬಹುದೆಂದು ತಿಳಿಯಬಹುದಾಗಿದೆ. ರಘುವಂಶದ ವ್ಯಾಖ್ಯಾಕಾರನಾದ ಮಲ್ಲಿನಾಥ ಮತ್ತು ಕುಮಾರಸಂಭವಕಾವ್ಯದ ವ್ಯಾಖ್ಯಾಕಾರನಾದ ಅರುಣಾಚಲನಾಥ ಇವರಿಬ್ಬರೂ ತಮ್ಮ ವ್ಯಾಖ್ಯಾನಗಳಲ್ಲಿ ಕೇಶವಸ್ವಾಮಿಯ ಹೆಸರನ್ನು ಎತ್ತಿ ಹೇಳಿರುತ್ತಾರೆ.

ಕಲ್ಪದ್ರುಕೋಶ:–ಕೇಶವ:–ಕೇಶವಪಂಡಿತವಿರಚಿತ ಕಲ್ಪದ್ರು ಕೋಶವು ಇಲ್ಲಿಯವರೆಗೆ ನಾವು ನೋಡಿರುವ ಕೋಶಗಳಲ್ಲೆಲ್ಲಾ ಬೃಹತ್ತಮವಾದ ಕೋಶವಾಗಿದೆ. ಇದರಲ್ಲಿ 4000 ಶ್ಲೋಕಗಳಿವೆ. ಪರ್ಯಾಯಶಬ್ದಗಳ ಸಂಗ್ರಹವು ಬಹಳ ದೊಡ್ಡ ಪ್ರಮಾಣದಲ್ಲಿದೆ. ಭೂಮಿಯ ಪರ್ಯಾಯಪದಗಳು 64. ಅಗ್ನಿಯ ಪರ್ಯಾಯಪದಗಳು 114 ಇವೆ. ಈ ಕೋಶವು (1) ಭೂಮಿಸ್ಕಂಧ: (2) ಭುವ:ಸ್ಕಂಧ: ಮತ್ತು (3) ಸ್ವರ್ಗಸ್ಕಂಧ: ಎಂದು ಮೂರು ಸ್ಕಂಧಗಳಾಗಿ ವಿಭಾಗಿಸಲ್ಪಟ್ಟಿದೆ. ಈ ಮೂರು ಸ್ಕಂಧಗಳಲ್ಲೂ ಅನೇಕ ಪ್ರಕಾಂಡಗಳಿವೆ.

ಭೂಮಿಸ್ಕಂಧದಲ್ಲಿ ದೇವಪ್ರಕಾಂಡ: ಭೂ:ಪ್ರಕಾಂಡ: ನರಾದಿಪ್ರಕಾಂಡ: ಋಷಿಗೋತ್ರಬ್ರಹ್ಮಪ್ರಕಾಂಡ: ಕ್ಷತ್ರಿಯಪ್ರಕಾಂಡ: ಮೊದಲಾದ ಹದಿನೆಂಟು (18) ಪ್ರಕಾಂಡಗಳೂ

ಭುವಃಸ್ಕಂಧದಲ್ಲಿ ಸಾಧಾರಣಪ್ರಕಾಂಡ: ಭೂಸ್ಥದೇವಪ್ರಕಾಂಡ: ನಭ:ಸ್ಥದೇವಪ್ರಕಾಂಡ: ಕಾಲಪ್ರಕಾಂಡ: ಮತ್ತು ನಾಟ್ಯಪ್ರಕಾಂಡ: ಎಂದು ಐದು (5) ಪ್ರಕಾಂಡಗಳೂ

ಸ್ವರ್ಗಸ್ಕಂಧದಲ್ಲಿ ಸೂರ್ಯಾದಿಪ್ರಕಾಂಡ: ಬ್ರಹ್ಮಪ್ರಕಾಂಡ: ಅವ್ಯಯಪ್ರಕಾಂಡ: ಸ್ತ್ರ್ಯಾದಿಲಿಙ್ಗಪ್ರಕಾಂಡ: ಎಂದು ನಾಲ್ಕು (4) ಪ್ರಕಾಂಡಗಳೂ ಸೇರಿ ಒಟ್ಟು 27 ಪ್ರಕಾಂಡಗಳು ಇರುವುವು.

ಈ ಕೋಶದಲ್ಲಿ ಶಬ್ದಗಳ ರೂಪಭೇದದಿಂದಲೂ ಸಾಹಚರ್ಯದಿಂದಲೂ ವಿಶೇಷವಿಧಿಯಿಂದಲೂ ಸ್ತ್ರೀಲಿಂಗ ಪುಂಲಿಂಗ ನಪುಂಸಕಲಿಂಗಪ್ರಕೃತಿಗಳನ್ನು ತಿಳಿದುಕೊಳ್ಳಬೇಕು. "ರೂಪೋಕ್ತ್ಯಾ ಸಾಹಚರ್ಯಾದ್ವಾ ವಿಶೇಷವಿಧಿತ: ಕ್ವಚಿತ್। ಸ್ತ್ರೀಪುಂಕ್ಲೀಬಪ್ರಕೃತಯೋ ಜ್ಞೇಯಾಸ್ತತ್ರ ಸ್ತ್ರಿಯಾಂ ಸ್ತ್ರಿಯಿ।। ಸ್ತ್ರೀ ಪುಂಸಿ ನಾ ನರಿ ಪುಮಾನ್ ಪುಂ ಕ್ಲೀಬೇ ಷಣ್ ನಪುಂಸಕಮ್। ಯುಗ್ಮೇ ದ್ವಯೋಸ್ತ್ರಿಷ್ವಶೇಷಾರ್ಥವಾಚಕಮ್।। ಎಂದು ಲಿಂಗನಿರ್ದೇಶಕ ಸಂಕೇತ ಪದಗಳನ್ನು ಹೇಳಿರುತ್ತಾನೆ.

ಪರ್ಯಾಯಪದಗಳನ್ನು ಹೇಳುವಾಗ ಸಾಧ್ಯವಾದಷ್ಟು ಶಬ್ದಗಳನ್ನು ಕಡಮೆ ಮಾಡಲು ಸಮಸ್ತಪದದಲ್ಲಿರುವ ಪೂರ್ವಪದದ ಪರ್ಯಾಯಪದಗಳೊಡನೆ ಉತ್ತರಪದದ ಪರ್ಯಾಯಪದಗಳನ್ನು ಸೇರಿಸಿ ಹೇಳಿದರೆ ಅನೇಕ ಪರ್ಯಾಯಪದಗಳು ಆಗುವುವು ಎಂದು ಪದಗಳ ಸಂಗ್ರಹವನ್ನು ತೋರಿಸಿಕೊಟ್ಟಿರುತ್ತಾನೆ. ಉದಾ:—"ಭೂಮಿಪರ್ಯಾಯದೇವಾರ್ಥೌ ಮಾಠರ: ಕಠಾಡವೌ" ಇಲ್ಲಿ ಭೂಮಿ ಪದದ ಪರ್ಯಾಯಪದಗಳಾದ ಭೂ ಧರಾ ಧರಿತ್ರೀ ಕ್ಷೋಣಿ: ಕ್ಷಿತಿ: ಇತ್ಯಾದಿ ಪದಗಳೊಡನೆ ಸೇರಿಸಿ ಹೇಳುವ ದೇವ ಪದದ ಅರ್ಥಗಳು ಭೂದೇವ: ಭೂಸುರ: ಧರಾದೇವ: ಇತ್ಯಾದಿ ಅನೇಕ ಬ್ರಾಹ್ಮಣವಾಚಕ ಪರ್ಯಾಯಪದಗಳನ್ನು ಕೊಡುವುವು. ಹೀಗೆಯೇ "ವಕ್ಷ:ಪರ್ಯಾಯರುಹರುದ್ಜಾಥೌ ಕೂಚೌ ಕುಚಾವಪಿ"। ವಕ್ಷೋರುಹ: ವಕ್ಷೋಜ: ಇತ್ಯಾದಿ ಪದಗಳೂ "ರಾಜಪರ್ಯಾಯ ಮಾರ್ಗಾರ್ಥಾ: ಸ ಪುರಸ್ಯೋಪನಿಷ್ಕರಮ್" ಎಂಬಲ್ಲಿ ರಾಜಮಾರ್ಗ: ನೃಪಮಾರ್ಗ: ಇತ್ಯಾದಿ ಪದಗಳೂ "ಇನ್ದ್ರಪರ್ಯಾಯಜೌ ವಾಲೀ ವಾಲಿರ್ದುನ್ದುಭಿದರ್ಪಹಾ" ಎಂಬಲ್ಲಿ ಇನ್ದ್ರಜ: ಪುರನ್ದರಜ: ಪುರುಹೂತಜ: ಇತ್ಯಾದಿ ಪದಗಳೂ "ಸೂರ್ಯಪರ್ಯಾಯಪುತ್ರಾರ್ಥ: ಸುಗ್ರೀವೌ ವಾನರೇಶ್ವರ:" ಎಂಬಲ್ಲಿ ಸೂರ್ಯಪುತ್ರ: ಸೂರ್ಯಸೂನು: ರವಿತನಯ: ರವಿಸುತ: ಇತ್ಯಾದಿ ಅನೇಕ ಪರ್ಯಾಯಪದಗಳೂ ಆಗುವುವು. ಕ್ರಮಬದ್ಧವಾದ ಈ ಪದ್ಧತಿಯು ಆಲಂಕಾರಿಕರ ಶೀಘ್ರಗತಿಗೆ ಅಡಚಣೆಯುಂಟುಮಾಡುವುದಾದರೂ ಪದಗಳ ಸಂಗ್ರಹಕ್ಕೆ ಬಹಳ ಉಪಯುಕ್ತವಾಗಿದೆ. "ಅಥಾರಮ್ಭೇಥಪರ್ಯಾಯಪರಿವೃತ್ತಿಪ್ರಸಙ್ಗತ:। ಪರ್ಯಾಯಪದಮಾರಭ್ಯ ಜ್ಞೇಯಂ ನಾಮಾತ್ರ ಸರ್ವತ:।। ಸಮಸ್ತಪದಪರ್ಯಾಯಪರಿವರ್ತನಮತ್ರ ತು। ಆಲಙ್ಕಾರಿಕಸಿದ್ಧಾನ್ತಾಸಹತ್ವೇಽಪಿ ವಿಲೋಕ್ಯತಾಮ್।। ಯೇಷಾಂ ನಾತಿಪ್ರಸಿದ್ಧಾನಾಂ ಶಬ್ದಾನಾಮಿಹ ಸಂಗ್ರಹ:। ತೇಷಾಂ ಮಹಾಕವಿಗ್ರನ್ಥೈ: ಸಂವಾದೋಽನ್ವಿಧೀಯತಾಮ್" ಎಂದು ಕವಿಯು ಗ್ರಂಥದ ಪೀಠಿಕಾ

ಪ್ರಕರಣದಲ್ಲಿ ಹೇಳಿರುತ್ತಾನೆ. ಕಾತ್ಯ ವಾಚಸ್ಪತಿ ವ್ಯಾಡಿ ಭಾಗುರಿ ಅಮರಸಿಂಹ ಮಂಗಳ ಸಾಹಸಾಂಕ ಮಹೇಶ ಮತ್ತು ಜಿನ ಇವರ ಕೋಶಗಳನ್ನು ಚೆನ್ನಾಗಿ ಪರಿಶೀಲಿಸಿ ಪರ್ಯಾಲೋಚಿಸಿ ಇವುಗಳ ಆಧಾರದಿಂದ ಕಲ್ಪದ್ರುಕೋಶವನ್ನು ರಚಿಸಿದುದಾಗಿ ಕೇಶವಪಂಡಿತನು ಈ ಕೋಶದ ಪೀಠಿಕಾ ಪ್ರಕರಣದಲ್ಲಿ ಹೇಳಿರುತ್ತಾನೆ. "कात्यवाचस्पतिव्याडि-भागुर्यमरमङ्गलाः। साहसाङ्कमहेशाद्याः विराजन्ते जिनान्तिमाः। समालोक्य मतान्येषां कल्पद्रुरखिलार्थदः। क्रियते केशवेनायं नामप्रकृतिबोधनः" ಕಲ್ಪದ್ರು೦ ೨-೩।

तणादिकोशाः – ಉಣಾದಿಪ್ರತ್ಯಯಾಂತಪದಗಳನ್ನು ತಿಳಿಸಲು ಅನೇಕ ಪಂಡಿತರು ಉಣಾದಿಕೋಶಗಳನ್ನು ರಚಿಸಿರುತ್ತಾರೆ. ಅವುಗಳಲ್ಲಿ ಕೆಲವು ಕೋಶಗಳು ಮತ್ತು ಆ ಕೋಶಕಾರರ ಹೆಸರುಗಳನ್ನು ಇಲ್ಲಿ ಕೊಡಲಾಗಿದೆ :

(1) **लक्ष्मीनिवासाभिधानकोशः** — ಇದು 18 ನೆಯ ಶತಮಾನದಲ್ಲಿ ಶಿವರಾಮನೆಂಬ ಪಂಡಿತನಿಂದ ವಿರಚಿತವಾಗಿದೆ.

(2) **तणादिकोशः** — ಇದು ರಾಮಶರ್ಮ ಪಂಡಿತ ವಿರಚಿತ.

(3) **तणादिनाममाला**—ಇದು 15 ನೆಯ ಶತಮಾನದ ಉತ್ತರಾರ್ಧದಲ್ಲಿ ಶುಭಶೈಲಗಣಿಯಿಂದ ವಿರಚಿತವಾಗಿದೆ.

(4) **शब्दार्णवतरी**—ರಾಮಗೋವಿಂದ ವಿರಚಿತ.

(5) **नानार्थशब्दरत्नकोशः**—ಕಾಲಿದಾಸ ವಿರಚಿತ. ಇದಕ್ಕೆ ನಿಚುಲಯೋಗೀಂದ್ರನು ವ್ಯಾಖ್ಯಾನವನ್ನು ರಚಿಸಿರುವನು.

शब्दकल्पद्रुमः—ಇದು ರಾಜಾರಾಧಾಕಾಂತದೇವ ವಿರಚಿತ. ಆಧುನಿಕ ರೀತಿಯಲ್ಲಿ ರಚಿಸಿರುವ ಶಬ್ದಕೋಶಗಳಲ್ಲಿ ಇದು ಮೊದಲನೆಯದು. ಇದರಲ್ಲಿ ಶಬ್ದಗಳು ಅಕಾರಾದಿ ಕ್ರಮದಲ್ಲಿ ಸಂಗ್ರಹಿಸಲಾಗಿದೆ. ಗ್ರಂಥಕಾರನು ಎಲ್ಲಾ ಸಾಹಿತ್ಯ ಗ್ರಂಥಗಳ ಮತ್ತು ಶಾಸ್ತ್ರಗಳ ವಿಷಯಗಳನ್ನು ಬಹಳ ವಿವರವಾಗಿ ಕೊಟ್ಟಿರುತ್ತಾನೆ. ಈ ಕೋಶವು ಸಕಲಶಾಸ್ತ್ರಜ್ಞಾನವನ್ನು ನೀಡುವ ಒಂದು ವಿಶ್ವಕೋಶವಾಗಿರುವುದು. ಸಾಮಾನ್ಯವಾಗಿ ಈ ಕೋಶದಲ್ಲಿ ಬರುವ ಅನೇಕ ಶಬ್ದಗಳಿಗೆ ಪರ್ಯಾಯ ಪದಗಳನ್ನೂ ಮತ್ತು ಅವುಗಳಿಗಿರುವ ನಾನಾರ್ಥಗಳನ್ನೂ ಕೊಡಲಾಗಿದೆ. ಅವಶ್ಯವಾದ ಮತ್ತು ಮುಖ್ಯವಾದ ಪದಗಳಿಗೆ ಶಾಸ್ತ್ರಗಳ ಆಧಾರವನ್ನು ಕೊಟ್ಟು ಅವನ್ನು ವಿವರಿಸಲಾಗಿದೆ. ಅನೇಕ ಮುಖ್ಯವಾದ ಪದಗಳಿಗೆ ಪುರಾಣೇತಿಹಾಸ ಮತ್ತು ಶಾಸ್ತ್ರಗಳ ಆಧಾರದ ಮೇಲೆ ಪ್ರಾಮಾಣ್ಯವನ್ನು ಕೊಡಲಾಗಿದೆ. ಧಾತು ಮತ್ತು ಪ್ರತ್ಯಯಗಳ ನಿರೂಪಣೆಯೊಡನೆ ಮುಖ್ಯವಾದ ಕೆಲವು ಪದಗಳಿಗೆ ನಿಷ್ಪತ್ತಿಕ್ರಮವನ್ನು ಕೈಗೊಳ್ಳಲಾಗಿದೆ. ಈ ಗ್ರಂಥದಲ್ಲಿ ಲೌಕಿಕಸಂಸ್ಕೃತಶಬ್ದಗಳಿಗೇ ಪ್ರಾಧಾನ್ಯವೇ ಹೊರತು ವೈದಿಕಶಬ್ದಗಳನ್ನು ಸೇರಿಸಿರುವುದಿಲ್ಲ. ಸಾಧ್ಯವಾದಷ್ಟೂ ಶಬ್ದಗಳಿಗೆ ಅನೇಕ ಕಡೆ ಸಾಹಿತ್ಯ ಶಾಸ್ತ್ರ ಪುರಾಣ ಮತ್ತು ಇತಿಹಾಸಗಳಿಂದ ಉದಾಹರಣೆಗಳನ್ನು ಕೊಡಲಾಗಿದೆ. ಇದು ನಾನಾವಿಧದಲ್ಲಿಯೂ ಶಾಸ್ತ್ರ ಮತ್ತು ಸಾಹಿತ್ಯ ಗ್ರಂಥಕರ್ತರಿಗೂ ವಿದ್ಯಾರ್ಥಿಗಳಿಗೂ ಬಹಳ ಉಪಯುಕ್ತವಾಗಿರುವುದು.

वाचस्पत्यम् – ಇದು ತಾರಾನಾಥತರ್ಕವಾಚಸ್ಪತಿವಿರಚಿತವಾದುದು. ಈ ಕೋಶದಲ್ಲಿ ಶಬ್ದಕಲ್ಪದ್ರುಮದಂತೆಯೇ ವಿಷಯನಿರೂಪಣೆಯಿದ್ದರೂ ಅದಕ್ಕಿಂತಲೂ ಇದರಲ್ಲಿ ಹೆಚ್ಚು ಶಬ್ದಗಳನ್ನು ಸಂಗ್ರಹಿಸಲಾಗಿದೆ. ಪದಗಳ ರೂಪನಿಷ್ಪತ್ತಿ, ನಾನಾರ್ಥಗಳು ಮತ್ತು ಅವುಗಳ ವಿಷಯನಿರೂಪಣೆ ಶಾಸ್ತ್ರ ಮತ್ತು ಸಾಹಿತ್ಯಗ್ರಂಥಗಳಿಂದ ಉದಾಹರಣೆಗಳು ಶಾಸ್ತ್ರ ಪುರಾಣ ಇತಿಹಾಸಗಳಿಂದ ಪ್ರಾಮಾಣ್ಯಪ್ರದರ್ಶನ ಎಲ್ಲವೂ ಶಬ್ದಕಲ್ಪದ್ರುಮದಂತೆಯೇ ಇರುವುವು. ಇದರಲ್ಲಿ ಅನೇಕ ವೈದಿಕಪದಗಳನ್ನು ಸೇರಿಸಿರುವುದು ಇದರ ಪ್ರಾಶಸ್ತ್ಯಕ್ಕೆ ಕಾರಣವಾಗಿರುವುದು. ಶಬ್ದಕಲ್ಪದ್ರುಮಕ್ಕಿಂತಲೂ ಶಬ್ದಗಳ ರೂಪನಿಷ್ಪತ್ತಿಯ ಕ್ರಮವು ಇದರಲ್ಲಿ ವಿಶೇಷವಾಗಿದೆ. ಇದೊಂದು ಆಧುನಿಕ ಕ್ರಮದಲ್ಲಿ ರಚಿತವಾದ ಬೃಹತ್ತಾದ ಶಬ್ದಕೋಶವಾಗಿದೆ.

शब्दार्थचिन्तामणिः—ಈ ಕೋಶವು ಸುಖಾನಂದನಾಥ ವಿರಚಿತವಾದುದು. ಶಬ್ದಾರ್ಥಚಿಂತಾಮಣಿಯು ಎಲ್ಲಾ ವಿಷಯದಲ್ಲೂ ರಾಧಾಕಾಂತದೇವನ ಶಬ್ದಕಲ್ಪದ್ರುಮ ಮತ್ತು ತಾರಾನಾಥತರ್ಕವಾಚಸ್ಪತಿಯ ವಾಚಸ್ಪತ್ಯಮನ್ನು ಹೋಲುವ ಒಂದು ಶಬ್ದಕೋಶ. ಇದು 1864 ರಿಂದ 1885 ರ ಅವಧಿಯಲ್ಲಿ ರಚಿತವಾದುದೆಂದು ತಿಳಿದುಬರುವುದು.

धन्वन्तरिनिघण्टुः—**धन्वन्तरिः** – ವೈದ್ಯ ಮತ್ತು ಸಸ್ಯವಿಜ್ಞಾನಗಳ ವಿಷಯವಾಗಿ ಅನೇಕರು ನಿಘಂಟುಗಳನ್ನು ರಚಿಸಿರುತ್ತಾರೆ. ಈ ನಿಘಂಟುಗಳು ಅನೇಕ ವಿಧವಾದ ಗಿಡ ಮೂಲಿಕೆ ಬೇರು ಪ್ರಾಣಿಗಳು ಖನಿಜಗಳು ಮತ್ತು ಮನುಷ್ಯನ ದೇಹಕ್ಕೆ ಹಿತವಾದ ಆಹಾರ ಮತ್ತು ಔಷಧಗಳನ್ನು ಪರ್ಯಾಯಶಬ್ದಗಳಿಂದ ತಿಳಿಸುವುವು. ಈ ನಿಘಂಟುಗಳಲ್ಲಿ ಪರಮಪ್ರಾಚೀನವಾದುದು ಧನ್ವಂತರಿನಿಘಂಟು. ಈ ನಿಘಂಟು ಒಂಬತ್ತು (9) ಅಧ್ಯಾಯಗಳಲ್ಲಿ ರಚಿತವಾಗಿರುವುದು. ನಾವು ಲಿಂಗಾನುಶಾಸನಕೋಶಕಾರನಾದ ಅಮರಸಿಂಹನು ಧನ್ವಂತರಿ ಮೊದಲಾದವರು ರಚಿಸಿದ ವೈದ್ಯಕೀಯ ಮತ್ತು ಸಸ್ಯವಿಜ್ಞಾನ ಗ್ರಂಥಗಳ ಸಾಹಾಯ್ಯದಿಂದ ತನ್ನ ಕೋಶವನ್ನು ರಚಿಸಿರುವುದಾಗಿ ಹೇಳಿರುವುದರಿಂದ ಧನ್ವಂತರಿಗಿಂತ ಅಮರಸಿಂಹನು ಅರ್ವಾಚೀನನೆಂದು ತಿಳಿದುಬರುವುದು. ಧನ್ವಂತರಿನಿಘಂಟು

ಇತ್ತೀಚಿನ ಎಲ್ಲಾ ನಿಘಂಟುಗಳಿಗೂ ಆಧಾರವಾಗಿದೆ. ಔಷಧೋಪಯುಕ್ತವಾದ ದ್ರವ್ಯಗಳ ಮತ್ತು ಔಷಧಗಳ ಸಂಖ್ಯೆಯು ಅನಂತವಾಗಿರುವುದರಿಂದ ನಾನಾನಿಘಂಟುಗಳ ಅತ್ಯುಪಯುಕ್ತ ವಿಷಯಗಳನ್ನು ಸಂಗ್ರಹಿಸಿ ಈ ನಿಘಂಟನ್ನು ರಚಿಸಿರುವುದಾಗಿ ಹೇಳಲಾಗಿದೆ. "अनेकदेशान्तरभाषितेषु सर्वेष्वथ प्राकृतसंस्कृतेषु। गूढेष्वगूढेषु च नास्ति संख्या ह्यभिधानेषु तथौषधीषु॥ प्रयोजनं यस्य तु यावदेव तावत्स गृह्णाति यथाम्बुकूपात्। तथा निघण्ट्वम्बुनिधेरनन्तात् गृह्णाम्यहं किञ्चिदिहैकदेशम्" धन्व० नि०।

ಈ ಮೇಲೆ ಹೇಳಿದ ಕೋಶಗಳಲ್ಲದೆ ಇನ್ನೂ ಅನೇಕ ವಿದ್ವಾಂಸರು ರಚಿಸಿರುವ ನಿಘಂಟುಗಳ ವಿವರವನ್ನು ಸಂಗ್ರಹವಾಗಿ ಈ ಮುಂದೆ ಕೊಡಲಾಗಿದೆ.

ಶಬ್ದರತ್ನಾಕರ:—ಇದು ಮಹೀಪವಿರಚಿತ. ಈ ಕೋಶದ ನಾನಾರ್ಥಶಬ್ದಗಳ ಭಾಗಕ್ಕೆ ಅನೇಕಾರ್ಥ ಅಥವಾ ನಾನಾರ್ಥತಿಲಕ ಎಂಬ ಹೆಸರನ್ನಿಡಲಾಗಿದೆ.

ಭೂರಿಪ್ರಯೋಗ:—ಇದು ಪದ್ಮನಾಭಭಟ್ಟವಿರಚಿತ. ಇದರಲ್ಲಿ ಪರ್ಯಾಯಪದಗಳ ಭಾಗವು ಬಹಳ ಚಿಕ್ಕದಾಗಿಯೂ ನಾನಾರ್ಥಪದಗಳ ಭಾಗವು ವಿಸ್ತಾರವಾಗಿಯೂ ಇರುವುದು. ಈ ಕೋಶಕಾರನು ಪೃಷೋದರಾದಿವೃತ್ತಿಯನ್ನು ಬರೆದಿರುತ್ತಾನೆ.

ಶಬ್ದಮಾಲಾ—ಇದು ರಾಮೇಶ್ವರಶರ್ಮವಿರಚಿತ. ಈ ಕೋಶವು ಎಲ್ಲಾ ವಿಷಯುಗಳಲ್ಲೂ ಭೂರಿ ಪ್ರಯೋಗಕೋಶವನ್ನೇ ಹೋಲುವುದು.

अभिधानतन्त्रम् :—ಜಟಾಧರಕವಿವಿರಚಿತವಾದ ಈ ಕೋಶವು ಪರ್ಯಾಯಪದಗಳ ಮತ್ತು ನಾನಾರ್ಥಪದಗಳ ಒಂದು ನಿಘಂಟು. ಇದರ ಹೆಚ್ಚು ಭಾಗವು ಅಮರಸಿಂಹನ ನಾಮಲಿಂಗಾನುಶಾಸನದ ಶ್ಲೋಕಗಳಿಂದಲೇ ರಚಿತವಾಗಿದೆ.

अनेकार्थः अथवा नानार्थध्वनिमञ्जरी—ಇದು ಗದಸಿಂಹವಿರಚಿತವಾದುದು. ಸುಮಾರು 88 ಶ್ಲೋಕಗಳಲ್ಲಿ ರಚಿತವಾದ ಇದು ಒಂದು ನಾನಾರ್ಥಶಬ್ದಗಳ ಕೋಶ. ಈ ಕೋಶಕಾರನು ರುದ್ರ ಗಂಗಾಧರ ಧರಣಿ ಮತ್ತು ರತ್ನ ಕೋಶ ಈ ಎಲ್ಲಾ ಹೆಸರುಗಳನ್ನೂ ತನ್ನ ಕೋಶದಲ್ಲಿ ನಮೂದಿಸಿರುತ್ತಾನೆ. ಇದೇ ಹೆಸರಿನ ಇನ್ನೊಂದು ಕೋಶವು ಕಾಶ್ಮೀರದ ಮಹಾಕ್ಷಪಣಕನ ಹೆಸರಿನಲ್ಲಿರುವುದು. ಇದು ಶ್ಲೋಕಾಧಿಕಾರ ಅರ್ಧಶ್ಲೋಕಾಧಿಕಾರ ಮತ್ತು ಪಾದಶ್ಲೋಕಾಧಿಕಾರ ಎಂಬ ಮೂರು ಭಾಗಗಳಿಂದ ಕೂಡಿದೆ. ಇವುಗಳಲ್ಲಿ ಮೊದಲನೆಯ ಭಾಗವು ಗದಸಿಂಹನ ಕೃತಿಯು ಅನೇಕ ಶ್ಲೋಕಗಳನ್ನೊಳಗೊಂಡಿರುವುದು.

ಏಕಾಕ್ಷರಕೋಶಗಳು—ಏಕಾಕ್ಷರಕೋಶಗಳು ಏಕಾರಾದಿ ಒಂದೇ ಅಕ್ಷರದ ಶಬ್ದಗಳ ಅರ್ಥಗಳನ್ನು ಕೊಡುವುವು. ಇವುಗಳಲ್ಲಿ ಮುಖ್ಯವಾದ ಕೆಲವು ಕೋಶಗಳನ್ನು ಈ ಮುಂದೆ ವಿವರಿಸಲಾಗಿದೆ.

एकाक्षरकोशः—पुरुषोत्तमदेवः—ಈ ಕೋಶವು ಪುರುಷೋತ್ತಮದೇವವಿರಚಿತ. ಇದರಲ್ಲಿ ಏಕಾಕ್ಷರಪದಗಳ ಪರ್ಯಾಯ ಮತ್ತು ಅನೇಕಾರ್ಥಗಳು ವಿವರಿಸಲ್ಪಟ್ಟಿವೆ. "अकारो वासुदेवः स्यात् आकारस्तु पितामहः। पूजायामपि माङ्गल्ये आकारः परिकीर्तितः॥ ईकारः कथ्यते कामो लक्ष्मीरीकार उच्यते। उकारः शङ्करः प्रोक्तः ऊकारश्चापि लक्षणे। रक्षणे चापि ऊकारः ऊकारो ब्रह्मणि स्मृतः" ಇತ್ಯಾದಿ. ಈ ಕೋಶವೂ ವರರುಚಿಯ ಏಕಾಕ್ಷರಾಭಿಧಾನ ಕೋಶವೂ ಅನೇಕ ವಿಷಯುಗಳಲ್ಲಿ ಸಮಾನವಾಗಿವೆ.

एकाक्षरनाममाला—सुधाकलशः—ಈ ಕವಿಯು 14 ನೆಯ ಶತಮಾನದ ಪೂರ್ವಾರ್ಧದಲ್ಲಿ ಈ ಕೋಶವನ್ನು ರಚಿಸಿದನು.

एकाक्षररत्नमाला—माधवः—ಈ ಕೋಶವು ಮಾಧವ ಪಂಡಿತವಿರಚಿತ. ಈ ಮಾಧವಪಂಡಿತನು ಹರಿಹರದ ದೊರೆಯಾ ಮಂತ್ರಿಯಾಗಿದ್ದ ಮಾಯಣನ ಪುತ್ರ. ಈ ಕೋಶದಲ್ಲಿ स्वरकाण्डः व्यञ्जनकाण्डः ಮತ್ತು संयुक्तकाण्डः ಎಂಬ ಮೂರು ಕಾಂಡಗಳಿವೆ.

अनेकार्थसारः—धरणिदासः—ಧರಣಿದಾಸಕೃತವಾದ ಅನೇಕಾರ್ಥಸಾರವೆಂಬ ಈ ಕೋಶವು ಧರಣಿ ಅಥವಾ ಧರಣ ಕೋಶ ಎಂದು ವ್ಯವಹರಿಸಲ್ಪಟ್ಟಿದೆ. ವ್ಯಾಖ್ಯಾನಗಳಲ್ಲಿ क्ष्मिन् धरणिः ಎಂದು ಕವಿಯು ಹೆಸರಿನಿಂದಲೇ ಈ ಕೋಶವನ್ನು ನಿರ್ದೇಶಿಸಿರುತ್ತಾರೆ. ಅಜಯಕೋಶದಂತೆ "ಋ" ವರ್ಣವನ್ನು ಪತ್ಯೇಕವರ್ಣವೆಂದೇ ಪರಿಗಣಿಸಲಾಗಿದೆ. ಸರ್ವಾನಂದನು ಈ ಕವಿಯನ್ನು ಅನೇಕ ಸಲ ಉಲ್ಲೇಖಿಸಿರುವುದರಿಂದ ಈ ಕವಿಯು 12 ನೇ ಶತಮಾನಕ್ಕಿಂತಲೂ ಪೂರ್ವದಲ್ಲೇ ಇದ್ದಿರಬಹುದೆಂದು ತಿಳಿಯಲು ಸಾಧ್ಯ.

निगमाभिधानम्—ಈ ಕೋಶದಲ್ಲಿ ಅಮರಕೋಶದಂತೆಯೇ ಪರ್ಯಾಯಪದಗಳೂ ಕೊನೆಯಲ್ಲಿ ನಾನಾರ್ಥಪದಗಳೂ ಇರುವುವು.

ಭೋಪಾಲಿತ:—ಭೋಪಾಲಿತನ ಹೆಸರಿನಲ್ಲೇ ಈ ಕೋಶವು ರಚಿತವಾಗಿದೆ. ಈ ಕವಿಯು ಹಲಾಯುಧ ಮಹೇಶ್ವರ ಮೇದಿನೀಕರ ಮತ್ತು ಅನೇಕ ವ್ಯಾಖ್ಯಾನಕಾರರಿಂದ ಪ್ರಮಾಣವಾಗಿ ಉಲ್ಲೇಖಿಸಲ್ಪಟ್ಟಿರುವನು. ಈತನ ಕೋಶವು ಲಿಂಗನಿರ್ದೇಶನಪೂರ್ವಕವಾಗಿಯೇ ರಚಿತವಾಗಿರುವುದು. "ऋक्षीकाः

ಥಲಪ್ರಾಸ್ತೇ" ಎಂದು ಪುಂಸ್ಕಾಂಡದಲ್ಲಿಯೂ "ಗಹ್ವರಶ್ಚೀ ನರೌ ಶ್ಚಭೇ" ಎಂದು ಕ್ಲೀಬಕಾಂಡದಲ್ಲಿಯೂ ಲಿಂಗನಿರ್ದೇಶನಗಳು ಇರುವುವು. ಇದರ ಕೆಲವು ಭಾಗಗಳು ಆರ್ಯಾವೃತ್ತದಲ್ಲಿ ರಚಿತವಾಗಿದೆ.

नानार्थसङ्ग्रहः – अजयपालः – ನಾನಾರ್ಥಸಂಗ್ರಹವನ್ನು ರಚಿಸಿದ ಅಜಯಪಾಲನು ಒಬ್ಬ ಬೌದ್ಧಕವಿ. ಸರ್ವಾನಂದ ಕೇಶವಸ್ವಾಮಿ ಮತ್ತು ಇನ್ನೂ ಅನೇಕರು ಈ ಕವಿಯನ್ನು ಗುಣರತ್ನಮಹೋದಧಿಯಲ್ಲಿ ಉಲ್ಲೇಖಿಸಿರುವರು. ಈ ಕೋಶದಲ್ಲಿ 1730 ಪದಗಳಿವೆ. ಇವುಗಳಲ್ಲಿ ಅನೇಕಪದಗಳು ಶಾಶ್ವತಕೋಶದಲ್ಲಿ ಕಂಡುಬರುವುವು. ಇದು ಅಧ್ಯಾಯಗಳಾಗಿ ವಿಂಗಡಿಸಲ್ಪಟ್ಟು ಪೂರ್ಣಶ್ಲೋಕಗಳಿಂದಲೂ ಅರ್ಧಶ್ಲೋಕಗಳಿಂದಲೂ ಅರ್ಥವು ವಿವರಿಸಲ್ಪಟ್ಟಿದೆ. ಅವ್ಯಯಪದಗಳು ಇತರ ಕೋಶಗಳಂತೆ ಗ್ರಂಥದ ಕೊನೆಯಲ್ಲಿರದೆ ಅಧ್ಯಾಯಗಳ ಕೊನೆಯಲ್ಲಿ ಸೇರಿಸಲ್ಪಟ್ಟಿವೆ. ಇದರಲ್ಲಿಯೂ "ಷ"ವು ಪ್ರತ್ಯೇಕವರ್ಣವೆಂದೇ ಪರಿಗಣಿಸಲ್ಪಟ್ಟಿದೆ.

एकवर्णार्थसङ्ग्रहः – भरतसेनः – ಏಕವರ್ಣಾರ್ಥಸಂಗ್ರಹ ಕೋಶವು ಭರತಸೇನಪಂಡಿತವಿರಚಿತವಾದುದು. ಈ ಪಂಡಿತನು 16ನೆಯ ಶತಮಾನದಲ್ಲಿ ಈ ಕೋಶವನ್ನು ರಚಿಸಿದುದಾಗಿ ತಿಳಿದುಬರುವುದು.

अव्ययकोशः – ಮಹಾದೇವಭಟ್ಟನ ಅವ್ಯಯಕೋಶ ಮತ್ತು ಜಯದೇವಭಟ್ಟಾರಕನ ಅವ್ಯಯಾರ್ಣವ ಇವು ಈ ಶ್ರೇಣಿಗೆ ಸೇರಿದುವು. ಅವ್ಯಯಾರ್ಣವ ಕೋಶವು ಮೂರು ತರಂಗಗಳಲ್ಲಿ ರಚಿತವಾಗಿದೆ.

द्विरूपकोशः – ಪುರುಷೋತ್ತಮದೇವನ ದ್ವಿರೂಪ ಕೋಶವು ಶಬ್ದಗಳ ಎರಡೆರಡು ರೂಪಗಳನ್ನು ತೋರಿಸುವುದು. ಹ್ರಸ್ವ ದೀರ್ಘ ಮತ್ತು ಅಕ್ಷರಗಳ ಭೇದಗಳಿಂದ ಈ ರೂಪಗಳಾಗುವುವು. ಇದಕ್ಕೆ "शब्दभेदप्रकाशः" ಎಂದೂ ಹೆಸರು. "अटरूटश्चाटरूषोऽप्यवस्योऽवश्य एव च। प्रतिश्यायः प्रतीश्यायो भल्लूको मल्लुकोऽपि च।। ज्योतिषं चापि ष्ठेवनं ष्ठीवनं तथा। सूत्रामापि च सुत्रामा हनूमान् हनुमानपि।। बन्धूरं बन्धुरं च स्यादूरीकृतमुरीकृतम्। बाह्लीकं बाह्लिकं चापि गाण्डीवं गाण्डिवं तथा" ಇತ್ಯಾದಿ.

द्विरूपकोशः – श्रीहर्षः – ಈ ದ್ವಿರೂಪಕೋಶವು ನೈಷಧೀಯ ಚರಿತಕಾರನಾದ ಶ್ರೀಹರ್ಷಕವಿ ವಿರಚಿತವಾದುದು.

ऊष्मविवेकः–गदसिंहः–ಗದಸಿಂಹವಿರಚಿತ ಈ ಊಷ್ಮವಿವೇಕವು ಊಷ್ಮ (शषसह) ವರ್ಣಗಳ ಪದಗಳ ವಿಷಯದಲ್ಲಿ 112 ಶ್ಲೋಕಗಳಿಂದ ರಚಿತವಾದ ಒಂದು ಕೋಶ.

श्रीशब्दरत्नाकरः–साधुसुन्दरगणिः – ಇದು 1000 ಕ್ಕಿಂತಲೂ ಹೆಚ್ಚು ಶ್ಲೋಕಗಳಿಂದ ರಚಿತವಾದ ಒಂದು ಕೋಶ. ಈ ಕೋಶದಲ್ಲಿ ಹೇಮಚಂದ್ರನ ಅಭಿಧಾನಚಿಂತಾಮಣಿಯಂತೆಯೇ ಕ್ರಮ ಮತ್ತು ವಿಭಾಗಗಳು ಇರುವುವು.

नानार्थपदपेटिका–शब्दलिङ्गार्थचन्द्रिका–सुजनः– ಈ ಎರಡು ಕೋಶಗಳೂ ಸುಜನಪಂಡಿತನಿಂದ ರಚಿತವಾದುವು. ಇವು ನಾನಾರ್ಥಶಬ್ದಗಳ ಕೋಶ. ಶಬ್ದಲಿಂಗಾರ್ಥಚಂದ್ರಿಕೆಯು एकलिङ्गकाण्डः द्विलिङ्गकाण्डः ಮತ್ತು त्रिलिङ्गकाण्डः ಎಂದು ಮೂರು ಕಾಂಡಗಳಾಗಿ ವಿಭಾಗಿಸಲ್ಪಟ್ಟಿದೆ.

विश्वमेदिनी–सारस्वतमिश्रः–ವಿಶ್ವಮೇದಿನೀಕೋಶವು ಸಾರಸ್ವತಮಿಶ್ರವಿರಚಿತ. ಇದರಲ್ಲಿ नानार्थकाण्डः पर्यायकाण्डः ಮತ್ತು अव्ययकाण्डः ಎಂದು ಮೂರು ಕಾಂಡಗಳಿವೆ. ಈ ಕವಿಯು ಇದರಲ್ಲಿ ತನ್ನ ಇನ್ನೊಂದು ಕೃತಿಯಾದ ಹೇಮವೇದಿನೀಕೋಶವನ್ನು ಎತ್ತಿ ಹೇಳಿರುತ್ತಾನೆ.

ಇವಲ್ಲದೆ ಇನ್ನೂ ಅಸಂಖ್ಯಾತ ನಿಘಂಟುಗಳು ಹಲವಾರು ಕವಿಗಳಿಂದ ರಚಿತವಾಗಿವೆ. ಅವುಗಳಲ್ಲಿ ಕೆಲವು ಈ ಕೆಳಗೆ ಕೊಡಲ್ಪಟ್ಟಿವೆ ;

कविदर्पणनिघण्टुः एकाक्षराभिधानम् धनञ्जयनाममाला कविजीवनकोशः ज्योतिषनिघण्टुः तद्धितकोशः अभिधानसमुच्चयः तन्त्रकोशः दामोदरकोशः द्रव्यगुणादर्शनिघण्टुः गणितनाममाला कविसञ्जीवनीकोशः देशीयराजशेखरकोशः गुणविज्ञाननिघण्टुः वर्णभैरवः शब्दाब्धिः संख्यारत्नकोशः सञ्जीवनीकोशः श्रौतपदार्थनिर्वचनम् शब्दशब्दार्थमञ्जूषा शब्दसंग्रहनिघण्टुः उक्तिरत्नाकरः ಇತ್ಯಾದಿ ಇನ್ನೂ ಅಸಂಖ್ಯ ಕೋಶಗಳು ರಚಿತವಾಗಿವೆ. ಗ್ರಂಥವಿಸ್ತರಭಯದಿಂದ ಕೋಶಗಳ ವಿವರಗಳ ಉಪಸಂಹಾರ ಮಾಡಲಾಗಿದೆ.

परिशिष्टम् ३

ಪರಿಶಿಷ್ಟ ೩

APPENDIX III

ಆಡಳಿತಕ್ಕೆ ಸಂಬಂಧಿಸಿದ ಪದಗಳು :

ಇಂಗ್ಲಿಷ್—ಸಂಸ್ಕೃತ—ಕನ್ನಡ

Administrative Words :

English—Samskrita—Kannada

APPENDIX III

ಆಡಳಿತಕ್ಕೆ ಸಂಬಂಧಿಸಿದ ಇಂಗ್ಲಿಷ್ ಪದಗಳಿಗೆ ಸಂಸ್ಕೃತ ಮತ್ತು ಕನ್ನಡಗಳಲ್ಲಿ ಅರ್ಥ ಬರೆಯಲು ಆಯಾ ಅರ್ಥಗಳು ಬರುವ ಯೌಗಿಕ ಮತ್ತು ರೂಢವಾದ ಕೆಲವು ಸಂಸ್ಕೃತದ ಪದಗಳನ್ನು ಕೊಡ ಬೇಕಾಗಿರುವುದು ಅನಿವಾರ್ಯ. ಹಾಗೆಯೇ ಕನ್ನಡದಲ್ಲಿ ಅರ್ಥ ಬರೆಯುವಾಗ ಅನೇಕ ಪದಗಳಿಗೆ ಸಂಸ್ಕೃತ ಪದಗಳನ್ನೂ ಮಹಮ್ಮದೀಯರ ಆಳ್ವಿಕೆಯಲ್ಲಿ ಬಳಕೆಯಲ್ಲಿದ್ದ ಹಲವಾರು ಉರ್ದು ಪದಗಳನ್ನೂ ಉಪಯೋಗಿಸುವುದೂ ಅನಿವಾರ್ಯವಾಗುವುದು.

APPENDIX III

ಆಡಳಿತಕ್ಕೆ ಸಂಬಂಧಿಸಿದ ಪದಗಳು ಮತ್ತು ಅವುಗಳ ಸಮಾನಾರ್ಥಕ ಸಂಸ್ಕೃತ—ಕನ್ನಡ ಪದಗಳು

ADMINISTRATIVE WORDS WITH THEIR EQUIVALENTS IN SAMSKRITA AND KANNADA LANGUAGES

A

English	*Samskrita*	*Kannada*
Abatement	उपशमनम्	ತಗ್ಗಿಸುವುದು, ಕಡಮೆ ಮಾಡುವುದು.
Abbreviation	संक्षेपणम्	ಚಿಕ್ಕದಾಗಿ ಮಾಡುವುದು, ಸಂಕ್ಷೇಪ ಮಾಡುವುದು.
Abdication	परित्यागः	ಹಕ್ಕನ್ನು ತೊರೆದುಬಿಡುವುದು.
Abeyance	स्थगनम्	ತಡೆಗಟ್ಟುವುದು, ಕಾರ್ಯಾಚರಣೆಗೆ ತರಡೆ ತಡೆಗಟ್ಟುವುದು.
Abiding	दृढविश्वासः	ಅಚಲವಾದ ನಂಬಿಕೆ.
Ability	सामर्थ्यम्, दक्षता	ಸಮರ್ಥನಾಗಿರುವಿಕೆ, ಬುದ್ಧಿಶಕ್ತಿಯಿಂದ ಕೂಡಿರುವಿಕೆ.
Abkari	मादकवस्तुनिर्माणम्	ಮದ್ಯ ಸಾರಾಯಿ ಮೊದಲಾದವುಗಳ ತಯಾರಿಕೆ
Able	समर्थः, दक्षः	ಬುದ್ಧಿಶಕ್ತಿಯಿಂದ ಕೂಡಿದವನು.
Abode	गृहम्, वसतिः	ಮನೆ, ವಾಸಸ್ಥಳ.
Abolisher	उच्छेदकः, उत्सादकः	ರದ್ದುಪಡಿಸುವವನು.
Abolishment	उत्सादनम्	ರದ್ದುಮಾಡುವುದು, ಪಜಾಮಾಡುವುದು.
Abolition	"	
Abolition of post	स्थानोच्छेदनम्	ಸ್ಥಾನವನ್ನು ರದ್ದುಪಡಿಸುವುದು.
Abolition of slavery	दास्यनिर्मूलनम्	ಜೀತದ ಪದ್ಧತಿಯನ್ನು ತೊಡೆದುಹಾಕುವುದು.
Aboriginal tribes	मूलनिवासिनः	ಮೊದಲೇ ಅಲ್ಲಿ ವಾಸಮಾಡುತ್ತಿದ್ದವರು, ಆದಿವಾಸಿಗಳು.
Abortion	गर्भस्रावः	ಬಸುರನ್ನು ನಾಶಪಡಿಸುವುದು.
Abortive	अकालप्रसूतः	ಕಾಲಕ್ಕೆ ಮುಂಚೆ ಹುಟ್ಟಿದ.
Abortive medicine	गर्भस्रावकौषधम्	ಗರ್ಭವನ್ನು ನಾಶಪಡಿಸುವ ಔಷಧ.
Abortive trial	निष्फलः प्रयत्नः	ಪ್ರಯೋಜನವಿಲ್ಲದ ಪ್ರಯತ್ನ, ವ್ಯರ್ಥವಾದ ಪ್ರಯತ್ನ.
Abortus	अकालप्रसूतः शिशुः	ಪ್ರಸವಕಾಲ ತುಂಬುವ ಮುಂಚೆ ಹುಟ್ಟಿದ ಮಗು.

English	*Samskrita*	*Kannada*
Above	उपरि	ಮೇಲೆ, ಮೇಲುಗಡೆ.
Above cited	उपरि उद्धृतम्	ಮೇಲುಗಡೆ ಎತ್ತಿ ತೋರಿಸಲ್ಪಟ್ಟ.
Above mentioned	उपरि निर्दिष्टः	ಮೇಲುಗಡೆ ಸೂಚಿಸಲ್ಪಟ್ಟ, ಮೇಲೆ ತಿಳಿಸಲ್ಪಟ್ಟ.
Above said	उपर्युक्तः, पूर्वोक्तः	ಮೇಲೆ ಹೇಳಲ್ಪಟ್ಟ.
Abridgement	संक्षेपः, संग्रहः	ಸಂಗ್ರಹ, ಸಾರಾಂಶ, ಗೋಷ್ವಾರೆ.
Abrogated	निराकृतः	ತಳ್ಳಿಹಾಕಲ್ಪಟ್ಟ.
Abrogation	निराकरणम्	ನಿರಾಕರಿಸುವುದು, ತಳ್ಳಿಹಾಕುವುದು.
Abrogator	निराकर्ता	ತಳ್ಳಿಹಾಕುವವನು, ವಜಾ ಮಾಡುವವನು.
Absconded	पलायितः	ಪರಾರಿಯಾದವನು, ತಲೆ ಮರೆಸಿಕೊಂಡವನು.
Absconder	पलायनकर्ता	ಪರಾರಿಯಾಗುವವನು, ತಲೆಮರೆಸಿಕೊಂಡು ಓಡಿಹೋಗುವವನು.
Absconding offender	पलायितः अपराधी	ತಲೆಮರೆಸಿಕೊಂಡ ಅಪರಾಧಿ.
Absence	अनुपस्थितिः	ಗೈರುಹಾಜರಿ.
Absence without permission	अनुमतिं विना अनुपस्थितिः	ಅನುಮತಿಯಿಲ್ಲದೆ ಗೈರುಹಾಜರಿ.
Absent	अनुपस्थितः	ಗೈರುಹಾಜರಾದವನು, ಬಾರದೆ ಇರುವವನು.
Absent minded	अन्यमनस्कः	ಬೇರೆ ವಿಷಯದಲ್ಲಿ ಮನಸ್ಸುಳ್ಳವನು.
Absentee	अनुपस्थितः	ಹಾಜರಾಗಿಲ್ಲದವನು, ಬಾರದೆ ಇರುವವನು.
Absentee-statement	अनुपस्थितानां विवरणपत्रम्	ಗೈರುಹಾಜರಾದವರ ವಿವರಣ ಪಟ್ಟಿ.
Absent on tour	प्रवासनिमित्तमनुपस्थितः	ಪ್ರವಾಸನಿಮಿತ್ತ ಗೈರುಹಾಜರಾದವನು, ಪ್ರವಾಸ ನಿಮಿತ್ತ ಬಾರದಿರುವವನು.
Absent voter	अनुपस्थितवरिता (मतदाता)	ಹಾಜರಾಗದಿರುವ ಮತದಾರ.
Absent voting	अनुपस्थितस्य मतदानम्	ಹಾಜರಾಗದವನ ಮತದಾನ.
Absolute	निरपेक्षः, संपूर्णः, श्रेष्ठः	ಶುದ್ಧವಾದ, ಅಪ್ಪಟವಾದ, ಸಮಗ್ರವಾದ, ಶ್ರೇಷ್ಠವಾದ.
Absolute authority	(१) पूर्णाधिकारः (२) वरिष्ठाधिकारी	(1) ಸ್ವತಂತ್ರವಾದ ಅಧಿಕಾರ. (2) ಸ್ವತಂತ್ರಾಧಿಕಾರವುಳ್ಳವನು.
Absolute acceptance	सम्पूर्णाङ्गीकारः, सम्पूर्णानुमोदनम्	ಸಂಪೂರ್ಣವಾದ ಒಪ್ಪಿಗೆ, ಸಂಪೂರ್ಣ ಸಮ್ಮತಿ.
Absolute assignment	सम्पूर्णाधिकारप्रापणम्	ಸಂಪೂರ್ಣವಾಗಿ ಅಧಿಕಾರವನ್ನು ವಹಿಸಿಕೊಡುವುದು.
Absolute conviction	दृढविश्वासः	ದೃಢವಾದ ನಂಬಿಕೆ.
Absolute discretion	सम्पूर्णविवेचनम्	ಪೂರ್ಣವಾಗಿ ವಿವೇಚನೆ ಮಾಡುವುದು.
Absolute law	सम्पूर्णनियमः, निरङ्कुशनियमः	ಪಕ್ಕಾ ನಿಯಮ, ಪಕ್ಕಾ ಕಾನೂನು.

English	*Samskrita*	*Kannada*
Absolute monarch	स्वतन्त्रः प्रभुः, निरङ्कुशः प्रभुः	ಸಂಪೂರ್ಣಾಧಿಕಾರವುಳ್ಳ ಸ್ವತಂತ್ರನಾದ ದೊರೆ.
Absolute monopoly	एकैकस्वाम्यम्	ಒಬ್ಬನ ಸಂಪೂರ್ಣ ಯಾಜಮಾನ್ಯ.
Absolute owner	स्वामी, यजमानः	ಸಂಪೂರ್ಣ ಯಾಜಮಾನ್ಯವುಳ್ಳ ಪಾಲೀಕ.
Absolute property	अनुपद्रुतं स्वम्	ಅಬಾಧಿತ ಸ್ವತ್ತು.
Absolute right	सम्पूर्णधिकारः	ಸಂಪೂರ್ಣವಾದ ಹಕ್ಕು, ತಕರಾರಿಲ್ಲದ ಹಕ್ಕು.
Absolution	विमुक्तिः, कैवल्यम्	ಮೋಕ್ಷ. ಬಿಡುಗಡೆ.
Absolve	दोषाद्विमुक्तिः	ದೋಷದಿಂದ ಬಿಡುಗಡೆ.
Absolver	विमोचकः, विमोक्ता	ಬಿಡುಗಡೆ ಮಾಡುವವನು.
Absorbed	(१) चूषितः	(1) ಹೀರಲ್ಪಟ್ಟ.
	(२) लीनः	(2) ಲೀನವಾದ, ಐಕ್ಯವಾಗಿರುವ.
Abstract	संक्षेपः, संग्रहः, सारः	ಸಂಗ್ರಹ, ಗೋಷ್ವಾರೆ.
Abstract bill	संक्षिप्तविक्रयपत्रम्	ಸಂಕ್ಷಿಪ್ತ ಬೆಲೆ ಪಟ್ಟಿ.
Abstract budget	संक्षिप्तमायव्ययपत्रम्	ಸಂಕ್ಷಿಪ್ತ ಆಯ ಮತ್ತು ವೆಚ್ಚದ ಮುಂಗಡ ಪತ್ರ.
Abuse	दुर्व्यवहारः, दुरुपयोगः	ತಪ್ಪಾಗಿ ಉಪಯೋಗಿಸುವುದು. ದುರುಪಯೋಗ.
Academic	(१) विद्यासम्बन्धी	(1) ಶಿಕ್ಷಣ ಸಂಬಂಧವಾದ.
	(२) शिक्षणसंस्थासम्बन्धी	(2) ಶಿಕ್ಷಣ ಸಂಸ್ಥೆಗೆ ಸಂಬಂಧಿಸಿದ.
Academic Institution	(१) विद्यासंस्था	(1) ವಿದ್ಯಾಸಂಸ್ಥೆ.
	(२) विद्याशाला	(2) ವಿದ್ಯಾಶಾಲೆ.
Academy	पण्डितमण्डलम्	ಪಂಡಿತರ ಸಮಿತಿ.
Accede	अनुमन्यस्व	ಅನುಮತಿ ಕೊಡು, ಒಪ್ಪಿಗೆ ಕೊಡು.
Accept	अङ्गीकुरुष्व	ಅಂಗೀಕರಿಸು, ಸಮ್ಮತಿಸು.
Acceptance	अङ्गीकारः, स्वीकारः	ಸ್ವೀಕರಿಸುವುದು, ಅಂಗೀಕರಿಸುವುದು.
Acceptance on condition	सोपाधिकाङ्गीकारः	ಷರತ್ತಿನ ಮೇಲೆ ಅಂಗೀಕಾರ.
Acceptance note	अङ्गीकारपत्रम्	ಸಮ್ಮತಿಯ ಪತ್ರ.
Accepted	अङ्गीकृतम्	ಒಪ್ಪಲ್ಪಟ್ಟ, ಸಮ್ಮತಿಸಲ್ಪಟ್ಟ.
Acceptor	अङ्गीकर्ता	ಅಂಗೀಕರಿಸುವವನು, ಸಮ್ಮತಿಸುವವನು.
Access	(१) प्रवेशः	(1) ಪ್ರವೇಶ.
	(२) प्रवेशाधिकारः	(2) ಪ್ರವೇಶಾಧಿಕಾರ.
Accession	(१) प्रवेशः, प्राप्तिः	(1) ಪ್ರವೇಶ, ಪ್ರಾಪ್ತಿ.
	(२) उपगमनम्	(2) ಸಮೀಪಕ್ಕೆ ಬರುವುದು,
	(३) वृद्धिः	(3) ಆಸ್ತಿಯ ವೃದ್ಧಿ.

English	*Samskrita*	*Kannada*
Accession of property	सम्पदः अनुवृद्धिः	ಆಸ್ತಿಯ ಆನುವೃದ್ಧಿ.
Accessory	अपराधसहायकः	ಅಪರಾಧ ಮಾಡಲು ಸಹಾಯಮಾಡುವವನು.
Accessory to Adultery	व्यभिचारसहायकः	ವ್ಯಭಿಚಾರಕ್ಕೆ ಸಹಾಯ ಮಾಡುವವನು.
Accident	अपघातः	ಆಕಸ್ಮಿಕ ವಿಪತ್ತು.
Accidental	आकस्मिकः	ಅನಿರೀಕ್ಷಿತವಾದ.
Accommodation	(१) वसतिः	(1) ವಾಸಸ್ಥಳ.
	(२) आनुकूल्यम्	(2) ಅನುಕೂಲ ಮಾಡಿಕೊಡುವುದು.
Advisory committee	वसत्युपदेशकसमितिः	ವಸತಿಸಲಹಾಸಮಿತಿ.
Accomplishment	निर्वर्तनम्	ನಿರವೇರಿಕೆ, ಪೂರ್ಯೆಕೆ.
Accordance	अनुसारम्	ಅನುಗುಣವಾಗಿ.
Accordance with law	न्यायानुसारम्	ವಿಧಿಗನುಸಾರವಾಗಿ.
According to order	आदेशानुसारम्	ಆದೇಶಕ್ಕೆ ಅನುಸಾರವಾಗಿ.
According to rule	नियमानुसारम्	ನಿಯಮಕ್ಕೆ (ಕಟ್ಟಳೆಗೆ) ಅನುಗುಣವಾಗಿ.
Account	लेखा	ಲೆಕ್ಕ.
Accountancy	गणनशास्त्रम्, लेखाशास्त्रम्	ಲೆಕ್ಕದ ಶಾಸ್ತ್ರ, ಗಣಿತ ಶಾಸ್ತ್ರ.
Account book	लेखापुस्तकम्	ಲೆಕ್ಕದ ಪುಸ್ತಕ.
Accounts clerk	लेखाकायस्थः, लेखालिपिकः	ಲೆಕ್ಕದ ಗುಮಾಸ್ತ.
Account current	चललेखा	ಚಾಲ್ತಿಲೆಕ್ಕ.
Accountant	लेखापालः	ಕರಣಿಕ, ಲೆಕ್ಕಿಗ.
Accountant chartered	शासनाधिकृतलेखापालः	ಸನ್ನದು ಪಡೆದ ಲೇಖಾಪಾಲ.
Accountant General	महालेखापालः	ಮಹಾಲೇಖಾಪಾಲ.
Accounts Officer	लेखाधिकारी	ಲೆಕ್ಕದ ಅಧಿಕಾರಿ.
Accumulated	सञ्चितः	ಕೂಡಹಾಕಲ್ಪಟ್ಟ.
Accumulation	संग्रहः	ಕೂಡಹಾಕುವುದು, ಶೇಖರಿಸಿಡುವುದು.
Accumulator	संग्राहकः	ಕೂಡಹಾಕುವವನು.
Acknowledged	ज्ञापितस्वीकृतिः	ಸ್ವೀಕರಿಸಿದುದನ್ನು ತಿಳಿಸುವ, ಸಂದಿರುವುದನ್ನು ತಿಳಿಸುವ ರಶೀದಿ.
Acknowledgement	स्वीकृतिज्ञापनम्	ಸ್ವೀಕರಿಸಿದುದನ್ನು ತಿಳಿಸುವುದು.
Acknowledgement of signature	हस्ताक्षरस्वीकारः	ಹಸ್ತಾಕ್ಷರವನ್ನು ಸ್ವೀಕರಿಸುವುದು.
Acquired	उपार्जितः	ಗಳಿಸಿದ.
Acquirement	उपार्जनम्, प्राप्तिः	ಗಳಿಕೆ, ಸಂಪಾದಿಸುವುದು.
Acquisition	आर्जनम्	ಸಂಪಾದನೆ.
Acquisition of land	भूसंग्रहः	ಭೂಮಿಯನ್ನು ಸಂಪಾದಿಸುವುದು.

English	*Samskrita*	*Kannada*
Acquittal	विमुक्तिः	ಬಿಡುಗಡೆ, ಖುಲಾಸೆ.
Acquittance	निस्तारः	ಋಣ ಪರಿಹಾರ, ಸಾಲ ತೀರಿಸುವುದು.
Acquittance Roll	वेतनवितरणपुस्तकम्	ವೇತನದ ಬಟವಾಡೆ ಪುಸ್ತಕ.
Acquitted	विमुक्तः	ಬಿಡುಗಡೆ ಹೊಂದಿದ, ಖುಲಾಸೆಯಾದ.
Act	अधिनियमः	ಕಾಯಿದೆ.
Acting	कार्यकारी	ಬದಲಿಯವನು.
Acting together	सहकार्यकरणम्	ಒಟ್ಟಿಗೆ ಕಲೆತು ಕಾರ್ಯವಾಡುವುದು.
Action	अभियोगः	ದಾವೆ.
Action civil	नागरकाभियोगः	ನಾಗರಕ ವ್ಯವಹಾರದ ದಾವೆ.
Actionable	अभियोज्यः	ವ್ಯವಹಾರಕ್ಕೆ ಯೋಗ್ಯನಾದವನು.
Action for debt	ऋणाभियोगः	ಸಾಲದ ದಾವೆ.
Active	क्रियाशीलः	ಕಾರ್ಯವಾಡುವ ಸ್ವಭಾವದ.
Act of god	दैवघटना	ದೇವರ ನಿಗ್ರಹ ಮತ್ತು ಅನುಗ್ರಹ, ದೇವತೆಗಳಿಂದ ಉಂಟಾಗುವ ಕಾರ್ಯ
Act of grace	क्षमादानम्	ಕ್ಷಮೆಯನ್ನು ನೀಡುವುದು.
Act of law	शासनकार्यम्	ಕಟ್ಟಳೆಯ ಕಾರ್ಯ.
Act of supremacy	सार्वभौमत्वाधिनियमः	ಸರ್ವಾಧಿಕಾರತ್ವದ ನಿಯಮ.
Actual	वास्तविकः	ಯಥಾರ್ಥವಾದ, ನಿಜವಾದ.
Actual cost	वास्तविकमौल्यम्	ನಿಜವಾದ ಬೆಲೆ.
Actually	वस्तुतः	ನಿಜವಾಗಿ, ಯಥಾರ್ಥವಾಗಿ.
Actual rent	वास्तविकभाटकम्	ನಿಜವಾದ ಬಾಡಿಗೆ.
Actual service	वास्तविकसेवा	ನಿಜವಾಗಿ ನಡೆದಿರುವ ಸೇವೆ.
Actual weight	वास्तविकतुलामानम्	ಸರಿಯಾದ ತೂಕ.
Adaptation	योजनम्	ಹೊಂದಿಸಿಕೊಳ್ಳುವುದು, ಅಳವಡಿಸಿಕೊಳ್ಳುವುದು.
Adapter	योजकः	ಅಳವಡಿಸುವವನು.
Addition	(१) संयोजनम्, संकलनम्	(1) ಜೊತೆಗೆ ಸೇರಿಸುವುದು, ಕೂಡುವುದು.
	(२) आधिक्यम्	(2) ಆಧಿಕ್ಯ, ವೃದ್ಧಿ.
Additional	अतिरिक्तः, अधिकः	ಅಧಿಕವಾದ, ಹೆಚ್ಚಿನ.
Additional agenda	अतिरिक्तःकार्यक्रमः	ಅಧಿಕವಾದ ಕಾರ್ಯಕ್ರಮ.
Additional benefit	अधिकलाभः	ಹೆಚ್ಚಿನ ಲಾಭ.
Additional invoice	अतिरिक्तं मूल्यपत्रम्	ಹೆಚ್ಚಿನ ಬೆಲೆಯ ಪಟ್ಟಿ.
Additional production	अधिकोत्पादनम्	ಅಧಿಕವಾಗಿ ಬೆಳೆಯುವುದು, ಹೆಚ್ಚಾಗಿ ತಯಾರಿಸುವುದು.

English	*Samskrita*	*Kannada*
Additional secretary	अतिरिक्तःकार्यदर्शी	ಹೆಚ್ಚಿನ ಕಾರ್ಯದರ್ಶಿ.
Address	(१) सम्बोधनम् (२) पत्रसंज्ञा (३) भाषणम्	(1) ಸಂಬೋಧನೆ. (2) ವಿಳಾಸ. (3) ಭಾಷಣ.
Address of welcome	स्वागतभाषणम्	ಸ್ವಾಗತಭಾಷಣ.
Address presented to	मानपत्रम्	ಬಿನ್ನವತ್ತಳೆ.
Adequacy	पर्याप्तिः	ಸಾಕಾಗುವಷ್ಟಿರುವಿಕೆ.
Adequate	पर्याप्तः	ಸಾಕಾಗುವಷ್ಟು.
Ad hoc	तदर्था समितिः	ಒಂದು ಉದ್ದೇಶಕ್ಕಾಗಿ ರಚಿಸಿದ ಸಮಿತಿ.
Ad hoc payment	तदर्थं वितरणम्	ಒಂದು ಉದ್ದೇಶಕ್ಕಾಗಿ ಮಾಡುವ ಪಾವತಿ.
Adjournment	व्याक्षेपः	ಮುಂದಕ್ಕೆ ಹಾಕುವುದು, ಮುಂದೂಡುವುದು.
Adjudged	निर्णीतः	ನಿರ್ಣಯಿಸಲ್ಪಟ್ಟ.
Adjudication	न्यायनिर्णयः	ನ್ಯಾಯವನ್ನು ನಿರ್ಣಯಿಸುವುದು.
Adjudicator	न्यायनिर्णेता	ನ್ಯಾಯವನ್ನು ನಿರ್ಣಯಿಸುವವನು.
Adjuration	प्रमाणकरणम्	ಪ್ರಮಾಣ ಮಾಡುವುದು.
Adjust	समीकुरु	ಹೊಂದಿಕೊ.
Adjustment	समीकरणम्	ವ್ಯವಸ್ಥೆ ಮಾಡಿಕೊಳ್ಳುವುದು, ಹೊಂದಿಕೊಳ್ಳುವುದು.
Administration	प्रशासनम्	ಆಡಳಿತ.
Administration branch	प्रशासनशाखा	ಆಡಳಿತ ಶಾಖೆ.
Administrative	प्रशासनीयः	ಆಡಳಿತದ, ಆಡಳಿತ ಸಂಬಂಧವಾದ.
Administrative division	प्रशासनविभागः	ಆಡಳಿತ ವಿಭಾಗ.
Administrative expenses	प्रशासनकार्यनिर्वाहव्ययः	ಆಡಳಿತ ಕಾರ್ಯದ ವೆಚ್ಚ.
Administrative orders	प्रशासनादेशाः	ಆಡಳಿತ ವಿಭಾಗದ ಆದೇಶಗಳು.
Administrator	प्रशासकः	ಆಡಳಿತಗಾರ.
Administratorship	प्रशासकत्वम्	ಆಡಳಿತಗಾರಿಕೆ.
Admissible	ग्राह्यम्, उपादेयम्	ಸ್ವೀಕಾರಕ್ಕೆ ಅರ್ಹವಾದ.
Admissibility	अङ्गीकारयोग्यता	ಅಂಗೀಕಾರಾರ್ಹತೆ.
Admission	प्रवेशः	ಸೇರಿಕೊಳ್ಳುವುದು.
Admission fee	प्रवेशशुल्कम्	ಪ್ರವೇಶಶುಲ್ಕ.
Admittable	प्रवेशार्हः	ಪ್ರವೇಶಕ್ಕೆ ಅರ್ಹತೆಯುಳ್ಳವನು.
Admittance	प्रवेशः	ಸೇರಿಕೊಳ್ಳುವುದು.
Adopt	(१) अङ्गीकुरु (२) स्वीकुरु	(1) ಅಂಗೀಕರಿಸು. (2) ತೆಗೆದುಕೊ.

English	*Samskrita*	*Kannada*
Adopted	स्वीकृतः	ಸ್ವೀಕರಿಸಲ್ಪಟ್ಟ.
Adoptor	दत्तस्य स्वीकर्ता	ದತ್ತು ತೆಗೆದುಕೊಳ್ಳುವವನು.
Adoption	स्वीकारः	ಸ್ವೀಕಾರ ಮಾಡಿಕೊಳ್ಳುವುದು. ದತ್ತು ತೆಗೆದುಕೊಳ್ಳುವುದು.
Adoptive father	दत्तग्राहकपिता	ದತ್ತು ತೆಗೆದುಕೊಳ್ಳುವ ತಂದೆ.
Adult	वयस्कः	ವಯಸ್ಸಾದವನು.
Adult education	वयस्कविद्याभ्यासः	ವಯಸ್ಸಾದವನ ವಿದ್ಯಾಭ್ಯಾಸ.
Adulterer	जारः, उपपतिः	ಹಾದರ ಮಾಡುವವನು.
Adultery	परस्त्रीगमनम्	ಬೇರೊಬ್ಬ ಹೆಂಗಸಿನ ಸಂಬಂಧ.
Advance	(१) अग्रिमधनम्	(1) ಮುಂಗಡ.
	(२) प्रगतिः	(2) ಬೆಳವಣಿಗೆ.
Advancement	(१) प्रगतिः	(1) ಅಭಿವೃದ್ಧಿ, ಬೆಳವಣಿಗೆ.
	(२) आदिमदानम्	(2) ಮಕ್ಕಳಿಗೆ ಆಸ್ತಿ ಹಂಚುವಾಗ ಮಾಡುವ ಮೊದಲ ದಾನ.
Advance of pay	अग्रतो दीयमानं वेतनम्	ಮುಂಗಡವಾಗಿ ಕೊಡುವ ವೇತನ (ಸಂಬಳ).
Advantage	आनुकूल्यम्	ಪ್ರಯೋಜನ.
Adversary	प्रत्यर्थी, रिपुः	ವೈರಿ, ಹಗೆ, ಶತ್ರು.
Adverse	प्रतिकूलः	ಅನುಕೂಲವಾಗಿಲ್ಲದ.
Advice	उपदेशः	ಸಲಹೆ.
Adviser	उपदेष्टा	ಸಲಹೆಗಾರ.
Advisory committee	सूचनासमितिः	ಸಲಹೆ ಕೊಡುವ ಸಮಿತಿ.
Advocate	न्यायवादी	ವಕೀಲ.
Affection	अनुरागः	ಪ್ರೀತಿ, ಪ್ರೇಮ.
Affirmance	स्थिरीकरणम्	ಸ್ಥಿರಪಡಿಸುವುದು.
Aforesaid	उपर्युक्तः, पूर्वोक्तः	ಮೇಲೆ ಹೇಳಿದ.
Against	प्रतिकूलम्	ವ್ಯತಿರಿಕ್ತವಾಗಿ, ವಿರುದ್ಧವಾಗಿ.
Age	वयः	ವಯಸ್ಸು.
Agenda	कार्यसूची	ಕಾರ್ಯಕ್ರಮದ ಪಟ್ಟಿ.
